## ಮಂಗಳವಾರ, ೨೭ನೇ ಜನವರಿ, ೧೯೪೮

ಭಾರತದ ಸಂವಿಧಾನ ರಚನಾಸಭೆಯು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಬೆಳಗ್ಗೆ ೧೧ ಗಂಟೆಗೆ ಮಾನ್ಯ ಅಧ್ಯಕ್ಷರು ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್ ಅವರು ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

### ಪರಿಚಯಪತ್ರಗಳ ವಿತರಣೆ ಮತ್ತು ದಾಖಲೆ ಪುಸ್ತಕದಲ್ಲಿ ಸಹಿ ಮಾಡುವುದು.

ಕೆಳಕಂಡ ಸದಸ್ಯರು ತಮ್ಮ ಪರಿಚಯಪತ್ರಗಳನ್ನು ಸಲ್ಲಿಸಿದರು ಮತ್ತು ದಾಖಲೆ ಪುಸ್ತಕದಲ್ಲಿ ಸಹಿ ಹಾಕಿದರು.

೧. ಶ್ರೀ ಕೆ. ಹನುಮಂತಯ್ಯ : (ಮೈಸೂರು ರಾಜ್ಯ)

೨. ಶ್ರೀ ಟಿ. ಸಿದ್ಧಲಿಂಗಯ್ಯ : (ಮೈಸೂರು ರಾಜ್ಯ)

೩. ಶ್ರೀ ವಿ.ಎಸ್. ಸರ್ವತೆ : (ಇಂದೂರು ರಾಜ್ಯ)

**ಶ್ರೀ ಎಚ್.ವಿ. ಕಾಮತ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ನಾನು ಈಗ ಕ್ರಿಯಾಲೋಪವನ್ನು ಎತ್ತುತ್ತೇನೆ.

**ಸನ್ಮಾನ್ಯ ಸಭಾಧ್ಯಕ್ಷರು** : ನಾವಿನ್ನೂ ನಡವಳಿಗಳನ್ನು ಪ್ರಾರಂಭಿಸಿಲ್ಲ. ಅದಕ್ಕಿಂತ ಮೊದಲು ಯಾವುದೇ ಲೋಪವನ್ನು ಎತ್ತುವಂತಿಲ್ಲ. ಈಗ ಕಾರ್ಯಸೂಚಿಯ ಮೊದಲ ಅಂಶವನ್ನು ಕೈಗೆತ್ತಿಕೊಳ್ಳೋಣ.

### ಶ್ರೀ ವಿ.ಡಿ. ತ್ರಿಪಾಠಿಯವರ ಬಂಧನ

**ಶ್ರೀ ಎಚ್.ವಿ. ಕಾಮತ್** : ಮಾನ್ಯ ಸಭಾಧ್ಯಕ್ಷರೆ, ತಾವು ಇಂದಿನ ಕಲಾಪಗಳನ್ನು ಮುಂದುವರಿಸುವುದಕ್ಕೆ ಮೊದಲು ಈ ಸದನದ ಸನ್ಮಾನಿತ ಸದಸ್ಯರಾದ ಸಂಯುಕ್ತ ಪ್ರಾಂತ್ಯಗಳ ಶ್ರೀ ವಿ.ಡಿ. ತ್ರಿಪಾಠಿಯವರು ಕಳೆದ ಶುಕ್ರವಾರದಂದು ನೇತಾಜಿ ಜಯಂತಿ ಆಚರಣೆಯ ಸಂದರ್ಭದಲ್ಲಿ ಬಂಧನಕ್ಕೊಳಗಾದ ವಿಷಯವನ್ನು ತಮ್ಮ ಗಮನಕ್ಕೆ ತರಲು ಅನುಮತಿಯನ್ನು ಕೋರುತ್ತೇನೆ. ಇದಕ್ಕೆ ಸಂಬಂಧಿಸಿದಂತೆ, ಈ ಬಂಧನಕ್ಕೆ ಕಾರಣವಾದ ಸನ್ನಿವೇಶಗಳ ಬಗ್ಗೆ ಮತ್ತು ಈ ಅಧಿವೇಶನಕ್ಕೆ ಹಾಜರಾಗಲು ಅವರಿಗೆ ತಡೆ ಒಡ್ಡುವಂತೆ ಮಾಡಿದ ಸ್ಥಾನಬದ್ಧತೆಗೆ ಕಾರಣಗಳನ್ನು ತಿಳಿಸಿ ಸಂಯುಕ್ತ ಪ್ರಾಂತ್ಯಗಳ ಸರ್ಕಾರವು ಏನಾದರೂ ಮಾಹಿತಿಯನ್ನು ತಮಗೆ ನೀಡಿದೆಯೇ ಎಂದು ಕೇಳಬಹುದೆ? ನನ್ನ ವಿನಮ್ರ ತೀರ್ಮಾನದ ಪ್ರಕಾರ ಮಾನ್ಯರೇ, ಅದು ಈ ಸದನದ ಸದಸ್ಯರ ವಿಶೇಷಾಧಿಕಾರಗಳ ಉಲ್ಲಂಘನೆಯಾಗಿದೆ.

**ಪಂಡಿತ ಬಾಲಕೃಷ್ಣ ಶರ್ಮ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಈ ಅಂಶಕ್ಕೆ ಸಂಬಂಧಿಸಿದಂತೆ ನಾನು ಒಂದು ವಿಷಯವನ್ನು ಹೇಳಬಯಸುತ್ತೇನೆ. ಈ ಸದನದಲ್ಲಿ ಈ ಅಂಶವನ್ನು ಪ್ರಸ್ತಾಪಿಸುವಲ್ಲಿ ಗೌರವಾನ್ವಿತ ಸದಸ್ಯರು ಎಷ್ಟರ ಮಟ್ಟಿಗೆ ಕ್ರಮಬದ್ಧತೆಯನ್ನು ಪಾಲಿಸಿದ್ದರೋ ನನಗೆ ಗೊತ್ತಿಲ್ಲ. ಸದನದ

ಮುಂದೆ ಪೂರ್ಣ ವಿವರಗಳನ್ನು ಮಂಡಿಸಿಲ್ಲ. ಈ ವಿಷಯದ ಬಗ್ಗೆ ಏನಾದರೂ ತೀರ್ಮಾನವನ್ನು ಜಾರಿಗೊಳಿಸುವ ಮೊದಲು ಸದನಕ್ಕೆ ನಿಜಸಂಗತಿಗಳು ಸಂಪೂರ್ಣವಾಗಿ ಲಭ್ಯವಾಗಬೇಕು. ಶ್ರೀ ವಿ.ಡಿ. ತ್ರಿಪಾಠಿಯವವ ಬಂಧನಕ್ಕೆ ಕಾರಣವಾದ ಅಂಶವೇನೆಂದರೆ, ಅವರು ಕಾನೂನುಬಾಹಿರವಾದ ಸಂಘಟನೆಯೊಂದಕ್ಕೆ ಸ್ವತಃ ಸದಸ್ಯರಾಗಿದ್ದರು. ಅಲ್ಲದೆ, ಕಾನ್‌ಪುರ ನಗರದಲ್ಲಿ ವಿವಿಧ ಕಾರಣಗಳಿಗಾಗಿ ದಂಡಪ್ರಕ್ರಿಯಾ ಸಂಹಿತೆಯ ೧೪೪ನೇ ಪ್ರಕರಣದ ಅಡಿಯಲ್ಲಿದ್ದ ಆದೇಶವನ್ನು ಶ್ರೀ ತ್ರಿಪಾಠಿಯವರು ಉಲ್ಲಂಘಿಸಿದ್ದರು. ಈ ಸದನದ ಗೌರವಾನ್ವಿತ ಸದಸ್ಯರೊಬ್ಬರು ಈ ನೆಲದಲ್ಲಿ ಕಾನೂನನ್ನು ಹೇಗೆ ಉಲ್ಲಂಘಿಸಬಲ್ಲರು ಎಂಬುದು ನನಗೆ ತಿಳಿಯುತ್ತಿಲ್ಲ ಮತ್ತು ಅವರು ಹೀಗೆ ಮಾಡಿದ್ದರೆ ಪರಿಣಾಮಗಳನ್ನು ಅನುಭವಿಸಲೇಬೇಕು.

**ಮಾನ್ಯ ಸಭಾಧ್ಯಕ್ಷರು :** ಬಂಧನದ ಪ್ರಶ್ನೆ ಇಲ್ಲಿ ಮೊದಲು ಉದ್ಭವಿಸುತ್ತದೆ ಎಂದು ನನಗೆ ಅನ್ನಿಸುವುದಿಲ್ಲ. ಜಾರಿಗೊಳಿಸಲಿರುವ ನಿಯಮಗಳಿಗೆ ತರಬೇಕಾದ ತಿದ್ದುಪಡಿಗಳ ಬಗ್ಗೆ ಪರಿಶೀಲಿಸುವ ಉದ್ದೇಶಕ್ಕಾಗಿ ಈಗ ಸಂವಿಧಾನ ರಚನಾಸಭೆಯಲ್ಲಿ ನಾವು ಕುಳಿತಿದ್ದೇವೆ. ಯಾರೇ ಸದಸ್ಯರ ಬಂಧನವಾಗಿದ್ದರೆ ಆ ಬಗ್ಗೆ ಸೂಕ್ತ ಸ್ಥಳದಲ್ಲಿ ವಿಚಾರಿಸಬೇಕು. ನಾವು ಅದರ ಬಗ್ಗೆ ವಿಚಾರಿಸುವಂತಿಲ್ಲ.

(ಶ್ರೀ ಎಚ್. ವಿ. ಕಾಮತ್ ಎದ್ದು ನಿಂತರು)

**ಮಾನ್ಯ ಸಭಾಧ್ಯಕ್ಷರು :** ಸದ್ದು, ಸದ್ದು, ಇಲ್ಲಿ ಸಂವಿಧಾನ ರಚನಾಸಭೆಯಲ್ಲಿ ಆ ವಿಷಯದ ಬಗ್ಗೆ ನಾವು ವಿಚಾರಿಸುವಂತಿಲ್ಲ.

**ಶ್ರೀ. ಎಚ್.ವಿ. ಕಾಮತ್ :** ಸಂಯುಕ್ತ ಪ್ರಾಂತ್ಯಗಳ ಸರ್ಕಾರವು ನಿಮಗೆ ಈ ಬಗ್ಗೆ ತಿಳಿಸಿದೆಯೇ ಎಂಬುದನ್ನು ನಾನು ತಿಳಿಯಬೇಕಾಗಿದೆ.

**ಮಾನ್ಯ ಸಭಾಧ್ಯಕ್ಷರು :** ನನಗೆ ಯಾವ ಮಾಹಿತಿಯೂ ಬಂದಿಲ್ಲ.

**ಶ್ರೀ ಎಚ್.ವಿ. ಕಾಮತ್ :** ಇನ್ನೊಂದು ಅಂಶವೇನೆಂದರೆ, ಅವರು ಅಧಿವೇಶನದಲ್ಲಿ ಭಾಗವಹಿಸುವುದು ಸಾಧ್ಯವಾಗುವಂತೆ ಅವರನ್ನು ಪೆರೋಲ್ ಮೇಲೆ ಬಿಡುಗಡೆ ಮಾಡಬೇಕು.

**ಮಾನ್ಯ ಸಭಾಧ್ಯಕ್ಷರು :** ಇದು, ಪುನಃ ಪ್ರಕರಣದ ಗುಣಾವಗುಣಗಳನ್ನು ಒಳಗೊಳ್ಳುತ್ತದೆ. ಆದರೆ ಆ ಬಗ್ಗೆ ನಾನು ವಿಚಾರಿಸಲು ಸಿದ್ಧವಿಲ್ಲ. ಈಗ ನಾವು ಕಾರ್ಯಸೂಚಿಯ ಪ್ರಕಾರ ಮುಂದುವರಿಯೋಣ.

## ಕ್ರಿಯಾ ಲೋಪ

**ಶ್ರೀ ಯುಧಿಷ್ಠಿರ ಮಿಶ್ರ** (ಪೂರ್ವದ ರಾಜ್ಯಗಳು) : ಕ್ರಿಯಾ ಲೋಪಕ್ಕೆ ಸಂಬಂಧಿಸಿದಂತೆ ಮಾನ್ಯ ಸಭಾಧ್ಯಕ್ಷರೆ, ಒರಿಸ್ಸಾ ಮತ್ತು ಛತ್ತೀಸ್‌ಘಡ್ ರಾಜ್ಯಗಳಿಂದ ಬಂದಿರುವ ಈ ಸದನದ ಗೌರವಾನ್ವಿತ ಸದಸ್ಯರುಗಳು ರಾಜರಿಂದ ನಾಮನಿರ್ದೇಶಿತರಾಗಿದ್ದಾರೆ. ಇವರು ೧೯೪೭ರ ಡಿಸೆಂಬರ್ ೧೫ರ ಅನಂತರ ಈ ಸದನದಲ್ಲಿ ಉಪಸ್ಥಿತರಿರಬಹುದೆ?

ರಾಜರು ಮತ್ತು ಸಂವಿಧಾನ ರಚನಾಸಭೆಯ ನಡುವಿನ ಸಂಧಾನದ ಷರತ್ತುಗಳ ಪ್ರಕಾರ, ತಮ್ಮನ್ನು ಪ್ರತಿನಿಧಿಸುವುದಕ್ಕಾಗಿ ಮತ್ತು ದೇಶದ, ಭವಿಷ್ಯದ ಸಂವಿಧಾನದಲ್ಲಿ ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಒರಿಸ್ಸಾದ ರಾಜರು ಇಬ್ಬರು ಸದಸ್ಯರನ್ನು ಮತ್ತು ಛತ್ತೀಸ್‌ಘಡ್‌ನ ರಾಜರು ಒಬ್ಬ ಸದಸ್ಯರನ್ನು ಈ ಸದನಕ್ಕೆ ನಾಮನಿರ್ದೇಶನಮಾಡಿದ್ದಾರೆ. ಈಗ ೧೯೪೭ರ ಡಿಸೆಂಬರ್ ೧೪ ಮತ್ತು ೧೫ರಂದು ತಾವು ತಮ್ಮ ರಾಜ್ಯಗಳಲ್ಲಿ ನಿರ್ವಹಿಸುತ್ತಿದ್ದ ಎಲ್ಲ ಹಕ್ಕುಗಳನ್ನು ಅಧಿಕಾರವನ್ನು ಹಾಗೂ ಅಧಿಕಾರ ವ್ಯಾಪ್ತಿಯನ್ನು ಭಾರತೀಯ ಆಧಿಪತ್ಯದ ಡೊಮಿನಿಯನ್ ಸರ್ಕಾರಕ್ಕೆ ವರ್ಗಾಯಿಸಲು ಈ ರಾಜರು ಒಪ್ಪಿದ್ದಾರೆ ಮತ್ತು ೧೯೪೮ರ ಜನವರಿ ೧ರಂದು ಅವುಗಳನ್ನು ವಾಸ್ತವವಾಗಿ ವರ್ಗಾಯಿಸಿಯೂ ಇದ್ದಾರೆ. ಆದ್ದರಿಂದ, ಡಿಸೆಂಬರ್ ೧೫ರ ಅನಂತರ, ಈ

ಸದನದಲ್ಲಿರುವ ರಾಜರುಗಳ ನಾಮನಿರ್ದೇಶಿತರು ಈ ರಾಜರುಗಳ ಹಿತಾಸಕ್ತಿಗಳನ್ನಾಗಲಿ ಒರಿಸ್ಸಾ ಮತ್ತು ಛತ್ತೀಸ್‌ಘಡ್ ಪ್ರಜೆಗಳ ಹಿತಾಸಕ್ತಿಗಳನ್ನಾಗಲೀ ಪ್ರತಿನಿಧಿಸುವುದಿಲ್ಲ. ಗೌರವಾನ್ವಿತ ಸದಸ್ಯರೊಬ್ಬರು ಈಗಾಗಲೇ ಕೇಂದ್ರದ ಪ್ರಾಂತ್ಯಗಳಲ್ಲಿ ಸೇವೆಯನ್ನು ಅಂಗೀಕರಿಸಿದ್ದಾರೆ. ರಾಜರುಗಳ ಪ್ರಭುತ್ವ ಮತ್ತು ಅಧಿಕಾರಗಳು ರಾಜ್ಯಗಳಲ್ಲಿ ಅಸ್ತಿತ್ವದಲ್ಲಿಲ್ಲದಾಗ ಅವರ ನಾಮನಿರ್ದೇಶಿತರು ಈ ಸದನದಲ್ಲಿ ಉಪಸ್ಥಿತರಿರಲು ಅರ್ಹರಾಗಿರುವುದಿಲ್ಲ ಎಂಬುದನ್ನು ನಿವೇದಿಸುತ್ತಿದ್ದೇನೆ. ಈ ಅಂಶ ಕುರಿತಂತೆ ನಿರ್ಣಯ ನೀಡಬೇಕೆಂದು ಗೌರವದಿಂದ ನಿಮ್ಮಲ್ಲಿ ನಿವೇದಿಸಿಕೊಳ್ಳುತ್ತಿದ್ದೇನೆ.

**ಸೇಠ್ ಗೋವಿಂದ ದಾಸ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : *[ಮಾನ್ಯ ಸಭಾಧ್ಯಕ್ಷರೆ, ಛತ್ತೀಸ್‌ಘಡ್ ರಾಜ್ಯಗಳಿಗೆ ಸಂಬಂಧಿಸಿದಂತೆ ನನ್ನ ಮನವಿ ಏನೆಂದರೆ, ಅವು ಕೇಂದ್ರ ಪ್ರಾಂತ್ಯಗಳಲ್ಲಿ ಮತ್ತು ಬೇರಾರ್‌ನಲ್ಲಿ ವಿಲೀನಗೊಂಡಿದ್ದರೂ ಸಹ, ಹೊಸ ಚುನಾವಣೆಗಳು ನಡೆಯುವವರೆಗೂ ಆ ರಾಜ್ಯಗಳನ್ನು ಪ್ರತಿನಿಧಿಸುತ್ತಿರುವ ಸದರಿ ಸದಸ್ಯರಿಗೆ ಸಭೆಯ ನಡವಳಿಗಳಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಬೇಕು. ಚುನಾವಣೆಯ ಅನಂತರ ಅವರು ಭಾಗವಹಿಸುವುದು ನಿಂತುಹೋಗುತ್ತದೆ.

ಪ್ರಸ್ತುತದಲ್ಲಿ ಅವರನ್ನು ತೆಗೆದುಹಾಕಿದರೆ ಆ ರಾಜ್ಯಗಳ ಹಕ್ಕುಗಳಿಗೆ ಹೊಡೆತ ಬಿದ್ದಂತಾಗುತ್ತದೆ. ಆದ್ದರಿಂದ ಹೊಸ ಚುನಾವಣೆಗಳು ನಡೆಯುವವರೆಗೆ ಸದರಿ ಸದಸ್ಯರು ಇಲ್ಲಿ ಉಪಸ್ಥಿತರಿರುವುದಕ್ಕೆ ಮತ್ತು ಈ ನಡವಳಿಗಳಲ್ಲಿ ಭಾಗವಹಿಸುವ ಹಕ್ಕನ್ನು ಹೊಂದುವುದಕ್ಕೆ ಅವಕಾಶ ನೀಡಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ರಾಜಕೃಷ್ಣ ಬೋಸ್** (ಒರಿಸ್ಸಾ : ಸಾಮಾನ್ಯ) : *[ಮಾನ್ಯ ಸಭಾಧ್ಯಕ್ಷರೆ, ಒರಿಸ್ಸಾ ಮತ್ತು ಛತ್ತೀಸ್‌ಘಡ್‌ಗೆ ಸಂಬಂಧಿಸಿದಂತೆ ಈಗಷ್ಟೇ ಎತ್ತಿರುವ ಕ್ರಿಯಾಲೋಪವನ್ನು ಅಂಗೀಕರಿಸಕೂಡದು. ಇದಕ್ಕೆ ಕಾರಣವೇನೆಂದರೆ, ಆಗಸ್ಟ್ ೧೫ರ ಅನಂತರ, ಈ ದಿನಾಂಕಕ್ಕೆ ಮೊದಲು ತಾವು ಅನುಭವಿಸುತ್ತಿದ್ದ ಅಧಿಕಾರಗಳನ್ನು ಅನೇಕ ರಾಜ್ಯಗಳ ರಾಜರು ಬಿಟ್ಟುಕೊಟ್ಟಿದ್ದರೂ ಮತ್ತು ಅಂತಹ ರಾಜ್ಯಗಳೆಲ್ಲವೂ ಭಾರತದ ಒಕ್ಕೂಟದಲ್ಲಿ ವಿಲೀನಗೊಂಡಿದ್ದರೂ ಸಹ ಸಂವಿಧಾನ ರಚನಾಸಭೆಗೆ ಸದಸ್ಯರನ್ನು ಚುನಾಯಿಸುವದಕ್ಕಾಗಿ ನಡೆದ ಚುನಾವಣೆಗಳನ್ನು ಇನ್ನೂ ಅಧಿಕೃತ ಮತ್ತು ಶೂನ್ಯ ಎಂದು ಘೋಷಿಸಲಾಗಿಲ್ಲ. ನಾವು ಹಾಗೆ ಮಾಡಿದರೆ, ಸದಸ್ಯರನ್ನು ಈ ರಾಜ್ಯಗಳಿಂದ ಪರಿತ್ಯಜಿಸಬೇಕಾಗುತ್ತದೆ. ಅಥವಾ ಅವರಿಗೆ ಈ ಸಭೆಯಲ್ಲಿ ಸೇರುವ ಹಕ್ಕಿಲ್ಲ ಎಂದು ಹೇಳಬೇಕಾಗುತ್ತದೆ. ನಾವು ಈ ಕ್ರಮವನ್ನು ಕೈಗೊಂಡರೆ, ನನ್ನ ಅಭಿಪ್ರಾಯದಲ್ಲಿ ಅವರು ಸದಸ್ಯರಾಗಿರುವುದು ಮುಕ್ತಾಯವಾಗುತ್ತದೆ. ಮತ್ತು ಹೊಸ ಚುನಾವಣೆಗಳು ನಡೆಯುವವರೆಗೂ ಈ ಸಭೆಯಲ್ಲಿ ಆ ರಾಜ್ಯಗಳ ಪ್ರತಿನಿಧಿತ್ವ ಇಲ್ಲದಂತಾಗುತ್ತದೆ. ಸದ್ಯದಲ್ಲಿ ಅವರು ಇಲ್ಲಿಗೆ ಬರುವಂತಿಲ್ಲ ಎಂದು ನಾವು ಹೇಳುವುದಕ್ಕೆ ಸಂವಿಧಾನ ರಚನಾಸಭೆಯ ಯಾವ ನಿಯಮದಲ್ಲೂ ಅನುಮತಿಯಿಲ್ಲ. ಆದ್ದರಿಂದ ನಡೆದಿರುವ ಚುನಾವಣೆಯು ಸಿಂಧುವಾಗಿರತಕ್ಕದ್ದು ಎಂಬುದು ನನ್ನ ಅನಿಸಿಕೆ. ನನಗೆ ಇದು ಬೇಕು, ಯಾಕೆಂದರೆ, ಒರಿಸ್ಸಾ ರಾಜ್ಯಗಳ ೪೦ ಲಕ್ಷ ಜನರ ಪ್ರತಿನಿಧಿಗಳು ಈ ಸದನದ ನಡವಳಿಗಳಲ್ಲಿ ಭಾಗವಹಿಸಬಹುದಾಗಿದೆ. ರಾಜರಿಂದ ಆಯ್ಕೆಮಾಡಲ್ಪಟ್ಟ ಪ್ರತಿನಿಧಿಗಳು, ವಿಲೀನದ ಅನಂತರ ಜನರ ಪ್ರತಿನಿಧಿಗಳಾಗಿದ್ದಾರೆ. ಯಾಕೆಂದರೆ ರಾಜರು ತಮ್ಮ ಅಧಿಕಾರಗಳನ್ನು ಬಿಟ್ಟುಕೊಟ್ಟಿದ್ದಾರೆ. ರಾಜರು ಈಗ ರಾಜರಾಗಿಲ್ಲದಿರುವುದರಿಂದ ಅವರಿಂದ ಆಯ್ಕೆಯಾದ ಪ್ರತಿನಿಧಿಗಳೂ ಸಹ ಪ್ರತಿನಿಧಿಗಳಾಗಿರುವುದಿಲ್ಲ. ಆದ್ದರಿಂದ ಹೊಸ ಚುನಾವಣೆಗಳು ನಡೆಯಬೇಕು ಎಂದು ಹೇಳಲಾಗುತ್ತದೆ. ಆದರೆ ನನ್ನ ಅಭಿಪ್ರಾಯ ಇದಲ್ಲ.]*

**ಶ್ರೀ ತಾಜಮಲ್ ಹುಸೇನ್** (ಬಿಹಾರ್ : ಮುಸ್ಲಿಮ್) : ನನ್ನ ವಿನಮ್ರ ಅಭಿಪ್ರಾಯದ ಪ್ರಕಾರ, ನಮ್ಮ ಮುಂದಿರುವ ಏಕೈಕ ಅಂಶವೇನೆಂದರೆ, ಈ ಗೌರವಾನ್ವಿತ ಸದಸ್ಯರು ಆ ಸಂದರ್ಭದಲ್ಲಿ ಸೂಕ್ತ ರೀತಿಯಲ್ಲಿ ನಾಮನಿರ್ದೇಶಿತರಾಗಿದ್ದರೆ ಅಥವಾ ಇಲ್ಲವೆ ಮತ್ತು ಅವರು ಪ್ರತಿನಿಧಿಸುತ್ತಿರುವಂತಹ ಪ್ರದೇಶಗಳು ಇನ್ನೂ

ಭಾರತದ ಒಕ್ಕೂಟದ ಅಡಿಯಲ್ಲಿವೆಯೇ ಎಂಬುದು. ಈ ಎರಡು ಅಂಶಗಳು ಸ್ಥಾಪಿತವಾದರೆ, ಆ ಸದಸ್ಯರನ್ನು ಸದನದ ಸದಸ್ಯತ್ವದಿಂದ ತೆಗೆದುಹಾಕುವ ಅಧಿಕಾರ ನಮಗಿರುವುದಿಲ್ಲ ಎಂಬುದು ನನ್ನ ಅನಿಸಿಕೆ.

**ಮಾನ್ಯ ಸಭಾಧ್ಯಕ್ಷರು :** ಇದನ್ನು ಆದೇಶದ ವಿಷಯವಾಗಿ ವಿಲೆಮಾಡಲು ಸಾಧ್ಯವೆಂದು ನನಗನ್ನಿಸುವುದಿಲ್ಲ. ಈ ಸದಸ್ಯರು, ಈ ಸದನದ ಕಾನೂನುಮಾನ್ಯವಾದ ಸದಸ್ಯರಾಗಿದ್ದಾರೆ. ಅವರು ರಾಜೀನಾಮೆ ನೀಡುವ ವರೆಗೆ ಅಥವಾ ಇತರ ರೀತಿಯಲ್ಲಿ ತೆಗೆದುಹಾಕುವವರೆಗೆ ಅವರು ಈ ಸದನದ ಸದಸ್ಯರಾಗಿ ಮುಂದುವರಿಯುತ್ತಾರೆ. ಅವರನ್ನು ತೆಗೆದುಹಾಕುವಂತಹ ಸಂದರ್ಭಗಳು ಉದ್ಭವಿಸಿದಲ್ಲಿ, ಆಗ ಉದ್ದೇಶಕ್ಕೆ ತಕ್ಕ ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ. ಆದರೆ ಅಂತಹ ಕ್ರಮವನ್ನು ಕೈಗೊಳ್ಳುವವರೆಗೆ ಅವರು ಈ ಸದನದ ಸದಸ್ಯರಾಗಿ ಮುಂದುವರಿಯುತ್ತಾರೆ.

## ಪಶ್ಚಿಮ ಬಂಗಾಳಕ್ಕೆ ಹೆಚ್ಚುವರಿ ಪ್ರಾತಿನಿಧ್ಯ

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ಕೆಳಕಂಡ ನಿರ್ಣಯವನ್ನು ಮಂಡಿಸಲು ಕೇಳಿಕೊಳ್ಳುತ್ತೇನೆ:

"ಪಶ್ಚಿಮ ಬಂಗಾಳವನ್ನು ಈಗ ಸಂವಿಧಾನ ರಚನಾಸಭೆಯಲ್ಲಿ ೧೯ ಸದಸ್ಯರು (೧೫ ಸಾಮಾನ್ಯ ಮತ್ತು ೪ ಮುಸ್ಲಿಮ್) ಪ್ರತಿನಿಧಿಸುತ್ತಿದ್ದಾರೆ.

ಮತ್ತು ಈ ವ್ಯವಸ್ಥೆಯನ್ನು ೩ನೇ ಜೂನ್ ೧೯೪೭ನೇ ದಿನಾಂಕ ಹಿಸ್ ಮೆಜೆಸ್ಟಿಸ್ ಗೌರ್ನಮೆಂಟ್ ಸ್ಟೇಟ್‌ಮೆಂಟ್‌ನ ೧೪ನೇ ಕಂಡಿಕೆಗೆ ಅನುಸಾರ ಮಾಡಲಾಗಿದೆ ಮತ್ತು ಪಶ್ಚಿಮ ಬಂಗಾಳದ ಆಗಿನ ಗಡಿಗಳ ಆಧಾರದ ಮೇಲೆ ಸಂವಿಧಾನ ರಚನಾಸಭೆಯು ತನ್ನ ತೀರ್ಮಾನ ದಿನಾಂಕ ೨೫ನೇ ಜುಲೈ ೧೯೪೭ರಂದು ಸ್ವೀಕರಿಸಿರುವುದರಿಂದ; ಮತ್ತು ಪಶ್ಚಿಮ ಬಂಗಾಳದ ಮೇಲ್ಕಂಡ ದಿನಾಂಕಗಳಂದು ಇದ್ದ ಗಡಿಗಳನ್ನು ಗಡಿ ನಿರ್ಣಯ ಆಯೋಗದ ಅವಾರ್ಡ್ ಪ್ರಕಾರ ಪರಿಷ್ಕರಿಸಿರುವುದರಿಂದ;

ಮತ್ತು ಗಡಿಗಳನ್ನು ಪರಿಷ್ಕರಿಸಿದ ಆಧಾರದ ಮೇಲೆ ಪಶ್ಚಿಮ ಬಂಗಾಳವು, ಸಂವಿಧಾನ ರಚನಾಸಭೆಗೆ ೨೧ ಸದಸ್ಯರನ್ನು ಆಯ್ಕೆಮಾಡಲು (೧೬ ಸಾಮಾನ್ಯ ಮತ್ತು ೫ ಮುಸ್ಲಿಮ್) ಹಕ್ಕುಳ್ಳದ್ದಾಗಿರುವುದರಿಂದ ಸಾಂದರ್ಭಿಕ ಖಾಲಿ ಸ್ಥಾನಗಳನ್ನು ತುಂಬುವುದಕ್ಕಾಗಿ ನಿಯಮಿಸಲಾದ ಕಾರ್ಯವಿಧಾನಕ್ಕೆ ಅನುಸಾರವಾಗಿ ಈಗ ಅವಕಾಶ ಕಲ್ಪಿಸಲಾಗಿರುವ ೨ ಹೆಚ್ಚುವರಿ ಸದಸ್ಯರನ್ನು (೧ ಸಾಮಾನ್ಯ ಮತ್ತು ೧ ಮುಸ್ಲಿಮ್) ಆಯ್ಕೆ ಮಾಡುವುದಕ್ಕಾಗಿ ಈ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ತೀರ್ಮಾನಿಸಲಾಗಿದೆ."

ಮಾನ್ಯರೆ, ನಿರ್ಣಯವು ಸಾಕಷ್ಟು ದೀರ್ಘವಾಗಿದೆ ಮತ್ತು ಸ್ವಯಂ ವಿವರಣಾತ್ಮಕವಾಗಿದೆ. ಮೂಲದಲ್ಲಿ, ರಾಷ್ಟ್ರೀಯ ವಿಭಜನೆಯಾದಾಗ ಪಶ್ಚಿಮ ಬಂಗಾಳದ ಜನಸಂಖ್ಯೆಯು ಹತ್ತೊಂಬತ್ತು ಮಿಲಿಯನ್‌ಗಳಷ್ಟಿರುವುದೆಂದು ನಿರೀಕ್ಷಿಸಲಾಗಿತ್ತು ಮತ್ತು ಸಾಮಾನ್ಯಜನರಿಗೆ ಹದಿನೈದು ಸ್ಥಾನಗಳನ್ನು ಮುಸ್ಲಿಮರಿಗೆ ನಾಲ್ಕು ಸ್ಥಾನಗಳನ್ನು ಹಂಚಿಕೆ ಮಾಡಲಾಯಿತು. ಅನಂತರದಲ್ಲಿ, ರ್‍ಯಾಡ್‌ಕ್ಲಿಫ್, ಐತೀರ್ಪು ನೀಡುವ ಹೊತ್ತಿಗೆ ಪಶ್ಚಿಮ ಬಂಗಾಳಕ್ಕೆ ಹೆಚ್ಚಿನ ಪ್ರದೇಶಗಳನ್ನು ಸೇರಿಸಿದ್ದರಿಂದ ಅದರ ಜನಸಂಖ್ಯೆಯು ಇಪ್ಪತ್ತೊಂದು ಮಿಲಿಯನ್‌ಗಳಿಗೆ ಏರಿತು. ಹೀಗೆ ಜನಸಂಖ್ಯೆಯು ೧೯ರಿಂದ ೨೧ ಮಿಲಿಯನ್‌ಗಳಿಗೆ ಏರಿರುವುದರಿಂದ ಇನ್ನೂ ಎರಡು ಸದಸ್ಯರನ್ನು ಸೇರಿಸುವುದು ಅವಶ್ಯವಾಗಿದೆ; ಮುಸ್ಲಿಮ್ ಮತ್ತು ಮುಸ್ಲಿಮೇತರ ಈ ಎರಡೂ ಸಮುದಾಯಗಳ ಜನಸಂಖ್ಯೆಯಲ್ಲಿ ಏರಿಕೆಯಾಗಿದೆ. ಇನ್ನೂ ಒಂದು ಸಾಮಾನ್ಯ ಸ್ಥಾನ ಹಾಗೂ ಇನ್ನೂ ಒಂದು ಮುಸ್ಲಿಮ್ ಸ್ಥಾನವನ್ನು ಸೇರಿಸಲು ಈ ನಿರ್ಣಯದಲ್ಲಿ ಆಲೋಚಿಸಲಾಗಿದೆ. ಈ ನಿರ್ಣಯವನ್ನು ಮಂಡಿಸಲು ಸದನವು ತಾಳ್ಮೆ ವಹಿಸಬೇಕು ಎಂದು ಕೇಳಿಕೊಳ್ಳುತ್ತೇನೆ ಮತ್ತು ಇದನ್ನು ಅಂಗೀಕರಿಸಬಹುದೆಂದು ಕೋರುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಶ್ರೀ ನಜಿರುದ್ದೀನ್ ಅಹ್ಮದ್ ಅವರು ತಿದ್ದುಪಡಿಯ ಸೂಚನೆ ನೀಡಿದ್ದಾರೆ.

**ಪಂಡಿತ್ ಬಾಲಕೃಷ್ಣ ಶರ್ಮ :** ಸೂಚನೆಯ ಮಂಡನೆಗೆ ತಮ್ಮ ಘೋಷಣೆಯಾಗಿದೆಯೇ ಮಾನ್ಯರೆ?

**ಮಾನ್ಯ ಸಭಾಧ್ಯಕ್ಷರು :** ಹೌದು; ಸೂಚನೆಯನ್ನು ಮಂಡಿಸಲಾಗಿದೆ.

**ಶ್ರೀ ನಜಿರುದ್ದೀನ್ ಅಹ್ಮದ್** (ಪಶ್ಚಿಮ ಬಂಗಾಳ : ಮುಸ್ಲಿಮ್) : ಮಾನ್ಯರೆ, ಎರಡು ತಿದ್ದುಪಡಿಗಳ ಮಂಡನೆಗೆ ತಮ್ಮ ಅನುಮತಿಯನ್ನು ಕೇಳುತ್ತೇನೆ. ಇವೆರಡೂ ಪರಸ್ಪರ ಸಂಬಂಧಿಸಿವೆ. ಇವುಗಳನ್ನು ಒಟ್ಟಾಗಿ ಮಂಡಿಸಬೇಕು ಮತ್ತು ಪರಿಗಣಿಸಬೇಕು.

ಮಾನ್ಯರೆ, ಕೆಳಕಂಡಂತೆ ಮಂಡಿಸಲು ಕೋರುತ್ತೇನೆ.

೧. ಪ್ರಸ್ತಾವದ ೨ನೇ ಕಂಡಿಕೆಯಲ್ಲಿ, 'ಆಗಿನ ಗಡಿಗಳ ಆಧಾರದ ಮೇಲೆ' ಎಂಬ ಪದಗಳಿಗೆ ಬದಲಾಗಿ, 'ಆಗಿನ ಗಡಿಗಳೊಳಗೆ ಇರುವ ಜನಸಂಖ್ಯೆಯ ಆಧಾರದ ಮೇಲೆ' ಎಂಬ ಪದಗಳನ್ನು ಸೇರಿಸತಕ್ಕದ್ದು.

೨. ಪ್ರಸ್ತಾವದ ೪ನೇ ಕಂಡಿಕೆಯಲ್ಲಿ, 'ಮತ್ತು ಪರಿಷ್ಕರಿಸಲಾದ ಗಡಿಗಳ ಆಧಾರದ ಮೇಲೆ ಪಶ್ಚಿಮ ಬಂಗಾಲವು.... ಹಕ್ಕುಳ್ಳದ್ದಾಗಿರುವುದರಿಂದ' ಎಂಬ ಪದಗಳಿಗೆ, 'ಮತ್ತು ಈಗ ರಚಿಸಲಾಗ್ಗಿರುವ ಪಶ್ಚಿಮ ಬಂಗಾಳದಲ್ಲಿರುವ ಜನಸಂಖ್ಯೆಯ ಆಧಾರದ ಮೇಲೆ...ಹಕ್ಕುಳ್ಳದ್ದಾಗಿದೆ' ಎಂಬ ಪದಗಳನ್ನು ಸೇರಿಸತಕ್ಕದ್ದು.

ಮಾನ್ಯರೆ, ತಿದ್ದುಪಡಿಗಳು ಕೇವಲ ಪ್ರಾರೂಪಣ ಸ್ವರೂಪದಲ್ಲಿದ್ದರೂ, ಅವು ಬಹಳ ಮುಖ್ಯವೆಂದು ನಾನು ಭಾವಿಸಿದ್ದೇನೆ. ಹೆಚ್ಚುವರಿ ಸದಸ್ಯರನ್ನು ಗಡಿಗಳ ಬದಲಾವಣೆಯ ಆಧಾರದ ಮೇಲೆ ಚುನಾಯಿಸಬೇಕು ಎಂದು ನಿರ್ಣಯದ ಮೂಲ ಪಾಠವು ಹೇಳುತ್ತದೆ. ಆದರೆ, ಪ್ರಸ್ತಾವಿಸಲಾಗಿರುವ ಹೆಚ್ಚುವರಿಗೆ ಗಡಿಗಳು ಆಧಾರವಲ್ಲ, ಬದಲಿಗೆ ಜನಸಂಖ್ಯೆಯು ಆಧಾರವಾಗಿದೆ ಎಂಬುದನ್ನು ನನ್ನ ತಿದ್ದುಪಡಿಗಳು ಸ್ಪಷ್ಟಪಡಿಸಲು ಪ್ರಯತ್ನಿಸುತ್ತವೆ. ಗಡಿಗಳ ಬದಲಾವಣೆಯಿಂದಾಗಿ ಈಗಿರುವಂತಹ ಜನಸಂಖ್ಯೆಯೂ ಸಹ ಹೆಚ್ಚಾಗಿದೆ. ಆದ್ದರಿಂದ ಜನಸಂಖ್ಯೆಯು ಪ್ರಾರಂಭದ ಅಂಶವಾಗಿರಬೇಕು ಮತ್ತು ನಾನು ಈ ಯೋಜನೆಯನ್ನು ಮಾಡಲು ಪ್ರಯತ್ನಿಸಿದ್ದೇನೆ. ನಾನು ಈಗಾಗಲೇ ಹೇಳಿದಂತೆ ತಿದ್ದುಪಡಿಗಳು ಪ್ರಾರೂಪಣ ಸ್ವರೂಪದಲ್ಲಿವೆ. ಆದರೆ, ಯಾವ ತತ್ತ್ವದ ಆಧಾರದ ಮೇಲೆ ಸಂಖ್ಯೆಯನ್ನು ಹೆಚ್ಚಿಸಲು ಕೇಳಲಾಗಿದೆ ಎಂಬುದರ ಮೂಲಕ್ಕೆ ಅವು ಹೋಗುತ್ತವೆ. ಈ ಮಾತುಗಳೊಂದಿಗೆ, ನಾನು ತಿದ್ದುಪಡಿಗಳನ್ನು ಮಂಡಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಸೂಚನೆ ಹಾಗೂ ಎರಡು ತಿದ್ದುಪಡಿಗಳನ್ನು ಮಂಡಿಸಲಾಗಿದೆ. ಬೇರೆ ಯಾವ ಸದಸ್ಯರಾದರೂ ನಡವಳಿಗಳಲ್ಲಿ ಭಾಗಿಯಾಗಲು ಇಚ್ಛಿಸಿದರೆ, ಹಾಗೇ ಮಾಡಬಹುದು.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್ :** ಮಾನ್ಯರೆ, ತಿದ್ದುಪಡಿಗಳನ್ನು ಅಂಗೀಕರಿಸಲು ನನಗೆ ಬಹಳ ಸಂತೋಷವಾಗುತ್ತಿದೆ. ನನ್ನ ಸ್ನೇಹಿತರು ಪಶ್ಚಿಮ ಬಂಗಾಳದ ಗಡಿಯೊಳಗಿರುವ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಳ್ಳಲು ಬಯಸಿದ್ದಾರೆ. "ಆಗಿನ ಗಡಿಗಳ ಆಧಾರದ ಮೇಲೆ" ಎಂಬ ಮಾತಿನಲ್ಲಿ ಈ ಅರ್ಥವನ್ನೇ ವ್ಯಕ್ತಪಡಿಸಲಾಗಿದೆ. ಇದನ್ನು ಇನ್ನಷ್ಟು ಪರಿಣಾಮಕಾರಿಯಾಗಿರಿಸಲು ನಾನು ಈ ತಿದ್ದುಪಡಿಗಳನ್ನು ಅಂಗೀಕರಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಮಂಡನೆಕಾರರು ಅಂಗೀಕರಿಸಿದ ತಿದ್ದುಪಡಿಗಳನ್ನು ನಾನು ಈಗ ಮತಕ್ಕಿಡುತ್ತೇನೆ.

ಈ ತಿದ್ದುಪಡಿಗಳನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಈಗ ನಾನು ಮಂಡನೆಯನ್ನು ಅದು ತಿದ್ದುಪಡಿಯಾಗಿರುವಂತೆ ಮತಕ್ಕಿಡುತ್ತೇನೆ.

ಮಂಡನೆಯನ್ನು ತಿದ್ದುಪಡಿಯಾದಂತೆ ಅಂಗೀಕರಿಸಲಾಯಿತು.

## ಪೂರ್ವ ಪಂಜಾಬ್‌ಗೆ ಹೆಚ್ಚುವರಿ ಪ್ರಾತಿನಿಧ್ಯ

**ಮಾನ್ಯ ಸಭಾಧ್ಯಕ್ಷರು :** ಪೂರ್ವ ಪಂಜಾಬ್‌ಗೆ ಸಂಬಂಧಿಸಿದ ಇನ್ನೊಂದು ನಿರ್ಣಯದ ಸೂಚನೆ ನನಗೆ ಬಂದಿದೆ. ಇದರ ಸೂಚನೆಯನ್ನು ಕಳೆದ ರಾತ್ರಿಯಷ್ಟೇ ಕೊಡಲಾಗಿದೆ. ಹೀಗಾಗಿ ಇದಕ್ಕೆ ಸಂಬಂಧಿಸಿದಂತೆ

ಸಾಕಷ್ಟು ಸೂಚನೆ ಇಲ್ಲ. ಸದನಕ್ಕೆ ಅಭ್ಯಂತರವಿಲ್ಲದಿದ್ದರೆ ನಾನು ಅದನ್ನು ಕೈಗೆತ್ತಿಕೊಂಡು ಅದನ್ನು ಜಾರಿಗೊಳಿಸಲು ಬಯಸುತ್ತೇನೆ. ಯಾಕೆಂದರೆ ಪಶ್ಚಿಮ ಬಂಗಾಳದ ನಿರ್ಣಯ ಮತ್ತು ಪೂರ್ವ ಪಂಜಾಬ್‌ನ ನಿರ್ಣಯಗಳು ಹೆಚ್ಚುಕಡಿಮೆ ಒಂದೇ ನೆಲೆಯನ್ನು ಆಧರಿಸಿವೆ.

ಸದನದ ಅಭ್ಯಂತರವಿಲ್ಲವೆಂದು ಪರಿಗಣಿಸಲೆ?

**ಗೌರವಾನ್ವಿತ ಅನೇಕ ಸದಸ್ಯರು** : ಏನೂ ಅಭ್ಯಂತರವಿಲ್ಲ!

**ಮಾನ್ಯ ಸಭಾಧ್ಯಕ್ಷರು** : ಗ್ಯಾನಿ ಗುರುಮುಖ್ ಸಿಂಗ್ ಮುಸಾಫಿರ್ ಅವರು ಸೂಚನೆಯನ್ನು ಮಂಡಿಸುತ್ತಾರೆ.

**ಗ್ಯಾನಿ ಗುರುಮುಖ್ ಸಿಂಗ್ ಮುಸಾಫಿರ್** (ಪೂರ್ವ ಪಂಜಾಬ್ : ಸಿಖ್) : *ಮಾನ್ಯ ಸಭಾಧ್ಯಕ್ಷರೆ, ನಿಮ್ಮ ಅನುಮತಿಯೊಂದಿಗೆ ಕೆಳಕಂಡ ಸೂಚನೆಯನ್ನು ಮಂಡಿಸಲು ಬಯಸುತ್ತೇನೆ.

"ಈಗ, ಪೂರ್ವ ಪಂಜಾಬವನ್ನು, ಸಂವಿಧಾನ ರಚನಾಸಭೆಯಲ್ಲಿ, ೬ ಸಾಮಾನ್ಯ ಸದಸ್ಯರು, ಮತ್ತು ೪ ಸಿಖ್ ಸದಸ್ಯರು ಪ್ರತಿನಿಧಿಸುತ್ತಿರುವುದರಿಂದ;

ಮತ್ತು ಈ ವ್ಯವಸ್ಥೆಯನ್ನು, ೩ನೇ ಜೂನ್, ೧೯೪೭ನೇ ದಿನಾಂಕದ, ಹಿಸ್ ಮೆಜೆಸ್ಟಿಸ್ ಗೌರ್ನಮೆಂಟ್ ಸ್ಟೇಟ್‌ಮೆಂಟ್‌ನ ೧೪ನೇ ಕಂಡಿಕೆಗೆ ಅನುಸಾರ ಮಾಡಲಾಗಿದೆ ಮತ್ತು ಪೂರ್ವ ಪಂಜಾಬಿನ ಆಗಿನ ಗಡಿಗಳ ಆಧಾರದ ಮೇಲೆ ಸಂವಿಧಾನ ರಚನಾಸಭೆಯು ಅದರ ತೀರ್ಮಾನ ದಿನಾಂಕ ೨೫ನೇ ಜುಲೈ ೧೯೪೭ರ ಮೂಲಕ ಸ್ಥಿರೀಕರಿಸಲಾಗಿರುವುದರಿಂದ;

ಮತ್ತು ಸದರಿ ದಿನಾಂಕಗಳಂದು, ಪೂರ್ವ ಪಂಜಾಬಿನ ಗಡಿ ನಿರ್ಣಯ ಆಯೋಗದ ಅವಾರ್ಡಿಗೆ ಅನುಸಾರವಾಗಿ ಪರಿಷ್ಕರಿಸಲಾಯಿತು ಅಷ್ಟೇ ಅಲ್ಲದೇ ಪೂರ್ವ ಪಂಜಾಬಿನಿಂದ ಪಶ್ಚಿಮ ಪಂಜಾಬಿಗೆ ಸಾಮೂಹಿಕವಾಗಿ ಭಾರಿ ಸಂಖ್ಯೆಯಲ್ಲಿ ಮುಸ್ಲಿಮರು ಹಾಗೂ ಪಶ್ಚಿಮ ಪಂಜಾಬಿನಿಂದ ಪೂರ್ವ ಪಂಜಾಬಿಗೆ ಮುಸ್ಲೀಮೇತರರು ವಲಸೆ ಹೋಗಿದ್ದರಿಂದ ಸಮಗ್ರ ಜನಸಂಖ್ಯಾ ಸ್ವರೂಪದಲ್ಲಿಯೇ ಬದಲಾವಣೆಯಾಗಿರುವುದರಿಂದ;

ಮತ್ತು ಈ ಬದಲಾವಣೆಗಳ ಪರಿಣಾಮವಾಗಿ, ಲಭ್ಯವಿರುವ ಅತ್ಯುತ್ತಮ ಅಂದಾಜುಗಳ ಆಧಾರದ ಮೇಲೆ ಪೂರ್ವ ಪಂಜಾಬವು ಸಂವಿಧಾನ ರಚನಾಸಭೆಗೆ ೮ ಸಾಮಾನ್ಯ ಸದಸ್ಯರನ್ನು ಮತ್ತು ೪ ಸಿಖ್ ಸದಸ್ಯರನ್ನು ಆಯ್ಕೆಮಾಡಲು ಹಕ್ಕುಳ್ಳದ್ದಾಗಿರುವುದರಿಂದ;

ಸಾಂದರ್ಭಿಕ ಖಾಲಿ ಸ್ಥಾನಗಳನ್ನು ತುಂಬುವುದಕ್ಕಾಗಿ, ನಿಯಮಿಸಲಾದ ಕಾರ್ಯವಿಧಾನಕ್ಕೆ ಅನುಸಾರವಾಗಿ ಈ ಅವಕಾಶ ಕಲ್ಪಿಸಲಾಗಿರುವ ಹೆಚ್ಚುವರಿ ೨ ಸಾಮಾನ್ಯ ಸದಸ್ಯರನ್ನು ಮತ್ತು ಹೆಚ್ಚುವರಿ ೨ ಸಿಖ್ ಸದಸ್ಯರನ್ನು ಪೂರ್ವ ಪಂಜಾಬಿನಿಂದ ಆಯ್ಕೆಮಾಡುವುದಕ್ಕಾಗಿ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ತೀರ್ಮಾನಿಸಲಾಗಿದೆ."

*[ಈ ಸೂಚನೆಯನ್ನು ಮಂಡಿಸುವ ನನ್ನ ಉದ್ದೇಶವೇನೆಂದರೆ, ಮುಸ್ಲಿಮೇತರರು ಪಾಕಿಸ್ತಾನದ ಸಂವಿಧಾನ ರಚನಾಸಭೆಯಲ್ಲಿ ಯಾವ ಪ್ರಾತಿನಿಧ್ಯವನ್ನು ಹೊಂದಿದ್ದರೋ ಅದೇ ಪ್ರಾತಿನಿಧ್ಯವನ್ನು ಇಲ್ಲಿನ ಪಶ್ಚಿಮ ಪಂಜಾಬಿನ ಮುಸ್ಲಿಮೇತರರಿಗೆ ಒದಗಿಸುವುದು. ಇದರ ಅರ್ಥವೇನೆಂದರೆ, ಪೂರ್ವ ಪಂಜಾಬಿನ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಬೇಕು. ಇದಕ್ಕೆ ಯಾರ ಆಕ್ಷೇಪಣೆಯೂ ಇಲ್ಲವೆಂದು ಭಾವಿಸುತ್ತೇನೆ. ಪಶ್ಚಿಮ ಪಂಜಾಬಿನಿಂದ ಪೂರ್ವ ಪಂಜಾಬ್‌ಗೆ ವಲಸೆ ಬಂದವರಿಗೆ ಸಂಪೂರ್ಣ ಪ್ರಾತಿನಿಧ್ಯ ನೀಡಬೇಕು ಎಂಬುದನ್ನು ಈ ಸೂಚನೆಯು ಸ್ಪಷ್ಟವಾಗಿ ತಿಳಿಸುತ್ತಿದೆ. ಪಶ್ಚಿಮ ಪಂಜಾಬ್ ವಿಧಾನಸಭೆಯ ಹಿಂದೂ ಮತ್ತು ಸಿಖ್ ಸದಸ್ಯರಿಗೆ ಪೂರ್ವ ಪಂಜಾಬ್ ವಿಧಾನಸಭೆಯಲ್ಲಿ ಕುಳಿತುಕೊಳ್ಳುವ ಅವಕಾಶವನ್ನು ನೀಡಲಾಗಿದೆ. ಇದರರ್ಥವೇನೆಂದರೆ, ತತ್ತ್ವವನ್ನು ಅಂಗೀಕರಿಸಲಾಗಿದೆ ಎಂದು. ಪ್ರಶ್ನೆ ಮಾತ್ರ ಹಾಗೇ ಇತ್ತು. ಅದನ್ನು ನಾವು ಪರಿಶೀಲಿಸಿದ್ದೇವೆ. ಇದು ಸದಸ್ಯರ ಸಂಖ್ಯೆಗೆ ಸಂಬಂಧಿಸಿದ ಪ್ರಶ್ನೆಯಾಗಿದ್ದು ಈ ಸಂಖ್ಯೆ ನಾಲ್ಕೋ ಐದೋ ಎಂಬುದಾಗಿದೆ. ಪ್ರಸ್ತುತದಲ್ಲಿ ಪಶ್ಚಿಮ ಪಂಜಾಬ್ ಪಾಕಿಸ್ತಾನದ ಸಂವಿಧಾನ ರಚನಾಸಭೆಯಲ್ಲಿ ಐವರು ಸದಸ್ಯರ ಪ್ರಾತಿನಿಧ್ಯ ಹೊಂದಿದೆ. ಮೂರು ಸಾಮಾನ್ಯ (ಹಿಂದೂಗಳು) ಮತ್ತು ಎರಡು ಸಿಖ್

ಸದಸ್ಯರ ಪ್ರಾತಿನಿಧ್ಯ. ಈಗಷ್ಟೇ ನಾನು ಮಂಡಿಸಿರುವ ಸೂಚನೆಯು ನಾಲ್ಕು ಸ್ಥಾನಗಳನ್ನು ಅಂದರೆ ಎರಡು ಸಾಮಾನ್ಯ, ಎರಡು ಸಿಖ್ ಸದಸ್ಯರನ್ನು ಕೇಳುತ್ತದೆ. ಪಾಕಿಸ್ತಾನದ ಸಂವಿಧಾನ ರಚನಾಸಭೆಯಲ್ಲಿ ಹಂಚಲಾಗಿರುವಷ್ಟೇ ಸಂಖ್ಯೆಯ ಸ್ಥಾನಗಳನ್ನು ಇಲ್ಲಿಯೂ ಹಂಚಿಕೆ ಮಾಡಬೇಕು ಎಂಬುದೇ ಈಗಲೂ ನನ್ನ ಅಭಿಪ್ರಾಯವಾಗಿದೆ. ಮೂರು ಸಾಮಾನ್ಯ ಮತ್ತು ಎರಡು ಸಿಖ್ಖರಿಗೆ ಈ ಸ್ಥಾನಗಳು ಇರಬೇಕು. ಈ ಉದ್ದೇಶಕ್ಕಾಗಿ ಗೌರವಾನ್ವಿತ ಸಭಾಧ್ಯಕ್ಷರು ಒಂದು ಉಪಸಮಿತಿಯನ್ನು ರಚಿಸಿದ್ದು ಗೌರವಾನ್ವಿತ ಕಾನೂನು ಸಚಿವರು ಇದರ ಅಧ್ಯಕ್ಷರಾಗಿರುತ್ತಾರೆ. ಅಧ್ಯಕ್ಷರಲ್ಲದೆ, ಇದು ನಾಲ್ವರು ಸದಸ್ಯರನ್ನು ಹೊಂದಿದೆ. ನಿನ್ನೆ ದಿನ ಬೆಳಗ್ಗೆ, ಈ ಸಮಸ್ಯೆಯನ್ನು ಪರಿಶೀಲಿಸುವುದಕ್ಕಾಗಿ ಉಪಸಮಿತಿಯ ಸಭೆಯನ್ನು ನಡೆಸಲಾಯಿತು. ಐದು ಸದಸ್ಯರನ್ನು ಚುನಾಯಿಸಬೇಕು ಎಂಬ ತೀರ್ಮಾನಕ್ಕೆ ಬರಲಾಯಿತು. ಆದರೆ ಅನಂತರ ಲೆಕ್ಕಾಚಾರಮಾಡಿದಾಗ ಜನಸಂಖ್ಯೆಯ ಆಧಾರದ ಮೇಲೆ ಐದು ಸದಸ್ಯರನ್ನು ಚುನಾಯಿಸಲು ಸಾಧ್ಯವಾಗಲಿಕ್ಕಿಲ್ಲ ಎಂಬ ಸಂದೇಹವೆದ್ದಿತು. ಪಶ್ಚಿಮ ಪಂಜಾಬಿನಿಂದ ಎಲ್ಲ ಸಿಖ್ ಜನರೂ ಹಿಂದೂಗಳೂ ಈ ಪಕ್ಕಕ್ಕೆ ವಲಸೆ ಬಂದಿರುವುದು ಸ್ಪಷ್ಟವಾಗಿದೆ. ಇನ್ನುಳಿದವರು ಬರಲಿದ್ದಾರೆ. ಪಶ್ಚಿಮ ಪಂಜಾಬಿನಲ್ಲಿ ಅವರ ಸಂಖ್ಯೆಯು ೪೫,೦೦,೦೦೦ಕ್ಕೂ ಹೆಚ್ಚಾಗಿತ್ತು. ಅಂದರೆ ೪೫,೦೭,೨೫೧ ಆಗಿದ್ದಿತು. ಈ ಸಂಖ್ಯೆಯನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ಆಗ ಐದು ಸದಸ್ಯರನ್ನು ಚುನಾಯಿಸಬಹುದು, ಅಲ್ಲದೆ ಅನೇಕ ಹಿಂದೂಗಳು, ಸಿಖ್ಖರೂ ಪೂರ್ವ ಪಂಜಾಬ್‌ಗೆ ವಲಸೆ ಹೋಗಿದ್ದಾರೆ. ವಾಯವ್ಯ ಗಡಿನಾಡು ಪ್ರಾಂತ್ಯ ಹಾಗೂ ಸಿಂಧ್ ಮತ್ತು ಬಲೂಚಿಸ್ತಾನಗಳಿಂದಲೂ ವಲಸೆ ಹೋಗಿದ್ದಾರೆ. ಆದರೆ ಸದ್ಯದ ಮಟ್ಟಿಗೆ ಜನಸಂಖ್ಯೆಯ ಸರಿಯಾದ ಅಂದಾಜು ಸಿಗಲು ಸಾಧ್ಯವಿಲ್ಲ. ನಾಲ್ಕು ಸ್ಥಾನಗಳನ್ನು ಸೇರಿಸಿದರೆ ಸಾಕು ಎಂದು ನಾವು ಒಪ್ಪಿಕೊಂಡಿದ್ದೇವೆ. ಒಂದು ವೇಳೆ ಲೆಕ್ಕಾಚಾರದ ಅನಂತರ ಜನಸಂಖ್ಯೆಯು ಹೆಚ್ಚಾಗಿದೆ ಎಂದು ಕಂಡುಬಂದರೆ, ಆಗ ಆ ಬಗ್ಗೆ ಮರುಪರಿಶೀಲನೆ ಮಾಡಬಹುದು. ಈಗ ಸದನದ ಮುಂದಿರುವ ಕನಿಷ್ಠ ಬೇಡಿಕೆಯು ಅಂಗೀಕಾರವಾಗುತ್ತದೆ ಎಂದು ಆಶಿಸುತ್ತೇನೆ.]*

**ಮಾನ್ಯ ಸಭಾಧ್ಯಕ್ಷರು** : ಸೂಚನೆಯನ್ನು ಮಂಡಿಸಲಾಗಿದೆ. ಈ ಬಗ್ಗೆ ಯಾರಾದರೂ ತಿದ್ದುಪಡಿ ಮಂಡಿಸುವುದಿದ್ದರೆ ಅಥವಾ ಯಾರಾದರೂ ಮಾತಾಡಲು ಇಚ್ಛಿಸಿದರೆ ಹಾಗೆ ಮಾಡಬಹುದು.

**ಶ್ರೀ ಬಿ. ದಾಸ್** (ಒರಿಸ್ಸಾ : ಸಾಮಾನ್ಯ) : ಮಾನ್ಯರೆ, ನನ್ನ ಸ್ನೇಹಿತರಾದ ಗ್ಯಾನಿ ಗುರುಮುಖ್ ಸಿಂಗ್ ಅವರು ಈಗಷ್ಟೇ ಮಂಡಿಸಿದ ಸೂಚನೆಯನ್ನು ನಾನು ಓದಿದಾಗ ಈ ಬೆಳಗ್ಗೆ ಒಂದು ಬದಲಿ ಸೂಚನೆಯನ್ನು ಕಳುಹಿಸಿದೆ. ನನಗೆ ತಿಳಿದಂತೆ, ಪಾಕಿಸ್ತಾನದಿಂದ ಹಿಂದೂಸ್ತಾನಕ್ಕೆ ವಲಸೆ ಬಂದ ಜನಸಂಖ್ಯೆಯ ಪ್ರಾತಿನಿಧ್ಯದ ಇಡೀ ಸಮಸ್ಯೆಯನ್ನು ಅವರು ಸರಿಯಾಗಿ ನಿರ್ವಹಿಸಿಲ್ಲ. ಈ ಸೂಚನೆಗೆ ತಿದ್ದುಪಡಿ ತರುವ ಸೂಚನೆಯನ್ನು ನಾನು ನೀಡಿದ್ದೇನೆ. ಆದರೆ ಮರುಪರಿಶೀಲಿಸಿದಾಗ ಅದನ್ನು ಮಂಡಿಸಲು ನಾನು ಪ್ರಸ್ತಾವಿಸುವುದಿಲ್ಲ. ಆದರೂ ಗೌರವಾನ್ವಿತ ಅಧ್ಯಕ್ಷರು ಮತ್ತು ಸದನದ ಪರಿಶೀಲನೆಗಾಗಿ ನಾನು ಕೆಲವೊಂದು ಸಂಗತಿಗಳನ್ನು ನಿವೇದಿಸಲು ಇಷ್ಟಪಡುತ್ತೇನೆ.

ಬಹುದೊಡ್ಡ ಜನಸಂಖ್ಯೆಯು ಪಾಕಿಸ್ತಾನವನ್ನು ಬಿಟ್ಟು ಭಾರತದ ಆಧಿಪತ್ಯಕ್ಕೆ ಬಂದಿದೆ. ಪೂರ್ವ ಬಂಗಾಳ, ಸಿಂಧ್ ಹಾಗೂ ವಾಯವ್ಯ ಗಡಿ ಪ್ರಾಂತ್ಯದಿಂದ ಬಹುದೊಡ್ಡ ಜನಸಂಖ್ಯೆ ವಲಸೆ ಬಂದಿದೆ. ನನ್ನ ಗೌರವಾನ್ವಿತ ಮಿತ್ರರು ಪ್ರಾತಿನಿಧ್ಯವನ್ನು ಬಯಸುತ್ತಿದ್ದಾರೆ. ಪಶ್ಚಿಮ ಪಂಜಾಬಿನಿಂದ ಬಂದವರಿಗಾಗಿ ಮಾತ್ರ. ಜನರು ಸಂಯುಕ್ತ ಪ್ರಾಂತ್ಯಗಳಿಗೆ, ಮಧ್ಯಪ್ರಾಂತ್ಯಗಳಿಗೆ, ಅಷ್ಟೇಕೆ ಬಾಂಬೆ ರಾಜ್‌ಪುತಾನ ಹಾಗೂ ದೆಹಲಿ ಕಡೆಗೂ ವಲಸೆ ಬಂದಿದ್ದಾರೆ. ನಾವು ಈ ಜನರನ್ನು ಅಲಕ್ಷಿಸುವುದು ನ್ಯಾಯವೆನಿಸುವುದಿಲ್ಲ. ವಾಯವ್ಯ ಗಡಿಪ್ರಾಂತ್ಯ, ಸಿಂಧ್, ಪೂರ್ವ ಬಂಗಾಲ ಮತ್ತು ಪಶ್ಚಿಮ ಪಂಜಾಬಿನಿಂದ ಸಂವಿಧಾನ ರಚನಾಸಭೆಗೆ ಆಯ್ಕೆಯಾಗಿದ್ದ ಹಿಂದೂ ಮತ್ತು ಸಿಖ್ ಸದಸ್ಯರನ್ನೂ ಸಹ ಈ ಸದನದಲ್ಲಿ ಕುಳಿತುಕೊಳ್ಳುವುದಕ್ಕೆ ಅರ್ಹರನ್ನಾಗಿ ಮಾಡುವ ನಿರ್ಣಯದ ಬಗ್ಗೆ ಸದನವು ಪರಿಶೀಲಿಸುವುದು ಸರಿಯಾದ ಮಾರ್ಗವಾಗಿದೆ. ಹಿಂದೂ ಮತ್ತು

ಸಿಖ್ ವಲಸೆಗಾರರನ್ನೂ ಪ್ರತಿನಿಧಿಸಲು ಅವರಿಗೆ ಅನುಮತಿ ನೀಡಿದರೆ, ನನ್ನ ಸ್ನೇಹಿತರು ಸಲಹೆ ಮಾಡಿದಂತೆ ಚುನಾವಣೆಯ ಅಗತ್ಯವೇ ಇರುವುದಿಲ್ಲ

ಎಲ್ಲಕ್ಕಿಂತ ಮುಖ್ಯವಾಗಿ ಅವರ ಸಲಹೆಯನ್ನು ನಾವು ಒಪ್ಪಿಕೊಂಡರೆ ಎಂಟು ಸಾಮಾನ್ಯ ಮತ್ತು ನಾಲ್ಕು ಸಿಖ್ ಸದಸ್ಯರನ್ನು ಚುನಾಯಿಸಬೇಕೆಂಬ ಅವರ ವಿಚಾರವು ಪೂರ್ವ ಪಂಜಾಬಿಗೆ ಬಂದಿರುವ ಸಿಖ್ ಹಾಗೂ ಹಿಂದೂ ವಲಸೆಗಾರರ ಸಂಖ್ಯೆಗೆ ತೀರಾ ಹೆಚ್ಚಾಗುತ್ತದೆ. ಅಲ್ಲದೆ, ಅದು ಸಮಸ್ಯೆಯನ್ನು ಯಾವ ರೀತಿಯಲ್ಲೂ ಬಗೆಹರಿಸುವುದಿಲ್ಲ. ಪೂರ್ವ ಬಂಗಾಳದಿಂದ ಪಶ್ಚಿಮ ಬಂಗಾಳಕ್ಕೆ ಹತ್ತರಿಂದ ಹದಿನೈದು ಲಕ್ಷದಷ್ಟು ಜನರು ವಲಸೆ ಬಂದಿದ್ದಾರೆಂದು ನಾವು ಕೇಳಿದ್ದೇವೆ. ವಾಯವ್ಯ ಗಡಿ ಪ್ರಾಂತ್ಯದಲ್ಲಿ ಈಗ ಉಳಿದಿರುವ ಹಿಂದೂಗಳ ಸಂಖ್ಯೆ ತೀರ ಕಡಿಮೆ ಎಂಬುದನ್ನು ಕೇಳಿದ್ದೇವೆ. ನಮ್ಮ ಗೌರವಾನ್ವಿತ ಸ್ನೇಹಿತರಾದ ಶ್ರೀ ಮೆಹರ್ ಚಂದ್ ಖನ್ನಾ ಅವರು ಈಗ ಈ ನಗರದಲ್ಲಿ ನಿರಾಶ್ರಿತರಾಗಿದ್ದಾರೆ. ಗಡಿಪ್ರಾಂತ್ಯದಲ್ಲಿರುವ ಹಿಂದೂಗಳನ್ನು ಪ್ರತಿನಿಧಿಸಲು ಈ ಸದನವು ಅವರಿಗೆ ಯಾಕೆ ಅನುಮತಿ ನೀಡಬಾರದು? ಅದೇ ರೀತಿ ಸಿಂಧ್ ಪ್ರಾಂತ್ಯದಿಂದ ಚುನಾಯಿತರಾದ ಜಯರಾಮದಾಸ್ ದೌಲತ್‌ರಾಮ್ ಅವರು ಒಬ್ಬ ನಿರಾಶ್ರಿತರು ಅಥವಾ ದೆಹಲಿಯಲ್ಲಿ ಸಚಿವರಾಗಿದ್ದಾರೆ. ಭಾರತದಲ್ಲಿರುವ ಸಿಂಧ್ ವಲಸೆಗಾರರನ್ನು ಅವರು ಸೂಕ್ತವಾಗಿ ಪ್ರತಿನಿಧಿಸಬಹುದಲ್ಲವೆ?

ಪೂರ್ವ ಬಂಗಾಳದ ಸಮಸ್ಯೆ ಇನ್ನೂ ಕಠಿಣವಾಗಿದೆ. ಜನರು ಬಹು ದೊಡ್ಡ ಸಂಖ್ಯೆಯಲ್ಲಿ ವಲಸೆ ಹೋಗಲು ಆರಂಭಿಸಿದ್ದಾರೆ. ಹದಿನೈದು ಲಕ್ಷ ನಿರಾಶ್ರಿತರು ಪೂರ್ವ ಬಂಗಾಳದಿಂದ ಪಶ್ಚಿಮ ಬಂಗಾಳಕ್ಕೆ ಬಂದಿದ್ದಾರೆ ಎಂದು ನಿನ್ನೆ ರಾತ್ರಿ ನನ್ನ ಸ್ನೇಹಿತರೊಬ್ಬರು ಹೇಳುತ್ತಿದ್ದರು. ಪಾಕಿಸ್ತಾನದ ನೀತಿ ಹೀಗೇ ಮುಂದುವರಿದರೆ ಇಡೀ ಹಿಂದೂ ಜನಸಂಖ್ಯೆಯೇ ಪಶ್ಚಿಮ ಬಂಗಾಳಕ್ಕೆ ವಲಸೆ ಬರಬಹುದು. ನಾವು ಯೋಚಿಸಬೇಕಾಗಿರುವುದು ಈ ಜನಸಂಖ್ಯೆಯನ್ನು ಕುರಿತು. ನಾವು ಜಾರಿಗೊಳಿಸಲಿರುವ ಸಂವಿಧಾನದ ಬಗ್ಗೆ, ನೀವು ಅವರಿಗೆ ಕೊಡುತ್ತಿರುವ ಪ್ರಾತಿನಿಧ್ಯದ ಬಗ್ಗೆ ಪೂರ್ವ ಬಂಗಾಳ ಅಥವಾ ಪಶ್ಚಿಮ ಬಂಗಾಳದಿಂದ ವಲಸೆ ಬಂದ ಜನರನ್ನು ಪ್ರತಿನಿಧಿಸುತ್ತಿರುವ ಜನರ ಮನಸ್ಸಿನಲ್ಲಿ ಏನಿದೆ ಎಂಬುದನ್ನು ತಿಳಿಯಬೇಕಿದೆ. ಈಗ ಪ್ರಸ್ತಾವಿಸಿರುವ ಪರಿಹಾರದ ಅರ್ಥವೇನೆಂದರೆ ಮತಾಧಿಕಾರಕ್ಕೆ (ಫ್ರಾಂಚೈಸ್) ಹೋಗುವುದು ಮತ್ತು ಹೊಸ ಸದಸ್ಯರನ್ನು ಆಯ್ಕೆಮಾಡುವುದು. ಈ ಪಾಕಿಸ್ತಾನ ಪ್ರದೇಶಗಳಿಂದ ಚುನಾಯಿತರಾದ ಎಲ್ಲ ಸದಸ್ಯರೂ ಈ ಸದನದ ಸದಸ್ಯರಾಗುವುದಕ್ಕೆ ಅನುಮತಿ ನೀಡುವ ಬಗ್ಗೆ ಹಾಗೂ ಈ ಮೊದಲು ಅವರು ಮಾಡುತ್ತಿದ್ದಂತೆ, ಚರ್ಚೆಗಳಲ್ಲಿ ಭಾಗಿಯಾಗುವುದಕ್ಕೆ ಅಧ್ಯಕ್ಷರು ಮಾರ್ಗವೊಂದನ್ನು ರೂಪಿಸುವವರೆಗೆ ನನ್ನ ಗೌರವಾನ್ವಿತ ಸ್ನೇಹಿತರು ನೀಡಿರುವ ಸೂಚನೆಯನ್ನು ಮುಂದೂಡಬಹುದೆಂದು ನಾನು ಸೂಚಿಸಬಯಸುತ್ತೇನೆ.

**ಶ್ರೀ ಜೈಪಾಲ್ ಸಿಂಗ್** (ಬಿಹಾರ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಈ ಸದನದ ಮುಂದೆ ಮಂಡಿಸಲಾಗಿರುವ ಸೂಚನೆಯನ್ನು ನಾನು ಬಲವಾಗಿ ವಿರೋಧಿಸುತ್ತೇನೆ. ಇದು ತುಂಬ ಅಪಾಯಕಾರಿ, ಹಾನಿಕಾರಿ ಹಾಗೂ ಮತೀಯವಾದದ್ದು. ಇದು ವಿಚಿತ್ರವಾದ ತರ್ಕ ಮತ್ತು ಇಲ್ಲಿ ಸರಳವಾದ ಗಣಿತದ ಲೆಕ್ಕಾಚಾರವೂ ಇಲ್ಲ. ಈಗ ಲಭ್ಯವಿರುವ ಅತ್ಯುತ್ತಮ ಅಂದಾಜುಗಳ ಪ್ರಕಾರ, ಇಬ್ಬರು ಹೆಚ್ಚುವರಿ ಸಾಮಾನ್ಯ ಸದಸ್ಯರನ್ನು ಮತ್ತು ಇಬ್ಬರು ಹೆಚ್ಚುವರಿ ಸಿಖ್ ಸದಸ್ಯರನ್ನು ಸೇರಿಸಬೇಕು ಎಂಬ ವಾದವನ್ನು ಮಂದಿಡಲಾಗಿದೆ ಮತ್ತು ಈಗಿರುವ ಪ್ರಾತಿನಿಧ್ಯವೆಂದರೆ ಅದು ಸಾಮಾನ್ಯರು ಆರು, ಮುಸ್ಲಿಮ್ ನಾಲ್ಕು ಮತ್ತು ಎರಡು ಸಿಖ್ ಸದಸ್ಯರು ಎಂದು ಸೂಚನೆಯ ಖಂಡವೊಂದರಲ್ಲಿ ಹೇಳಲಾಗಿದೆ. ನಾನು ಗೌರವಾನ್ವಿತ ಮಿತ್ರರನ್ನು ಕೇಳಬಯಸುವುದೇನೆಂದರೆ, ಸುಳ್ಳು ಯಾಕೆ? ಮುಸ್ಲಿಮ್ ಪ್ರಾತಿನಿಧ್ಯವನ್ನು ತಗ್ಗಿಸಬೇಕು ಎಂಬುದು ಅವರ ಸೂಚನೆಯಲ್ಲವೆ? ಇದು ನನ್ನ ಮೊದಲ ಅಂಶ. ಮುಸ್ಲಿಮರು ಪೂರ್ವ ಪಂಜಾಬನ್ನು ಬಿಟ್ಟು ಬೇರೆಲ್ಲಿಗೋ ಹೋಗಿದ್ದರೆ ಅವರ ತರ್ಕದ ಪ್ರಕಾರ – ಸಿಖ್ ಮತ್ತು ಸಾಮಾನ್ಯ ಜನಸಂಖ್ಯೆಯ ಪರವಾಗಿ ಅವರು

ಮಂಡಿಸಿದ ತರ್ಕದ ಪ್ರಕಾರ–ಇನ್ನೊಂದು ಕಡೆಗೂ ಇದೇ ತರ್ಕವು ಅನ್ವಯವಾಗಬೇಕು. ಇದು ಅಪಾಯಕಾರಿ ಎಂದು ಹೇಳುತ್ತೇನೆ. ಮಾನ್ಯರೆ, ನನ್ನ ಸ್ನೇಹಿತರಾದ ಶ್ರೀ ದಾಸ್ ಅವರು ಇದನ್ನು ಅಖಿಲ ಭಾರತದ ನೆಲೆಯಲ್ಲಿ ಪರಿಶೀಲಿಸಬೇಕು ಎಂದು ಈಗಾಗಲೇ ಹೇಳಿದ್ದಾರೆ. ನಾವು ಹುರುಳಿಲ್ಲದ ಅಂದಾಜುಗಳನ್ನಿಟ್ಟುಕೊಂಡು ಲೆಕ್ಕ ಹಾಕಬಾರದು. ದೇಶದಾದ್ಯಂತ ಜನಗಣತಿ ನಡೆಯಬೇಕು. ನನ್ನದೇ ಪ್ರಾಂತ್ಯ, ಬಿಹಾರದ ವಿಷಯವನ್ನೇ ನೋಡಿ. ನಮಗೆ ಇನ್ನಷ್ಟು ಪ್ರಾತಿನಿಧ್ಯ ಬೇಕಾಗಿಲ್ಲ ಎಂಬುದು ನಮಗೆ ಹೇಗೆ ತಿಳಿಯಬೇಕು. ಪೂರ್ವ ಬಂಗಾಳ ಅಥವಾ ಪಶ್ಚಿಮ ಪಂಜಾಬ್ ಅಥವಾ ಬೇರಾವುದೇ ಕಡೆಯಿಂದ ಎಷ್ಟು ಜನ ಬಿಹಾರ್‌ಗೆ ಬಂದಿದ್ದಾರೆ? ಅಂದಾಜುಗಳೆಂದು ಹೇಳಲಾಗುವ ಇವುಗಳನ್ನಿಟ್ಟುಕೊಂಡು ನಾವು ಲೆಕ್ಕ ಹಾಕಬಹುದೆಂದು ನನಗೆ ಅನ್ನಿಸುವುದಿಲ್ಲ. ಇವು ಕೇವಲ ಅಂದಾಜುಗಳು ಮಾತ್ರ. ಈ ಸಭೆಯು ಒಪ್ಪಿಕೊಳ್ಳಬಹುದಾದ ಅಂಕಿಗಳು ಜನಗಣತಿಯ ಅಂಕಿಗಳನ್ನು ಮಾತ್ರ. ಅಖಿಲ ಭಾರತ ಜನಗಣತಿಯನ್ನು ಕೈಗೊಳ್ಳುವ ಹೊರತು ಮತ್ತು ಮುಸ್ಲಿಮರ ವಾಸ್ತವ ಸಂಖ್ಯೆ ಹಾಗೂ ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಅವರ ಸಂಖ್ಯೆಯಲ್ಲಿರುವ ವ್ಯತ್ಯಾಸ ಅಥವಾ ಇತರ ಜನರ ವ್ಯತ್ಯಾಸ ಅಂದರೆ ಸಾಮಾನ್ಯಜನರ ಸಂಖ್ಯೆಯ ವ್ಯತ್ಯಾಸವನ್ನು ತಿಳಿದುಕೊಳ್ಳುವ ಹೊರತು ಅವರ ಸೂಚನೆಯನ್ನು ಈ ಸದನವು ಅಂಗೀಕರಿಸುವುದು ಬುದ್ಧಿವಂತಿಕೆಯಲ್ಲ. ನಾನು ಇದನ್ನು ಹಾನಿಕಾರಿ ಮತ್ತು ಮತೀಯವಾದ ಸೂಚನೆ ಎಂದು ಭಾವಿಸುತ್ತೇನೆ.

**ದಿವಾನ್ ಚಮನಲಾಲ್** (ಪೂರ್ವ ಪಂಜಾಬ್ : ಸಾಮಾನ್ಯ) : ಮಾನ್ಯರೆ, ಈಗಷ್ಟೆ ಮಾತಾಡಿದ ನನ್ನ ಗೌರವಾನ್ವಿತ ಮಿತ್ರರು ಭಾಷಣ ಮಾಡಿರದಿದ್ದರೆ ನಾನು ಈ ಸೂಚನೆಯ ಕುರಿತಂತೆ ಮಾತಾಡುತ್ತಿರಲಿಲ್ಲ. ಇಲ್ಲಿನ ಅಂಕಿಗಳಲ್ಲಿ ಹುರುಳಿಲ್ಲ ಮತ್ತು ಅಂಕಿ ಅಂಶಗಳು ಲಭ್ಯವಿಲ್ಲ ಎಂದಿದ್ದಾರೆ. ಅದರೆ ಅವರು ತಮ್ಮ ಮುಂದಿರುವ ಸಂಚಾಲಕ ಸಮಿತಿಯ ವರದಿಯನ್ನು ಓದಿಯೂ ಇಲ್ಲವೇನೋ ಎಂದು ನನಗೆ ಸಂದೇಹವಾಗುತ್ತದೆ. ಆ ವರದಿಯ ಪ್ರಕಾರ.....

**ಶ್ರೀ ಜೈಪಾಲ್ ಸಿಂಗ್** : ನನಗೆ ವರದಿ ಸಿಕ್ಕಿಲ್ಲ.

**ದಿವಾನ್ ಚಮನಲಾಲ್** : ನನ್ನ ಗೌರವಾನ್ವಿತ ಮಿತ್ರರಿಗೆ ಅದು ಸಿಕ್ಕಲ್ಲದಿದ್ದರೆ, ಈ ಸದನದ ಮುಂದೆ ಈ ನಿರ್ದಿಷ್ಟ ಸೂಚನೆ ಮಂಡಿಸಲು ಕಾರಣವೇನು ಎಂಬುದನ್ನು ತಿಳಿಯದೆ ಅವರು ಮಾತಾಡಲು ಎದ್ದು ನಿಂತರು ಎಂಬುದು ನನಗೆ ಸ್ಪಷ್ಟವಾಗಿ ಅರ್ಥವಾಗುತ್ತಿದೆ.

ಮಾನ್ಯರೆ, ಪ್ರಸ್ತುತ ಸ್ಥಿತಿ ಹೀಗಿದೆ: ನಮಗೆ ಅಂಕಿಅಂಶಗಳು ಲಭ್ಯವಿವೆ. ಕಾಲ್ಪನಿಕ ವಿಭಜನೆಯ ಪ್ರಕಾರ, ***(National Division)*** ಈ ಕಡೆಯಿದ್ದ ಮುಸಲ್ಮಾನರ ಸಂಖ್ಯೆ ೩.೮ ಮಿಲಿಯನ್, ಸಿಖ್ಖರ ಸಂಖ್ಯೆ ೨.೧ ಮಿಲಿಯನ್ ಮತ್ತು ಸಾಮಾನ್ಯರ ಸಂಖ್ಯೆಯು ೫.೬ ಮಿಲಿಯನ್. ರ್‍ಯಾಡ್‌ಕ್ಲಿಫರ ಐತೀರ್ಪಿನ ಅನಂತರ ಈ ಅಂಕಿಗಳಲ್ಲಿ ಸ್ವಲ್ಪ ಬದಲಾವಣೆಯಾಯಿತು. ೩.೮ ಮಿಲಿಯನ್ ಮುಸ್ಲಿಮರಿಗೆ ಬದಲು ೪.೪ ಮಿಲಿಯನ್ ಮುಸ್ಲಿಮ್, ೨.೧ ಮಿಲಿಯನ್ ಸಿಖ್ಖರಿಗೆ ಬದಲು ೨.೩ ಮಿಲಿಯನ್ ಸಿಖ್ಖರು, ೫.೬ ಮಿಲಿಯನ್ ಸಾಮಾನ್ಯರಿಗೆ ಬದಲು ೫.೯ ಮಿಲಿಯನ್ ಸಾಮಾನ್ಯರು; ಒಟ್ಟು ನೆಲೆಸಿಗರ ಸಂಖ್ಯೆ ೧೨.೬ ಮಿಲಿಯನ್, ಅನಂತರ ನಡೆದ ದುರ್ಘಟನೆಯಿಂದಾಗಿ ಕೆಲವು ದೂರದೂರದ ಭಾಗಗಳಲ್ಲಿ ಉಳಿದವರನ್ನು ಬಿಟ್ಟು ವಾಸ್ತವವಾಗಿ ಪ್ರತಿಯೊಬ್ಬ ಹಿಂದೂ ಹಾಗೂ ಸಿಖ್ಖ ಜನರು ಪಶ್ಚಿಮ ಪಂಜಾಬ್‌ನಿಂದ ಪೂರ್ವ ಪಂಜಾಬ್‌ಗೆ ಹೋಗಿದ್ದಾರೆ. ಹೀಗೆ ಹೋದವರು ಸಾಮಾನ್ಯರು ೨.೨೫ ಮಿಲಿಯನ್, ಮತ್ತು ಸಿಖ್ಖರು ೧.೬೭ ಮಿಲಿಯನ್. ಇದು ಲಾಹೋರ್ ವಿಭಜನೆ, ರಾವಲ್ಪಿಂಡಿ ವಿಭಜನೆ, ಹಾಗೂ ಮುಲ್ತಾನ್ ವಿಭಜನೆಯಿಂದ ಆಗಿರುವಂಥದ್ದು. ಜನಗಣತಿಯ ಅನಂತರದ ಇತ್ತೀಚಿನ ಏರಿಕೆಯಿಂದಾಗಿ ಜನಗಣತಿಯ ಸಂಖ್ಯೆಗೆ ನಾನು ವೈಯಕ್ತಿಕವಾಗಿ ಶೇಕಡ ೭ನ್ನು ಸೇರಿಸುತ್ತೇನಾದರೂ ನಿಖರವಾದ ಜನಗಣತಿ ಅಂಕಿಗಳು ಇವು. ಆದ್ದರಿಂದ ೧೨.೬ ಮಿಲಿಯನ್ ನೆಲೆಸಿಗರಲ್ಲಿ ೪.೪. ಮಿಲಿಯನ್ ಮುಸ್ಲಿಮರನ್ನು ಹೊರತುಪಡಿಸಿದರೆ ೮.೨ ಮಿಲಿಯನ್ ನೆಲೆಸಿಗರು ಹಿಂದೂ ಮತ್ತು

ಸಿಖ್ಖರು ಪೂರ್ವ ಪಂಜಾಬ್‌ನಲ್ಲಿ ಉಳಿದಿದ್ದಾರೆ. ಇದರ ಜೊತೆಗೆ ಈಗ ೪.೯೨ ಮಿಲಿಯನ್ ಸಿಖ್ಖರು ಹಾಗೂ ಸಾಮಾನ್ಯರು ಇದ್ದಾರೆ. ಲಾಹೋರ್, ರಾವಲ್ಪಿಂಡಿ ಹಾಗೂ ಮುಲ್ತಾನ್ ವಿಭಜನೆಗಳಿಂದ ವಲಸೆ ಬಂದ ಜನರು ಸಾಮಾನ್ಯವಾಗಿ ಪೂರ್ವ ಪಂಜಾಬ್‌ಗೆ ಬಂದಿದ್ದಾರೆ. ಈ ಜನಸಂಖ್ಯೆಯ ಕೆಲವು ಭಾಗ ದೆಹಲಿಗೆ ಬಂದಿದ್ದಾರೆ ಮತ್ತು ಅಲ್ಪ ಭಾಗದ ಜನರು ಮಾತ್ರ ಇತರ ಬೇರೆ ಬೇರೆ ಕೇಂದ್ರಗಳಿಗೆ ಹೋಗಿದ್ದಾರೆ. ಆದರೆ ಬಹುಸಂಖ್ಯಾತ ಜನರು ಇನ್ನೂ ಪೂರ್ವ ಪಂಜಾಬಿನಲ್ಲಿಯೇ ಇದ್ದಾರೆ ಮತ್ತು ಅವರು ಪಂಜಾಬ್ ವಿಧಾನಸಭೆಗೆ ಆಯ್ಕೆಯಾದವರ ಮತದಾರರೇ ಆಗಿದ್ದಾರೆ. ಮತದಾರರು ಇನ್ನೂ ಅಸ್ತಿತ್ವದಲ್ಲಿರುವುದರಿಂದ ಇನ್ನಷ್ಟು ಪ್ರಾತಿನಿಧ್ಯ ಪಡೆಯಲು ಅವರು ಅರ್ಹರಾಗಿದ್ದಾರೆ. ಈ ನಿರ್ಣಯದ ಹಿಂದಿರುವ ತತ್ತ್ವ ಇದೇ ಆಗಿದೆ. ಆದ್ದರಿಂದ ಜನಸಂಖ್ಯೆಗನುಗುಣವಾಗಿ ನಾವು ೪ ಅಥವಾ ೫ ಸ್ಥಾನಗಳನ್ನು ಕೇಳುವುದು ತರ್ಕಬದ್ಧವಾಗಿದ್ದರೂ ಅನಗತ್ಯ ಪ್ರಾಮುಖ್ಯವನ್ನು ***(Weightage)*** ಉಂಟುಮಾಡಬಾರದು ಎಂಬುದಕ್ಕಾಗಿ ನಾವು ಚುನಾವಣೆಯ ಉದ್ದೇಶಕ್ಕೆ ಸಿಖ್ಖರಿಗೆ ೨ ಮತ್ತು ಸಾಮಾನ್ಯರಿಗೆ ೨ ಸ್ಥಾನಗಳನ್ನು ಕೇಳುವುದಷ್ಟಕ್ಕೇ ತೃಪ್ತರಾಗಿದ್ದೇವೆ. ಸಂವಿಧಾನ ರಚನಾಸಭೆಗೆ ಇನ್ನೂ ೪ ಪ್ರತಿನಿಧಿಗಳನ್ನು ಆಯ್ಕೆಮಾಡುವ ಹಕ್ಕನ್ನು ನಮಗೆ ಕೊಡಿ ಎಂದು ನಾವು ಈ ಸೂಚನೆಯ ಸಂಬಂಧವಾಗಿ ನಿಮ್ಮನ್ನು ಯಾಕೆ ಕೇಳುತ್ತಿದ್ದೇವೆ? ಪಶ್ಚಿಮ ಪಂಜಾಬ್ ವಿಧಾನಸಭೆಯ ಸದಸ್ಯರಾಗಿದ್ದವರು ಪಶ್ಚಿಮ ಪಂಜಾಬ್‌ನಲ್ಲಿನ ತಮ್ಮ ಸ್ಥಾನಗಳನ್ನು ತ್ಯಜಿಸಿ ಬಂದಿದ್ದರಿಂದ ಪೂರ್ವ ಪಂಜಾಬ್ ವಿಧಾನಸಭೆಯ ಸದಸ್ಯರಾಗುವುದು ಸಾಧ್ಯವಾಗುವಂತೆ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿರುವುದನ್ನು ನೀವು ಗಮನಿಸಬೇಕು. ಇದೇ ತತ್ತ್ವದ ಪ್ರಕಾರ, ಸಿಖ್ ಮತ್ತು ಸಾಮಾನ್ಯ ಈ ಎರಡೂ ಮತಕ್ಷೇತ್ರಗಳ ಜನಸಂಖೆಯಲ್ಲಿ ಹೆಚ್ಚಳವಾಗಿರುವುದಕ್ಕೆ ತಕ್ಕಂತೆ ಹೆಚ್ಚಿನ ೪ ಪ್ರತಿನಿಧಿಗಳನ್ನು ಆಯ್ಕೆಮಾಡಲು ನಮಗೆ ಅವಕಾಶ ನೀಡಿ ಎಂದು ನಾವು ಕೇಳುತ್ತಿದ್ದೇವೆ. ಜನಗಣತಿಯ ಅಂಕಿಗಳಾಗಿರುವುದರಿಂದ ಈ ಅಂಕಿಗಳಲ್ಲಿ ಬಹಳ ತಪ್ಪಿದೆ ಎಂದು ನನಗೆ ಅನ್ನಿಸುವುದಿಲ್ಲ. ನಾವು ರ‍್ಯಾಡ್‌ಕ್ಲಿಫ್ ಗಡಿ ಆಯೋಗದ ಅಂಕಿಗಳಿಂದ ಈ ಅಂಕಿಗಳನ್ನು ತೆಗೆದುಕೊಂಡಿದ್ದೇವೆ. ಪ್ರಾಂತ್ಯದಲ್ಲಿ ಈಗಿರುವ ಅಂಕಿಗಳನ್ನು ರ‍್ಯಾಡ್‌ಕ್ಲಿಫ್ ಆಯೋಗದ ಅಂಕಿಗಳೊಂದಿಗೆ ಹೋಲಿಸಿದಾಗ ಹೆಚ್ಚಳ ಮಾಡುವುದಕ್ಕೆ ಕಾರಣವಿದೆಯೆಂಬ ತೀರ್ಮಾನಕ್ಕೆ ನಾವು ಬಂದಿದ್ದೇವೆ.

**ಶ್ರೀ ಜೈಪಾಲ್ ಸಿಂಗ್** : ಕ್ರಿಯಾಲೋಪ ಕುರಿತು ತಮ್ಮದೇ ವಾದದ ಪ್ರಕಾರ ಅವರು ಮುಸ್ಲಿಮ್ ಅಂಕಿಸಂಖ್ಯೆಯನ್ನು ಯಾಕೆ ಕಡಿಮೆ ಮಾಡಿಲ್ಲ?

**ದಿವಾನ್ ಚಮನಲಾಲ್** : ವರದಿಯ ಉಪಾಂತ್ಯ ಕಂಡಿಕೆಯಲ್ಲಿ ಈ ಕೆಳಕಂಡ ಅಂಶವನ್ನು ನೋಡಬಹುದು.

"ಆದ್ದರಿಂದ, ನಾವು, ಡೊಮಿನಿಯನ್ (ಪ್ರಭುತ್ವ) ವಿಧಾನಸಭೆಯಾಗಿ ಕಾರ್ಯನಿರ್ವಹಿಸುವ ಸಂವಿಧಾನ ರಚನಾಸಭೆಯ ಕಳೆದ ಅಧಿವೇಶನದ ಅವಧಿಯಲ್ಲಿ ಮುಸ್ಲಿಮ್ ಸದಸ್ಯರು ಹಾಜರಿರಲಿಲ್ಲವೆಂದು ಅವರಿಗೆ ನಾನು ತಿಳಿಸಿದ್ದರೂ, ಸಂವಿಧಾನ ರಚನಾಸಭೆಯ ಸದಸ್ಯರಾಗಿ ಮುಂದುವರಿಯತ್ತಿರುವ ಆ ನಾಲ್ಕು ಮುಸ್ಲಿಂ ಸದಸ್ಯರು ಈ ವರ್ತನೆಯನ್ನು ಹೇಗೆ ಕೂಡಲೇ ಕ್ರಮ ಕೈಗೊಳ್ಳಬೇಕೆಂಬ ತೊಂದರೆಯನ್ನು ಎದುರಿಸಬೇಕಾಯಿತು ಮತ್ತು ಅವರು ಯಾವುದೊಂದು ಸಭೆಗೆ ಕೂಡಲೇ ಹಾಜರಾಗಲು ಪ್ರಯತ್ನಿಸಲಿಲ್ಲ."

ವೈಯಕ್ತಿಕವಾಗಿ ನನ್ನ ದೃಷ್ಟಿಯೇನೆಂದರೆ, ನಾವು ಈ ವಿಷಯವನ್ನು ಈಗಿರುವ ಹಾಗೇ ಬಿಟ್ಟುಬಿಡಬೇಕು. ಬಹುಶಃ ಅನಂತರದ ಹಂತದಲ್ಲಿ ಬದಲಾವಣೆ ಮಾಡುವುದು ನಿಮಗೆ ಅನಿವಾರ್ಯವಾಗಬಹುದು ಅಂದರೆ, ತಿಳಿಸಲಾದ ಕೆಲವು ಸಮಯದವರೆಗೆ ಸದಸ್ಯರೊಬ್ಬರು ಸಂವಿಧಾನ ರಚನಾಸಭೆಯ ಅಧಿವೇಶನಕ್ಕೆ ಹಾಜರಾಗದಿದ್ದರೆ ಆಗ ತಾನಾಗಿಯೇ ಅವರ ಸ್ಥಾನ ಖಾಲಿಯಾಗುತ್ತದೆ. ಆದರೆ ಸದ್ಯದಲ್ಲಿ ಈ ಬಗ್ಗೆ ಯಾವ ನಿಯಮವೂ ಇಲ್ಲದಿರುವುದರಿಂದ, ನಾವು ಈ ಅವಕಾಶದ ಪ್ರಯೋಜನವನ್ನು ಪಡೆದುಕೊಳ್ಳುವಂತಿಲ್ಲ. ಈ ಸಮಸ್ಯೆಗೆ ಸಂಬಂಧಿಸಿದಂತೆ ನಾವು ಪರಿಗಣಿಸಿರುವ ಕಾರ್ಯರೂಪಕ್ಕೆ ತರಬಹುದಾದ ಒಂದು ಪರಿಹಾರವೆಂದರೆ, ನಾಲ್ಕು ಸ್ಥಾನಗಳನ್ನು ಹಾಗೆ ಉಳಿಸುವುದು ಮತ್ತು ಪೂರ್ವ ಪಂಜಾಬಿನಲ್ಲಿ ಏರಿಕೆಯಾಗಿರುವ ಜನಸಂಖ್ಯೆಗೆ

ಅನುಗುಣವಾಗಿ ಇನ್ನಷ್ಟು ಸ್ಥಾನಗಳನ್ನು ಸೇರಿಸುವುದು. ಸದನವು ಈ ಪ್ರಸ್ತಾವನೆಗೆ ಅಂಗೀಕಾರ ನೀಡುವುದೆಂದು ಆಶಿಸುತ್ತೇನೆ ಮತ್ತು ಆ ಕಡೆ ಎಲ್ಲವನ್ನೂ ಕಳೆದುಕೊಂಡಿರುವಂಥವರಿಗೆ ಮಾತ್ರವಲ್ಲ ಈ ಕಡೆ ಬಂದಿರುವಂಥವರಿಗೂ ಕೂಡ ತಮ್ಮ ಅಭಿಪ್ರಾಯವನ್ನು ನಿಮ್ಮ ಮುಂದೆ ಇಡಲು ಸಾಧ್ಯವಾಗುವಂತೆ ಮಾಡುವ ಬಗ್ಗೆ ಪರಿಶೀಲಿಸುತ್ತೀರೆಂದು ಆಶಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಈ ಬಗ್ಗೆ ದೀರ್ಘ ಚರ್ಚೆಯನ್ನು ತಪ್ಪಿಸುವುದಕ್ಕಾಗಿ ಈ ನಿರ್ದಿಷ್ಟ ನಿರ್ಣಯಕ್ಕೆ ಸಂಬಂಧಿಸಿದಂತೆ ಅನುಸರಿಸಲಾಗುತ್ತಿರುವ ವಿಧಾನವನ್ನು ಕುರಿತು ನಾನು ವಿವರಣೆಯೊಂದನ್ನು ನೀಡಬಹುದೆ? ಈ ವಿಷಯವು ಸಂಚಾಲಕ ಸಮಿತಿಯ ಮುಂದೆ ಬಂದಿತ್ತು. ಈ ಅಂಕಿಸಂಖ್ಯೆಗಳನ್ನು ಕುರಿತಂತೆ ಪರಿಶೀಲಿಸಲು ಒಂದು ಚಿಕ್ಕ ಸಮಿತಿಗೆ ಈ ವಿಷಯವನ್ನು ಒಪ್ಪಿಸುವುದು ಅಗತ್ಯವೆಂದು ಸಂಚಾಲಕ ಸಮಿತಿಯು ಭಾವಿಸಿತು. ಈ ಸಮಿತಿಯಲ್ಲಿ ಕೆಳಕಂಡವರಿದ್ದರು:

ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್

ದಿವಾನ್ ಚಮನಲಾಲ್

ಗ್ಯಾನಿ ಗುರುಮುಖ್ ಸಿಂಗ್ ಮುಸಾಫಿರ್

ಶ್ರೀ ರಫಿ ಅಹ್ಮದ್ ಕಿದ್ವಾಯಿ ಮತ್ತು

ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್

ಈ ಎಲ್ಲಾ ಅಂಕಿ ಅಂಶಗಳನ್ನು ಮತ್ತು ಒಂದು ಕಡೆಯಿಂದ ಇನ್ನೊಂದು ಕಡೆಗೆ ಜನರ ವಲಸೆಗೆ ಸಂಬಂಧಿಸಿದಂತೆ ಲಭ್ಯವಾದ ಮಾಹಿತಿಯನ್ನು ಪರಿಶೀಲಿಸಿದ ಅನಂತರ ಸಮಿತಿಯು ಕೆಲವೊಂದು ಶಿಫಾರಸುಗಳನ್ನು ಮಾಡಿದ್ದು ಇದರ ಆಧಾರದ ಮೇಲೆ ನಿರ್ಣಯವು ಸದನದ ಮುಂದೆ ಬಂದಿದೆ. ಸಂಚಾಲಕ ಸಮಿತಿಯ ಶಿಫಾರಸುಗಳನ್ನು ಆಧರಿಸಿ ನಾನು ನೇಮಕಮಾಡಿದ ಸಮಿತಿಯು ವಿಷಯವನ್ನು ಪರಿಶೀಲಿಸಿದೆ. ಇದನ್ನು ಒಪ್ಪುವುದು ಒಪ್ಪದಿರುವುದು ಸದನಕ್ಕೆ ಬಿಟ್ಟ ಅಂಶ. ಈ ಅಂಶವನ್ನು ವಿವರಿಸುವುದು ಉತ್ತಮ ಎಂದು ನನಗೆ ಅನ್ನಿಸಿತು. ಆ ಉಪಸಮಿತಿಯ ವರದಿಯನ್ನು ನಿಮಗೆ ಕೊಡಲಾಗಿಲ್ಲ. ಕೇವಲ ನಿರ್ಣಯವನ್ನು ಮಾತ್ರ ಕೊಡಲಾಗಿದೆ. ಇದಕ್ಕಾಗಿ ಕ್ಷಮೆ ಇರಲಿ. ಆ ವರದಿಯು ಸದಸ್ಯರಿಗೆ ಸಿಕ್ಕಿದ್ದರೆ ಬಹುಶಃ ಬಹಳಷ್ಟು ಚರ್ಚೆಯನ್ನು ತಪ್ಪಿಸಬಹುದಾಗಿತ್ತು. ಆದರೆ ಹಾಗಾಗಲಿಲ್ಲ. ಅದಕ್ಕಾಗಿ ನಾನು ಕ್ಷಮೆ ಕೇಳುತ್ತೇನೆ.

**ಶ್ರೀ ರೋಹಿಣಿ ಕುಮಾರ್ ಚೌಧುರಿ** (ಅಸ್ಸಾಮ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಈ ಹಂತದಲ್ಲಿ ಈ ನಿರ್ಣಯಕ್ಕೆ ಇನ್ನೂ ಕಾಲ ಪಕ್ವವಾಗಿಲ್ಲ ಅನ್ನಿಸುತ್ತದೆ. ಒಂದು ಸಲ ಈ ತತ್ತ್ವವನ್ನು ಒಪ್ಪಿಕೊಂಡರೆ, ಇದೇ ಅನುಕೂಲವನ್ನು ಪಶ್ಚಿಮ ಬಂಗಾಳದ ಜನರಿಗೂ ಅಥವಾ ಇತರ ಕಡೆಯ ಜನರಿಗೂ ಕೊಡಲೇಬೇಕಾಗುತ್ತದೆ. ಉದಾಹರಣೆಗೆ: ದೆಹಲಿಗೆ ಅತಿ ಹೆಚ್ಚು ಸಂಖ್ಯೆಯಲ್ಲಿ ನಿರಾಶ್ರಿತರು ಬಂದಿದ್ದಾರೆ. ಹಾಗಿದ್ದರೆ, ದೆಹಲಿಯ ಪ್ರಾತಿನಿಧ್ಯವನ್ನು ಹೆಚ್ಚಿಸುತ್ತೀರಾ? ಅದೇ ರೀತಿ ಬಹು ಹೆಚ್ಚು ಸಂಖ್ಯೆಯ ನಿರಾಶ್ರಿತರು ಬಾಂಬೆಗೆ ಹೋಗಿದ್ದಾರೆ. ಆಗ ಅವರ ಪ್ರಾತಿನಿಧ್ಯವನ್ನು ಈ ಸದನದಲ್ಲಿ ಹೆಚ್ಚಿಸುವ ಬಗ್ಗೆ ಪರಿಶೀಲಿಸುತ್ತೀರಾ? ಎಲ್ಲರಿಗೂ ಬಹುಶಃ ಗೊತ್ತಿಲ್ಲದಿರಬಹುದು. ಬಹು ಹೆಚ್ಚು ಸಂಖ್ಯೆಯ ಜನರು ಪೂರ್ವ ಬಂಗಾಳದಿಂದ ಪಶ್ಚಿಮ ಬಂಗಾಳಕ್ಕೆ ಮತ್ತು ಅಸ್ಸಾಮ್‌ಗೂ ವಲಸೆ ಹೋಗಿದ್ದಾರೆ. ಈ ಸಂದರ್ಭದಲ್ಲಿ ಅಂಗೀಕಾರ ನೀಡಿದರೆ ಅವರಿಗೂ ಪ್ರಾತಿನಿಧ್ಯ ಕೊಡಬೇಕಲ್ಲವೆ? ಮಾನ್ಯರೆ, ಗೌರವಾನ್ವಿತ ಸದಸ್ಯರಾದ ಶ್ರೀ ಖಲಿಖುಜ್ಜಮಾನ್ ಅವರು ಸಂಯುಕ್ತ ಸಂಸ್ಥಾನಗಳಲ್ಲಿದ್ದ ತಮ್ಮ ಚುನಾವಣಾ ಕ್ಷೇತ್ರವನ್ನು ಪಾಕಿಸ್ತಾನದಲ್ಲಿ ಬಿಟ್ಟು ಬಂದಿದ್ದಾರೆ. ಇದರಲ್ಲಿಯೂ ಸಹ ಏನಾದರೊಂದು ಹೊಂದಾಣಿಕೆ ಮಾಡಬೇಕಲ್ಲವೆ? ಆದ್ದರಿಂದ ನಾನು ಹೇಳುವುದೇನೆಂದರೆ, ಜನರು ಬೇರೆ ಪ್ರಾಂತ್ಯಗಳಿಂದ ವಲಸೆ ಬಂದಿದ್ದಾರೆ ಎಂಬ ಆಧಾರದ ಮೇಲೆ ಹೆಚ್ಚುವರಿ ಪ್ರಾತಿನಿಧ್ಯವನ್ನು ಕೊಡಬೇಕೆಂದು ಇಚ್ಛಿಸಿದರೆ ಪ್ರಾಂತ್ಯವನ್ನು ಬಿಟ್ಟುಹೋದಂತಹ ಇತರ ಕೆಲವರಿಗೆ ಸಂಬಂಧಿಸಿದಂತೆ ಪ್ರಾತಿನಿಧ್ಯದಲ್ಲಿ

ಕಡಿತ ಮಾಡಬೇಕಾಗುತ್ತದೆ. ಹೀಗಾಗಿ ಇಡೀ ವಿಷಯಕ್ಕೆ ಹೊಂದಾಣಿಕೆ ಅಗತ್ಯವಾಗುತ್ತದೆ ಮತ್ತು ಎಲ್ಲ ಪ್ರಾತಿನಿಧ್ಯಗಳಲ್ಲೂ ಈ ಹೊಂದಾಣಿಕೆಗಳನ್ನು ಮಾಡುವ ಹೊರತು ಗೌರವಾನ್ವಿತ ಸದಸ್ಯರು ಸೂಚಿಸಿದ ರೀತಿಯ ಪ್ರಕಾರ ಯಾವ ಕ್ರಮವನ್ನು ಕೈಗೊಳ್ಳುವಂತಿಲ್ಲ.

**ಬೇಗಮ್ ಐಜಾಜ್ ರಸೂಲ್** (ಸಂಯುಕ್ತ ಪ್ರಾಂತ್ಯಗಳು : ಮುಸ್ಲಿಮ್) : ಮಾನ್ಯರೆ, ನೀವು ಈಗಷ್ಟೇ ಉಲ್ಲೇಖಿಸಿದ ಸಮಿತಿಯ ವರದಿಯನ್ನು ನನಗೆ ಓದಲು ಸಾಧ್ಯವಾಗಿಲ್ಲ. ಯಾಕೆಂದರೆ ಆ ಕಾಗದಗಳನ್ನು ನಾನು ನೋಡಿಲ್ಲ. ಆದ್ದರಿಂದ ನಿಯಮಗಳಿಗೆ ಮಾಡಲಿರುವ ಈ ತಿದ್ದುಪಡಿಗಳ ಪರಿಣಾಮಗಳೇನು ಎಂಬುದನ್ನು ಅಧ್ಯಯನಮಾಡಲು ಸದಸ್ಯರಿಗೆ ಸಮಯ ಸಿಗುವ ತನಕ ಬಹುಮುಖ್ಯವಾದ ಈ ವಿಷಯವನ್ನು ಕುರಿತು ಚರ್ಚೆಯನ್ನು ದಯವಿಟ್ಟು ಮುಂದೂಡಬೇಕೆಂದು ಕೋರುತ್ತೇನೆ.

ಮಾನ್ಯರೆ, ಹಿಂದಿನ ಪಂಜಾಬ್‌ನಲ್ಲಿದ್ದ ಜನಸಂಖ್ಯೆಯ ಬಹಳಷ್ಟು ಜನರು ಪಶ್ಚಿಮ ಪಂಜಾಬ್‌ಗೆ ಹೋಗಿದ್ದಾರೆ ಎಂಬುದು ನಿಜ. ಅದೇ ರೀತಿ ಪಶ್ಚಿಮ ಪಂಜಾಬ್‌ನಲ್ಲಿದ್ದ ಬಹಳಷ್ಟು ಮುಸ್ಲಿಮೇತರರು ಪೂರ್ವ ಪಂಜಾಬಿಗೆ ಹೋಗಿದ್ದಾರೆ. ಅವರಿಗೆ ಈ ಸದನದಲ್ಲಿ ಪ್ರಾತಿನಿಧ್ಯ ಸಿಗಲೇಬೇಕು. ಈ ವಿಷಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಇದು ಬಹಳ ಸಮರ್ಥನೀಯವಾದ ಬೇಡಿಕೆ. ಇಲ್ಲಿರುವ ಯಾರೂ ಸಹ ಇದನ್ನು ವಿರೋಧಿಸಲಾರರು ಎಂಬುದು ನನ್ನ ಅನಿಸಿಕೆ. ಆದರೆ ಇದೇ ಸಂದರ್ಭದಲ್ಲಿ, ಎಷ್ಟು ಮಂದಿ ಪಂಜಾಬಿನ ಬಹುಭಾಗದಿಂದ ಇನ್ನೊಂದು ಭಾಗಕ್ಕೆ ಹೋಗಿ ಅಲ್ಲಿ ನೆಲೆಸಿದ್ದಾರೆ ಎಂಬುದನ್ನು ನೋಡಬೇಕು ಮತ್ತು ಆ ಬಗ್ಗೆ ಸೂಕ್ಷ್ಮವಾಗಿ ಅಧ್ಯಯನ ನಡೆಸಬೇಕು. ಎಲ್ಲರಿಗೂ ತಿಳಿದಿರುವಂತೆ, ಮುಸ್ಲಿಮೇತರರು ಪೂರ್ವ ಪಂಜಾಬಿಗೆ ಮಾತ್ರವೇ ಹೋಗಲಿಲ್ಲ. ಅವರು ಉತ್ತರ ಪ್ರದೇಶಕ್ಕೂ ಮತ್ತು ದೆಹಲಿ ಪ್ರಾಂತ್ಯಕ್ಕೂ ಇತರ ಸ್ಥಳಗಳಿಗೂ ವಲಸೆ ಹೋಗಿದ್ದಾರೆ. ಸದ್ಯದ ಸಮಯದಲ್ಲಿ ಪರಿಸ್ಥಿತಿಯು ಬಹಳ ಅನಿಶ್ಚಿತವಾಗಿದೆ. ಈ ಸದನದಲ್ಲಿ ಯಾವುದೇ ತಿದ್ದುಪಡಿಯನ್ನು ಜಾರಿಗೊಳಿಸುವ ಮೊದಲು ಈ ಎಲ್ಲ ವಿಷಯಗಳನ್ನು ಸಂದರ್ಭವನ್ನು ಗಮನದಲ್ಲಿಟ್ಟುಕೊಂಡು ಒಟ್ಟಾಗಿ ಕೈಗೆತ್ತಿಕೊಳ್ಳಬೇಕು. ಆದ್ದರಿಂದ, ಪೂರ್ವ ಪಂಜಾಬಿನಲ್ಲಿ ನೆಲೆಸುತ್ತಿರುವ ಜನರ ಸಂಖ್ಯೆ ಎಷ್ಟು ಮತ್ತು ಎಷ್ಟು ಮಂದಿ ಪಶ್ಚಿಮ ಪಂಜಾಬಿನ ತಮ್ಮ ಮನೆಗಳಿಗೆ ಹೋಗುತ್ತಾರೆ ಎಂಬುದನ್ನು ಖಚಿತವಾಗಿ ತಿಳಿದುಕೊಳ್ಳುವ ಸ್ಥಿತಿಯಲ್ಲಿ ನಾವಿರುವವರೆಗೆ ಮತ್ತು ಸಮಿತಿ ವರದಿಯನ್ನು ಅಧ್ಯಯನಿಸಲು ಸದಸ್ಯರಿಗೆ ಸಮಯ ಸಿಗುವವರೆಗೆ ಈ ವಿಷಯಗಳ ಪರಿಶೀಲನೆಯನ್ನು ಅನಂತರದ ದಿನಾಂಕಕ್ಕೆ ಮುಂದೂಡಬೇಕೆಂದು ನಾನು ವಿನಮ್ರವಾಗಿ ತಮ್ಮಲ್ಲಿ ಕೋರಿಕೊಳ್ಳುತ್ತೇನೆ. ನನ್ನ ಈ ಸೂಚನೆ ಅಂಗೀಕಾರಾರ್ಹವಾಗುತ್ತದೆ ಮತ್ತು ಈ ವಿಷಯ ಕುರಿತು ಪರಿಗಣನೆಯನ್ನು ಅನಂತರದ ಮುಂದಿನ ದಿನಾಂಕಕ್ಕೆ ಮುಂದೂಡಲಾಗುವುದು ಎಂದು ಆಶಿಸುತ್ತೇನೆ.

(ಪಂಡಿತ್ ಠಾಕೂರ್ ದಾಸ್ ಭಾರ್ಗವ ಅವರು ವೇದಿಕೆಗೆ ಬಂದರು.)

**ಮಾನ್ಯ ಸಭಾಧ್ಯಕ್ಷರು :** ಗೌರವಾನ್ವಿತ ಸದಸ್ಯರು ಸಾಧ್ಯವಾದಷ್ಟು ಸಂಕ್ಷಿಪ್ತವಾಗಿ ಮಂಡಿಸಬೇಕು ಎಂದು ಕೋರುತ್ತೇನೆ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ** (ಪೂರ್ವ ಪಂಜಾಬ್ : ಸಾಮಾನ್ಯ) : *[ಮಾನ್ಯ ಸಭಾಧ್ಯಕ್ಷರೆ, ಈಗಷ್ಟೇ ಬೇಗಂ ಸಾಹಿಬಾ ಅವರು ಈ ಸೂಚನೆಯನ್ನು ಮುಂದೂಡಬೇಕೆಂದು ಸಲಹೆ ಮಾಡಿದ್ದಾರೆ ಮತ್ತು ಇದಕ್ಕೆ ಅವರು ಕೊಟ್ಟಿರುವ ಕಾರಣವೇನೆಂದರೆ, ಜನಸಂಖ್ಯೆಯ ಕೆಲವು ಭಾಗ ಇನ್ನೂ ಪಶ್ಚಿಮ ಪಂಜಾಬ್‌ನಲ್ಲಿಯೇ ಇದೆ ಮತ್ತು ಸ್ವಲ್ಪ ಭಾಗ ದೆಹಲಿಗೆ ಬಂದಿದೆ. ಕೆಲವರು ಸಂಯುಕ್ತ ಪ್ರಾಂತ್ಯಗಳಿಗೆ ಹೋಗಿದ್ದಾರೆ. ಆದ್ದರಿಂದ ಈ ವಿಷಯವನ್ನು ಈಗ ಪರಿಶೀಲಿಸಬಾರದು ಎಂಬುದು. ಇತರ ಸ್ನೇಹಿತರು ಬೇರೆಯ ಕಾರಣಗಳನ್ನು ಕೊಟ್ಟಿದ್ದಾರೆ ಮತ್ತು ಕೆಲವು ಮಂದಿ ಬಲೂಚಿಸ್ತಾನ್ ಹಾಗೂ ಸಿಂಧ್‌ನಿಂದ ಬಂದಿರುವುದರಿಂದ ಅವರಿಗೂ ಸಹ ಪ್ರಾತಿನಿಧ್ಯ ನೀಡಬೇಕೆಂದು ಅವರು ಹೇಳಿದ್ದಾರೆ. ಹೊಸದಾಗಿ ಬಂದವರಿಗೆಲ್ಲ ಪ್ರಾತಿನಿಧ್ಯದ ಅಗತ್ಯವಿದೆ

ಎಂಬುದು ಸರಿ. ಜನರ ನಡುವೆ ಯಾವುದೇ ರೀತಿಯ ತಾರತಮ್ಯ ಮಾಡುವಂತಿಲ್ಲ. ಆದರೆ ಈ ಪ್ರಶ್ನೆಯು ಕಾರ್ಯಸಾಧುವೆ ಎಂಬ ದೃಷ್ಟಿಯಿಂದ ನೋಡಬೇಕು ಎಂಬುದನ್ನು ನೆನಪಿಡಿ: ಸುಮಾರು ೪೦ ಲಕ್ಷ ಜನರು ಪಶ್ಚಿಮ ಪಂಜಾಬಿನಿಂದ ಪೂರ್ವ ಪಂಜಾಬ್ ಹಾಗೂ ಇತರ ಸ್ಥಳಗಳಿಗೆ ಹೋಗಿದ್ದಾರೆ ಎಂಬುದರಲ್ಲಿ ಸಂದೇಹವಿಲ್ಲ. ಪೂರ್ವ ಪಂಜಾಬಿನ ಎಲ್ಲ ಮುಸ್ಲಿಮರನ್ನು ಪಶ್ಚಿಮ ಪಂಜಾಬಿಗೆ ವರ್ಗಾಯಿಸಬೇಕು ಮತ್ತು ಪಶ್ಚಿಮ ಪಂಜಾಬಿನ ಎಲ್ಲ ಹಿಂದೂಗಳನ್ನೂ ಹಾಗೂ ಸಿಖ್ಖರನ್ನು ಪೂರ್ವ ಪಂಜಾಬಿಗೆ ಕರೆತರಬೇಕು ಎಂದು ಸರ್ಕಾರವು ಈಗಾಗಲೇ ನಿರ್ಧರಿಸಿದೆ. ಈಗ ಪ್ರಶ್ನೆಯು ಹಿಂದೂಗಳು ಮತ್ತು ಸಿಖ್ಖರಿಗೆ ಹಾಗೂ ನಿಖರವಾಗಿ ಅವರ ಸಂಖ್ಯೆ ಎಷ್ಟು ಎಂಬುದಕ್ಕೆ ಸಂಬಂಧಿಸಿದೆ. ಸುಮಾರು ಐದು ಲಕ್ಷ ಜನರು ದೆಹಲಿಗೆ ಬಂದಿದ್ದಾರೆ ಮತ್ತು ಐದು ಲಕ್ಷ ಮಂದಿ ಸಂಯುಕ್ತ ಪ್ರಾಂತ್ಯಗಳಿಗೆ ಹೋಗಿದ್ದಾರೆ. ಆದರೆ ಪ್ರಾತಿನಿಧ್ಯವನ್ನು ಐದು ಲಕ್ಷಕ್ಕೆ ಮೀರಿದ ಸಂಖ್ಯೆಗೆ ಕೊಡಲಾಗಿದೆ. ಅದಕ್ಕಿಂತ ಕೆಳಗಿನದಕ್ಕೆ ಅಲ್ಲ. ಆದ್ದರಿಂದ ಕೊನೆಪಕ್ಷ ಪೂರ್ವ ಪಂಜಾಬಿಗೆ ಬಂದವರಿಗಾದರೂ ಪ್ರಾತಿನಿಧ್ಯವನ್ನು ನೀಡಬೇಕು ಮತ್ತು ಈಗ ದೆಹಲಿ ಅಥವಾ ಉತ್ತರ ಪ್ರದೇಶದಲ್ಲಿರುವವರೂ ಪೂರ್ವ ಪಂಜಾಬಿಗೆ ಹೋಗಬಹುದು. ಆದ್ದರಿಂದ ಅವರಿಗೆ ಪ್ರಾತಿನಿಧ್ಯ ನೀಡದಿರುವುದು ಅಥವಾ ಅದನ್ನು ಮುಂದೂಡುವುದೆಂದರೆ ಬಹುದೊಡ್ಡ ಅನ್ಯಾಯ ಮಾಡಿದಂತಾಗುತ್ತದೆ. ದೆಹಲಿಗೆ ಬಂದಿರುವಂಥವರು ತಮ್ಮ ಸ್ವತಂತ್ರ ಇಚ್ಛೆಯಿಂದ ಬಂದಿಲ್ಲ ಎಂಬುದು ನಿಮಗೆ ಗೊತ್ತಿದೆ. ಸರ್ಕಾರವು ಈಗಾಗಲೇ ಜನಸಂಖ್ಯೆಯ ವಿನಿಮಯಕ್ಕಾಗಿ ಮಾತಿನಲ್ಲೂ ಹಾಗೂ ಕೃತಿಯಲ್ಲೂ ಸಮ್ಮತಿಸಿದೆ. ಆದ್ದರಿಂದ ಈ ವಿಷಯವನ್ನು ಕಾರ್ಯಸಾಧ್ಯತೆಯ ದೃಷ್ಟಿಯಿಂದ ಪರಿಶೀಲಿಸಬೇಕು ಮತ್ತು ಈ ಜನರನ್ನು ತಮ್ಮ ಹಕ್ಕಿನಿಂದ ವಂಚಿತರಾಗಿ ಮಾಡಬಾರದು ಎಂದು ಸದನವನ್ನು ನಾನು ಬೇಡಿಕೊಳ್ಳುತ್ತೇನೆ. ಇವತ್ತು ಯಾರನ್ನು ನಿರಾಶ್ರಿತರು ಎಂದು ತಿಳಿಯಲಾಗಿದೆಯೋ ಅವರಿಗೆ, ಬೇರೆಯವರಿಗೂ ಇರುವಂತೆಯೇ ಒಕ್ಕೂಟ ಹಾಗೂ ಸಂವಿಧಾನದ ಮೇಲೆ ಹಕ್ಕಿದೆ. ಭಾರತ ಒಕ್ಕೂಟದ ಇತರ ಭಾಗಗಳ ಪ್ರತಿ ೧೦ ಲಕ್ಷ ಜನಸಂಖ್ಯೆಗೆ ನೀವು ಪ್ರಾತಿನಿಧ್ಯದ ಅವಕಾಶ ನೀಡಿರುವುದರಿಂದ, ಪಶ್ಚಿಮ ಪಂಜಾಬಿನಿಂದ ಮೂಲೋತ್ಪಾಟನೆ ಮಾಡಲಾದಂಥವರಿಗೂ ನೀವು ಇದೇ ರೀತಿ ಪ್ರಾತಿನಿಧ್ಯ ನೀಡಬೇಕು. ಆಗ ಅವರೂ ಸಹ ಭಾರತದ ಸಂವಿಧಾನವನ್ನು ರೂಪಿಸುವಲ್ಲಿ ಭಾಗಿಯಾಗಬಹುದಾಗಿದೆ. ಈ ಮಾತುಗಳೊಂದಿಗೆ ನಾನು ತಿದ್ದುಪಡಿಗೆ ಬೆಂಬಲ ನೀಡುತ್ತೇನೆ.]*

**ಮಾನ್ಯ ಸಭಾಧ್ಯಕ್ಷರು :** ಈ ಚರ್ಚೆಯನ್ನು ಇನ್ನಷ್ಟು ನಡೆಸುವ ಆವಶ್ಯಕತೆ ಇದೆಯೆ? ನಾವು ಸಾಕಷ್ಟು ಚರ್ಚೆ ಮಾಡಿದ್ದೇವೆ ಎಂದು ನನಗನ್ನಿಸುತ್ತದೆ.

**ಶ್ರೀ ಮಿಹಿರ್ ಲಾಲ್ ಚಟ್ಟೋಪಾಧ್ಯಾಯ** (ಪಶ್ಚಿಮ ಬಂಗಾಳ : ಸಾಮಾನ್ಯ) : ಮಾನ್ಯರೆ, ಪೂರ್ವ ಪಂಜಾಬ್‌ನಲ್ಲಿ ಅನುಸರಿಸಲಾಗುತ್ತಿರುವ ತತ್ತ್ವವನ್ನು ಪಶ್ಚಿಮ ಬಂಗಾಳದ ವಿಷಯಕ್ಕೂ ಅನುಸರಿಸಬೇಕು ಎಂಬುದಷ್ಟೇ ನನ್ನ ಕೋರಿಕೆ. ಸುಮಾರು ೧೦ ಲಕ್ಷ ಜನರು ಪೂರ್ವ ಬಂಗಾಳದಿಂದ ಪಶ್ಚಿಮ ಬಂಗಾಳಕ್ಕೆ ವಲಸೆ ಬಂದಿದ್ದಾರೆ ಎಂಬುದು ಎಲ್ಲರಿಗೂ ತಿಳಿದಿದೆ. ಇಲ್ಲಿ ಈ ನಿರ್ಣಯದಲ್ಲಿ ಪಶ್ಚಿಮ ಪಂಜಾಬಿನಿಂದ ಪೂರ್ವ ಪಂಜಾಬಿಗೆ ಜನರ ವಲಸೆಯನ್ನು ಆಧರಿಸಿ ಹೆಚ್ಚುವರಿ ವಿಷಯದಲ್ಲಿ ಇದೇ ತತ್ತ್ವವನ್ನು ಅನುಸರಿಸಬೇಕು ಮತ್ತು ಪೂರ್ವ ಬಂಗಾಳದಿಂದ ಪಶ್ಚಿಮ ಬಂಗಾಳಕ್ಕೆ ವಲಸೆಯ ಕಾರಣದಿಂದ ಆಗಿರುವ ಜನಸಂಖ್ಯಾ ಹೆಚ್ಚಳವನ್ನು ಪರಿಗಣಿಸಿ ಹೆಚ್ಚುವರಿ ಒಂದು ಸ್ಥಾನವನ್ನು ಕೊಡಬೇಕು. ಪಶ್ಚಿಮ ಬಂಗಾಳಕ್ಕೆ ಇನ್ನೂ ಎರಡು ಸ್ಥಾನಗಳ ಹಂಚಿಕೆ ಮಾಡಿ ಕೆಲವು ನಿಮಿಷಗಳ ಹಿಂದೆ ನಾವು ನಿರ್ಣಯವನ್ನು ಜಾರಿಗೊಳಿಸಿದ್ದೇವೆ. ಆದರೆ ಅದನ್ನು ರ್‍ಯಾಡ್‌ಕ್ಲಿಫ್ ಗಡಿ ಐತೀರ್ಪಿನ ಆಧಾರದ ಮೇಲೆ ಮಾಡಲಾಗಿತ್ತು. ಆದರೆ ಪಶ್ಚಿಮ ಪಂಜಾಬಿನ ವಿಷಯದಲ್ಲಿ ಜನಸಂಖ್ಯೆ ವಲಸೆಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾದರೆ ಅದೇ ಪರಿಗಣನೆಯನ್ನು ಬಂಗಾಳಕ್ಕೆ ತೋರಿಸಬೇಕು ಮತ್ತು ಇದೇ ತತ್ತ್ವದ ಮೇಲೆ ಒಂದು ಹೆಚ್ಚುವರಿ ಸ್ಥಾನವನ್ನು ಪಶ್ಚಿಮ ಬಂಗಾಳಕ್ಕೆ ಕೊಡಬೇಕು.

**ನವಾಬ್ ಮೊಹಮದ್ ಇಸ್ಮಾಯಿಲ್ ಖಾನ್** (ಸಂಯುಕ್ತ ಪ್ರಾಂತ್ಯಗಳು : ಮುಸ್ಲಿಮ್) : *[ಮಾನ್ಯ ಸಭಾಧ್ಯಕ್ಷರೆ, ಪಶ್ಚಿಮ ಪಂಜಾಬಿನಿಂದ ಈಗಾಗಲೇ ವಲಸೆ ಬಂದಿರುವ ಮತ್ತು ಇನ್ನು ಮುಂದೆ ವಲಸೆ ಬರಲಿರುವ ಅಧಿಕೃತ ಸಂಖ್ಯೆಯನ್ನು ಇನ್ನೂ ಖಾತರಿ ಪಡಿಸಿಕೊಳ್ಳಲಾಗಿಲ್ಲ. ಪೂರ್ವ ಪಂಜಾಬಿನ ಜನಸಂಖ್ಯೆ ಎಷ್ಟಾಗಬಹುದು ಎಂಬುದರ ಬಗ್ಗೆ ನಮಗೆ ಯಾವ ತಿಳಿವಳಿಕೆಯೂ ಇಲ್ಲ. ಸರಿಯಾದ ಅಂಕಿಗಳು ದೊರೆಯುವ ಹೊರತು ಸರಿಯಾದ ಪ್ರಾತಿನಿಧ್ಯವನ್ನು ಕೊಡಲು ಸಾಧ್ಯವಿಲ್ಲ. ಆದ್ದರಿಂದ, ಇದನ್ನು ಕೆಲವು ಕಾಲ ಮುಂದೂಡಬೇಕೆಂದು ನಾನು ನಿವೇದಿಸಿಕೊಳ್ಳುತ್ತೇನೆ.]*

**ಮಾನ್ಯ ಸಭಾಧ್ಯಕ್ಷರು** : ಮಂಡನೆಕಾರರು ಚರ್ಚೆಗೆ ಉತ್ತರಿಸಬೇಕು ಎಂದು ನಾನು ಈಗ ಕೇಳುತ್ತೇನೆ.

**ಗ್ಯಾನಿ ಗುರುಮುಖ್ ಸಿಂಗ್ ಮುಸಾಫಿರ್** : *[ಮಾನ್ಯ ಸಭಾಧ್ಯಕ್ಷರೇ, ಇದು ಸರಳವಾದ ವಿಷಯವೆಂದು ನಾನು ಭಾವಿಸಿದ್ದೆ. ಆದ್ದರಿಂದ ಸೂಚನೆಯನ್ನು ಮಂಡಿಸುವಾಗ ನಾನು ಮಾಡಿದ ಭಾಷಣವೂ ಸಹ ಸರಳವಾಗಿತ್ತು. ಈಗಲೂ ಸಹ ಅದು ಸರಳವೆಂದೇ ನಾನು ಭಾವಿಸುತ್ತೇನೆ. ನಮ್ಮ ಗೌರವಾನ್ವಿತ ಸದಸ್ಯರೊಬ್ಬರು ಇದು ಮತೀಯವಾಗಿದೆ ಎಂದು ಆಕ್ಷೇಪ ಮಾಡಿದ್ದಾರೆ. ನನ್ನ ಗಡ್ಡದ ಕಾರಣಕ್ಕಾಗಿಯೇ ನೀವು ಅದನ್ನು ಮತೀಯ ಎಂದು ಪರಿಗಣಿಸಿದ್ದರೆ ಅದು ಬೇರೆಯ ವಿಷಯ; ಇಲ್ಲದಿದ್ದರೆ ಇದರಲ್ಲಿ ಅಂತಹ ಯಾವ ಅಂಶವೂ ಇಲ್ಲ. ಸಿಖ್ಖರಿಗೆ ಎರಡು ಹೆಚ್ಚುವರಿ ಸ್ಥಾನ ಮತ್ತು ಹಿಂದೂಗಳಿಗೆ ಎರಡು ಸ್ಥಾನಗಳಿಗಾಗಿ ಮಾಡಿದ ಬೇಡಿಕೆಯನ್ನೇ ಕೋಮುವಾದಿ ಎನ್ನುವುದಾದರೆ ಆಗ, ಪಶ್ಚಿಮ ಬಂಗಾಳದಲ್ಲಿ ಮುಸ್ಲಿಮರಿಗಾಗಿ ಒಂದು ಹೆಚ್ಚುವರಿ ಸ್ಥಾನ ಮತ್ತು ಹಿಂದೂಗಳಿಗಾಗಿ ಒಂದು ಸ್ಥಾನವನ್ನು ಕೊಡುವ ಬಗ್ಗೆ ಶ್ರೀ ಅಯ್ಯಂಗಾರ್ ಅವರು ಮಾಡಿದ ನಿರ್ಣಯಕ್ಕೂ ಅದೇ ಮಾನದಂಡವನ್ನು ಏಕೆ ಅನ್ವಯಿಸುವುದಿಲ್ಲ? ನೀವು ಅದನ್ನು ಮತೀಯ ಎಂದು ಪರಿಗಣಿಸಿಲ್ಲ. ಪೂರ್ವ ಪಂಜಾಬಿನಲ್ಲಿ ಮುಸ್ಲಿಮ್ ಪ್ರಾತಿನಿಧ್ಯವನ್ನು ಕಡಿಮೆ ಮಾಡುವ ಬಗ್ಗೆ ಹೇಳಲಾದ ವಿಷಯ ಕುರಿತು ನನ್ನ ಆಕ್ಷೇಪಣೆ ಏನೂ ಇಲ್ಲ. ಸದ್ಯದಲ್ಲಿ ಪಂಜಾಬಿನ ವಿಷಯ ವಿಶೇಷವಾದುದು. ಯಾರು ಸಂಕಷ್ಟಗಳನ್ನು ಅನುಭವಿಸಿದ್ದಾರೋ ಅವರಿಗೆ ಮಾತ್ರ ಇದು ಅರ್ಥವಾಗುತ್ತದೆಯೇ ಹೊರತು ಬೇರೆಯವರಿಗಲ್ಲ. ಪಂಜಾಬು ಮಹಾಸಂಕಟವನ್ನು ಅನುಭವಿಸಿದೆ. ಅತ್ಯಂತ ದಾರುಣವಾಗಿ ಸಂಕಷ್ಟವನ್ನು ಅನುಭವಿಸಿರುವ ಪಂಜಾಬಿಗಳ ಸಮಸ್ಯೆಗಳು ಈಗ ಸರ್ಕಾರದ ಮುಂದಿವೆ. ಅವರು ಈ ಸಂಕಟಗಳನ್ನೆಲ್ಲ ಕಣ್ಣಾರೆ ಕಂಡವರು. ಅವರ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಹೆಚ್ಚಿನ ನೆರವು ಬೇಕು ಎಂಬುದನ್ನು ಅವರು ಮನವರಿಕೆ ಮಾಡಬಲ್ಲರು. ವಿಷಯವನ್ನು ಸದ್ಯಕ್ಕೆ ಮುಂದೂಡುವಂತೆ ಬೇಗಂ ಸಾಹಿಬಾ ಹಾಗೂ ನವಾಬ್ ಸಾಹಿಬ್ ಅವರು ಈಗಷ್ಟೇ ಮಾಡಿರುವ ಪ್ರಸ್ತಾವನೆಯು ಪಂಜಾಬಿಗಳ ಭಾವನೆಗಳಿಗೆ ನೋವುಂಟುಮಾಡುವ ಸಾಧ್ಯತೆಯಿದೆ. ಆದ್ದರಿಂದ ನನ್ನ ಮಂಡನೆಯನ್ನು ಅಂಗೀಕರಿಸಬೇಕೆಂದು ಸದನಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ಹೆಚ್ಚುವರಿ ಪ್ರಾತಿನಿಧ್ಯವನ್ನು ಕೊಡುವುದರಿಂದ, ಅತ್ಯಂತ ದಾರುಣವಾದ ಸಂಕಷ್ಟಗಳನ್ನು ಅನುಭವಿಸಿರುವ ಜನರ ಭಾವನೆಗಳಿಗೆ ಸಾಂತ್ವನ ಸಿಗುತ್ತದೆ. ಇದಿಷ್ಟೇ ಅಲ್ಲ, ನಮ್ಮ ಸರ್ಕಾರವು ಈ ವಿಷಯವಾಗಿ ಪ್ರತಿ ನಿತ್ಯ ಎದುರಿಸಬೇಕಾದ ತೊಂದರೆಗಳನ್ನು ಸಹ ಸ್ವಲ್ಪ ಮಟ್ಟಿಗೆ ಇದು ಪರಿಹರಿಸುತ್ತದೆ. ಎಡೆಬಿಡದ ಕೆಲಸಗಳಲ್ಲಿ ತೊಡಗಿಕೊಂಡಿರುವ ನಮ್ಮ ಸಚಿವರಿಗೆ ಹಗಲಿನಲ್ಲೂ ಬಿಡುವಿಲ್ಲ ರಾತ್ರಿಯಲ್ಲೂ ಇಲ್ಲ. ಇದಕ್ಕೆ, ವಲಸೆ ಬಂದ ಜನರು ಹೇಳುತ್ತಿರುವ ಕಥೆಗಳು ಅಷ್ಟೊಂದು ಸಂಕಟಕಾರಿಯಾಗಿ ಎದೆ ಕರಗಿಸುವಂತೆ ಇರುವುದೇ ಕಾರಣ. ಗೌರವಾನ್ವಿತ ಜಾಫರುಲ್ಲಾ ಅವರು ತಮ್ಮ ಮನೆಯನ್ನು ಸುಡಲಾಗಿದೆ ಎಂದು ವಿಶ್ವಸಂಸ್ಥೆಯಲ್ಲಿ ಹೇಳಿದ್ದಾರೆ. ಇದು ನಿಜವೋ ಸುಳ್ಳೋ ನನಗೆ ಗೊತ್ತಿಲ್ಲ. ಇಲ್ಲಿ ಪಶ್ಚಿಮ ಪಂಜಾಬಿನಿಂದ ಸಾವಿರಾರು ಅಥವಾ ಲಕ್ಷಾಂತರ ಜನರಿದ್ದಾರೆ. ಹೇಗೆ ತಮ್ಮ ಪ್ರೀತಿಪಾತ್ರರನ್ನು ಕೊಲ್ಲಲಾಯಿತು. ತಮ್ಮ ಮನೆಗಳನ್ನು ಲೂಟಿಮಾಡಿ ಸುಡಲಾಯಿತು. ತಮ್ಮ ಹೆಣ್ಣುಮಕ್ಕಳು ಹಾಗೂ ಸೋದರಿಯರನ್ನು ಅಪಹರಿಸಲಾಯಿತು ಎಂದು ಇವರಲ್ಲಿ ಯಾರೊಬ್ಬರೂ ವಿಶ್ವಸಂಸ್ಥೆಗೆ ಹೇಳಬಹುದಿತ್ತು. ಇಲ್ಲಿ ವರ್ಣನೆಗೇ ಸಿಗದಂಥ ನೂರಾರು ವಿಷಯಗಳಿವೆ. ಜನಸಂಖ್ಯೆಯ

ಸರಿಯಾದ ಅಂದಾಜು ಲಭ್ಯವಿಲ್ಲದ ಕಾರಣ ಈ ವಿಷಯವನ್ನು ಮುಂದೂಡಬೇಕು ಎಂದು ಈಗಷ್ಟೇ ನವಾಬ್ ಸಾಹಿಬ್ ಹೇಳಿದ್ದಾರೆ. ಇದು ಮುಂದೂಡಿಕೆಯ ಪ್ರಶ್ನೆಯಲ್ಲ ಬದಲಿಗೆ ಪಂಜಾಬ್‌ನ ಸಮಸ್ಯೆಯೊಂದಿಗೆ ನಡೆಸುತ್ತಿರುವ ಸೆಣಸಾಟ ಎಂದು ನನಗನ್ನಿಸುತ್ತಿದೆ. ಈ ಭಯಾನಕ ಸಂಕಷ್ಟಕ್ಕೆ ಬಲಿಯಾದ ಪಂಜಾಬಿಗಳಲ್ಲಿ ಆ ಪ್ರಾಂತ್ಯದ ಅನೇಕ ಹಿರಿಯ ಹಾಗೂ ಜವಾಬ್ದಾರಿಯುತ ಕಾಂಗ್ರೆಸ್ ವ್ಯಕ್ತಿಗಳು ಇದ್ದಾರೆ. ಅವರ ಮನೆಗಳನ್ನು ಸುಡಲಾಯಿತು. ಅವರನ್ನು ಕೊಲ್ಲಲಾಯಿತು. ಕೆಲವರನ್ನು ಹೆಸರಿಸುವುದಾದರೆ ಕಂಪ್‌ಬೆಲ್‌ಪುರದ ಸರ್ದಾರ್ ಜಸ್ವಂತ್ ಸಿಂಗ್, ಗುಜರಾತ್ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಹುಕುಮತ್ ಸಿಂಗ್ ಅವರ, ವಕೀಲರಾದ ಲಾಲಾ ನಿರಂಜನ್ ದಾಸ್ ಬಗ್ಗ, ಗುಜ್ರನ್‌ವಾಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರನ್ನೂ ಕೊಲ್ಲಲಾಗಿದೆ.]*

**ಮಾನ್ಯ ಸಭಾಧ್ಯಕ್ಷರು** : ಗೌರವಾನ್ವಿತ ಸದಸ್ಯರ ಮಾತಿಗೆ ತಡೆಯೊಡ್ಡಲು ನಾನು ಬಯಸಿರಲಿಲ್ಲ...

**ನವಾಬ್ ಮೊಹಮ್ಮದ್ ಇಸ್ಮಾಯಿಲ್ ಖಾನ್** : *[ನನ್ನ ಉದ್ದೇಶ ಅದಾಗಿರಲಿಲ್ಲ. ಸರ್ದಾರ್‌ಜಿಯವರು ಏನು ಅರ್ಥಮಾಡಿಕೊಂಡಿದ್ದಾರೋ ನನಗೆ ಗೊತ್ತಿಲ್ಲ. ಯಾವುದೋ ಅಪಾರ್ಥವಾದಂತಿದೆ. ನಾನು ಹೇಳಿದ್ದೇನು? ಉದಾಹರಣೆಗೆ: ಮಾನ್ಯರೆ, ಅದು, ಅದಕ್ಕೆ ಉತ್ತರದಾಯಿಗಳಾದವರನ್ನು ಬದ್ಧರನ್ನಾಗಿ ಮಾಡಲಾರದು. ಜನಸಂಖ್ಯೆ ಕೆಲಸ ಇನ್ನೂ ಪೂರ್ಣಗೊಳ್ಳದಿರುವುದರಿಂದ ಅದು ಕಾನೂನನ್ನು ಜಾರಿಗೊಳಿಸಲು ಸಾಧ್ಯವಿಲ್ಲ.]*

**ಮಾನ್ಯ ಸಭಾಧ್ಯಕ್ಷರು** : ಗೌರವಾನ್ವಿತ ಸದಸ್ಯರು ಸದನದ ಮುಂದಿರುವ ಸೂಚನೆಗೆ ಮಾತ್ರ ಸೀಮಿತವಾಗಿರಬೇಕು.

**ಗ್ಯಾನಿ ಗುರುಮುಖ್ ಸಿಂಗ್ ಮುಸಾಫಿರ್** : *[ನಾನು ಖಂಡಿತವಾಗಿಯೂ ಅಪಾರ್ಥ ಮಾಡಿಕೊಂಡಿಲ್ಲ. ನವಾಬ್ ಸಾಹೇಬರೆ, ನಮ್ಮ ಕೆಲವು ಪಂಜಾಬಿ ಸೋದರರು ದೆಹಲಿಗೆ ಬಂದಿದ್ದಾರೆ. ಬೇರೆ ಸ್ಥಳಗಳಿಗೂ ಹೋಗಿದ್ದಾರೆ. ಆದರೆ ತಮ್ಮ ಮನೆಗಳತ್ತ ಅವರ ಕಣ್ಣು ನೆಟ್ಟಿದೆ. ಪಂಜಾಬಿಗಳು ಹೋದೆಡೆಯಲ್ಲೆಲ್ಲ ಅವರ ಸಂಕಷ್ಟಗಳು ಅವರನ್ನು ಹಿಂಬಾಲಿಸಿವೆ. ಆ ಸಂಕಷ್ಟಗಳು ಕೊನೆಗೊಂಡಿಲ್ಲ. ಈಗ ಅವರು ಆಲ್ವಾರ್ ಮತ್ತು ಭರತ್‌ಪುರದಿಂದ ಹಿಂದಿರುಗುತ್ತಿದ್ದಾರೆ. ಹೊಡೆತ ತಿಂದ ಅನಂತರ ಅವರು ದೆಹಲಿಯಿಂದ ಹಿಂದಿರುಗಿ ಹೋಗುವವರು ಅನ್ನಿಸುತ್ತದೆ. ಅವರು ಪಟಿಯಾಲಾ ಹಾಗೂ ಇತರ ರಾಜ್ಯಗಳಿಂದಲೂ ಹಿಂದಿರುಗಿ ಹೋಗುತ್ತಾರೆ. ಪಂಜಾಬಿಗಳನ್ನು ಬಿಟ್ಟುಕೊಳ್ಳಲು ಅನೇಕ ಸ್ಥಳಗಳು ನಿರಾಕರಿಸಿವೆ. ಗೌರವಾನ್ವಿತ ಪಂಡಿತ್ ಪಂತ್ ಅವರು ಇಲ್ಲಿದ್ದಾರೆ. ಅವರು ತಮ್ಮ ಪ್ರಾಂತ್ಯದಲ್ಲಿ ಎಷ್ಟು ಮಂದಿ ಪಂಜಾಬಿಗಳನ್ನು ಶಾಶ್ವತವಾಗಿ ಇರಿಸಿಕೊಳ್ಳಬಲ್ಲರು ಎಂದು ಅವರನ್ನು ಕೇಳಬಹುದು. ಆದ್ದರಿಂದ ಪೂರ್ವ ಪಂಜಾಬಿನ ಈ ಬೇಡಿಕೆಯು ನ್ಯಾಯಸಮ್ಮತವಾಗಿದೆ ಎಂದು ಅಂಗೀಕರಿಸಬೇಕು. ಮಾನ್ಯ ಸಭಾಧ್ಯಕ್ಷರೆ, ಈ ನಿರ್ಣಯವನ್ನು ನಾನು ನಿಮ್ಮ ಮೂಲಕ ಮಂಡಿಸಿದ್ದೇನೆ. ಸದನವು ಇದನ್ನು ಅಂಗೀಕರಿಸುತ್ತದೆ ಎಂದು ಆಶಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ನಾನು ನಿರ್ಣಯವನ್ನು ಮತಕ್ಕೆ ಇಡುತ್ತಿದ್ದೇನೆ. ತಿದ್ದುಪಡಿ ಏನೂ ಇಲ್ಲ.

ಮುಂದಿಟ್ಟಿರುವ ವಿಷಯ :

"ಈಗ ಪೂರ್ವ ಪಂಜಾಬ್‌ನ್ನು ಸಂವಿಧಾನ ರಚನಾಸಭೆಯಲ್ಲಿ ೬ ಸಾಮಾನ್ಯ ಸದಸ್ಯರು ಮತ್ತು ೪ ಸಿಖ್ ಸದಸ್ಯರು ಪ್ರತಿನಿಧಿಸುತ್ತಿರುವುದರಿಂದ;

ಮತ್ತು ಈ ವ್ಯವಸ್ಥೆಯನ್ನು ೩ನೇ ಜೂನ್ ೧೯೪೭ನೇ ದಿನಾಂಕದ ಹಿಸ್ ಮೆಜೆಸ್ಟಿಸ್ ಸ್ಟೇಟ್‌ಮೆಂಟ್‌ನ ೧೪ನೇ ಕಂಡಿಕೆಗೆ ಅನುಸಾರ ಮಾಡಲಾಗಿದೆ. ಮತ್ತು ಆಗಿನ ಪೂರ್ವ ಪಂಜಾಬಿನ ಗಡಿಗಳ ಆಧಾರದ ಮೇಲೆ, ಸಂವಿಧಾನ ರಚನಾಸಭೆಯು ಅದರ ತೀರ್ಮಾನ ದಿನಾಂಕ ೨೫ನೇ ಜೂನ್ ೧೯೪೭ರ ಮೂಲಕ ಸ್ವೀಕರಿಸಲಾಗಿರುವುದರಿಂದ;

ಮತ್ತು ಸದರಿ ದಿನಾಂಕಗಳಂದು, ಗಡಿ ನಿರ್ಣಯ ಆಯೋಗದ ಅವಾರ್ಡಿಗೆ ಅನುಸಾರ ಪೂರ್ವ ಪಂಜಾಬಿನ ಗಡಿಗಳನ್ನು ಪರಿಷ್ಕರಿಸಲಾಯಿತು. ಅಷ್ಟೇ ಅಲ್ಲದೆ, ಸಾಮೂಹಿಕವಾಗಿ ಭಾರೀ ಸಂಖ್ಯೆಯಲ್ಲಿ, ಪೂರ್ವ ಪಂಜಾಬಿನಿಂದ

ಪಶ್ಚಿಮ ಪಂಜಾಬಿನ ಮುಸ್ಲಿಮರು ಹಾಗೂ ಪಶ್ಚಿಮ ಪಂಜಾಬಿನಿಂದ ಪೂರ್ವ ಪಂಜಾಬಿಗೆ ಮುಸ್ಲಿಮೇತರರು ವಲಸೆ ಹೋಗಿದ್ದರಿಂದ ಸಮಗ್ರ ಜನಸಂಖ್ಯೆ ಸ್ವರೂಪವು, ಬದಲಾಣೆಯಾಗಿರುವುದರಿಂದ;

ಮತ್ತು ಈ ಬದಲಾವಣೆಗಳ ಪರಿಣಾಮವಾಗಿ ಲಭ್ಯವಿರುವ ಅತ್ಯುತ್ತಮ ಅಂದಾಜುಗಳ ಆಧಾರದ ಮೇಲೆ ಪೂರ್ವ ಪಂಜಾಬವು ಸಂವಿಧಾನ ರಚನಾಸಭೆಗೆ ೮ ಸಾಮಾನ್ಯ ಸದಸ್ಯರನ್ನು ಮತ್ತು ೪ ಸಿಖ್ ಸದಸ್ಯರನ್ನು ಆಯ್ಕೆಮಾಡಲು ಹಕ್ಕುಳ್ಳದ್ದಾಗಿರುವುದರಿಂದ;

ಸಾಂದರ್ಭಿಕ ಖಾಲಿ ಸ್ಥಾನಗಳನ್ನು ತುಂಬುವುದಕ್ಕಾಗಿ, ನಿಯಮಿಸಲಾದ ಕಾರ್ಯವಿಧಾನಕ್ಕೆ ಅನುಸಾರವಾಗಿ ಈ ಅವಕಾಶ ಕಲ್ಪಿಸಲಾಗಿರುವ ಹೆಚ್ಚುವರಿ ೨ ಸಾಮಾನ್ಯ ಸದಸ್ಯರನ್ನು ಮತ್ತು ಹೆಚ್ಚುವರಿ ೨ ಸಿಖ್ ಸದಸ್ಯರನ್ನು ಪೂರ್ವ ಪಂಜಾಬಿನಿಂದ ಆಯ್ಕೆ ಮಾಡುವುದಕ್ಕಾಗಿ ಕೂಡಲೇ ಕ್ರಮಕೈಗೊಳ್ಳಬೇಕೆಂದು ಈ ಮೂಲಕ ತೀರ್ಮಾನಿಸಲಾಗಿದೆ.

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

## ೨ ಮತ್ತು ೩ನೇ ನಿಯಮಗಳಿಗೆ ತಿದ್ದುಪಡಿ

**ಶ್ರೀ ಬಲವಂತ್ ರಾಯ್ ಗೋಪಾಲ್‌ಜಿ ಮೆಹ್ತಾ (ಉಳಿಕೆ ರಾಜ್ಯಗಳು)** : ನಾನು ಮಂಡಿಸುತ್ತೇನೆ.

"ಸಂವಿಧಾನ ರಚನಾಸಭೆಯ ನಿಯಮಗಳಿಗೆ ಈ ಮುಂದಿನ ತಿದ್ದುಪಡಿಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು:

ನಿಯಮ ೨: ನಿಯಮ ೨ರಲ್ಲಿ, (ಸಿ) ಖಂಡದ ತರುವಾಯ (ಸಿಸಿ) ಹೊಸ ಖಂಡವನ್ನು ಸೇರಿಸತಕ್ಕದ್ದು.

"(ಸಿಸಿ) 'ಮಂತ್ರಿ' ಎಂದರೆ, ಭಾರತದ ಗವರ್ನರ್ ಜನರಲ್ ಅವರ ಮಂತ್ರಿ ಪರಿಷತ್ತಿನ ಒಬ್ಬ ಮಂತ್ರಿ"

ನಿಯಮ ೩ : ನಿಯಮ ೩ಕ್ಕೆ ಈ ಮುಂದಿನ ನಿಬಂಧನೆಯನ್ನು ಸೇರಿಸತಕ್ಕದ್ದು:

"ಪರಂತು, ಸದರಿ ಸಭೆಯ ಸದಸ್ಯನಾಗಿಲ್ಲದ ಪ್ರತಿಯೊಬ್ಬ ಮಂತ್ರಿಯು ಸಭೆಯ ನಡವಳಿಗಳಲ್ಲಿ ಮತ್ತು ಆತನನ್ನು ಯಾವ ಸಮಿತಿಗೆ ಹೆಸರಿಲಾಗಿರುವುದೋ ಆ ಸಮಿತಿಯ ಸದಸ್ಯನಾಗಿ ಮಾತನಾಡಲು ಮತ್ತು ಅನ್ಯಾಥಾ ಭಾಗವಹಿಸಲು ಹಕ್ಕನ್ನು ಹೊಂದಿರತಕ್ಕದ್ದು. ಆದರೆ ಈ ನಿಯಮದ ಬಲದಿಂದ ಮತಚಲಾಯಿಸಲು ಹಕ್ಕುಳ್ಳವನಾಗಿರುವುದಿಲ್ಲ."

*[ಸಂವಿಧಾನ ರಚನಾಸಭೆಗೆ ಆಯ್ಕೆಯಾಗದಿರುವಂಥ ಭಾರತ ಸರ್ಕಾರದ ಸಚಿವರುಗಳ ಅನುಭವವು ಈ ನಿಕಾಯಕ್ಕೆ ಲಭ್ಯವಾಗುವಂತೆ ಮಾಡಬೇಕು ಎಂಬ ಸರಳ ಉದ್ದೇಶದಿಂದ ಇದನ್ನು ಮಂಡಿಸಲಾಗಿದೆ. ಸಚಿವರುಗಳು ಸದನಕ್ಕೆ ಹಾಜರಾಗಿ ಇಲ್ಲಿನ ಚರ್ಚೆಗಳಲ್ಲಿ ಭಾಗವಹಿಸುವುದಕ್ಕೆ ಅವಕಾಶ ಕೊಡಿ. ಸಂವಿಧಾನ ರಚನಾಸಭೆಯು ಈಗಾಗಲೇ ನಿಯಮಗಳನ್ನು ಅಂಗೀಕರಿಸಿದೆ. ಸಂವಿಧಾನ ರಚನಾಸಭೆಯು ಸಂವಿಧಾನವನ್ನು ರೂಪಿಸುವ ಕೆಲಸ ಮಾಡುವಾಗ ಕೇಂದ್ರ ಸಂಪುಟದಲ್ಲಿರುವ ಎಲ್ಲ ಸಚಿವರಲ್ಲಿ ಸಂಚಯಗೊಂಡಿರುವಂಥ ಅನುಭವದ ಪ್ರಯೋಜನವನ್ನು ಸಹ ಪಡೆದುಕೊಳ್ಳಬೇಕು. ತಿದ್ದುಪಡಿಯನ್ನು ಅಳವಡಿಸಿಕೊಳ್ಳಬೇಕು ಎಂದು ನಾನು ಶಿಫಾರಸು ಮಾಡುತ್ತೇನೆ.]*

**ಮಾನ್ಯ ಸಭಾಧ್ಯಕ್ಷರು** : "ಸಂವಿಧಾನ ರಚನಾಸಭೆಯ ನಿಯಮಗಳಿಗೆ ಕೆಳಕಂಡ ತಿದ್ದುಪಡಿಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು" ಎಂಬ ಸೂಚನೆಯ ನಿಜವಾದ ಅರ್ಥವೇನೆಂದರೆ ಕೆಳಕಂಡ ತಿದ್ದುಪಡಿಗಳನ್ನು ಮಾಡಬೇಕಾಗಿದೆ ಎಂಬುದಾಗಿದೆ ಎಂದು ನಾನು ಗ್ರಹಿಸುತ್ತೇನೆ.

ಈ ಪ್ರಸ್ತಾವವನ್ನು ಮಂಡಿಸಲಾಗಿದೆ. ತಿದ್ದುಪಡಿಯೊಂದರ ಸೂಚನೆ ಬಂದಿದೆ. ಶ್ರೀ ನಜಿರುದ್ದೀನ್ ಅಹ್ಮದ್ ಅವರು ತಮ್ಮ ತಿದ್ದುಪಡಿಯನ್ನು ಮಂಡಿಸಬೇಕೆಂದು ಕೇಳುತ್ತೇನೆ.

**ಶ್ರೀ ನಜಿರುದ್ದೀನ್ ಅಹ್ಮದ್** : ಮಾನ್ಯರೆ, ಕೆಳಕಂಡಂತೆ ಮಂಡಿಸಲು ಅಪ್ಪಣೆ ಕೊಡಿ.

"ಪ್ರಸ್ತಾವಿಸಲಾಗಿರುವ "೩ನೇ ನಿಯಮದ ಪರಂತುಕದಲ್ಲಿ '...ಮಾತನಾಡಲು.... ಮತ್ತು "...ನಡವಳಿಗಳಲ್ಲಿ...' ಪದಗಳಿಗೆ ಹಾಕಿರುವ ಕಾಮಾಗಳನ್ನು ತೆಗೆದುಹಾಕಬೇಕು ಮತ್ತು 'ನಿಯಮದ ಬಲದಿಂದ' ಎಂಬ ಪದಗಳನ್ನು ತೆಗೆದುಹಾಕಬೇಕು."

ಈ ಅಲ್ಪವಿರಾಮ ಚಿಹ್ನೆಗಳು ಸಂಪೂರ್ಣ ಅನಗತ್ಯವಾಗಿರುವಂತೆ ತೋರುತ್ತದೆ. ಕೊನೆಯ ತಿದ್ದುಪಡಿಗಳಿಗೆ ಸಂಬಂಧಿಸಿದಂತೆ, ನಿಯಮದ ಬಲದಿಂದ ಎಂಬ ಪದಗಳನ್ನು ಬಿಟ್ಟುಬಿಡುವುದು ಅಗತ್ಯವೆಂದು ತೋರುತ್ತದೆ. ಯಾಕೆಂದರೆ, ಪರಂತುಕವು ಸದಸ್ಯರಲ್ಲದ ಒಬ್ಬ ಸಚಿವರಿಗೆ ಸಂಬಂಧಿಸಿದ ಪ್ರಕರಣದಿಂದ ಆರಂಭವಾಗುತ್ತಿದೆ. ಅವರು ಸದಸ್ಯರೆ ಆಗಿಲ್ಲದಿದ್ದರೆ ಅವರು ಮತ ನೀಡಲು ಅರ್ಹರಾಗಿರುವುದಿಲ್ಲ. ಅವರ ಮತವು ಈ ನಿಯಮವನ್ನು ಆಧರಿಸಿರುತ್ತದೆ ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ, ಯಾಕೆಂದರೆ, ಸದಸ್ಯರಲ್ಲದ ಒಬ್ಬ ಸಚಿವರು ಎಂಬ ಭಾವನೆಯಿಂದ ನಾವು ಆರಂಭಿಸಿದ್ದೇವೆ. ಆದ್ದರಿಂದ ಅವರು ಮತ ನೀಡುವ ಅರ್ಹತೆ ಹೊಂದಿರುವುದಿಲ್ಲ. ಆದ್ದರಿಂದ ಈ ಪದಗಳು ಅನಗತ್ಯವೆಂದು ತೋರುತ್ತದೆ. ಆದರೆ ಈ ಎರಡೂ ತಿದ್ದುಪಡಿಗಳು ಪ್ರಾರೂಪಣ ಸ್ವರೂಪದವಾಗಿವೆ.

**ಮಾನ್ಯ ಸಭಾಧ್ಯಕ್ಷರು :** ತಿದ್ದುಪಡಿಯನ್ನು ಮಂಡಿಸಲಾಗಿದೆ. ಈಗ ಸೂಚನೆ ಮತ್ತು ತಿದ್ದುಪಡಿಗಳು ಚರ್ಚೆಗೆ ಮುಕ್ತವಾಗಿವೆ.

**ಶ್ರೀ ತಾಜಮಲ್ ಹುಸೇನ್ :** ಈ ಸೂಚನೆಯನ್ನು ವಿರೋಧಿಸಲು ನಾನು ಅಪ್ಪಣೆ ಬೇಡುತ್ತೇನೆ. ಬ್ರಿಟಿಷ್ ಸಂಸತ್ತು ಒಂದು ಸಾರ್ವಭೌಮ ನಿಕಾಯ ಮತ್ತು ಅದು ಏನನ್ನು ಬೇಕಾದರೂ ರಚಿಸಬಹುದು ಮತ್ತು ರಚಿಸದಿರಬಹುದು ಎಂದು ಹೇಳಲಾಗುತ್ತದೆ. ಬ್ರಿಟಿಷ್ ಸಂಸತ್ತು ಸಾರ್ವಭೌಮ ನಿಕಾಯವಾಗಿದ್ದರೂ ಸಹ ಮತ್ತು ಅದು ಏನು ಬೇಕಾದರೂ ಮಾಡಬಹುದು. ಅಥವಾ ಮಾಡದಿರಬಹುದಾಗಿದ್ದರೂ ಸಹ ಅದು ಕೆಲವು ಪರಿಮಿತಿಗಳಲ್ಲಿ ಕೆಲಸಮಾಡುತ್ತದೆ. ಎಂದರೆ: ಅದು ತನ್ನ ಉತ್ತರಾಧಿಕಾರಿಯನ್ನು ಬದ್ಧಗೊಳಿಸುವಂತಿಲ್ಲ. ಯಾಕೆಂದರೆ, ತಮ್ಮ ಉತ್ತರಾಧಿಕಾರಿ ಯಾರು ಎಂಬುದನ್ನು ಬ್ರಿಟಿಷ್ ಸಂಸತ್ತು ಆಯ್ಕೆಮಾಡಬೇಕು ಎಂಬುದು ಜನರ ಇಚ್ಛೆಯಲ್ಲ. ಎರಡನೆಯದಾಗಿ, ಬಹುಸಂಖ್ಯೆಯ ಜನರು ಪಾಲಿಸದಿರುವಂತಹ ಕಾನೂನನ್ನು ಬ್ರಿಟಿಷ್ ಸಂಸತ್ತು ಮಾಡುವಂತಿಲ್ಲ. ಮತ್ತು ಮೂರನೆಯದಾಗಿ, ಹೌಸ್ ಆಫ್ ಕಾಮನ್ಸ್‌ನ ಸದಸ್ಯರಾಗುವುದಕ್ಕೆ ಅದು ವ್ಯಕ್ತಿಯನ್ನು ನಾಮನಿರ್ದೇಶನ ಮಾಡುವುದಾಗಲಿ, ಚುನಾಯಿಸುವುದಾಗಲೀ ಮಾಡುವಂತಿಲ್ಲ. ಅಂತಹ ಹಕ್ಕನ್ನು ಸಂಪೂರ್ಣವಾಗಿ ಜನರಿಗೆ ನೀಡಲಾಗಿದೆ. ಅದೇ ರೀತಿ, ಈ ಸದನವು ಸಾರ್ವಭೌಮ ನಿಕಾಯವೆಂಬುದರಲ್ಲಿ ರಚಿಸಲು ಸಂದೇಹವಿಲ್ಲ; ಅದು ಏನನ್ನು ಬೇಕಾದರೂ ಮಾಡಬಹುದು, ಮಾಡದಿರಬಹುದು. ಆದರೆ ಇದಕ್ಕೂ ಸಹ ಬ್ರಿಟಿಷ್ ಸಂಸತ್ತಿಗಿರುವಂತೆ ಕೆಲವು ಪರಿಮಿತಿಗಳಿವೆ. ಎಂದರೆ ಇದು ತನ್ನ ಉತ್ತರಾಧಿಕಾರಿಯನ್ನು ಬದ್ಧಗೊಳಿಸುವಂತಿಲ್ಲ, ಬಹುಸಂಖ್ಯೆಯ ಜನರು ಪಾಲಿಸದಿರುವಂತಹ ಕಾನೂನನ್ನು ಜಾರಿಗೊಳಿಸುವಂತಿಲ್ಲ ಮತ್ತು ಇದು ಸಂವಿಧಾನ ರಚನಾಸಭೆಗೆ ಸದಸ್ಯರಾಗುವಂತೆ ವ್ಯಕ್ತಿಯನ್ನು ನಾಮನಿರ್ದೇಶನ ಮಾಡುವಂತಿಲ್ಲ ಮತ್ತು ಮಾಡಲೂಬಾರದು.

ಸದಸ್ಯರಾಗಿಲ್ಲದ ಗೌರವಾನ್ವಿತ ಸಚಿವರು ಸದಸ್ಯರಾಗಬೇಕು ಎಂದು ಸೂಚನೆಯು ಹೇಳುವುದಿಲ್ಲ. ಆದರೆ, ಈ ಗೌರವ ಸದನದ ಸದಸ್ಯರಾಗಿಲ್ಲದಂತಹ ಮುಸ್ಲಿಮರು ಸದನದ ಸಭೆಗಳಲ್ಲಿ ಹಾಜರಿರಬಹುದು, ಭಾಗಿಯಾಗಬಹುದು, ಸದನವನ್ನುದ್ದೇಶಿಸಿ ಮಾತಾಡಬಹುದು ಆದರೆ ಮತ ಹಾಕುವಂತಿಲ್ಲ ಎಂದು ಅದು ಸ್ಪಷ್ಟವಾಗಿ ಹೇಳುತ್ತದೆ.

ಸ್ವಲ್ಪವಾದರೂ ಮಿತಿಯಿರಬೇಕು ಎಂಬುದು ನನ್ನ ನಿವೇದನೆ. ಎಲ್ಲೋ ಒಂದು ಕಡೆ ಗೆರೆ ಎಳೆಯಬೇಕು. ಈ ಸದನದಲ್ಲಿ ಹೊರಗಿನವರು ಇರಬಹುದು ಮತ್ತು ಇರುವರು, ಎಂಬ ತತ್ತ್ವವನ್ನು ನೀವು ಒಪ್ಪಿಕೊಂಡಿದ್ದೇ ಆದರೆ – ನನಗೆ ಸಚಿವರುಗಳ ಬಗ್ಗೆ ಗೌರವವಿದೆ ಸಂದೇಹವೇ ಇಲ್ಲ–ಅದಕ್ಕೆ ಕೊನೆಯೇ ಇರುವುದಿಲ್ಲ. ಅಲ್ಲದೆ ಅವರೆಲ್ಲರೂ ಈ ಸದನಕ್ಕೆ ಅದೇ ಹೊರಗಿನವರೇ ಆಗಿರುತ್ತಾರೆ. ಹೊರಗಿನವರು ನಮ್ಮೊಂದಿಗೆ ಕುಳಿತುಕೊಳ್ಳಬಹುದು ಮತ್ತು ತಮ್ಮ ಸಲಹೆಯ ಲಾಭವನ್ನು ನಮಗೆ ದೊರಕಿಸಬಹುದು ಎಂಬ ತತ್ತ್ವವನ್ನು ನೀವು ಒಪ್ಪಿಕೊಂಡ ಮರುಕ್ಷಣದಲ್ಲಿಯೇ ಸಚಿವರಲ್ಲದ ತಜ್ಞರನ್ನು ನಾವು ಹೊಂದಬಹುದು ಯಾಕೆಂದರೆ

ಅವರ ಸಲಹೆ ಮೌಲಿಕವಾಗಿರುತ್ತದೆ ಎಂದು ನೀವು ಹೇಳಬಹುದು. ನಿಮಗೆ ಸಚಿವರು ಬೇಕು, ಇದರಲ್ಲಿ ಸಂದೇಹವಿಲ್ಲ. ಯಾಕೆಂದರೆ ಅವರ ಇಲಾಖೆಗಳನ್ನು ಕುರಿತಂತೆ ಏನಾದರೂ ಚರ್ಚೆಯಾಗುವಾಗ ಅವರ ಸಲಹೆ ಬಹಳ ಅವಶ್ಯವಾಗುತ್ತದೆ. ಆದರೆ ಎಲ್ಲೋ ಒಂದು ಕಡೆ ನೀವು ಗೆರೆ ಎಳೆಯಬೇಕು ಎಂದು ನನಗನ್ನಿಸುತ್ತದೆ. ಹೌಸ್ ಆಫ್ ಕಾಮನ್ಸ್‌ನಲ್ಲಿ ಪ್ರತಿಯೊಬ್ಬರೂ ಚುನಾಯಿತರಾದಂಥವರು. ಅಲ್ಲಿ ಒಬ್ಬರೂ ಕೂಡ ನಾಮನಿರ್ದೇಶಿತರಲ್ಲ. ಭಾರತದಲ್ಲಿಯೂ ಇರುವ ಕಾನೂನಿನ ನಿಯಮದಂತೆ ಒಬ್ಬ ಪ್ರಾಂತೀಯ ಪ್ರಧಾನ ಮಂತ್ರಿಯು ಶಾಸನಸಭೆಯ ಸದಸ್ಯರಾಗಿಲ್ಲದ ವ್ಯಕ್ತಿಯನ್ನು ಮಂತ್ರಿಯಾಗಿ ಆಯ್ಕೆಮಾಡಿಕೊಳ್ಳಬಹುದಾಗಿದೆ. ಆದ್ದರಿಂದ ಅವರು ಆರು ತಿಂಗಳ ಕಾಲ ಸಚಿವರಾಗಿರುತ್ತಾರೆ. ಆದರೆ ಅವರು ಆ ಸದನಕ್ಕೆ ಚುನಾಯಿತರಾಗಲೇ ಬೇಕು. ಗೌರವಾನ್ವಿತ ಸಚಿವರುಗಳನ್ನು ಈ ಸದನದಲ್ಲಿ ಹೊಂದಲು ನೀವು ಇಚ್ಛಿಸುವಿರಾದರೆ ಕೆಲವು ಸದಸ್ಯರು ರಾಜಿನಾಮೆ ನೀಡಿ ತಮ್ಮ ಸ್ಥಾನಗಳನ್ನು ತೆರವು ಮಾಡಬಹುದಲ್ಲವೆ. ಮಾನ್ಯರೆ, ಈಗ ನಾವು ಇಲ್ಲಿದ್ದೇವೆ. ನಾವು ಚುನಾಯಿತರಾಗಿದ್ದೇವೆ; ನನಗೆ ಖಚಿತವಿಲ್ಲ, ಆದರೂ ನನಗನ್ನಿಸುವಂತೆ ಪ್ರತಿಯೊಬ್ಬ ಸದಸ್ಯರೂ ೧೦ ಲಕ್ಷ ಜನರನ್ನು ಪ್ರತಿನಿಧಿಸುತ್ತಾರೆ. ಈ ಸಂವಿಧಾನ ರಚನಾಸಭೆಯನ್ನು ಜನರು ಆಯ್ಕೆಮಾಡಿದ್ದಾರೆ ಎಂಬುದೂ ಇಡೀ ಜಗತ್ತಿಗೇ ಗೊತ್ತಿದೆ. ಅವರೇನು ಹೇಳಬಹುದು? ನಾವು ಹೊರಗಿನವರನ್ನು ಇಲ್ಲಿರಿಸಿಕೊಂಡರೆ ಜಗತ್ತಿನ ಮುಂದೆ ನಾವು ನಗೆಪಾಟಲಿಗೀಡಾಗುವುದಿಲ್ಲವೆ?

ಮಾನ್ಯರೆ, ಈ ಸಂವಿಧಾನ ರಚನಾಸಭೆಯ ಹಿಂದಿನ ಅಧಿವೇಶನದಲ್ಲಿ ಈ ಸದನವನ್ನು ಉದ್ದೇಶಿಸಿ ಮಾತಾಡುವುದಕ್ಕಾಗಿ ಮಹಾತ್ಮ ಗಾಂಧಿಯವರ ಮನ ಒಲಿಸಬೇಕು ಎಂಬುದಾಗಿ ಮಾತುಕಥೆಯಾಗಿತ್ತು. ಆದರೆ ಗೌರವಾನ್ವಿತ ಸದಸ್ಯರೊಬ್ಬರು ಇದು ಸರಿಯಲ್ಲ ಎಂದು ಹೇಳಿದರು. ಮಾನ್ಯರೆ, ಮಹಾತ್ಮ ಗಾಂಧಿಯವರು ಇಡೀ ಜಗತ್ತಿನಲ್ಲಿಯೇ ಬಹುದೊಡ್ಡ ವ್ಯಕ್ತಿ. ಅವರಿಗೆ ಎಲ್ಲ ರೀತಿಯ ಗೌರವಗಳೂ ಸಲ್ಲಬೇಕು ಎಂದು ಒಪ್ಪಿಕೊಳ್ಳಬೇಕು. ನಮ್ಮ ಸದಸ್ಯತ್ವವನ್ನೂ ಅವರಿಗೆ ಕೊಡಬೇಕಾದ್ದೆ ಆಗಿದೆ. ಇಡೀ ಸಂವಿಧಾನಕ್ಕೆ ಕಾರಣಕರ್ತರೇ ಅವರು. ನಾವು ಸ್ವಾತಂತ್ರ್ಯ ಪಡೆಯಲು ಅವರು ಕಾರಣ. ಅಂತಹ ಮಹಾನ್ ವ್ಯಕ್ತಿತ್ವದವರನ್ನು ನಾವು ಕೋರಿಕೊಳ್ಳಲು ಸಾಧ್ಯವಾಗದಿದ್ದಾಗ ಅವರಿಗಿಂತ ಬಹಳ ಕೆಳಗಿನವರನ್ನು ಈ ಸದನವನ್ನು ಉದ್ದೇಶಿಸಿ ಮಾತಾಡಲು ಕರೆಯಬೇಕೆ? ಯಾವುದೇ ಹೊರಗಿನವರು ಇಲ್ಲಿಗೆ ಬರುವುದಕ್ಕೆ ಪ್ರಜಾಪ್ರಭುತ್ವದ ನಿಯಮವೂ ತಡೆ ಒಡ್ಡುತ್ತದೆ.

ಇಲ್ಲಿ ನಾವು ಪಕ್ಷಾಧಾರಿತವಾಗಿ ಕೆಲಸಮಾಡುವಂತಿಲ್ಲ. ಆದರೆ ಕಾಂಗ್ರೆಸ್ ಪಕ್ಷವು ದೇಶವನ್ನು ಆಳುತ್ತಿದೆ. ಅವರು ಬಹುಮತ ಹೊಂದಿದ್ದಾರೆ. ನಾನು ಕಾಂಗ್ರೆಸ್ ಪಕ್ಷದಲ್ಲಿಲ್ಲ. ಅವರು ತಮ್ಮ ಪ್ರಸ್ತಾವಗಳನ್ನು ಮಂಡಿಸಿ ಯಾವುದನ್ನೂ ಬೇಕಾದರೂ ಜಾರಿಗೊಳಿಸಬಹುದು. ಈಗ ಇದನ್ನು ಪಕ್ಷಾಧಾರಿತ ದೃಷ್ಟಿಯಿಂದ ಮಾಡಿದ್ದರೆ ಅದು ಸರಿ ಎಂದು ನನಗನ್ನಿಸುವುದಿಲ್ಲ. ನಾನು ಈಗಾಗಲೇ ಹೇಳಿದಂತೆ ಎಲ್ಲೋ ಒಂದು ಕಡೆ ಗೆರೆ ಎಳೆಯಬೇಕು ಮತ್ತು ಸದನವು ನನ್ನ ಪ್ರಸ್ತಾವನೆಯನ್ನು ಅಂಗೀಕರಿಸಬೇಕು ಹಾಗೂ ಸೂಚನೆಯನ್ನು ತಿರಸ್ಕರಿಸಬೇಕು ಎಂದು ನಾನು ನಿವೇದಿಸಿಕೊಳ್ಳುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಸಂವಿಧಾನ ರಚನಾಸಭೆಯ ಹಿಂದಿನ ಅಧಿವೇಶನದಲ್ಲಿ ಒಂದು ನಿರ್ಣಯವನ್ನು ಹೊರಡಿಸಲಾಯಿತು. ಅದು ಈ ಅಂಶವನ್ನೇ ಒಪ್ಪಿಕೊಂಡಿತ್ತು, ಈ ಅಂಶವನ್ನು ವಿದ್ಯುಕ್ತಗೊಳಿಸುವುದಕ್ಕಾಗಿ ಮಾತ್ರ ಈ ಸೂಚನೆಯನ್ನು ಮಂಡಿಸಲಾಗಿದೆ ಎಂಬುದನ್ನು ನಿಮ್ಮ ಗಮನಕ್ಕೆ ತರಬಹುದೇ? ಮಾಳವಂಕರ್ ಸಮಿತಿ ನೀಡಿದ ವರದಿಯನ್ನು ಆಧರಿಸಿ ಈ ನಿರ್ಣಯವನ್ನು ಜಾರಿಗೊಳಿಸಲಾಗಿದ್ದು, ಡೊಮಿನಿಯನ್ನಿನ ಸಚಿವರು, ನಿರ್ದಿಷ್ಟವಾಗಿ ಸಂವಿಧಾನ ರಚನಾಸಭೆಯ ಸದಸ್ಯರಾಗಿಲ್ಲದಂಥವರು ಸಂವಿಧಾನ ರಚನಾ ಕೆಲಸದಲ್ಲಿ ಹಾಜರಾಗುವ ಮತ್ತು ಭಾಗಿಯಾಗುವ ಹಕ್ಕನ್ನು ಹೊಂದಿರತಕ್ಕದ್ದು. ಅವರು ಸಂವಿಧಾನ ರಚನಾಸಭೆಯ ಸದಸ್ಯರಾಗುವತನಕ ಅವರಿಗೆ ಮತದಾನದ ಹಕ್ಕಿರತಕ್ಕದ್ದಲ್ಲ ಎಂದು ಅದರಲ್ಲಿ ಹೇಳಲಾಗಿದೆ. ಇದನ್ನು ಸಂವಿಧಾನ

ರಚನಾಸಭೆಯ ಹಿಂದಿನ ಅಧಿವೇಶನದಲ್ಲಿ ಜಾರಿಗೊಳಿಸಲಾಯಿತು ಮತ್ತು ನಿಯಮಗಳಲ್ಲಿ ಈ ತಿದ್ದುಪಡಿಯನ್ನು ಯಾಕೆ ಮುಂದಿಡಲಾಗಿದೆಯೆಂದರೆ, ಅದನ್ನು ನಿಯಮಗಳ ವ್ಯಾಪ್ತಿಗೆ ಒಳಪಡಿಸುವ ದೃಷ್ಟಿಯಿಂದ. ವಾಸ್ತವವಾಗಿ ಈ ಪ್ರಶ್ನೆಯನ್ನು ಹಿಂದಿನ ಅಧಿವೇಶನದಲ್ಲಿಯೇ ಚರ್ಚಿಸಲಾಗಿದೆ ಹಾಗೂ ಅಂಗೀಕೃತವಾಗಿದೆ.

**ಶ್ರೀ ತಾಜಮಲ್ ಹುಸೇನ್** : ಮಾನ್ಯ ಸಭಾಧ್ಯಕ್ಷರೆ, ಪ್ರಾರಂಭದಲ್ಲಿಯೇ ನೀವು ಇದನ್ನು ಹೇಳಿದ್ದರೆ ಸದನದ ವೇಳೆಯು ವ್ಯರ್ಥವಾಗುತ್ತಿರಲಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಹಿಂದಿನ ಅಧಿವೇಶನದಲ್ಲಿ ಏನು ನಡೆಯಿತೋ ಅದು ಸದಸ್ಯರಿಗೆ ತಿಳಿದಿದೆ ಎಂದು ನಾನು ಭಾವಿಸಿದ್ದೆ. ಏನೇ ಇರಲಿ ವಸ್ತುಸ್ಥಿತಿ ಹೀಗಿದೆ.

**ಶ್ರೀ ತಾಜಮಲ್ ಹುಸೇನ್** : ಇನ್ನು ಮುಂದೆ ಯಾವುದು ವಿದ್ಯುಕ್ತ ನಿರ್ಣಯ ಮತ್ತು ವಿಷಯ ಕುರಿತಂತೆ ಚರ್ಚಿಸುವ ಹಕ್ಕು ನಮಗಿದೆಯೇ ಎಂಬುದನ್ನು ನೀವು ಸದನಕ್ಕೆ ತಿಳಿಸಬೇಕು. ನಿರ್ಣಯವನ್ನು ಜಾರಿಗೊಳಿಸಲಾಗಿದೆ ಎಂದು ನೀವು ಹೇಳಿದ್ದರೆ, ಯಾವ ಸದಸ್ಯರೂ ಮಾತಾಡುತ್ತಿರಲಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಇನ್ನು ಯಾವುದಾದರೂ ಸದಸ್ಯರು ಮಾತಾಡಲು ಬಯಸುವರೆ? ನಾನು ತಿದ್ದುಪಡಿ ಹಾಗೂ ಸೂಚನೆಯನ್ನು ಮತಕ್ಕೆ ಇಡುತ್ತೇನೆ.

**ಶ್ರೀ ಬಲವಂತ್ ರಾಯ್ ಗೋಪಾಲ್‌ಜಿ ಮೆಹ್ತಾ** : ಶ್ರೀ ನಜೀರುದ್ದೀನ್ ಅಹ್ಮದ್‌ರ ತಿದ್ದುಪಡಿಗಳನ್ನು ನಾನು ಅಂಗೀಕರಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಶ್ರೀ ನಜಿರುದ್ದೀನ್ ಅಹಮದ್ ರವರು ಮಂಡಿಸಿದ ತಿದ್ದುಪಡಿಗಳು ಮಂಡನೆಕಾರರಿಗೆ ಅಂಗೀಕಾರಾರ್ಹವಾಗಿವೆ. ಸದನವು ತಿದ್ದುಪಡಿಗಳನ್ನು ಅಂಗೀಕರಿಸುತ್ತದೆ ಎಂದು ತಿಳಿಯುತ್ತೇನೆ.

ಈ ತಿದ್ದುಪಡಿಗಳನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಈ ಪ್ರಸ್ತಾವವನ್ನು ತಿದ್ದುಪಡಿಯಾದಂತೆ ಮತಕ್ಕಿಡಲಾಗಿದೆ.

ಈ ಪ್ರಸ್ತಾವವನ್ನು ತಿದ್ದುಪಡಿಯಾದಂತೆ ಅಂಗೀಕರಿಸಲಾಯಿತು.

## ೫–ಎ ಮತ್ತು ೫–ಬಿ ನಿಯಮಗಳ ಸೇರ್ಪಡೆ

**ಶ್ರೀ ಪಿ. ಗೋವಿಂದ ಮೆನನ್** (ಕೊಚಿನ್ ರಾಜ್ಯ) : ಮಾನ್ಯ ಸಭಾಧ್ಯಕ್ಷರೆ, ನಾನು ಈಗ ಪ್ರಸ್ತಾವಿಸಲಿರುವ ಸೂಚನೆಯ ಉದ್ದೇಶವೇನೆಂದರೆ, ಈ ಸಭೆಯಲ್ಲಿ ಭಾರತೀಯ ರಾಜ್ಯಗಳನ್ನು ಪ್ರತಿನಿಧಿಸುತ್ತಿರುವ ಸದಸ್ಯರ ಹುದ್ದೆಯಲ್ಲಿನ ಆಕಸ್ಮಿಕ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವುದಕ್ಕೆ ಸಂಬಂಧಿಸಿದೆ. ೫ನೇ ನಿಯಮದಲ್ಲಿ, ಪ್ರಾಂತ್ಯಗಳಿಂದ ಬಂದಂತಹ ಹಾಗೂ ಅಜ್ಮೀರ್ – ಮೆರ್ವಾರ್ ಮತ್ತು ಕೂರ್ಗ್‌ನಿಂದ ಬಂದಂತಹ ಸದಸ್ಯರ ಆಕಸ್ಮಿಕ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವುದಕ್ಕೆ ಸಂಬಂಧಿಸಿದ ವಿಧಾನವನ್ನು ರೂಪಿಸುವುದನ್ನು ಕುರಿತು ಈಗಿನ ನಿಯಮಗಳು ತಿಳಿಸುತ್ತಿವೆ. ಆದರೆ ಈ ನಿಯಮಗಳಲ್ಲಿ ಇರುವ ಲೋಪವೇನೆಂದರೆ, ಭಾರತೀಯ ರಾಜ್ಯಗಳಿಂದ ಬಂದಂತಹ ಸದಸ್ಯರ ವಿಷಯದಲ್ಲಿ ಉಂಟಾದ ಖಾಲಿ ಸ್ಥಾನಗಳನ್ನು ಕುರಿತು ಏನನ್ನೂ ಹೇಳದಿರುವುದು. ನನ್ನ ಹೆಸರಿನಲ್ಲಿ ನಮೂದಿಸಿರುವ ಸೂಚನೆಯು, ಈ ಲೋಪವನ್ನು ಸರಿದೂಗಿಸುವುದಕ್ಕಾಗಿ ೫ನೇ ನಿಯಮದ ಅನಂತರ ೫–ಎ ಮತ್ತು ೫–ಬಿ ಎಂಬ ಎರಡು ನಿಯಮಗಳನ್ನು ಸೇರಿಸಲು ಯತ್ನಿಸುತ್ತದೆ.

ನಾನು, ಈ ಕೆಳಗಿನ ತಿದ್ದುಪಡಿಗಳನ್ನು ಮಂಡಿಸುತ್ತೇನೆ: ಮಾನ್ಯರೆ,

'ಈ ಕೆಳಗೆ ತೋರಿಸಿರುವ ತಿದ್ದುಪಡಿಗಳ ಪ್ರಕಾರ, ಸಂವಿಧಾನ ರಚನಾಸಭೆಯ ೧೩ನೇ ಮತ್ತು ೧೪ನೇ ಸ್ಥಾಯಿ ಆದೇಶಗಳನ್ನು ಸಂವಿಧಾನ ರಚನಾಸಭೆಯ ಭಾಗವಾಗಿ ಮಾಡಲಾಗಿದೆ:

'ನಿಯಮ ೫: ೫ನೇ ನಿಯಮದ ಅನಂತರ, ಈ ಕೆಳಕಂಡ ೫–ಎ ಮತ್ತು ೫–ಬಿ ನಿಯಮಗಳನ್ನು ಎಂದು ಸೇರಿಸಬೇಕು:

"೫–ಎ: ಸಂವಿಧಾನ ರಚನಾಸಭೆಯಲ್ಲಿ ಭಾರತೀಯ ರಾಜ್ಯವೊಂದನ್ನು ಪ್ರತಿನಿಧಿಸುತ್ತಿರುವ ಸದಸ್ಯರೊಬ್ಬರ ಹುದ್ದೆಯಲ್ಲಿ ನಿಧನ, ರಾಜೀನಾಮೆ ಅಥವಾ ಇನ್ನಿತರ ಕಾರಣದಿಂದ ಖಾಲಿ ಸ್ಥಾನವು ಉಂಟಾದಾಗ ಅಧ್ಯಕ್ಷರು ಆ ಬಗ್ಗೆ ಲಿಖಿತ ಸೂಚನೆ ಹೊರಡಿಸಬೇಕು ಮತ್ತು ಕಾರ್ಯಸಾಧ್ಯವಾದಷ್ಟು ಬೇಗ ಆಯಾ ಸಂದರ್ಭಕ್ಕೆ ತಕ್ಕಂತೆ ಚುನಾವಣೆ ಅಥವಾ ನಾಮನಿರ್ದೇಶನದ ಮೂಲಕ ಖಾಲಿ ಸ್ಥಾನವನ್ನು ಭರ್ತಿ ಮಾಡುವುದಕ್ಕಾಗಿ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಭಾರತೀಯ ರಾಜ್ಯದ ರಾಜರಿಗೆ ಲಿಖಿತ ಮೂಲಕವಾಗಿ ಕೋರಿಕೆ ಮಾಡಿಕೊಳ್ಳಬೇಕು."

"೫–ಬಿ. ಒಂದಕ್ಕಿಂತ ಹೆಚ್ಚಿನ ಭಾರತೀಯ ರಾಜ್ಯವನ್ನು ಪ್ರತಿನಿಧಿಸುತ್ತಿರುವ ಸದರಿ ಸಭೆಯ ಸದಸ್ಯರ ಹುದ್ದೆಯಲ್ಲಿ ಖಾಲಿ ಸ್ಥಾನ ಉಂಟಾದ ಸಂದರ್ಭದಲ್ಲಿ ಅಧ್ಯಕ್ಷರು, ಖಾಲಿ ಸ್ಥಾನ ಕುರಿತು ಅಧಿಸೂಚನೆ ಹೊರಡಿಸಬೇಕು ಮತ್ತು ವಿಧಾನಸಭೆಯ ಸದಸ್ಯರಾಗಿ ಚುನಾಯಿತರಾದಾಗ ಹೊರ ಹೋಗುತ್ತಿರುವ ಸದಸ್ಯರ ವಿಷಯಕ್ಕೆ ಅನ್ವಯಿಸುವ ವಿಧಾನದ ರೀತಿಯಲ್ಲಿಯೇ ಕಾರ್ಯಸಾಧ್ಯವಾದಷ್ಟು ಬೇಗ ಖಾಲಿ ಸ್ಥಾನವನ್ನು ಭರ್ತಿ ಮಾಡುವುದಕ್ಕಾಗಿ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಭಾರತೀಯ ರಾಜ್ಯಗಳ ರಾಜರಿಗೆ, ಅಧ್ಯಕ್ಷರು ಲಿಖಿತವಾಗಿ ಕೋರಿಕೆ ಮಾಡಿಕೊಳ್ಳಬೇಕು."

ಮಾನ್ಯರೆ, ಈ ನಿಯಮಗಳು, ಕಾರ್ಯವಿಧಾನದ ನಿಯಮಗಳಲ್ಲಿ ಕಂಡುಬರುವುದಿಲ್ಲವಾದರೂ ಕೆಲವೊಂದು ನಿಯಮಗಳ ಅಡಿಯಲ್ಲಿ ಅಧ್ಯಕ್ಷರಿಗೆ ನೀಡಲಾದ ಅಧಿಕಾರಗಳ ಬಲದಿಂದಾಗಿ ಅವುಗಳನ್ನು ಸ್ಥಾಯಿ ಆದೇಶಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಈಗ ಮಾಡಬೇಕಾಗಿರುವುದೇನೆಂದರೆ ಈ ಸ್ಥಾಯಿ ಆದೇಶಗಳಿಗೆ ಸ್ವತಃ ನಿಯಮಗಳಲ್ಲಿಯೇ ಸ್ಥಾನ ಕೊಡುವುದು.

೫–ಎ ನಿಯಮಕ್ಕೆ ಒಂದು ಪರಂತುಕವನ್ನು ಸೇರಿಸುವ ಕುರಿತು ಶ್ರೀ ಸಂತಾನಮ್ ಅವರ ಹೆಸರಿನಲ್ಲಿರುವ ಒಂದು ತಿದ್ದುಪಡಿ ಈ ರೀತಿ ಇದೆ: "ಈ ಹಿಂದೆ ನಾಮನಿರ್ದೇಶನದ ಮೂಲಕ ಸ್ಥಾನವನ್ನು ಭರ್ತಿ ಮಾಡಿರುವುದಕ್ಕೆ ಒಳಪಟ್ಟು, ರಾಜರು ಖಾಲಿ ಸ್ಥಾನವನ್ನು ಚುನಾವಣೆಯ ಮೂಲಕ ಭರ್ತಿ ಮಾಡಬಹುದು. ಈ ತಿದ್ದುಪಡಿಯನ್ನು ಮಂಡಿಸಿದಾಗ ನಾನೂ ಅದನ್ನು ಒಪ್ಪಿಕೊಳ್ಳುತ್ತೇನೆ ಎಂದು ಈಗಲೂ ಹೇಳಬಲ್ಲೆ. ಈ ಹಿಂದೆ ನಾಮನಿರ್ದೇಶನದ ಮೂಲಕ ಭರ್ತಿ ಮಾಡಲಾಗುತ್ತಿದ್ದ ಖಾಲಿ ಸ್ಥಾನವನ್ನು ಚುನಾವಣೆಯ ಮೂಲಕ ಭರ್ತಿ ಮಾಡುವ ಆಯ್ಕೆಯನ್ನು ಅದು ರಾಜರಿಗೆ ಕೊಡುತ್ತದೆ."

**ಮಾನ್ಯ ಸಭಾಧ್ಯಕ್ಷರು** : ಸೂಚನೆಯನ್ನು ಮಂಡಿಸಲಾಗಿದೆ. ನನಗೆ ತಿದ್ದುಪಡಿಗಳ ನೋಟೀಸ್ ಬಂದಿದೆ. ಶ್ರೀ ನಜಿರುದ್ದೀನ್ ಅಹ್ಮದ್.

**ಶ್ರೀ ನಜಿರುದ್ದೀನ್ ಅಹ್ಮದ್** : ಮಾನ್ಯ ಸಭಾಧ್ಯಕ್ಷರೆ, ಕೆಳಕಂಡಂತೆ ಮಂಡಿಸಲು ಅಪ್ಪಣೆ ಕೋರುತ್ತೇನೆ.

"೧ನೇ ಪ್ಯಾರಾದಲ್ಲಿ 'ಭಾಗವಾಗಿ ಮಾಡಲಾಗಿದೆ' ಎಂಬ ಪದಗಳನ್ನು ಕೈಬಿಡಬೇಕು ಮತ್ತು 'ಅನುಕ್ರಮವಾಗಿ ೫–ಎ ಹಾಗೂ ೫–ಬಿ ನಿಯಮಗಳು' ಎಂಬುದಾಗಿ ಸೇರಿಸಬೇಕು. 'ತಿದ್ದುಪಡಿಗಳು' ಎಂಬ ಪದಕ್ಕೆ ಬದಲಾಗಿ 'ತಿದ್ದುಪಡಿ' ಎಂಬ ಪದವನ್ನು ಹಾಕಬೇಕು."

ನಾನು ಮುಂದಿನದನ್ನೂ ಮಂಡಿಸಲೆ?

**ಮಾನ್ಯ ಸಭಾಧ್ಯಕ್ಷರು** : ನಿಮ್ಮ ಮೊದಲ ತಿದ್ದುಪಡಿ ಅನಗತ್ಯವೆಂದು ನನಗೆ ಅನ್ನಿಸುತ್ತದೆ. ಯಾಕೆಂದರೆ, ನಿರ್ಣಯದ ಮುಂದಿನ ಭಾಗಕ್ಕೆ ಅನುಗುಣವಾಗಿ ಅವರು ನೇರವಾಗಿ ನಿಯಮಗಳನ್ನು ಸೇರಿಸಲಿದ್ದಾರೆ. ನೀವು ಇದನ್ನು ಬಿಟ್ಟರೆ, ಮುಂದಿನದನ್ನು ಮಂಡಿಸಬಹುದು.

**ಶ್ರೀ ನಜಿರುದ್ದೀನ್ ಅಹ್ಮದ್** : ಮಾನ್ಯರೆ, ನಾನು ಮಂಡಿಸುತ್ತೇನೆ:

"ಪ್ರಸ್ತಾಪಿಸಲಾಗಿರುವ ೫–ಎ ನಿಯಮದಲ್ಲಿ 'ಭಾರತೀಯ ರಾಜ್ಯದ ರಾಜ' ಎಂಬ ಪದಗಳಿಗೆ ಬದಲಾಗಿ 'ರಾಜ್ಯದ ರಾಜ' ಎಂಬುದನ್ನು ಹಾಕಬೇಕು."

ತಿದ್ದುಪಡಿಯ ಇನ್ನೊಂದು ಭಾಗವನ್ನು ನಾನು ಮಂಡಿಸುವುದಿಲ್ಲ.

ಮಾನ್ಯರೆ, ಮೊದಲನೇ ತಿದ್ದುಪಡಿಗೆ ಸಂಬಂಧಿಸಿದಂತೆ, ಅದು ನಿಯಮಗಳ ಮೇಲೆ ಪರಿಣಾಮ

ಬೀರುವುದಿಲ್ಲ. ಶೀರ್ಷಿಕೆಗೆ ಮಾತ್ರ ಪರಿಣಾಮ ಬೀರುತ್ತದೆ. ಎರಡನೆಯ ಪದಕ್ಕೆ ಸಂಬಂಧಿಸಿದಂತೆ ನಾವು 'ರಾಜ್ಯ' ಪದವನ್ನು ಹೇಳಿದರೆ ಅದು 'ಭಾರತೀಯ ರಾಜ್ಯ' ಎಂಬ ಅರ್ಥವನ್ನೇ ಕೊಡುತ್ತದೆ. ಭಾರತೀಯ ಎಂಬ ಪದ ಅನಗತ್ಯ. ಈ ಮಾತುಗಳೊಂದಿಗೆ ತಿದ್ದುಪಡಿಗಳನ್ನು ಮಂಡಿಸಲು ನಾನು ಅಪ್ಪಣೆ ಕೋರುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಇನ್ನೊಂದು ಭಾಗವನ್ನು ನೀವು ಮಂಡಿಸುವುದಿಲ್ಲವೆ?

**ಶ್ರೀ ನಜಿರುದ್ದೀನ್ ಅಹ್ಮದ್** : ಇಲ್ಲ ನಾನು ಮಂಡಿಸುವುದಿಲ್ಲ.

**ಶ್ರೀ ಕೆ. ಸಂತಾನಮ್** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ನಾನು ಮಂಡಿಸುತ್ತೇನೆ:

"ಪ್ರಸ್ತಾವಿತ ೫-ಎ ನಿಯಮದ ಕೊನೆಯಲ್ಲಿ ಕೆಳಕಂಡ ಪರಂತುಕವನ್ನು ಅಳವಡಿಸಬೇಕು:

'ಪರಂತು, ಈ ಹಿಂದೆ ನಾಮನಿರ್ದೇಶನದ ಮೂಲಕ ಭರ್ತಿ ಮಾಡುತ್ತಿದ್ದ ಖಾಲಿ ಸ್ಥಾನವನ್ನು ರಾಜರು ಚುನಾವಣೆಯ ಮೂಲಕ ಭರ್ತಿ ಮಾಡಬಹುದು.'"

ಮಂಡಿಸಿದವರು ಇದನ್ನು ಅಂಗೀಕರಿಸುವುದಾಗಿ ಈಗಾಗಲೇ ಮಾತು ಕೊಟ್ಟಿರುವುದರಿಂದ ನಾನು ಸದನದ ಹೆಚ್ಚಿನ ವೇಳೆಯನ್ನು ತೆಗೆದುಕೊಳ್ಳುವ ಅಗತ್ಯವಿಲ್ಲ. "ಸ್ಥಾನವನ್ನು ಚುನಾವಣೆಯ ಮೂಲಕ ಭರ್ತಿ ಮಾಡಬಹುದು ಎಂಬುದಕ್ಕೆ ನನ್ನ ಒಪ್ಪಿಗೆ ಇದೆ. ಆದರೆ ಸಂವಿಧಾನದ ರಚನಾಸಭೆಯು ಇದಕ್ಕೆ ನಿಯಮದ ಮೂಲಕ ತಡೆ ಒಡ್ಡಿದೆ ಮತ್ತು ನಾನು ಅದನ್ನು ಚುನಾವಣೆಯ ಮೂಲಕ ಭರ್ತಿ ಮಾಡಬಾರದು ಎಂದು ನಿರೂಪಿಸಿದೆ" ಎಂದು ಯಾವ ರಾಜರು ಹೇಳುವುದನ್ನೂ ನಾನು ಬಯಸುವುದಿಲ್ಲ. ಈ ಸದನವು ಈ ತಿದ್ದುಪಡಿಯನ್ನು ಅಂಗೀಕರಿಸುತ್ತಿದೆ ಎಂದು ನಾನು ಆಶಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಈ ಬಗ್ಗೆ ಯಾರಾದರೂ ಏನನ್ನಾದರೂ ಹೇಳಲು ಬಯಸುತ್ತಾರೆಯೇ?

**ಶ್ರೀ ಪಿ. ಗೋವಿಂದ ಮೆನನ್** : ಮಾನ್ಯರೆ, ನಾನು ಹೇಳಿದಂತೆ, ಶ್ರೀ ಸಂತಾನಮ್ ಅವರು ಮಂಡಿಸಿದ ತಿದ್ದುಪಡಿಯನ್ನು ಅಂಗೀಕರಿಸುತ್ತೇನೆ. ಶ್ರೀ ನಜಿರುದ್ದೀನ್ ಅಹ್ಮದ್ ಅವರು ಮಂಡಿಸಿದ ತಿದ್ದುಪಡಿಗೆ ಸಂಬಂಧಿಸಿದಂತೆ, ಅವರು ಮೊದಲ ತಿದ್ದುಪಡಿಯಲ್ಲಿ ಹೇಳುವುದೇನೆಂದರೆ, ೧ನೇ ಪ್ಯಾರಾದಲ್ಲಿ "ಭಾಗವಾಗಿ ಮಾಡಲಾಗಿದೆ" ಎಂಬ ಪದಗಳನ್ನು ಬಿಡಬೇಕು. ಇದನ್ನು ಅಂಗೀಕರಿಸಿದರೆ, ಸ್ಥಾಯಿ ಆದೇಶಗಳಲ್ಲಿನ ಕೆಲವು ಪದಗಳನ್ನು ತ್ಯಜಿಸಬೇಕು ಎಂದು ಅರ್ಥವಾಗುತ್ತದೆ. ನಾವು ಇಲ್ಲಿ ಸ್ಥಾಯಿ ಆದೇಶಗಳನ್ನು ತಿದ್ದುಪಡಿ ಮಾಡಲು ಬಂದಿಲ್ಲ. ನಿಯಮಗಳನ್ನು ನಾವು ತಿದ್ದುಪಡಿ ಮಾಡುತ್ತಿದ್ದೇವೆ. ಸ್ಥಾಯೀ ಆದೇಶಗಳನ್ನು ಈ ವಿಧಾನಸಭೆಯ ಗೌರವಾನ್ವಿತ ಅಧ್ಯಕ್ಷರು ಮಾಡಿರುತ್ತಾರೆ. ಇವುಗಳನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ನನಗೆ ಅನ್ನಿಸುವುದಿಲ್ಲ. ಒಂದು ವೇಳೆ ನಿಯಮಗಳಲ್ಲಿ ಇದಕ್ಕೆ ಅವಕಾಶ ಸಿಕ್ಕರೆ, ಆಗ ಬಹುಶಃ ಸ್ಥಾಯಿ ಆದೇಶಗಳು ಆವಶ್ಯಕತೆಗೆ ಮೀರಿದವಾಗುತ್ತವೆ, ಅಥವಾ ಅಧ್ಯಕ್ಷರು ಸ್ಥಾಯಿ ಆದೇಶಗಳನ್ನು ಬದಲಿಸುತ್ತಾರೆ.

'ಭಾರತೀಯ ರಾಜ್ಯ' ಎಂಬುದಕ್ಕೆ ಬದಲಾಗಿ 'ರಾಜ್ಯ' ಎಂಬ ಪದವನ್ನು ಬಳಸುವುದಕ್ಕೆ ಸಂಬಂಧಿಸಿದಂತೆ, ಈ ನಿಯಮಗಳು ಹಾಗೂ ಸ್ಥಾಯಿ ಆದೇಶಗಳ ಎಲ್ಲ ಕಡೆಗಳಲ್ಲೂ ರಾಜ್ಯಗಳು ಎಂಬುದಕ್ಕೆ ಭಾರತೀಯ ರಾಜ್ಯಗಳು ಎಂಬ ಪದವನ್ನೇ ಬಳಸಲಾಗಿದೆ. ಆದರೆ ಈ ನಿರ್ದಿಷ್ಟ ನಿಯಮದಲ್ಲಿ ಮಾತ್ರ ಭಾರತೀಯ ರಾಜ್ಯ ಎಂಬ ಪದವನ್ನು ರಾಜ್ಯ ಎಂಬುದಾಗಿ ಬದಲಿಸಬೇಕು ಎಂಬುದರಲ್ಲಿ ನನಗೆ ಯಾವ ಕಾರಣವೂ ಕಂಡುಬರುತ್ತಿಲ್ಲ. ಆದ್ದರಿಂದ ತಿದ್ದುಪಡಿಗಳನ್ನು ಮಂಡಿಸಿದ ಗೌರವಾನ್ವಿತ ಮಂಡನೆಕಾರರಿಗೆ ಈ ತಿದ್ದುಪಡಿಗಳು ಅನಗತ್ಯವೆಂದು ತಿಳಿಯಬಯಸುತ್ತೇನೆ.

ನನ್ನ ಹೆಸರಿನಲ್ಲಿರುವ ಸೂಚನೆಯ ೧ನೇ ಕಂಡಿಕೆಗೆ ಮತ್ತೆ ಬರುವುದಾದರೆ, ನಾನು ಮಂಡಿಸಿದ ಸೂಚನೆಯನ್ನು ಈ ಸದನವು ಅಂಗೀಕರಿಸುವುದಾದರೆ ಸೂಚನೆಯಲ್ಲಿರುವ ಆ ಕಂಡಿಕೆಗೆ ನಿಯಮಗಳಲ್ಲಿ ಸ್ಥಾನವಿರುವುದಿಲ್ಲ ಎಂಬುದನ್ನು ನಿಮ್ಮ ಗಮನಕ್ಕೆ ತರಬಯಸುತ್ತೇನೆ. ನಿಯಮಗಳಲ್ಲಿ ೫-ಎ ಮತ್ತು ೫-ಬಿ ನಿಯಮಗಳು ಮಾತ್ರ ಇವೆ. ೧ನೇ ಕಂಡಿಕೆಯಲ್ಲಿರುವ ಪದಗಳನ್ನು ಉತ್ತಮಪಡಿಸುವ ಯಾವುದೇ ಪ್ರಯತ್ನದಿಂದ

ಪ್ರಯೋಜನವಿಲ್ಲ. ಯಾಕೆಂದರೆ, ಅದಕ್ಕೆ ನಿಯಮಗಳಲ್ಲಿ ಸ್ಥಾನ ಸಿಗುವುದಿಲ್ಲ. ನಿಜವಾಗಿಯೂ ಸದನದ ಮುಂದಿರುವ ಸೂಚನೆ ಏನೆಂದರೆ, ೫ನೇ ನಿಯಮದ ಅನಂತರ ೫-ಎ ಮತ್ತು ೫-ಬಿ ನಿಯಮಗಳಿಗೆ ಸಂಬಂಧಿಸಿದಂತೆ ಯಾವ ತಿದ್ದುಪಡಿಯನ್ನೂ ಕೇಳಲಾಗಿಲ್ಲ. ತಮ್ಮ ತಿದ್ದುಪಡಿಗಳಿಗೆ ಒತ್ತಾಯಮಾಡಬಾರದೆಂದು ನಾನು ಶ್ರೀ ನಜಿರುದ್ದೀನ್ ಅಹ್ಮದ್ ಅವರನ್ನು ಕೋರುತ್ತೇನೆ. ನಾನು ಅವುಗಳನ್ನು ಒಪ್ಪಿಕೊಳ್ಳುತ್ತಿಲ್ಲ.

**ಮಾನ್ಯ ಸಭಾಧ್ಯಕ್ಷರು** : ನಾನು ಈಗ ತಿದ್ದುಪಡಿಗಳನ್ನು ಮತಕ್ಕೆಡುತ್ತೇನೆ. ತಿದ್ದುಪಡಿಯ ಮೊದಲ ಭಾಗವನ್ನು ಮತಕ್ಕಿಡುವ ಆವಶ್ಯಕತೆಯಿದೆ ಎಂದು ನನಗೆ ಅನ್ನಿಸುವುದಿಲ್ಲ. ನಾವು ನೇರವಾಗಿ ಎರಡನೇ ಭಾಗಕ್ಕೆ ಹೋಗೋಣ. ಅದೇನೆಂದರೆ....

**ಶ್ರೀ ನಜಿರುದ್ದೀನ್ ಅಹ್ಮದ್** : ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳುವುದಕ್ಕಾಗಿ ನನಗೆ ಅನುಮತಿ ನೀಡಬೇಕೆಂದು ಕೋರುತ್ತೇನೆ.

ಸಭೆಯ ಅನುಮತಿಯೊಂದಿಗೆ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಹೀಗಿದ್ದರೆ ಶ್ರೀ ಸಂತಾನಮ್ ಅವರ ಒಂದೇ ಒಂದು ತಿದ್ದುಪಡಿ ಇದೆ. ಇದನ್ನು ಮಂಡನೆಕಾರರು ಒಪ್ಪಿಕೊಂಡಿದ್ದಾರೆ. ಶ್ರೀ ಸಂತಾನಮ್ ಅವರ ತಿದ್ದುಪಡಿಯನ್ನು ಮತಕ್ಕಿಡಲಾಗಿದೆ.

ಈ ತಿದ್ದುಪಡಿಯನ್ನು ಅಂಗೀಕರಿಸಲಾಗಿದೆ.

**ಮಾನ್ಯ ಸಭಾಧ್ಯಕ್ಷರು** : ತಿದ್ದುಪಡಿಯಾದಂತೆ ಪ್ರಸ್ತಾವವನ್ನು ಮತಕ್ಕಿಡಲಾಗಿದೆ.

ತಿದ್ದುಪಡಿಯಾದಂತೆ ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

## ೩೮–ಎ ಯಿಂದ ೩೮–ವಿ ವರೆಗೆ ಹೊಸ ನಿಯಮಗಳ ಸೇರ್ಪಡೆ

**ಶ್ರೀಮತಿ ಜಿ. ದುರ್ಗಾಬಾಯಿ** (ಮದ್ರಾಸ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ನನ್ನ ಹೆಸರಿನಲ್ಲಿರುವ ಪ್ರಸ್ತಾವವನ್ನು ಮಂಡಿಸಲು ತಮ್ಮ ಅಪ್ಪಣೆಯನ್ನು ಕೋರುತ್ತೇನೆ, ಅದೇನೆಂದರೆ:

"ಸಂವಿಧಾನ ರಚನೆಯ ನಿಯಮಗಳಿಗೆ ಕೆಳಕಂಡ ತಿದ್ದುಪಡಿಗಳನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕು.

೩೮ನೇ ನಿಯಮದ ಅನಂತರ, ಕೆಳಗಿನದನ್ನು ಸೇರಿಸಿ:

ಈ ಅಧ್ಯಾಯದಲ್ಲಿ ಪ್ರಸ್ತಾವಿಸಲಾದ ನಿಯಮಗಳು ಎಂದರೆ ಅಧ್ಯಾಯ ೬–ಎ ಅಲ್ಲಿ ಭಾರತದ ಸಂವಿಧಾನವನ್ನು ರೂಪಿಸುವುದಕ್ಕೆ ಬೇಕಾದ ಶಾಸನಕ್ಕಾಗಿ ವಿಧಾನವನ್ನು ನಿರೂಪಿಸುತ್ತೇವೆ. ಇವು ಸುಮಾರು ೨೨ ಪ್ರಕರಣಗಳಲ್ಲಿ, ೩೮–ಎ ಯಿಂದ ೩೮–ಬಿ ವರೆಗೆ ಹರಡಿವೆ ಮತ್ತು ೨ ಪ್ರವರ್ಗಗಳಲ್ಲಿ ಇವುಗಳನ್ನು ವಿಂಗಡಿಸಲಾಗಿದೆ."

ಪ್ರಸ್ತಾವಿತವಾದ ಈ ನಿಯಮಗಳ ನಿರ್ಣಯಕ್ಕೆ ಹೋಗುವ ಮೊದಲು, ಈ ನಿಯಮಗಳ ವ್ಯಾಪ್ತಿ ಹಾಗೂ ಉದ್ದೇಶವನ್ನು ವಿವರಿಸುಸುವುದು ಅಗತ್ಯವೆಂದು ನನಗೆ ಅನ್ನಿಸುತ್ತದೆ. ಅಳವಡಿಸಿಕೊಳ್ಳಲಾಗಿರುವ ಭಾರತದ ಸ್ವಾತಂತ್ರ್ಯ ಅಧಿನಿಯಮ ಹಾಗೂ ಭಾರತ ಸರ್ಕಾರದ ಅಧಿನಿಯಮ ೧೯೩೫ರಲ್ಲಿ ಒಳಗೊಂಡಿರುವ ಈಗಿನ ಸಂವಿಧಾನ ಹಾಗೂ ಅದರ ಕೆಳಗೆ ರೂಪಿಸಲಾದ ಯಾವುದೇ ಆದೇಶ, ನಿಯಮ, ನಿಬಂಧನೆ ಅಥವಾ ಇತರ ಯಾವುದೇ ಲಿಖಿತ ***(Instrument)*** ಗಳಿಗೆ ಪ್ರಸ್ತಾವಿಸಲಾಗುವ ತಿದ್ದುಪಡಿಗಳ ವಿಧೇಯಕಗಳನ್ನು ಪರಿಶೀಲಿಸುವುದಕ್ಕೆ ಹಾಗೂ ಅನುಮೋದಿಸುವುದಕ್ಕೆ ಸೂಕ್ತವಾದ ಕಾರ್ಯವಿಧಾನವನ್ನು ನಿರೂಪಿಸುವ ಪ್ರಯತ್ನವನ್ನು ೩೮–ಎ ಇಂದ ೩೮–ಕೆ ಪ್ರಕರಣಗಳು ಮಾಡುತ್ತವೆ. ೩೮–ಎಲ್ ಇಂದ ೩೮–ವಿ ವರೆಗಿನ ಪ್ರಕರಣಗಳು ಭಾರತದ ಹೊಸ ಸಂವಿಧಾನವನ್ನು ಜಾರಿಗೊಳಿಸುವುದಕ್ಕೆ, ಪರಿಶೀಲಿಸುವುದಕ್ಕೆ ಹಾಗೂ ಅಂತಿಮವಾಗಿ ಅನುಮೋದಿಸುವುದಕ್ಕೆ ಬೇಕಾದ ಕಾರ್ಯವಿಧಾನವನ್ನು ನಿರೂಪಿಸುತ್ತವೆ. ಡೊಮಿನಿಯನ್ನಿನ ಸಂವಿಧಾನಕ್ಕೆ ಅವಕಾಶ ಕೊಡುವ ಶಾಸನವನ್ನು ರೂಪಿಸುವ ಅಧಿಕಾರವು ನಮ್ಮೆಲ್ಲರಿಗೂ ತಿಳಿದಿರುವಂತೆ ಈ ಸಾರ್ವಭೌಮ ನಿಕಾಯದಲ್ಲಿ ಅಂದರೆ, ಭಾರತದ ಸಂವಿಧಾನ ರಚನಾಸಭೆಯಲ್ಲಿ ನಿಹಿತವಾಗಿರುತ್ತದೆ.

ಶಾಸನಸಭೆಯಾಗಿ ಉಪಸ್ಥಿತವಿದ್ದ ಸಂವಿಧಾನ ರಚನಾಸಭೆಯು ಇದನ್ನು ಮಾಡುವಂತಿಲ್ಲ. ಭಾರತದ ಸ್ವಾತಂತ್ರ್ಯ ಅಧಿನಿಯಮದ ಪ್ರಕರಣ ೮(೧)ರ ಬಲದಿಂದ ಈ ಸಾರ್ವಭೌಮ ನಿಕಾಯವು ಮಾತ್ರವೇ ಸಂವಿಧಾನದ ತಿದ್ದುಪಡಿಗೆ ಹಾಗೂ ಅಂತಿಮವಾಗಿ ಅದನ್ನು ಅನುಮೋದಿಸುವುದಕ್ಕೆ ಅವಕಾಶ ಒದಗಿಸುವ ಶಾಸನವನ್ನು ಮಾಡಲು ಸಕ್ಷಮವಾಗಿರುತ್ತದೆ.

ಮಾನ್ಯರೆ, ೩೮–ಎ ಇಂದ ೩೮–ಕೆ ವರೆಗಿನ ಪ್ರಕರಣಗಳಲ್ಲಿ ನಿರೂಪಿಸಲಾಗಿರುವ ಕಾರ್ಯವಿಧಾನವು, ಅಂತಿಮವಾಗಿ ಹೊಸ ಸಂವಿಧಾನವು ಉಗಮಿಸುವವರೆಗೆ ಕಾಯದೆ, ಮಧ್ಯಕಾಲೀನ ಅವಧಿಯಲ್ಲಿಯೇ ಅವಕಾಶ ಕೊಡುತ್ತದೆ. ಹೊಸ ಸಂವಿಧಾನವನ್ನು ತಿದ್ದುಪಡಿ ಮಾಡಲು ನಾವು ಕೆಲವೊಂದು ಪ್ರಗತಿಪರವಾದ ಅವಕಾಶಗಳನ್ನು ಮಾಡುವುದು ಅಗತ್ಯವಾಗಿದೆ ಎಂಬುದನ್ನು ನಾವೆಲ್ಲರೂ ಗಮನಿಸಿದ್ದೇವೆ. ಯಾಕೆಂದರೆ, ಉದಾಹರಣೆಗೆ: ಇತ್ತೀಚೆಗೆ ನಡೆದಿರುವ ವಲಸೆಯಂತಹ ಕೆಲವು ಆಕಸ್ಮಿಕಗಳು ಉದ್ಭವಿಸುತ್ತವೆ ಮತ್ತೆ ಉದ್ಭವಿಸುವ ಸಾಧ್ಯತೆ ಇರುತ್ತದೆ ಎಂಬ ಬಗ್ಗೆ ಸದಸ್ಯರಿಗೆ ಅರಿವಿದೆ. ಆದ್ದರಿಂದ, ಸಂವಿಧಾನಕ್ಕೆ ಯಾವುದೇ ಪ್ರಾಸ್ತಾವಿತ ಬದಲಾವಣೆಗಳನ್ನು ಮಾಡುವುದು ನಮಗೆ ಸಾಧ್ಯವಾಗುವಂತೆ ಭಾರತದ ಸಂವಿಧಾನವನ್ನು ತಿದ್ದುಪಡಿ ಮಾಡುವುದು ಅತ್ಯಂತ ಆವಶ್ಯಕವಾಗಬಹುದು. ಆದ್ದರಿಂದ ಅಂತಿಮ ಸಂವಿಧಾನಕ್ಕೆ ಕಾಯದೆ ಸಂವಿಧಾನವನ್ನು ತಿದ್ದುಪಡಿ ಮಾಡುವುದಕ್ಕಾಗಿ ಯಾವುದಾದರೊಂದು ಕಾರ್ಯವಿಧಾನವನ್ನು ನಿರೂಪಿಸುವುದನ್ನು ಅಳವಡಿಸಿಕೊಳ್ಳುವುದು ಅತ್ಯಾವಶ್ಯಕವಾಗಿದೆ. ನಿರೂಪಿಸುವ ಕಾರ್ಯವಿಧಾನವನ್ನು ಕುರಿತು ನಾನು ಹೆಚ್ಚಾಗಿ ಹೇಳುವ ಅಗತ್ಯವಿಲ್ಲ. ಯಾಕೆಂದರೆ ಅದು ನಮ್ಮೆಲ್ಲರಿಗೂ ಪರಿಚಿತವಾಗಿರುವ ಹಾಗೂ ಸಾಮಾನ್ಯ ಶಾಸನದ ವಿಷಯದಲ್ಲಿ ನಾವು ಅನುಸರಿಸುವ ವಿಧಾನದಂತೆಯೇ ಇರುತ್ತದೆ.

ಈಗ, ನಾನು ಎರಡನೇ ಗುಂಪಿನ ನಿಯಮಗಳತ್ತ ಬರುತ್ತೇನೆ, ಅಂದರೆ ೩೮–ಎಲ್ ರಿಂದ ೩೮–ವಿ ವರೆಗಿನ ನಿಯಮಗಳು. ಇವು ಭಾರತದ ಹೊಸ ಸಂವಿಧಾನವನ್ನು ಜಾರಿಗೊಳಿಸುವ, ಪರಿಶೀಲಿಸುವ ಹಾಗೂ ಅಂತಿಮವಾಗಿ ಅನುಮೋದಿಸುವ ಕಾರ್ಯವಿಧಾನವನ್ನು ನಿರೂಪಿಸುವ ಪ್ರಸ್ತಾಪಮಾಡುತ್ತವೆ. ಈಗಾಗಲೇ ನಾನು ಹೇಳಿದಂತೆ, ಈ ಅವಕಾಶವನ್ನು ಕಲ್ಪಿಸುವ ಅಧಿಕಾರವು ಸಂಪೂರ್ಣವಾಗಿ ಈ ಸಾರ್ವಭೌಮ ನಿಕಾಯದಲ್ಲಿಯೇ ನಿಹಿತವಾಗಿರುತ್ತದೆ ಮತ್ತು ಈ ವಿಧಾನದ ಮೂಲಕ ಭಾರತದ ಸಂವಿಧಾನ ರಚನಾಸಭೆಯು ಹೊಸ ಸಂವಿಧಾನದ ಅಂತಿಮ ಅಂಗೀಕಾರಕ್ಕೆ ತನ್ನ ಅನುಮೋದನೆಯ ಮುದ್ರೆಯನ್ನು ಹಾಕುತ್ತದೆ. ಹೊಸ ಸಂವಿಧಾನವನ್ನು ಪರಿಚಯಿಸುವುದಕ್ಕೆ ***(Introduction)*** ಅನುಮತಿಯ ಮಂಡನೆಯನ್ನು ೩೮–ಎಲ್ ನಿಯಮಕ್ಕೆ ಬಿಟ್ಟಿದೆ ಎಂಬ ಸಂಗತಿಯನ್ನು ಈಗಾಗಲೇ ಸದಸ್ಯರು, ಗಮನಿಸಿದ್ದಾರೆ. ಕಾರ್ಯವಿಧಾನದ ಸಂಪೂರ್ಣ ಉದ್ದೇಶವೇನೆಂದರೆ, ವಿಷಯವನ್ನು ಸರಳಗೊಳಿಸುವುದು ಮತ್ತು ಸಂವಿಧಾನವನ್ನು ತ್ವರಿತವಾಗಿ ಅನುಮೋದಿಸುವುದು. ಆದ್ದರಿಂದ ನನಗೆ ಇದನ್ನು ಸಂಕ್ಷಿಪ್ತವಾಗಿ ನಿರೂಪಿಸಬೇಕೆಂಬ ಇಚ್ಛೆಯಿದ್ದರೂ ಹೊಸ ಸಂವಿಧಾನವನ್ನು ಪರಿಶೀಲಿಸುವ ಹಾಗೂ ಅನುಮೋದಿಸುವ ವಿಧಾನವನ್ನು ನಿರೂಪಿಸುವಂತಹ ಈ ಅವಕಾಶಗಳ ವಿಶೇಷ ಅಂಶಗಳನ್ನು ಉಲ್ಲೇಖಿಸುತ್ತಿದ್ದೇನೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಅಳವಡಿಸಿಕೊಳ್ಳಲಾಗಿರುವ ಕಾರ್ಯವಿಧಾನವು ಹೀಗಿದೆ: ಆದಾಗ್ಯೂ, ಈಗಿರುವ ಸಂವಿಧಾನವನ್ನು ತಿದ್ದುಪಡಿ ಮಾಡುವ ವಿಧೇಯಕಗಳ ಪರಿಶೀಲನೆಗಾಗಿ ನಾವು ನಿರೂಪಿಸಿದ ಕಾರ್ಯವಿಧಾನದಿಂದ ಇದು ಅತ್ಯಾವಶ್ಯಕ ಅಂಶಗಳಲ್ಲಿ ಭಿನ್ನವಾಗಿದೆ. ಅತ್ಯಾವಶ್ಯಕವಾದ ಮೂರು ಅಂಶಗಳಲ್ಲಿ ಅದು ಭಿನ್ನವಾಗಿದೆ. ಇದರಲ್ಲಿ ಒಂದು ಯಾವುದೆಂದರೆ, ಹೊಸ ಸಂವಿಧಾನದ ಜಾರಿಗೆ ಸೂಚನೆಯನ್ನು ಅನುಮತಿಸಬೇಕೆಂಬ ಅಂಶವನ್ನು ಇದು ಕೈಬಿಡುತ್ತದೆ. ಯಾರೇ ಸದಸ್ಯರೂ ಸಂವಿಧಾನವನ್ನು ಮಂಡಿಸುವ ತಮ್ಮ ಇಚ್ಛೆಯನ್ನು ತಿಳಿಸುವ ಸೂಚನೆಯನ್ನು ಐದು ದಿನಗಳ ಮೊದಲೇ ಕೊಟ್ಟು, ಸಂವಿಧಾನವನ್ನು ಮಂಡಿಸಬಹುದು. ಇದರಿಂದ ವಿಳಂಬವು ತಪ್ಪುತ್ತದೆ. ಇನ್ನೂ ಒಂದು ಅತ್ಯಾವಶ್ಯ ಅಂಶದಲ್ಲಿ ಇದು ಭಿನ್ನವಾಗಿದೆ.

ಸಂವಿಧಾನವನ್ನು ಮಂಡಿಸುವ, ಅದನ್ನು ಪರಿಶೀಲಿಸುವ ಹಾಗೂ ಅಂತಿಮವಾಗಿ ಅನುಮೋದಿಸುವ ಹಂತಗಳ ನಡುವೆ ಯಾವುದೇ ಮಧ್ಯವರ್ತಿ ಹಂತಗಳಿರಬಾರದು ಎಂದು ೩೮–ಆರ್ ನಿಯಮವು ನಿರೂಪಿಸುತ್ತದೆ. ಪರಿಶೀಲನಾ ಸಮಿತಿ ಹಂತವು ಇರುವುದಿಲ್ಲ ಆದರೂ, ಸಭಾಧ್ಯಕ್ಷರು ಅಪೇಕ್ಷಿಸಿದರೆ ಅದನ್ನು ಪ್ರಾರೂಪಣ ಸಮಿತಿಗೆ, ಉಲ್ಲೇಖಿಸುವ ಅವಕಾಶವನ್ನು ೩೮–ಆರ್ ಮಾಡಿಕೊಡುತ್ತದೆ. ತಿದ್ದುಪಡಿಯಾದಂತಹ ಸಂವಿಧಾನವನ್ನು ಅಧ್ಯಕ್ಷರು ಯಾವುದೇ ಶಾಬ್ದಿಕ ಅಥವಾ ತತ್ಪರಿಣಾಮವಾದ ಅಥವಾ ವಿಧ್ಯುಕ್ತ ತಿದ್ದುಪಡಿಗಳನ್ನು ಮಾಡುವುದಕ್ಕಾಗಿ ಅಥವಾ ಕೆಲವು ಅಂಚಿನಲ್ಲಿನ ***(Marginal)*** ಟಿಪ್ಪಣಿಗಳನ್ನು ಸೇರಿಸುವುದಕ್ಕಾಗಿ ಪ್ರಾರೂಪಣ ಸಮಿತಿಗೆ ಕಳಿಸಿಕೊಡಬಹುದು. ಇಲ್ಲಿಯೂ ಸಹ ವಿಳಂಬವು ತಪ್ಪುತ್ತದೆ, ಯಾಕೆಂದರೆ ಇದು ಕೇವಲ ಔಪಚಾರಿಕ ಸಂಗತಿ. ಅಂದರೆ, ಪ್ರಾರೂಪಣ ಸಮಿತಿಗೆ ಇದನ್ನು ಉಲ್ಲೇಖಿಸುವುದು. ಈ ಸಮಿತಿಯು ಪ್ರತಿ ದಿನವೂ ಸೇರುತ್ತದೆ ಮತ್ತು ಜೊತೆಜೊತೆಗೇ ಮರು ಅಂಕಿ ನೀಡುವ ಅಥವಾ ಯಾವುದಾದರೂ ತತ್ಪರಿಣಾಮವಾದ ಅಥವಾ ವಿಧ್ಯುಕ್ತವಾದ ತಿದ್ದುಪಡಿಗಳನ್ನು ಮಾಡುವ ಕೆಲಸವನ್ನು ಮಾಡುತ್ತದೆ. ಸಂವಿಧಾನವನ್ನು ಪೂರ್ಣಗೊಳಿಸುವ ಹಾಗೂ ಸಂವಿಧಾನವನ್ನು ತಯಾರಿಸುವ ಅಂತಿಮ ಕೆಲಸದ ವಿಧಾನವನ್ನು ೩೮–ಯು ಅಲ್ಲಿ ನಿರೂಪಿಸಲಾಗಿದೆ. ಅದರ ವಾಚನ ಹೀಗಿದೆ:

> "ಅಸೆಂಬ್ಲಿಯು ಸಂವಿಧಾನವನ್ನು ಅಂಗೀಕರಿಸಿದ ಅನಂತರ, ಅದನ್ನು ಅಧ್ಯಕ್ಷರಿಗೆ ಸಲ್ಲಿಸಬೇಕು, ಅವರು ಅದಕ್ಕೆ ತಮ್ಮ ಸಹಿ ಹಾಕುವ ಮೂಲಕ ಅದನ್ನು ಅಧಿ ಪ್ರಮಾಣಿಸುತ್ತಾರೆ ***(Authenticate)***."

ಇದು ಒಂದು ಸಾರ್ವಭೌಮ ನಿಕಾಯವಾಗಿ ಸಭೆ ಸೇರುತ್ತದೆ ಮತ್ತು ಸಂವಿಧಾನವನ್ನು ಅಂತಿಮಗೊಳಿಸಲು ಹಾಗೂ ಅಂಗೀಕರಿಸಲು ಅದಕ್ಕೆ ಯಾವುದೇ ಹೊರಗಿನ ನಿಕಾಯದ ಅನುಮೋದನೆಯ ಅಗತ್ಯವಿಲ್ಲ. ಅಧ್ಯಕ್ಷರು ತಮ್ಮ ಸಹಿ ಹಾಕುವ ಮೂಲಕ ಅದನ್ನು ಅಧಿ ಪ್ರಮಾಣಿಸುತ್ತಾರೆ ಎಂಬುದನ್ನು ನಾವು ಇಲ್ಲಿ ಗಮನಿಸುತ್ತೇವೆ.

ಇನ್ನೊಂದು ಖಂಡವಿದೆ, ಅದನ್ನು ನಾನು ಉಲ್ಲೇಖಿಸಲು ಬಯಸುತ್ತೇನೆ. ಇದನ್ನು ೩೮–ವಿ ಯಲ್ಲಿ ಕೊಡಲಾಗಿದೆ. ಅಲ್ಲಿನ ವಿಧಾನವು ಸ್ವಲ್ಪ ಭಿನ್ನವಾಗಿರುತ್ತದೆ ಅಂದರೆ, ಸಭೆಯಿಂದ ಅನುಮೋದಿಸಲ್ಪಟ್ಟ ವಿಧೇಯಕದ ಸಂದರ್ಭದಲ್ಲಿ ಅದು ಅಂತಿಮ ಅಧಿನಿಯಮವಾಗುವುದಕ್ಕೆ ಮೊದಲು ಅದು ಸಮ್ಮತಿಗಾಗಿ ಗವರ್ನರ್ ಜನರಲ್ ಅವರಿಗೆ ಹೋಗಬೇಕು. ಇಲ್ಲಿ ನಾವು ಈಗಿರುವ ಸಂವಿಧಾನವನ್ನು ತಿದ್ದುಪಡಿ ಮಾಡುವ ವಿಧೇಯಕಗಳು ಹಾಗೂ ಗವರ್ನರ್ ಜನರಲ್ ಅವರೂ ಸಹ ಸಮ್ಮತಿ ನೀಡಬೇಕಾಗಿರುವ ಅಂತಿಮ ಹೊಸ ಸಂವಿಧಾನದ ವಿಧೇಯಕದ ನಡುವೆ ಗಮನಾರ್ಹವಾದ ವ್ಯತ್ಯಾಸವನ್ನು ಕಾಣುತ್ತೇವೆ.

ಮಾನ್ಯರೆ, ನಾನು ನನ್ನ ಸೂಚನೆಯನ್ನು ಸದನದ ಅಂಗೀಕಾರಕ್ಕಾಗಿ ಒಪ್ಪಿಸುವ ಮೊದಲು ನಾನು ವಿವರಿಸಲು ಬಯಸಿದ್ದು ಇದನ್ನೇ. ನನ್ನ ಮುಂದೆ ಕೆಲವು ತಿದ್ದುಪಡಿಗಳು ಇವೆ. ಶ್ರೀ ನಜಿರುದ್ದೀನ್ ಅಹ್ಮದ್ ರವರಿಂದ ಕೊಡಲಾದ ತಿದ್ದುಪಡಿಗಳ ನೋಟೀಸಿನಲ್ಲಿ ಕೇವಲ ಔಪಚಾರಿಕವಾದ ಅಥವಾ ಶಾಬ್ದಿಕವಾದ ಬದಲಾವಣೆಗಳನ್ನು ಮಾತ್ರ ಕೇಳಲಾಗಿದೆ. ಆದ್ದರಿಂದ ಆ ತಿದ್ದುಪಡಿಗಳ ಬಗ್ಗೆ ನಾನು ಹೆಚ್ಚೇನೂ ಹೇಳಬೇಕಾದುದಿಲ್ಲವೆಂದು ಭಾವಿಸುತ್ತೇನೆ; ಆದರೆ ಶ್ರೀ ಸಂತಾನಂ ಅವರಿಂದ ಕೊಡಲಾದ ತಿದ್ದುಪಡಿಗಳ ಸೂಚನೆ ಇದೆ. ಈ ತಿದ್ದುಪಡಿಯನ್ನು ಪ್ರಸ್ತಾವಿಸಿದ ಅವರ ಉದ್ದೇಶವೇನೆಂದರೆ, ಇಡೀ ವಿಷಯವನ್ನು ಸರಳಗೊಳಿಸುವುದು ಹಾಗೂ ಯಾವುದೇ ವಿಳಂಬವಿಲ್ಲದೆ ಅಥವಾ ಸರಳ ಪ್ರಕ್ರಿಯೆಯ ಮೂಲಕ ಸಂವಿಧಾನವನ್ನು ಅನುಮೋದಿಸುವುದು. ನಾನು ಅವರ ಉದ್ದೇಶವನ್ನು ಪ್ರಶಂಸಿಸುತ್ತೇನೆ. ಆದರೆ, ವಿಧಾನ ಸಭೆಯ ವ್ಯವಹಾರವನ್ನು ಸಂವಿಧಾನ ರಚನಾಸಭೆಯ ಮುಂದೆ ಅಥವಾ ಅದರ ಸಮಿತಿಯ ಮುಂದೆ ಒಂದು ಸೂಚನೆಯ ಮೂಲಕ ತರಬೇಕು ಎಂದು ನಿರೂಪಿಸುವ ಸಂವಿಧಾನ ರಚನಾಸಭೆಯ ನಿಯಮಗಳ ೨೮ನೇ ನಿಯಮವನ್ನು ಉಲ್ಲೇಖಿಸುತ್ತಾ ಆ ವಿಧಾನವನ್ನು ಅಳವಡಿಸಿಕೊಳ್ಳಬೇಕು ಎಂದು ಅವರು ಬಯಸುತ್ತಾರೆ. ತಿದ್ದುಪಡಿಯನ್ನು ಮಂಡಿಸಿದವರು ಸದನದ ವ್ಯವಹಾರವೇನು ಮತ್ತು ಅವರು ಪ್ರಸ್ತಾವಿಸುತ್ತಿರುವ ಸೂಚನೆಗೂ ನಮ್ಮ ಮುಂದಿರುವ

ಕೆಲಸಕ್ಕೂ ನಡುವಿನ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳಬೇಕು. ಸಂವಿಧಾನವನ್ನು ತಿದ್ದುಪಡಿ ಮಾಡುವುದಕ್ಕಾಗಿ ಅವಕಾಶ ಕಲ್ಪಿಸುವುದು ಇಲ್ಲಿ ನಾವು ಮಾಡುತ್ತಿರುವ ಕೆಲಸ. ಇದು ಬೇರೆಯೇ ರೀತಿಯದು. ಸಾಮಾನ್ಯ ವಿಧೇಯಕಗಳಿಗೂ ಸಹ ನಾವು ಬಹಳ ವಿಸ್ತೃತವಾದ ವಿಧಾನವನ್ನು ಅಳವಡಿಸಿಕೊಂಡಿದ್ದೇವೆ. ಒಂದು ವಿಧೇಯಕವು ಅಂತಿಮವಾಗಿ ಕಾನೂನಾಗಿ ರೂಪುಗೊಳ್ಳುವ ಮೊದಲು ಅನೇಕ ಹಂತಗಳನ್ನು ಹಾದು ಬರಬೇಕಾಗುತ್ತದೆ. ಸಾಮಾನ್ಯ ಕಾನೂನಿನ ವಿಷಯದಲ್ಲೇ ಹೀಗಿರಬೇಕಾದರೆ, ನಮ್ಮ ಮುಂದಿರುವ ಬಹು ಮುಖ್ಯವಾದ ಶಾಸನದ ವಿಷಯದಲ್ಲಿ ಅಂದರೆ, ಈಗಿರುವ ಸಂವಿಧಾನವನ್ನು ತಿದ್ದುಪಡಿ ಮಾಡುವುದು ಹಾಗೂ ಹೊಸ ಸಂವಿದಾನವನ್ನು ಅಂಗೀಕರಿಸುವುದು ಹೆಚ್ಚು ವಿಸ್ತೃತವಾಗಿರಬೇಕಾಗುತ್ತದೆ. ಬಹಳ ಮುಖ್ಯವಾಗಿರುವಂತಹ ಈ ಎರಡು ವಿಷಯಗಳನ್ನು ತೀರ್ಮಾನ ಮಾಡುವ ಮೊದಲು ನಾವು ಸಾಕಷ್ಟು ಪ್ರಕಟಣೆ ನೀಡಬೇಕಾಗುತ್ತದೆ. ಆದ್ದರಿಂದ ಈ ಸನ್ನಿವೇಶದಲ್ಲಿ ಬಹಳ ವಿಸ್ತೃತವಾದ ಕಾರ್ಯವಿಧಾನವನ್ನು ನಿರೂಪಿಸಬೇಕು ಮತ್ತು ನಿಯಮಗಳಲ್ಲಿ ಅಳವಡಿಸಿಕೊಳ್ಳಬೇಕು ಎಂದು ನನಗೆ ಅನ್ನಿಸುತ್ತದೆ. ಈಗಿರುವಂಥ ನಿಯಮಗಳು ಹಾಗೂ ಸ್ಥಾಯಿ ಆದೇಶಗಳಲ್ಲಿ ಅಂತಹ ಕಾರ್ಯವಿಧಾನಕ್ಕೆ ಅವಕಾಶವಿರಲಿಲ್ಲ. ಈಗಿರುವ ಸಂವಿಧಾನವನ್ನು ತಿದ್ದುಪಡಿ ಮಾಡುವುದಕ್ಕಾಗಿ ನಾವು ನಿರೂಪಿಸಬೇಕಾದ ಕಾರ್ಯವಿಧಾನ ಇಲ್ಲಿದೆ ಎಂದು ಹೇಳಲು ಸಾಧ್ಯವಾಗಿರುವುದಕ್ಕೆ ನನಗೆ ಸಂತೋಷವಾಗುತ್ತಿದೆ. ಈ ಹಂತದಲ್ಲಿ ಅದನ್ನು ಮಾಡುವುದು ಹಾಗೂ ಭಾರತದ ಹೊಸ ಸಂವಿಧಾನವನ್ನು ಅನುಮೋದಿಸುವುದು ಅವಶ್ಯವೆಂದು ನಮಗೆ ಅನ್ನಿಸುತ್ತಿದೆ. ಈ ಹೊಸ ಸಂವಿಧಾನವು ಅಂತಿಮವಾಗಿ ಉದ್ಭವಿಸುತ್ತಿರುವುದರ ಕಡೆಗೆ ಇಡೀ ಜಗತ್ತೇ ತನ್ನ ಗಮನವನ್ನು ಕೇಂದ್ರೀಕರಿಸಿರುವಂತಹ ಸಮಯ ಈಗ ಬಂದಿದೆ. ಆದ್ದರಿಂದ ಪರಿಶೀಲನೆ ಹಾಗೂ ಅನುಮೋದನೆಗಾಗಿ ಕರಡು ಬಂದಂತಹ ಸಮಯದಲ್ಲಿ ನಮಗೆ ಸ್ವೀಕೃತಗೊಳ್ಳಲು ಸಿದ್ಧವಾಗಿರುವಂತಹ ವಿಧಾನವು ಈಗ ಇಲ್ಲಿದೆ. ಈ ಪರಿವೀಕ್ಷಣೆಗಳೊಂದಿಗೆ ನಾನು ನನ್ನ ಸೂಚನೆಯನ್ನು ಸದನದ ಅಂಗೀಕಾರಕ್ಕಾಗಿ ಮಂಡಿಸುತ್ತಿದ್ದೇನೆ.

**ಶ್ರೀ ಘೂಲನ್ ಪ್ರಸಾದ್ ವರ್ಮ** (ಬಿಹಾರ್ : ಸಾಮಾನ್ಯ) : ಕ್ರಿಯಾಲೋಪ ಕುರಿತಂತೆ ೩೮–ವಿ ಕಂಡಿಕೆಯು ಹೀಗೆ ಹೇಳುತ್ತದೆ:

"೩೮–ಎ ನಿಯಮದಲ್ಲಿ ಉಲ್ಲೇಖಿಸಲಾಗಿರುವ ವಿಧೇಯಕವು ವಿಧಾನಸಭೆಯಿಂದ ಅಂಗೀಕಾರವಾದ ಮೇಲೆ, ಸಭಾಧ್ಯಕ್ಷರು ಸಹಿಮಾಡಿ ಅದರ ಒಂದು ಪ್ರತಿಯನ್ನು ಗವರ್ನರ್ ಜನರಲ್ ಅವರಿಗೆ ಅವರ ಸಮ್ಮತಿಗಾಗಿ ಸಲ್ಲಿಸತಕ್ಕದ್ದು. ಗವರ್ನರ್ ಜನರಲ್ ಅವರಿಂದ ವಿಧೇಯಕಕ್ಕೆ ಸಮ್ಮತಿ ದೊರೆತ ಅನಂತರ ಅದು ಅಧಿನಿಯಮವಾಗುತ್ತದೆ. ಮತ್ತು ಅದನ್ನು ಭಾರತದ ಗೆಜೆಟ್‌ನಲ್ಲಿ (ರಾಜಪತ್ರ) ಪ್ರಕಟಿಸತಕ್ಕದ್ದು."

ಸಂವಿಧಾನ ರಚನಾಸಭೆಯಿಂದ ಅಂಗೀಕಾರವಾಗಿದ್ದ ವಿಧೇಯಕವು ಗವರ್ನರ್ ಜನರಲ್ ಅವರ ಸಮ್ಮತಿ ಪಡೆಯಬೇಕಾದ ವಿಷಯವಾಗಿರುವುದಿಲ್ಲ ಮತ್ತು ಸಂವಿಧಾನ ರಚನಾಸಭೆಗೆ ಸಂಬಂಧಿಸಿದಂತೆ ಗವರ್ನರ್ ಜನರಲ್ ಅವರಿಗೆ ಪ್ರವೇಶವಿರುವುದಿಲ್ಲ ಎಂದು ನಿವೇದಿಸಿಕೊಳ್ಳುತ್ತೇನೆ. ಹೀಗೆ ಮಾಡಿದರೆ ಈ ಸದನದ ಸಾರ್ವಭೌಮತೆಗೆ ಧಕ್ಕೆಯಾಗುತ್ತದೆ.

**ಮಾನ್ಯ ಸಭಾಧ್ಯಕ್ಷರು** : ಇದು ವಾಸ್ತವವಾಗಿ ಪ್ರಸ್ತಾವದ ಗುಣಾವಗುಣಗಳಿಗೆ ಸಂಬಂಧಿಸಿದ ಪ್ರಶ್ನೆ. ಇದು ಕ್ರಮಕ್ಕೆ ಸಂಬಂಧಿಸಿದ ಪ್ರಶ್ನೆಯೆ? ಗೌರವಾನ್ವಿತ ಸದಸ್ಯರು ಗುಣಾವಗುಣಗಳ ಪ್ರಶ್ನೆ ಎತ್ತಲು ಬಯಸಿದ್ದರೆ ಹಾಗೆ ಮಾಡುವ ಹಕ್ಕು ಅವರಿಗಿದೆ. ಅದು ಕ್ರಿಯಾಲೋಪದ ವಿಷಯವಾಗುವುದಿಲ್ಲ. ಪ್ರಸ್ತಾವವನ್ನು ಮಂಡಿಸಲಾಗಿದೆ. ಶ್ರೀ ಸಂತಾನಮ್ ಅವರ ತಿದ್ದುಪಡಿಯು ಇಡೀ ಪ್ರಸ್ತಾವಕ್ಕೆ ಬದಲಾಗಿ ಇನ್ನೊಂದು ಪ್ರಸ್ತಾವವನ್ನು ತರುವುದಕ್ಕೆ ಸಂಬಂಧಿಸಿದೆ. ಆದ್ದರಿಂದ ಅದನ್ನು ಮಂಡಿಸುವಂತೆ ಅವರಿಗೆ ಕೇಳುತ್ತೇನೆ.

**ಶ್ರೀ ಕೆ. ಸಂತಾನಮ್** : ನನಗೆ ಅದನ್ನು ಮಂಡಿಸುವ ಉದ್ದೇಶವಿಲ್ಲ. ಆದರೆ ಈ ಪ್ರಸ್ತಾವದ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕಷ್ಟೇ ಇಚ್ಛಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಹಾಗಿದ್ದರೆ, ನಾವು ಇತರ ತಿದ್ದುಪಡಿಗಳನ್ನು ಕೈಗೆತ್ತಿಕೊಳ್ಳೋಣ. ಇತರ ತಿದ್ದುಪಡಿಗಳು ಪ್ರತಿಯೊಂದು ಖಂಡಕ್ಕೆ ಹಾಗೂ ಖಂಡಗಳಲ್ಲಿರಬೇಕಾದ ಪದಗಳಿಗೆ ಸಂಬಂಧಿಸಿವೆ. ಆದರೆ ಮೊದಲು ಈ ನಿಯಮಗಳು ಆವಶ್ಯವೇ ಎಂಬ ಬಗ್ಗೆ ನಾವು ಪ್ರಸ್ತಾವವನ್ನು ಇಡಿಯಾಗಿ ಕೈಗೆತ್ತಿಕೊಳ್ಳಬೇಕು. ಇದರ ಬಗ್ಗೆ ಮಾತಾಡಲು ಯಾರಾದರೂ ಇಚ್ಛಿಸಿದರೆ ಮಾತಾಡಬಹುದು.

**ಶ್ರೀ ಕೆ. ಸಂತಾನಮ್ :** ಮಾನ್ಯರೆ, ಇಡೀ ಪ್ರಸ್ತಾವವು ಸಂಪೂರ್ಣ ಅನಾವಶ್ಯಕ ಹಾಗೂ ಉದ್ದೇಶ ರಹಿತ ಎಂಬುದು ನನ್ನ ಅಭಿಪ್ರಾಯ. ಇದರಲ್ಲಿ ಎರಡು ಭಾಗಗಳಿವೆ. ಒಂದು ಭಾಗದ ಉದ್ದೇಶವೇನೆಂದರೆ, ಭಾರತೀಯ ಸ್ವಾತಂತ್ರ್ಯ ಅಧಿನಿಯಮ ಅಳವಡಿಸಿಕೊಂಡ ಪ್ರಕಾರ ಭಾರತ ಸ್ವಾತಂತ್ರ್ಯ ಅಧಿನಿಯಮ ಅಥವಾ ಭಾರತ ಸರ್ಕಾರದ ಅಧಿನಿಯಮವನ್ನು ತಿದ್ದುಪಡಿ ಮಾಡುವುದು. ನಿರೂಪಿಸಲಾಗಿರುವ ವಿಧಾನವನ್ನು ನೀವು ಅನುಸರಿಸುವವರೆಗೆ ಈ ಸಂವಿಧಾನ ರಚನಾಸಭೆಯು ಇರುತ್ತದೆ ಎಂದು ನನಗನ್ನಿಸುತ್ತಿಲ್ಲ. ಮುಂದಿನ ಎರಡು ಮೂರು ತಿಂಗಳುಗಳೊಳಗಾಗಿ ನಮ್ಮ ಕೆಲಸವನ್ನು ನಾವು ಮುಗಿಸಲಿದ್ದೇವೆ ಮತ್ತು ನಮ್ಮ ವ್ಯವಹಾರವನ್ನು ಮುಕ್ತಾಯ ಮಾಡಲಿದ್ದೇವೆ ಎಂದು ಅನ್ನಿಸುತ್ತದೆ ಮತ್ತು ಭಾರತ ಸ್ವಾತಂತ್ರ್ಯ ಅಧಿನಿಯಮ ಅಥವಾ ಭಾರತ ಸರ್ಕಾರದ ಅಧಿನಿಯಮವೂ ಸಹ ನಿಂತು ಹೋಗಲಿದ್ದು ಅಂತಹದನ್ನು ತಿದ್ದುಪಡಿ ಮಾಡುವುದಕ್ಕಾಗಿ ನಾವು ಸಂಕೀರ್ಣವಾದ ವಿಧಾನವನ್ನು ಅಳವಡಿಸಿಕೊಳ್ಳುವುದೂ ಸಹ ಅಗತ್ಯವಿಲ್ಲ ಎಂದು ನನಗೆ ಕಂಡುಬರುತ್ತದೆ. ಯಾವುದಾದರೂ ಅಪರೂಪದ ಪದ ನಿರೂಪಣೆಗೆ ಅವಕಾಶಮಾಡಿಕೊಡಲು ನೀವು ಬಯಸಿದರೆ, ಸಾಮಾನ್ಯ ಪ್ರಸ್ತಾವದ ಮೂಲಕವೂ ಅದನ್ನು ಮಾಡಬಹುದಾಗಿದೆ. ಸಂವಿಧಾನವನ್ನು ಅನುಮೋದಿಸುವುದಕ್ಕೆ ಉದ್ದೇಶಿಸಿದ ಇನ್ನೊಂದು ಭಾಗವನ್ನು ನೋಡುವುದಾದರೆ, ನಿಯಮಗಳನ್ನು ಮಾಡಿದಾಗ ಸಂವಿಧಾನವನ್ನು ಅನುಮೋದಿಸುವುದಕ್ಕಾಗಿ ಅವುಗಳನ್ನು ಮಾಡಲಾಯಿತು. ಆದರೆ ಈ ನಿಯಮಗಳು ಸಂವಿಧಾನವನ್ನು ಅಂಗೀಕರಿಸುವುದಕ್ಕೆ ಅವಕಾಶ ಒದಗಿಸುವುದಿಲ್ಲ ಎಂಬ ಶ್ರೀಮತಿ ಜಿ. ದುರ್ಗಾಬಾಯಿಯವರ ವಿಚಾರ ನನಗೆ ಅರ್ಥವಾಗುತ್ತಿಲ್ಲ. ಸಂವಿಧಾನ ರಚನಾಸಭೆಯ ನಿಯಮಗಳನ್ನು ನಾವು ಮಾಡಿದಾಗ, ಸಂವಿಧಾನವನ್ನು ಪರಿಶೀಲಿಸಲು ಹಾಗೂ ಅಂಗೀಕರಿಸಲು ಏಕಮಾತ್ರ ಉದ್ದೇಶಕ್ಕಾಗಿಯೇ ಅವುಗಳನ್ನು ಮಾಡಲಾಯಿತು. ಆದರೆ ಇದ್ದಕ್ಕಿದ್ದಂತೆ ಅದು ಹೇಗೆ ಈ ದಿವಸದಂದು ನಮ್ಮ ನಿಯಮಗಳು ಸಂವಿಧಾನವನ್ನು ಅಂಗೀಕರಿಸುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಹೇಗೆ ತಿಳಿಯಿತು? ಇಂತಹ ಭೀತಿಗೆ ಏನಾದರೂ ಆಧಾರವಿದೆ ಎಂದು ನನಗನ್ನಿಸುವುದಿಲ್ಲ: ಇದಕ್ಕೆ ಪ್ರತಿಯಾಗಿ ಈ ನಿಯಮಗಳನ್ನು ಆರಂಭಿಸಿದ್ದೆ ಆದರೆ ಇತರ ನಿಯಮಗಳ ಪ್ರಕಾರ ನಾವು ಸದನದಲ್ಲಿ ಏನೇನು ತತ್ತ್ವಗಳನ್ನು ಅಳವಡಿಸಿಕೊಂಡಿದ್ದೆವೋ, ಅವುಗಳಿಗೆ ಏನೂ ಬೆಲೆಯಿಲ್ಲ ಮತ್ತು ಸಂವಿಧಾನ ರಚನಾಸಭೆಯು ಮಾಡಿದ ಇತರ ಎಲ್ಲದರ ಸ್ಥಾನಕ್ಕೆ ಹೊಸ ವಿಧೇಯಕವು ಬರುತ್ತದೆ ಎಂದು ಅರ್ಥವಾಗಬಹುದು. ಆಗ ನಾವು ಈಗಾಗಲೇ ಮಾಡಿರುವ ಎಲ್ಲ ಚರ್ಚೆಗಳು ಮತ್ತೆ ಆರಂಭಗೊಳ್ಳುತ್ತವೆ.

ನೀವು ಏನು ಮಾಡಿದ್ದೀರೋ ಅದು ಪರಿಣಾಮಕಾರಿಯಾಗಬೇಕಾದರೆ ಸಂವಿಧಾನದ ಇತರ ಭಾಗಗಳಿಗೂ ಅದೇ ವಿಧಾನವನ್ನು ಅನುಸರಿಸಬೇಕು. ಒಂದು ಸೂಚನೆಯನ್ನು ಮಾಡುವುದಕ್ಕೆ ಅನಂತರ ಅದನ್ನು ಕೈಗೆತ್ತಿಕೊಂಡು ಖಂಡ ಖಂಡವಾಗಿ ಪರಿಶೀಲಿಸುವುದಕ್ಕೆ, ಅನಂತರ ಮಂಡಿಸಲಾದ ತಿದ್ದುಪಡಿಗಳನ್ನು ಕುರಿತು ಚರ್ಚಿಸುವುದಕ್ಕೆ ಒಂದೇ ರೀತಿಯ ಕಾರ್ಯವಿಧಾನವನ್ನು ನಾವು ಅನುಸರಿಸಬೇಕು. ಪ್ರಾರೂಪಣ ಸಮಿತಿಯು ವರದಿಯನ್ನು ಪ್ರಸ್ತುತಪಡಿಸುತ್ತದೆ. ಆಗ ವರದಿಯು ಚರ್ಚೆಗೆ ಬರುತ್ತದೆ ಮತ್ತು ಹೀಗೇ ಪ್ರಕ್ರಿಯೆ ಮುಂದುವರಿಯುತ್ತದೆ. ಬಹಳಷ್ಟು ಚರ್ಚೆ ನಡೆಸಿದ ಅನಂತರವೇ ಕಾರ್ಯವಿಧಾನವನ್ನು ನಿರೂಪಿಸಲಾಗಿದೆ. ನಿಯಮಗಳ ಸಮಿತಿಯು ಅನೇಕ ವಾರಗಳವರೆಗೆ ಕುಳಿತು ಈ ನಿಯಮಗಳ ಕರಡನ್ನು ರೂಪಿಸಿದೆ. ಈಗ ಸಂಚಾಲಕ ಸಮಿತಿಯು ಕೆಲವು ಗಂಟೆಗಳವರೆಗೆ ಕುಳಿತು ಸಂಕೀರ್ಣವಾದ ರಚನೆಯೊಂದನ್ನು ಅನುಮೋದಿಸುತ್ತದೆ. ಇದರಲ್ಲಿರುವ ಅನೇಕ ಉಪಬಂಧಗಳು ಸಂಪೂರ್ಣ ದೋಷಯುಕ್ತವಾಗಿವೆ ಎಂದು ನಾನು ಹೇಳಬಹುದಾಗಿದೆ. ಉದಾಹರಣೆಗೆ:

ನಮ್ಮ ಸದಸ್ಯರೊಬ್ಬರು ಈಗಷ್ಟೇ ಉಲ್ಲೇಖಿಸಿದ ಅಂಶವನ್ನೇ ನೋಡಿ. ಪರಿಷತ್ತನ್ನೊಳಗೊಂಡ ಗವರ್ನರ್ ಜನರಲ್‌ರ ಒಪ್ಪಿಗೆಗಾಗಿ ಕೊಡುವ ಅಂಶವು ಅವರನ್ನು ಸಂವಿಧಾನ ರೂಪಿಸುವ ಕೆಲಸದಿಂದ ಹೊರಗಿಡಬೇಕೆಂಬ ಕಾರಣದಿಂದಲೇ ನಾವು ಈ ಸಂವಿಧಾನ ರಚನಾಸಭೆಯನ್ನು ಮಾಡಿದ್ದೇವೆ ಎಂಬುದು ನನ್ನ ಅನಿಸಿಕೆಯಾಗಿತ್ತು. ಸಂವಿಧಾನವನ್ನು ಅಧ್ಯಕ್ಷರಿಗೆ ಒಪ್ಪಿಸಬೇಕೆಂದು ಇನ್ನೊಂದು ಖಂಡವು ಹೇಳುತ್ತದೆ. ಆದರೆ, ಈ ವಿಧಾನಸಭೆಯು ಸಂವಿಧಾನವನ್ನು ಅನುಮೋದಿಸಿದರೆ, ಅದನ್ನು ಅಧ್ಯಕ್ಷರಿಗೆ ಸಲ್ಲಿಸುವವರು ಯಾರು. ಇದನ್ನು ಮಾಡುವುದಕ್ಕಾಗಿ ಯಾವ ಪ್ರಾಧಿಕಾರವೂ ಇಲ್ಲ. ಆದ್ದರಿಂದ ಇಡೀ ವಿಷಯವು ದೋಷಯುಕ್ತವಾಗಿದೆ. ಸಂಚಾಲಕ ಸಮಿತಿಯು ಇದನ್ನು ಅನುಮೋದಿಸಿರುವುದಕ್ಕೆ ನನಗೆ ದುಃಖವಾಗುತ್ತಿದೆ. ಇದೇನೇ ಇರಲಿ, ನನ್ನ ತಿದ್ದುಪಡಿಯನ್ನು ಮಂಡಿಸುವ ಇಚ್ಛೆ ನನಗಿಲ್ಲ. ಇದನ್ನು ಮುಂದಿನ ಯಾವುದಾದರೂ ದಿನಾಂಕದಂದು ಪರಿಶೀಲನೆಗಾಗಿ ಮುಂದೂಡಬಹುದೆಂದಷ್ಟೆ ನಾನು ನಿವೇದಿಸಿಕೊಳ್ಳುತ್ತೇನೆ.

**ಪಂಡಿತ್ ಠಾಕೂರ್ ದಾಸ್ ಭಾರ್ಗವ :** *[ಮಾನ್ಯ ಸಭಾಧ್ಯಕ್ಷರೆ, ಈ ಸೂಚನೆಗೆ ಸಂಬಂಧಿಸಿದಂತೆ, ಇದರಲ್ಲಿ ಒಂದು ರೀತಿಯಲ್ಲಿ ಎರಡು ವಿಭಿನ್ನ ಪ್ರಸ್ತಾವಗಳು ಇವೆ. ಈ ವಿಭಿನ್ನತೆಗೆ ಕಾರಣವೇನು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಕೆ–ಖಂಡದವರೆಗೆ ವ್ಯಾಪಿಸುವ ಈ ಸೂಚನೆಯ ಒಂದು ಭಾಗವು ಭಾರತ ಸರ್ಕಾರದ ಅಧಿನಿಯಮ ಅಥವಾ ಸ್ವಾತಂತ್ರ್ಯ ಅಧಿನಿಯಮಕ್ಕೆ ಸಂಬಂಧಿಸಿದೆ. ಎರಡನೇ ಭಾಗವು ಸಂವಿಧಾನಕ್ಕೆ ಸಂಬಂಧಿಸಿದೆ. ಕೆ–ಖಂಡದವರೆಗೆ ವ್ಯಾಪಿಸುವ ೧ನೇ ಭಾಗಕ್ಕೆ ಸಂಬಂಧಿಸಿದಂತೆ, ಅನುಕ್ರಮವಾಗಿ ಭಾರತ ಸರ್ಕಾರದ ಅಧಿನಿಯಮ ಮತ್ತು ಸ್ವಾತಂತ್ರ್ಯ ಅಧಿನಿಯಮಕ್ಕೆ ಸಂಬಂಧಿಸಿದ ವಿಧೇಯಕಗಳನ್ನು ಕುರಿತಂತೆ ಡೊಮಿನಿಯನ್ ಶಾಸನಸಭೆಗೆ ಯಾಕೆ ಅಧಿಕಾರವಿಲ್ಲ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಭಾರತದ ಸಂವಿಧಾನವನ್ನು ರೂಪಿಸುವುದಕ್ಕಾಗಿ ಭಾರತದ ಸಂವಿಧಾನ ರಚನಾಸಭೆಯು ಅಸ್ತಿತ್ವಕ್ಕೆ ಬಂದಿತು. ಆದ್ದರಿಂದ ಸಂವಿಧಾನ ರಚನಾಸಭೆಯು ಒಂದು ಸಾರ್ವಭೌಮ ನಿಕಾಯ ಮತ್ತು ಇದು ಭಾರತ ಸರ್ಕಾರದ ಅಧಿನಿಯಮ ಅಥವಾ ಸ್ವಾತಂತ್ರ್ಯ ಅಧಿನಿಯಮವನ್ನು ಪರಿಶೀಲಿಸಬಲ್ಲ ಏಕೈಕ ನಿಕಾಯವಾಗಿದೆ ಎಂದು ಪ್ರತಿಪಾದಿಸುವುದು ಅನುಮತಿಸಬಹುದಾಗಿದೆ. ಸಾರ್ವಭೌಮತೆ ಬಗೆಗೆ ಹೇಳುವುದಾದರೆ, ನನಗನ್ನಿಸುವಂತೆ ಡೊಮಿನಿಯನ್ ಶಾಸನಸಭೆಯು ಮಾತ್ರವೇ ಸಾರ್ವಭೌಮ ನಿಕಾಯ, ಶಾಸನಾತ್ಮಕ ವಿಷಯಗಳಲ್ಲಿ ಅದು ಗವರ್ನರ್ ಜನರಲ್ ಅವರ ಸಮ್ಮತಿಯನ್ನು ಪಡೆದುಕೊಳ್ಳಬೇಕಾಗುತ್ತದೆ ಎಂಬುದು ಅದರ ಸ್ಥಾನವನ್ನು ಬದಲಾಯಿಸುವುದಿಲ್ಲ. ಭಾರತಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲಿಯೂ ಯಾವುದೇ ಕಾನೂನನ್ನು ರೂಪಿಸುವ ಹಕ್ಕು ಅದಕ್ಕಿದೆ ಎಂಬ ಅರ್ಥದಲ್ಲಿ ಅದು ಒಂದು ಸಾರ್ವಭೌಮ ನಿಕಾಯ. ಕಳೆದ ಸಂದರ್ಭದಲ್ಲಿ, ಡೊಮಿನಿಯನ್ ಶಾಸನ ಸಭೆಯಲ್ಲಿ ಪ್ರಿವಿ ಕೌನ್ಸಿಲ್‌ಗೆ ಅಪೀಲುಗಳನ್ನು ಸಲ್ಲಿಸುವ ಪ್ರಶ್ನೆಯ ಬಗ್ಗೆ ಚರ್ಚೆ ನಡೆದಾಗ, ಡೊಮಿನಿಯನ್ ಶಾಸನಸಭೆಯು ಭಾರತ ಸರ್ಕಾರದ ಅಧಿನಿಯಮದಲ್ಲಿ ಯಾವುದೇ ಬದಲಾವಣೆಗಳನ್ನು ಮಾಡುವಂತಿಲ್ಲ ಎಂಬ ಅಭಿಪ್ರಾಯವನ್ನು ನಮ್ಮ ಗೌರವಾನ್ವಿತ ಸದಸ್ಯರು ವ್ಯಕ್ತಪಡಿಸಿದ್ದರು. ಆದರೆ ಈ ಅಭಿಪ್ರಾಯ ಸರಿಯಲ್ಲ ಎಂದು ಆ ಸಂದರ್ಭದಲ್ಲಿ ತೋರಿಸಿಕೊಡಲಾಗಿತ್ತು. ಈ ಸಂಬಂಧವಾಗಿ ನಾನು ಸದನದ ಗಮನವನ್ನು ಪ್ರಕರಣ ೬(೨)ರ ಕಡೆಗೆ ಸೆಳೆಯಬಯಸುತ್ತೇನೆ. ಅದು ಹೀಗಿದೆ:

> "ಹೊಸ ಡೊಮಿನಿಮನ್‌ಗಳ ಯಾವುದೊಂದು ವಿಧಾನಸಭೆಯು ರಚಿಸಿದ ಯಾವುದೇ ಕಾನೂನು ಅಥವಾ ಕಾನೂನಿನ ಉಪಬಂಧವು, ಇಂಗ್ಲೆಂಡಿನ ಕಾನೂನಿಗೆ ವಿರುದ್ಧವಾಗಿದೆ ಎಂಬ ಅಥವಾ ಯುನೈಟೆಡ್ ಕಿಂಗ್‌ಡಮ್‌ನ ಸಂಸತ್ತು ರಚಿಸಿದ ಈ ಅಧಿನಿಯಮದ ಅಥವಾ ಪ್ರಸ್ತುತ ಇರುವ ಅಥವಾ ಮುಂದೆ ರಚಿಸಲಿರುವ ಯಾವುದೇ ಉಪಬಂಧಕ್ಕೆ ಅಥವಾ ಅಂಥ ಅಧಿನಿಯಮದ ಮೂಲಕ ವ್ಯಾಪಕವಾಗಿ ಮಾಡಿದ ಯಾವುದೇ ಆದೇಶಕ್ಕೆ ನಿಯಮಕ್ಕೆ ಅಥವಾ ಯಾವುದೇ ವಿನಿಯಮಕ್ಕೆ ವಿರುದ್ಧವಾಗಿದೆ ಎಂಬ ಕಾರಣದ ಮೇಲೆ ಅಸಿಂಧುವಾಗತಕ್ಕದ್ದು ಮತ್ತು ಅಸಮಂಜಸವಾಗಿರತಕ್ಕದ್ದು. ಮತ್ತು ಪ್ರತಿಯೊಂದು ಡೊಮಿನಿಯನ್‌ನ ವಿಧಾನಸಭೆಯ ಅಧಿಕಾರಗಳು ಯಾವುದೇ

ಅಂಥ ಅಧಿನಿಯಮವನ್ನು ಆದೇಶವನ್ನು, ನಿಯಮವನ್ನು ಅಥವಾ ವಿನಿಯಮವನ್ನು ಅದು ಡೊಮಿನಿಯನ್‌ನ ಭಾಗವಾಗಿರುವಷ್ಟರ ಮಟ್ಟಿಗೆ ನಿರಸನಗೊಳಿಸುವ ಅಥವಾ ರದ್ದುಪಡಿಸುವ ಅಧಿಕಾರವನ್ನು ಒಳಗೊಳ್ಳತಕ್ಕದ್ದು."

ಸಂವಿಧಾನಾತ್ಮಕ ಕಾನೂನಿಗೆ ಸಂಬಂಧಿಸಿದಂತೆ ಅನೇಕ ಸಂದರ್ಭಗಳಲ್ಲಿ, ಯಾವುದೇ ಸಂವಿಧಾನವನ್ನು ಬದಲಾಯಿಸುವುದಕ್ಕೆ ಸಂಬಂಧಿಸಿದ ನಿಯಮಗಳನ್ನು ಸಾಮಾನ್ಯ ನಿಯಮಗಳಿಗಿಂತ ಭಿನ್ನವೆಂದು ಪರಿಗಣಿಸಲಾಗಿದೆ. ಆದರೆ ಯಾವ ನಮ್ಮ ಸಂವಿಧಾನವೂ ಅಂತಹ ಯಾವುದೇ ನಿಯಮವನ್ನು ಹೊಂದಿಲ್ಲ ಎಂಬುದನ್ನು ನಿವೇದಿಸಬಯಸುತ್ತೇನೆ. ಈ ದಿನ ಇಂಗ್ಲೆಂಡಿನಲ್ಲಿ ಯಾರಾದರೂ ಕಾನೂನಿನಲ್ಲಿ ಬದಲಾವಣೆ ಮಾಡಲು ಇಚ್ಛಿಸಿದರೆ ಅವರು ಹಾಗೆ ಬಹುಮತಗಳಿಂದ ಅಂತಹ ಬದಲಾವಣೆಗಳನ್ನು ಮಾಡುವ ಅಧಿಕಾರ ಶಾಸನಸಭೆಗಿದೆ. ಡೊಮಿನಿಯನ್ ಶಾಸನಸಭೆಯೂ ಸಹ ಸಂವಿಧಾನ ರಚನಾಸಭೆಯ ಒಂದು ಸಮಾನಾಂತರ ನಿಕಾಯವಾಗಿದೆ; ಮತ್ತು ಈ ಸಂಬಂಧವಾಗಿ ನಾನು ಹೇಳಬೇಕಾದುದಿಷ್ಟೇ – ಸ್ವಾತಂತ್ರ್ಯ ಕಾಯಿದೆಯಲ್ಲಿ ಯಾವುದೇ ಬದಲಾವಣೆಯನ್ನು ಮಾಡುವ ಎಲ್ಲ ಹಕ್ಕು ಶಾಸನಸಭೆಗಿದೆ. ಈಗಷ್ಟೇ ಸದಸ್ಯರೊಬ್ಬರು, ಸಂವಿಧಾನ ರಚನಾಸಭೆಯ ಯಾವುದೇ ಕಾನೂನನ್ನು ರಚಿಸುವುದಕ್ಕೆ ಗವರ್ನರ್ ಜನರಲ್ ಅವರ ಸಮ್ಮತಿ ಬೇಕಾಗಿಲ್ಲವೆಂದು ಹೇಳಿದ್ದಾರೆ, ೩೮(೫)ನೇ ಖಂಡದ ಅಡಿಯಲ್ಲಿ ಯಾವುದೇ ಕಾನೂನನ್ನು ರೂಪಿಸುವುದಕ್ಕೆ ಸಂವಿಧಾನ ರಚನಾಸಭೆಯು ಗವರ್ನರ್ ಜನರಲ್ ಅವರ ಸಮ್ಮತಿಯನ್ನು ಪಡೆಯುವುದು ಅನಿವಾರ್ಯವೆಂದಾದರೆ, ಆಗ ಅಧಿನಿಯಮಗಳನ್ನು ತಿದ್ದುಪಡಿ ಮಾಡುವುದಕ್ಕಾಗಿ ರೂಪಿಸಿದಂತಹ ಕಾನೂನುಗಳು ಮತ್ತು ಡೊಮಿನಿಯನ್ ಶಾಸನಸಭೆಯು ರೂಪಿಸುವ ಹಕ್ಕುಗಳನ್ನು ಹೊಂದಿರುವಂತಹ ಸಾಮಾನ್ಯ ಕಾನೂನುಗಳ ನಡುವೆ ಯಾವ ವ್ಯತ್ಯಾಸವೂ ಇಲ್ಲ. ಇಂತಹ ತಿದ್ದುಪಡಿಗಳಿಗೆ ಹಾಗೂ ಇನ್ನಿತರ ವಿಧೇಯಕಗಳಿಗೆ ಗವರ್ನರ್ ಜನರಲ್ ಅವರ ಸಮ್ಮತಿಯು ಅನಿವಾರ್ಯವಾದರೆ, ಆಗ ಡೊಮಿನಿಯನ್ ಶಾಸನಸಭೆ ಮತ್ತು ಸಂವಿಧಾನ ರಚನಾಸಭೆಯ ನಡುವೆ ಹೇಗೆ ವ್ಯತ್ಯಾಸ ಕಲ್ಪಿಸುತ್ತೀರಿ? ಎಂದು ಕೇಳಬಯಸುತ್ತೇನೆ. ಸಂವಿಧಾನ ರಚನಾಸಭೆಯ ಅಧಿಕಾರಗಳನ್ನು ತಿದ್ದುಪಡಿ ಮಾಡಬೇಕಾಗಿರುವುದರಿಂದ ಅದು ಅಂತಹ ಹಕ್ಕನ್ನು ಹೊಂದಿದೆ ಎಂದು ಹೇಳಬೇಕಾಗುತ್ತದೆ. ಇದಕ್ಕೆ ಉತ್ತರವಾಗಿ, ಅಂತಹ ನಿಯಮವಿಲ್ಲವೆಂದು ನಾನು ವಿನಮ್ರವಾಗಿ ನಿವೇದಿಸಿಕೊಳ್ಳುತ್ತೇನೆ. ಸಾಮಾನ್ಯ ನಿಯಮಗಳ ನೆರವಿನಿಂದ ಶಾಸನಸಭೆಗಳು ಎಲ್ಲ ವಿಧದ ಕಾಯಿದೆಗಳನ್ನು ತಿದ್ದುಪಡಿ ಮಾಡುವಂತಹ ಅನೇಕ ದೇಶಗಳು ಜಗತ್ತಿನಲ್ಲಿವೆ. ಆದ್ದರಿಂದ ನಾನು ನಿವೇದಿಸಿಕೊಳ್ಳುವುದೇನೆಂದರೆ, ಡೊಮಿನಿಯನ್ ಶಾಸನಸಭೆಗೆ ಇರುವಂತಹ ಅವಕಾಶಗಳಿಗೆ ಸಂಬಂಧಿಸಿದಂತೆ, ಅನುಕ್ರಮವಾಗಿ ಭಾರತ ಸರ್ಕಾರದ ಕಾಯಿದೆ ಹಾಗೂ ಸ್ವಾತಂತ್ರ್ಯ ಕಾಯಿದೆಗಳಿಗೆ ಸಂಬಂಧಿಸಿದಂತಹ ವಿಧೇಯಕಗಳನ್ನು ತಿದ್ದುಪಡಿ ಮಾಡುವಂತಹ ಹಾಗೂ ತನಗೆ ಅನಿಸಿದ ಯಾವುದೇ ಬದಲಾವಣೆಗಳನ್ನು ಮಾಡುವ ಅಧಿಕಾರವು ಈ ಶಾಸನಸಭೆಗೆ ಯಾಕಿರಬಾರದು? ಆದ್ದರಿಂದ ಸದನವು ಖಂಡ ೩೮–ಕೆ ಯನ್ನು ಅಂಗೀಕರಿಸಬಾರದು ಎಂದು ನಿವೇದಿಸಿಕೊಳ್ಳುತ್ತಿದ್ದೇನೆ. ಇದಕ್ಕಿಂತ ಹೆಚ್ಚಾಗಿ ಡೊಮಿನಿಯನ್ ಶಾಸನಸಭೆಯು ಅಂತಹ ವಿಧೇಯಕಗಳನ್ನು ಜಾರಿಗೊಳಿಸುವ ಮತ್ತು ತಿದ್ದುಪಡಿ ಮಾಡುವ ಏಕೈಕ ನಿಕಾಯವಾಗಿದೆ ಎಂಬುದನ್ನು ನಾವು ನಿರ್ಣಯಿಸಬೇಕಾಗಿದೆ. ಇಲ್ಲಿ, ಸಂವಿಧಾನದ ಪ್ರಶ್ನೆ ಉದ್ಭವಿಸುವುದಿಲ್ಲ. ಇದು ಸಂಪೂರ್ಣ ಬೇರೆಯೇ ಪ್ರಶ್ನೆಯಾಗಿದೆ. ನಮ್ಮ ಸಂವಿಧಾನವನ್ನು ಇತರ ಕಡೆಗಳಿಂದ ಸಂಪೂರ್ಣ ಭಿನ್ನವಾದ ಸನ್ನಿವೇಶಗಳಲ್ಲಿ ರೂಪಿಸಲಾಗುತ್ತಿದೆ ಎಂಬುದು ಸ್ಪಷ್ಟ. ಇತರ ಕಡೆಗಳಲ್ಲಿ ಅದನ್ನು ಕ್ರಾಂತಿಯ ಅನಂತರ ರೂಪಿಸಲಾಯಿತು. ಆದರೆ ನಮ್ಮ ಸರ್ಕಾರವು ಕ್ರಾಂತಿಯ ಅನಂತರ ಸ್ಥಾಪಿತವಾದುದಲ್ಲ. ಇದು ನಿರಂತರವಾಗಿರುವ ನಿಕಾಯ ಮತ್ತು ನಾವು ಅನೇಕ ಕಾನೂನುಗಳನ್ನು ಹಿಂದಿನಿಂದಲೂ ಪರಂಪರೆಯಾಗಿ ಪಡೆದುಕೊಂಡಿದ್ದೇವೆ. ಅದರ ಪ್ರಭಾವಗಳಿಂದ ನಾವು ಮುಕ್ತರಾಗುವುದು ಸಾಧ್ಯವಿಲ್ಲ. ಸಂವಿಧಾನವನ್ನು ರೂಪಿಸುವುದಕ್ಕೆ ಗವರ್ನರ್ ಜನರಲ್ ಸಮ್ಮತಿ ಅವಶ್ಯವಿಲ್ಲ ಎಂಬುದು ನಮಗೆ ಗೊತ್ತಿದೆ. ಕಾನೂನಿನಲ್ಲಿ ಬದಲಾವಣೆಗಳನ್ನು ಮಾಡುವುದಕ್ಕಾಗಿ ಅನುಕ್ರಮವಾಗಿ ಭಾರತ ಸರ್ಕಾರ ಹಾಗೂ ಸ್ವಾತಂತ್ರ್ಯ

ಅಧಿನಿಯಮಗಳಲ್ಲಿ ಬದಲಾವಣೆ ಮಾಡಲು ಗವರ್ನರ್ ಜನರಲ್‌ರ ಸಮ್ಮತಿ ಆವಶ್ಯಕ ಎಂಬುದನ್ನೂ ನಾವು ಈಗಾಗಲೇ ಅಂಗೀಕರಿಸಿದ್ದೇವೆ. ಡೊಮಿಯನ್ ಶಾಸನಸಭೆಗೆ ಸಂಪೂರ್ಣ ಅಧಿಕಾರವಿದೆ ಮತ್ತು ಭಾರತ ಸರ್ಕಾರದ ಅಧಿನಿಯಮದಲ್ಲಿ ಯಾವುದೇ ತಿದ್ದುಪಡಿಗಳನ್ನು ಮಾಡಲು ಶಾಸನಸಭೆಗೆ ಸಾಧ್ಯವಾಗದಂತೆ ಮಾಡುವ ಅಂತಹ ಯಾವುದೇ ವ್ಯತ್ಯಾಸವನ್ನು ಮಾಡಬಾರದು ಎಂದು ಮತ್ತು ಸಂವಿಧಾನ ರಚನಾಸಭೆಯು ಅದನ್ನು ಮಾಡಲು ಸಾಧ್ಯವಾಗಬೇಕು ಎಂಬುದು ಅನುಚ್ಛೇದ ೭ರಲ್ಲಿ ಸ್ಪಷ್ಟವಾಗಿ ತೋರುತ್ತದೆ. ವಾಸ್ತವವಾಗಿ ಎರಡೂ ಸಹ ಸಾರ್ವಭೌಮ ನಿಕಾಯಗಳು ಮತ್ತು ಭಾರತ ಸರ್ಕಾರದ ಅಧಿನಿಯಮ ಹಾಗೂ ಸ್ವಾತಂತ್ರ್ಯ ಅಧಿನಿಯಮದಲ್ಲಿ ಅಥವಾ ವಿಧೇಯಕದಲ್ಲಿ ಏನಾದರೂ ತಿದ್ದುಪಡಿಗಳ ಪ್ರಶ್ನೆಗೆ ಸಂಬಂಧಿಸಿದಂತೆ ಎರಡಕ್ಕೂ ಸಹ ಹಾಗೆ ಮಾಡುವ ಸಂಪೂರ್ಣ ಅಧಿಕಾರವಿದೆ. ಈ ಸಂವಿಧಾನ ರಚನಾಸಭೆಯು ಪ್ರತಿಯೊಂದು ರೀತಿಯಲ್ಲೂ ಸಾರ್ವಭೌಮ ನಿಕಾಯವೇನಲ್ಲ ಎಂಬುದನ್ನು ಹೇಳಬಯಸುತ್ತೇನೆ. ಸಂವಿಧಾನವನ್ನು ರೂಪಿಸುವುದಕ್ಕೆ ಹೊರತಾಗಿ ಅದಕ್ಕೆ ಯಾವುದೇ ವಿಧೇಯಕವನ್ನು ಅನುಮೋದಿಸುವ ಅಧಿಕಾರವಿಲ್ಲ. ಸಂವಿಧಾನ ರಚನಾಸಭೆಯು ಸಾಮಾನ್ಯ ವಿಧೇಯಕಗಳನ್ನು ಅನುಮೋದಿಸುವಂತಿಲ್ಲ ಎಂದು ಒಂದು ಸಂದರ್ಭದಲ್ಲಿ ನಮ್ಮ ಪ್ರಧಾನ ಮಂತ್ರಿಯವರು ಹೇಳಿದ್ದರು. ಆದ್ದರಿಂದ ಸ್ವಾತಂತ್ರ್ಯ ಅಧಿನಿಯಮ ಹಾಗೂ ಭಾರತ ಸರ್ಕಾರದ ಅಧಿನಿಯಮಗಳ ತಿದ್ದುಪಡಿಗೆ ಸಂಬಂಧಿಸಿದಂತೆ ನಾನು ನಿವೇದಿಸುವುದೇನೆಂದರೆ, ಡೊಮಿನಿಯನ್ ಶಾಸನಸಭೆಗೆ ಹಾಗೆ ಮಾಡುವ ಅಧಿಕಾರವಿರಬೇಕು ಮತ್ತು ಡೊಮಿನಿಯನ್ ಶಾಸನಸಭೆಗೆ ಇರುವ ಈ ಅವಕಾಶವನ್ನು ಇಲ್ಲವಾಗಿಸುವಂತಹ ಯಾವ ಕಾನೂನೂ ಇಲ್ಲ. ಈ ಮಾತುಗಳೊಂದಿಗೆ, ೩೮–ಕೆ ಖಂಡವನ್ನು ಅಂಗೀಕರಿಸಬಾರದು ಎಂದು ನಾನು ನಿವೇದಿಸಿಕೊಳ್ಳುತ್ತೇನೆ. ಯಾಕೆಂದರೆ ಈ ತಿದ್ದುಪಡಿಯು ಡೊಮಿನಿಯನ್ ಶಾಸನಸಭೆಯ ಅಧಿಕಾರಗಳನ್ನು ಮೊಟಕುಗೊಳಿಸುತ್ತದೆ ಮತ್ತು ಅದು ಸಂವಿಧಾನ ರಚನಾಸಭೆಯ ಪ್ರತಿಷ್ಠೆಗೆ ನ್ಯೂನತೆ ತರುವಂಥದ್ದಾಗಿದೆ.

**ಮಾನ್ಯ ಸಭಾಧ್ಯಕ್ಷರು :** ಸದನದ ಸಭೆಯನ್ನು ಮುಕ್ತಾಯಗೊಳಿಸಿ ಪುನಃ ಮಧ್ಯಾಹ್ನ ೨.೩೦ಕ್ಕೆ ಸೇರೋಣ.

ಸಭೆಯನ್ನು ಮಧ್ಯಾಹ್ನ ೨–೩೦ಕ್ಕೆ ಮುಂದೂಡಲಾಯಿತು.

ಭೋಜನದ ಅನಂತರ ಮಧ್ಯಾಹ್ನ ೨.೩೦ ಗಂಟೆಗೆ ಮಾನ್ಯ ಸಭಾಧ್ಯಕ್ಷರು (ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್) ಅವರ ಅಧ್ಯಕ್ಷತೆಯಲ್ಲಿ ರಚನಾಸಭೆಯು ಮತ್ತೆ ಸಭೆ ಸೇರಿತು.

**ಶ್ರೀ ಆರ್.ಕೆ. ಸಿಧ್ವಾ** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಮಾಹಿತಿಯ ಅಂಶದ ಮೇಲೆ....

## ಪರಿಚಯಪತ್ರಗಳ ವಿತರಣೆ ಮತ್ತು ದಾಖಲೆ ಪುಸ್ತಕದಲ್ಲಿ ಸಹಿ ಮಾಡುವುದು

**ಮಾನ್ಯ ಸಭಾಧ್ಯಕ್ಷರು :** ಒಬ್ಬ ಸದಸ್ಯರಿದ್ದಾರೆ. ಅವರು ತಮ್ಮ ಪರಿಚಯಪತ್ರಗಳನ್ನು ನೀಡಿ ದಾಖಲೆ ಪುಸ್ತಕದಲ್ಲಿ ಸಹಿ ಮಾಡಬೇಕು. ಕೆಳಕಂಡ ಸದಸ್ಯರು ತಮ್ಮ ಪರಿಚಯಪತ್ರಗಳನ್ನು ನೀಡಿ ದಾಖಲೆ ಪುಸ್ತಕದಲ್ಲಿ ಸಹಿ ಮಾಡಿದರು:

ಶ್ರೀ ಕೃಷ್ಣ ಚಂದ್ರಶರ್ಮ : (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ)

## ೩೮–ಎ ಯಿಂದ ೩೮–ವಿ ವರೆಗಿನ ಹೊಸ ನಿಯಮಗಳ ಸೇರ್ಪಡೆ – ಮುಂದುವರೆದಿದೆ.

**ಶ್ರೀ ಆರ್. ಕೆ. ಸಿಧ್ವಾ :** ಚರ್ಚೆಯನ್ನು ತ್ವರಿತಗೊಳಿಸುವ ಸಲುವಾಗಿ ನಾನು ತಿಳಿಯಬಯಸುವುದೇನೆಂದರೆ ಈ ಪ್ರಸ್ತಾವವನ್ನು ಚರ್ಚಿಸಲು ಈ ಸದನವು ಸಕ್ಷಮವಾಗಿದೆಯೇ ಅಥವಾ ಇದನ್ನು ಮಾಡಲು ಇನ್ನೊಂದು ಸದನವು ಸಕ್ಷಮವೆ! ಗವರ್ನರ್ ಜನರಲ್ ಅವರು ಸ್ವಾತಂತ್ರ್ಯ ಅಧಿನಿಯಮದ ಅವಿಭಾಜ್ಯ ಅಂಗವಾಗಿದ್ದರೆ ಮತ್ತು ಈ ವಿಷಯವನ್ನು ಈ ಸಭೆಯು ವಿಚಾರಿಸುವಂತಿಲ್ಲ.

**ಮಾನ್ಯ ಸಭಾಧ್ಯಕ್ಷರು :** ಎತ್ತಲಾದ ಕ್ರಿಯಾಲೋಪ ಕುರಿತು ಈ ಪ್ರಶ್ನೆಯ ಬಗ್ಗೆ ಈ ಸದನವು ವಿಚಾರಿಸಬಹುದು ಎಂಬುದು ಸಂಪೂರ್ಣ ಸ್ಪಷ್ಟವಾಗಿದೆ ಎಂದು ನಾನು ಹೇಳುತ್ತೇನೆ.

**ಮೌಲಾನಾ ಹಸ್ರತ್ ಮೋಹಾನಿ** (ಸಂಯುಕ್ತ ಪ್ರಾಂತ್ಯಗಳು : ಮುಸ್ಲಿಮ್) : *[ಮಾನ್ಯ ಸಭಾಧ್ಯಕ್ಷರೆ, ಒಕ್ಕೂಟದ ಸಂವಿಧಾನವನ್ನು ಪ್ರಸ್ತುತಪಡಿಸಿದಾಗ, ಅದರ ಮೂರು ಖಂಡಗಳ ಪರಿಗಣನೆಯನ್ನು ಮುಂದೂಡಬೇಕು ಎಂದು ಆಗ ನಿರ್ಣಯಿಸಲಾಗಿತ್ತು. ಚರ್ಚೆಯ ಸಂದರ್ಭದಲ್ಲಿ ಏನೇನು ಹೇಳಲಾಗಿತ್ತೋ ಅದನ್ನು ಮುದ್ರಿತ ನಡವಳಿಗಳಲ್ಲಿ ಕೈಬಿಡಲಾಗಿದೆ ಎಂಬುದು ನನಗೆ ಕಂಡುಬಂದಿದೆ. ಈ ಲೋಪವು ಉದ್ದೇಶಪೂರ್ವಕವೇ ಅಥವಾ ತಪ್ಪಿನಿಂದ ಆಗಿರುವಂಥದ್ದೇ ಎಂಬುದನ್ನು ತಿಳಿಯಬಯಸುತ್ತೇನೆ]*

**ಮಾನ್ಯ ಸಭಾಧ್ಯಕ್ಷರು :** *[ನನಗೆ ಅರ್ಥವಾಗುತ್ತಿಲ್ಲ. ಯಾವುದನ್ನು ಬಿಟ್ಟುಬಿಡಲಾಗಿದೆ?]*

**ಮೌಲಾನಾ ಹಸ್ರತ್ ಮೋಹಾನಿ :** *[ಇದು ಅನೇಕ ಖಂಡಗಳಿಗೆ ತಿದ್ದುಪಡಿಗಳನ್ನು ಹೊಂದಿದೆ. ಎತ್ತಲಾದ ಅಂಶವನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಸಾಕಷ್ಟು ಚರ್ಚೆಯ ಅನಂತರ ನಿರ್ಣಯಿಸಲಾಯಿತು. "ಸಂವಿಧಾನ ರಚನಾಸಭೆಯ ಮುಂದಿನ ಸಭೆಯಲ್ಲಿ ನಾನು ಮಾರ್ಪಾಟಾದ ಸಂವಿಧಾನವನ್ನು ಒಪ್ಪಿಸುತ್ತೇನೆ ಎಂದು ಪಂಡಿತ್ ನೆಹರು ಅವರೂ ಸಹ ಹೇಳಿದ್ದರು. ನೀವು ಪ್ರಕಟಿಸಿರುವ ವರದಿಯಲ್ಲಿ ಮೂವತ್ತು ಖಂಡಗಳಿವೆ ಮತ್ತು ಅದು ಎಲ್ಲವನ್ನು ಒಳಗೊಳ್ಳುತ್ತದೆ. ಆದರೆ ಮೊದಲ ಮೂರು ಖಂಡಗಳ ಅನಂತರ ನಡೆದಂತಹ ಚರ್ಚೆಯ ಬಗ್ಗೆ ವರದಿಯಲ್ಲಿ ಏನೂ ತಿಳಿಸಲಾಗಿಲ್ಲ ಇದಕ್ಕೆ ಸಂಬಂಧಿಸಿದ ಏನೂ ವರದಿಯಲ್ಲಿಲ್ಲ. ಇದಕ್ಕೆ ಕಾರಣವೇನು ಎಂಬುದನ್ನು ನಾನು ತಿಳಿಯಬೇಕಿದೆ"]*

**ಮಾನ್ಯ ಸಭಾಧ್ಯಕ್ಷರು :** *[ನೀವು ಏನು ಹೇಳಬೇಕೆಂದಿರುವಿರೋ ಅದನ್ನು ದಯವಿಟ್ಟು ಬರವಣಿಗೆಯಲ್ಲಿ ಕೊಡಿ. ನಾನು ಅದರ ಬಗ್ಗೆ ವಿಚಾರಣೆ ಮಾಡಬೇಕಿದೆ. ಅದೇನು ಎಂಬುದನ್ನು ನಾನು ನೋಡುತ್ತೇನೆ. ಇನ್ನೂ ಯಾರಾದರೂ ಮಾತಾಡಲು ಇಚ್ಛಿಸುತ್ತೀರಾ?]*

**ಶ್ರೀ ನಜಿರುದ್ದೀನ್ ಅಹ್ಮದ್ :** ಮಾನ್ಯರೆ, ೩೮–ಎ ಯಿಂದ ೩೮–ಕೆ ವರೆಗಿನ ಖಂಡಗಳನ್ನು ಈ ಸದನವು ಅನುಮೋದಿಸುವ ಆವಶ್ಯಕತೆಯಿಲ್ಲ ಎಂದು ನಾನು ನಿವೇದಿಸಿಕೊಳ್ಳುತ್ತೇನೆ. ವಿಷಯದ ಬಗ್ಗೆ ಈ ಸದನಕ್ಕೆ ಅಧಿಕಾರ ವ್ಯಾಪ್ತಿಯಿಲ್ಲ ಎಂದು ನಾನು ಭಾವಿಸುವುದಿಲ್ಲ. ಈ ವಿಷಯ ಕುರಿತು ವ್ಯವಹರಿಸುವ ಸಂಪೂರ್ಣ ಅಧಿಕಾರ ವ್ಯಾಪ್ತಿಯು ಸದನಕ್ಕಿದೆ. ಆದರೆ ಈ ಸದನದ ವಿಷಯವಾಗಿ ಹೇಳುವುದಾದರೆ, ಇದರ ಕೆಲಸ ನೇರವಾಗಿ ಸಂವಿಧಾನವನ್ನು ರಚಿಸುವುದಕ್ಕೆ ಸಂಬಂಧಿಸಿದೆ. ಇನ್ನೊಂದು ಸದನವು, ವಿಧಾನಸಭೆಯ ಶಾಸನಾತ್ಮಕ ಅಂಶಕ್ಕೆ ಸಂಬಂಧಿಸಿದಂತೆ ಈ ಕೆಲಸಮಾಡಲು ಸಂಪೂರ್ಣ ಸಕ್ಷಮವಾಗಿದೆ. ಶಾಸಕಾಂಗ ವಿಧಾನಸಭೆಯ ಈ ಹಿಂದಿನ ಚರ್ಚೆಯಲ್ಲಿ ಇದನ್ನು ಉಲ್ಲೇಖಿಸಲಾಗಿತ್ತು. ಆದರೆ ಇದಕ್ಕೆ ಇನ್ನಷ್ಟು ಸ್ಪಷ್ಟೀಕರಣದ ಅಗತ್ಯವಿದೆ. ಭಾರತ ಸರ್ಕಾರದ ಅಧಿನಿಯಮವನ್ನು ಬದಲಾಯಿಸುವುದಕ್ಕೆ ಸಂಬಂಧಿಸಿದಂತೆ, ಸ್ವಾತಂತ್ರ್ಯ ಅಧಿನಿಯಮದ ಪ್ರಕರಣ ೯(೧)(ಸಿ)ಯ ಅಡಿಯಲ್ಲಿ ಇದನ್ನು ಗವರ್ನರ್ ಜನರಲ್ ಅವರು ಮುಂದಿನ ಮಾರ್ಚ್ ೩೧ರವರೆಗೆ ಮಾಡಬಹುದು ಎಂಬ ವಿಷಯದಲ್ಲಿ ಪಂಡಿತ ಭಾರ್ಗವ ಅವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಈ ಹಿನ್ನೆಲೆಯಲ್ಲಿ ಭಾರತ ಸರ್ಕಾರದ ಅಧಿನಿಯಮವನ್ನು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವ್ಯವಸ್ಥಿತ ಯೋಜನೆಯನ್ನು ಸೃಷ್ಟಿಸುವುದಕ್ಕೆ ಅವಸರ ಮಾಡಬೇಕಿಲ್ಲ. ಆಗ, ಸ್ವಾತಂತ್ರ್ಯ ಅಧಿನಿಯಮದ ೫(೯)ನೇ ಪ್ರಕರಣದ ಅಡಿಯಲ್ಲಿ ಮಾರ್ಚ್ ೩೧ರವರೆಗೆ ಗವರ್ನರ್ ಜನರಲ್ ಅವರಿಗೆ ಅಧಿಕಾರವಿರುತ್ತದೆ. ಸದನದ ಶಾಸನಾತ್ಮಕ ಭಾಗಕ್ಕೆ ಇರುವ ಸಕ್ಷಮತೆಗೆ ಸಂಬಂಧಿಸಿದಂತೆ ಸ್ವಾತಂತ್ರ್ಯ ಅಧಿನಿಯಮದ ೬(೧)ನೇ ಪ್ರಕರಣದ ಅಡಿಯಲ್ಲಿ ಅದಕ್ಕೆ ಅಧಿಕಾರ ನೀಡಲಾಗಿದೆ. ಶಾಸಕಾಂಗಕ್ಕೆ ಕಾನೂನುಗಳನ್ನು ಮಾಡುವ ಸಂಪೂರ್ಣ ಅಧಿಕಾರವಿದೆ: ಇತ್ಯಾದಿ ಇತ್ಯಾದಿ ಎಂದು ಅಲ್ಲಿ ನಿರೂಪಿಸಲಾಗಿದೆ. ಶಾಸಕಾಂಗವು ಕಾನೂನುಗಳನ್ನು ಅನುಮೋದಿಸಬಹುದು ಮತ್ತು ಆದೇಶಗಳು, ನಿಯಮಗಳು, ನಿಬಂಧನೆಗಳು ಇತ್ಯಾದಿಯೂ ಸೇರಿದಂತೆ

ಬ್ರಿಟಿಷ್ ಸಂಸತ್ತು ಅನುಮೋದಿಸಿರುವ ಅಥವಾ ಇನ್ನು ಮುಂದೆ ಅನುಮೋದಿಸಲಿರುವ ಯಾವುದೇ ಕಾಯಿದೆಯನ್ನು ತಿದ್ದುಪಡಿ, ಬದಲಿಕೆ ಅಥವಾ ಸಂಪೂರ್ಣ ನಿರಸನಗೊಳಿಸಬಹುದು ಎಂದು ಪ್ರಕರಣ ೬ರ (೨)ನೇ ಉಪಪ್ರಕರಣದಲ್ಲಿ ನಿರ್ದಿಷ್ಟವಾಗಿ ತಿಳಿಸಲಾಗಿದೆ. ಆದ್ದರಿಂದ ಪ್ರಕರಣ ೬(೧) (೨)ರ ಅಡಿಯಲ್ಲಿ ಶಾಸಕಾಂಗವು ಈ ದಿಸೆಯಲ್ಲಿ ಆವಶ್ಯಕವಾದ ಬದಲಾವಣೆಗಳನ್ನು ಮಾಡಲು ಸಕ್ಷಮವಾಗಿದೆ. ಇದನ್ನು ಉಪಪ್ರಕರಣ (೨)ರ ಪರಂತುಕದಲ್ಲಿ ಇನ್ನಷ್ಟು ಸ್ಪಷ್ಟಪಡಿಸಲಾಗಿದೆ. ಇದು ಹೀಗೆ ಹೇಳುತ್ತದೆ: "ಸದ್ಯಕ್ಕೆ ಶಾಸಕಾಂಗದ ಎಲ್ಲ ಅಧಿಕಾರಗಳನ್ನು ಸಂವಿಧಾನ ರಚನಾಸಭೆಯು ನಿರ್ವಹಿಸತಕ್ಕದ್ದು". ಆದ್ದರಿಂದ, ಸಂವಿಧಾನ ರಚನಾಸಭೆಯು ಶಾಸಕಾಂಗದ ಎಲ್ಲ ಅಧಿಕಾರಗಳನ್ನು ನಿರ್ವಹಿಸಬಹುದು ಮತ್ತು ಶಾಸಕಾಂಗವು ಪ್ರಕರಣ ೬ರ ಅಡಿಯಲ್ಲಿ ಯಾವುದೇ ಕಾನೂನನ್ನು ಅನುಮೋದಿಸಲು ಮತ್ತು ಬ್ರಿಟಿಷ್ ಸರ್ಕಾರವು ಅನುಮೋದಿಸಿರುವ ಯಾವುದೇ ಶಾಸನದಲ್ಲಿ ಹಾಗೂ ಅದರ ಅಡಿಯಲ್ಲಿನ ನಿಯಮಗಳಲ್ಲಿ ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಲು ಸಕ್ಷಮವಾಗಿದೆ. ಆದ್ದರಿಂದ, ಬ್ರಿಟಿಷ್ ಕಾಯಿದೆಗಳು, ನಿಬಂಧನೆಗಳು ಅಥವಾ ಅದರ ಕೆಳಗೆ ಮಾಡಲಾದ ಆದೇಶಗಳ ಬಗ್ಗೆ ವ್ಯವಹರಿಸಲು ನಿರ್ದಿಷ್ಟ ವ್ಯವಸ್ಥಿತ ಯೋಜನೆಗೆ ಅವಕಾಶ ಕಲ್ಪಿಸುವ ಈ ಖಂಡವನ್ನು ಇನ್ನೊಂದು ಸದನಕ್ಕೆ ಅಥವಾ ನಿರ್ದಿಷ್ಟವಾಗಿ ಅದಕ್ಕಾಗಿಯೇ ಇರುವ ಸದನದ ಇನ್ನೊಂದು ಮುಖಕ್ಕೆ ಬಿಟ್ಟುಬಿಡಬೇಕು ಎಂದು ನಾನು ನಿವೇದಿಸಿಕೊಳ್ಳುತ್ತಿದ್ದೇನೆ. ದಿನನಿತ್ಯದ ಇಂತಹ ವಿಷಯಗಳ ಬಗ್ಗೆ ಈ ಸದನಕ್ಕೆ ತೊಂದರೆ ಕೊಡುವ ಅಗತ್ಯವಿಲ್ಲ. ಈ ಸದನವು ತಾನು ರೂಪಿತವಾಗಿರುವಂತೆ, ಸಂವಿಧಾನವನ್ನು ರೂಪಿಸುವುದರ ಕಡೆಗೇ ತನ್ನ ಗಮನವನ್ನು ಸಂಪೂರ್ಣವಾಗಿ ಕೇಂದ್ರೀಕರಿಸಬೇಕು. ಇದು ಅದರ ಅತ್ಯಂತ ಆವಶ್ಯಕವಾದ ಕೆಲಸವಾಗಿದೆ. ಸಂವಿಧಾನವನ್ನು ರೂಪಿಸಿದ ಅನಂತರ, ಈ ಸದನದ ಕಾರ್ಯವು ನಿಂತುಹೋಗುತ್ತದೆ ಎಂದು ನನ್ನ ಅನಿಸಿಕೆ. ಈ ಹಿನ್ನೆಲೆಗಳಲ್ಲಿ, ತಿದ್ದುಪಡಿಗಳನ್ನು ಮಾಡುವುದಕ್ಕಾಗಿ ಸಂವಿಧಾನದ ಭಾಗಕ್ಕೆ ವ್ಯವಸ್ಥಿತ ಯೋಜನೆಯನ್ನು (ಮಷಿನರಿ) ಕಲ್ಪಿಸಿದ್ದೇ ಆದರೆ, ಈ ಸದನವು ಬಹಳ ಬೇಗನೆ ತನ್ನ ಕೆಲಸವನ್ನು ನಿಲ್ಲಿಸುತ್ತದೆ ಮತ್ತು ಶಾಸನಾತ್ಮಕ ಭಾಗವು ಅದರ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತದೆ ಎಂಬುದು ನೆನಪಿನಲ್ಲಿರಲಿ. ಆದ್ದರಿಂದ ಇಲ್ಲಿ ಮಾಡಲಾದ ನಿಯಮಗಳು ಜಾರಿಗೊಳ್ಳುವ ಅವಧಿಯು ಕ್ಷಣಿಕವಾಗಿರುತ್ತದೆ ಮತ್ತು ಅದು ಅನಾವಶ್ಯಕ ಹಾಗೂ ಯಾವುದು ಈ ಸದನದ ಮೂಲ ಕರ್ತವ್ಯವಲ್ಲವೋ ಅಂತಹದ್ದರ ಹೊರೆಯನ್ನು ಹಾಕಿದಂತಾಗುತ್ತದೆ. ಸದನಕ್ಕೆ ಈ ಅಧಿಕಾರ ವ್ಯಾಪ್ತಿ ಇರುವುದಾದರೂ, ಅದು ಇದರ ಸೂಕ್ತ ಕೆಲಸವಲ್ಲ. ಈ ಸದನಕ್ಕೆ ಈ ಅಧಿಕಾರ ವ್ಯಾಪ್ತಿ ಇಲ್ಲದಿರಬಹುದು ಎಂಬ ಅಕಾರಣವಾದ ಭೀತಿಯಿಂದಾಗಿ ಬಹುಶಃ ಈ ನಿಯಮಗಳ ತಿದ್ದುಪಡಿಗೆ ತೊಡಗಿದಂತಿದೆ. ೩೮-ಎ ಯಿಂದ ೩೮-ಕೆ ವರೆಗಿನ ನಿಯಮಗಳನ್ನು ಪರಿಶೀಲನೆಯಿಂದ ಕೈಬಿಡಬೇಕು ಅಥವಾ ಅವುಗಳ ಪರಿಶೀಲನೆಯನ್ನು ಮುಂದೂಡಬೇಕು ಎಂದು ನಾನು, ನಿವೇದಿಸಿಕೊಳ್ಳುತ್ತೇನೆ.

ಉಳಿದ ಖಂಡಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ಅವು ಅತ್ಯಂತ ಆವಶ್ಯಕವಾಗಿವೆ. ಸಂವಿಧಾನ ಅಧಿನಿಯಮ ಅದಕ್ಕೆ ಸಂಬಂಧಿಸಿದ ಇತರ ವಿಷಯಗಳನ್ನು ಅನುಮೋದಿಸುವುದಕ್ಕೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಈ ನಿಯಮಗಳು ಅಗತ್ಯವಾಗಿವೆ. ಆದ್ದರಿಂದ ಈ ವಿಷಯದಲ್ಲಿ ಪಂಡಿತ್ ಭಾರ್ಗವ ಅವರ ಸಲಹೆಯನ್ನು ನಾನು ಬೆಂಬಲಿಸುತ್ತೇನೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** (ಬಾಂಬೆ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಈ ಸಂವಿಧಾನ ರಚನಾಸಭೆಯು ಕೆಲವೊಂದು ನಿಯಮಗಳನ್ನು ಅಳವಡಿಸಿಕೊಳ್ಳಬೇಕು ಎಂದು ಪ್ರಸ್ತಾವಿಸುತ್ತಾ ಶ್ರೀಮತಿ ದುರ್ಗಾಬಾಯಿಯವರು ಮಂಡಿಸಿದ ಸೂಚನೆಯ ವಿರುದ್ಧ ಶ್ರೀ ಸಂತಾನಮ್ ಅವರು ಮಾಡಿದ ಕೆಲವೊಂದು ಟೀಕೆಗಳನ್ನು ವಿವರಿಸುವುದಕ್ಕಾಗಿ ನಾನು ನಿಂತಿದ್ದೇನೆ. ಶ್ರೀ ಸಂತಾನಮ್ ಅವರು ದುರ್ಗಾಬಾಯಿಯವರು ಮಾಡಿರುವ ಪ್ರಸ್ತಾಪದ ವಿರುದ್ಧ ಎತ್ತಿರುವ ಒಂದು ಟೀಕೆ ಏನೆಂದರೆ, ನಮ್ಮ

ಉದ್ದೇಶಕ್ಕಾಗಿ, ಈಗಿರುವ ನಿಯಮ ೨೪ ಸಾಕಾಗುತ್ತದೆ. ಆದ್ದರಿಂದ ಯಾವ ಹೊಸ ನಿಯಮಗಳೂ ಅಗತ್ಯವಿಲ್ಲ ಎಂಬುದು. ಆದರೆ ಶ್ರೀ ಸಂತಾನಮ್ ಅವರು ಸೂಚನೆಯನ್ನು ವಿರೋಧಿಸಲು ಎದ್ದಾಗ ಅವರು ಪ್ರಶ್ನೆಗೆ ಸಾಕಷ್ಟು ಗಮನ ನೀಡಿಲ್ಲವೆಂದು ನನಗೆ ಖಂಡಿತವಾಗಿದೆ. ೨೪ನೇ ನಿಯಮವು ಪ್ರಸ್ತಾವವೊಂದರ ಬಗೆಗೆ ಹೇಳುತ್ತದೆ ಮತ್ತು ಪ್ರಸ್ತಾವವೊಂದರ ಮೂಲಕ ಈ ಸದನದಲ್ಲಿ ಏನೂ ಬೇಕಾದರೂ ಮಾಡಬಹುದು ಎಂದು ಹೇಳುತ್ತದೆ ಅದು ನಿಜವೂ ಹೌದು. ಆದರೆ ಈ ಬಹುವಿಷಯಕ ನಿಯಮವು ಸಾಕಾಗುವುದಿಲ್ಲ. ಮತ್ತಷ್ಟು ವಿವರವಾದ ನಿಯಮಗಳ ಅಗತ್ಯವಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಅವರು ವಿಫಲರಾಗಿದ್ದಾರೆ. ಯಾಕೆಂದರೆ ಪ್ರಸ್ತಾವಗಳು ಎರಡು ಪ್ರವರ್ಗಗಳಿಗೆ ಒಳಪಡುತ್ತವೆ. ಒಂದು ಪ್ರಸ್ತಾವ ಇದೆ, ಅದಕ್ಕೆ ಮುಂದಿನ ಹಂತವಿಲ್ಲ; ಆ ಒಂದು ನಿರ್ದಿಷ್ಟ ಪ್ರಸ್ತಾವದ ಬಗ್ಗೆ ಸದನವು ಕೈಗೊಂಡ ನಿರ್ಣಯದಿಂದ ಅದು ಮುಗಿದು ಹೋಗಿದೆ. ಆದರೆ ಇನ್ನೊಂದು ಗುಂಪಿನ ಪ್ರಸ್ತಾವಗಳು ಇವೆ. ಅವು ಇನ್ನಷ್ಟು ಹಂತಗಳನ್ನು ಒಳಗೊಳ್ಳುತ್ತವೆ. ಈ ರೀತಿಯ ಪ್ರಸ್ತಾವದ ಒಂದು ನಿರ್ದಿಷ್ಟ ಉದಾಹರಣೆಯೆಂದರೆ ವಿಧೇಯಕವನ್ನು ಪರಿಚಯಿಸುವಂತಹ ಪ್ರಸ್ತಾವ. ಒಂದು ಪ್ರಸ್ತಾವದಿಂದ ಪರಿಚಯಿಸಲಾದಂತಹ ವಿಧೇಯಕವು, ಸದನವು ಯಾವ ಪ್ರಸ್ತಾವದ ಪರವಾಗಿ ನಿರ್ಣಯಿಸುತ್ತದೋ, ಅಂತಹ ನಿರ್ದಿಷ್ಟ ಪ್ರಸ್ತಾವದಿಂದ ಮುಕ್ತಾಯಗೊಳ್ಳುವುದಿಲ್ಲ. ಇಲ್ಲಿ ಮುಂದಿನ ಅನೇಕ ಹಂತಗಳಿರುತ್ತವೆ. ಅವುಗಳನ್ನು ಹಾದುಹೋಗಬೇಕು. ಆದ್ದರಿಂದ ಈ ರೀತಿಯ ಪ್ರಸ್ತಾವದ ಮುಂದಿನ ಹಂತಗಳನ್ನು ನಿರ್ದಿಷ್ಟ ನಿಯಮದ ಮೂಲಕ ನಿಯಂತ್ರಿಸಬೇಕಾದದ್ದು ಬಹಳ ಆವಶ್ಯಕವಾಗಿರುತ್ತದೆ. ನನ್ನ ಸ್ನೇಹಿತ ಶ್ರೀ ಸಂತಾನಮ್ ಅವರು ಸಂವಿಧಾನ ರಚನಾಸಭೆಯ ನಿಯಮಗಳನ್ನು (ಶಾಸನಾತ್ಮಕ) ಪರಿಶೀಲಿಸಿದ್ದೇ ಆಗಿದ್ದರೆ, ಶ್ರೀಮತಿ ದುರ್ಗಾಬಾಯಿಯವರು ಮಂಡಿಸಿದಂತಹ ಹೊಸ ನಿಯಮಗಳಲ್ಲಿ ಮಾಡಿರುವ ಉಪಬಂಧವು ಸಂವಿಧಾನ ರಚನಾಸಭೆಯ ಸ್ಥಾಯಿ ಆದೇಶಗಳು ಮತ್ತು ನಿಯಮಗಳಲ್ಲಿದ್ದಂತಹ ಉಪಬಂಧಗಳನ್ನು ಆಧರಿಸಿಯೇ ರೂಪಿಸಲಾಗಿರುವಂಥದ್ದು ಎಂಬುದನ್ನು ಕಂಡುಕೊಳ್ಳಬಹುದಿತ್ತು. ಉದಾಹರಣೆಗೆ: ಸಂವಿಧಾನ ರಚನಾಸಭೆ ನಿಯಮಗಳಲ್ಲಿರುವ ನಿಯಮ ಸಂ. ೨೪ಕ್ಕೆ ಸದೃಶವಾಗಿ ಸ್ಥಾಯಿ ಆದೇಶ ಸಂ. ೩೦ ಇದೆ. ಇದರಲ್ಲಿರುವ ಪದಗಳು ಯಥಾವತ್ತಾಗಿ ನಿಯಮ ಸಂ. ೨೪ರಲ್ಲಿರುವಂತೆಯೇ ಇವೆ. ಆದಾಗ್ಯೂ ಇನ್ನೊಂದು ಸ್ಥಾಯಿ ಆದೇಶ, ಸಂ. ೩೭ಕ್ಕೆ ಇದ್ದು. ಈ ಸ್ಥಾಯಿ ಆದೇಶವು ವಿಧೇಯಕಗಳಿಗೆ ಅವಕಾಶ ಮಾಡಿಕೊಡುತ್ತದೆ ಮತ್ತು ಅವುಗಳಿಗೆ ಸಂಬಂಧಿಸಿದಂತೆ ಸದನದಲ್ಲಿ ಇನ್ನೂ ಯಾವ ಪ್ರಸ್ತಾವಗಳನ್ನು ಮಂಡಿಸಬಹುದು ಎಂಬುದನ್ನು ನಿರೂಪಿಸುತ್ತದೆ. ಆದ್ದರಿಂದ ಈ ಹಿನ್ನೆಲೆಯಲ್ಲಿ ಮೇಲೆ ಅದನ್ನು ಪ್ರಸ್ತಾಪ ಮಾಡಲಾಗಿದೆ ಎಂಬುದನ್ನು ಅವರು ಕಂಡುಕೊಳ್ಳಬಹುದು. ಹೊಸ ನಿಯಮಗಳನ್ನು ಅಳವಡಿಸಿಕೊಳ್ಳುವುದು ತನ್ನ ಶಾಸನಾತ್ಮಕ ಸಾಮರ್ಥ್ಯದಿಂದ ಸಂವಿಧಾನ ರಚನಾಸಭೆಯು ಅಳವಡಿಸಿಕೊಂಡ ವಿಧಾನಕ್ಕೆ ಅನುಗುಣವಾಗಿದೆ. ಶಾಸನರಚನೆಗೆ ಸಂಬಂಧಿಸಿದಂತೆ ತನ್ನ ವ್ಯವಹಾರವನ್ನು ಮಾಡುವುದಕ್ಕಾಗಿ ಸಂವಿಧಾನ ರಚನಾಸಭೆಯು ಸಂಪೂರ್ಣವಾಗಿ ನಿಯಮ ಸಂ. ೨೪ನ್ನೇ ಆಶ್ರಯಿಸಿದರೆ, ಬಾರೀ ಅವ್ಯವಸ್ಥೆ ಉಂಟಾಗುವುದರಲ್ಲಿ ನನಗೆ ಲವಲೇಶವೂ ಸಂದೇಹವಿಲ್ಲ. ೨೪ನೇ ನಿಯಮವು ಮಾತ್ರವೇ ಇದ್ದಿದ್ದರೆ, ನಾವು ಮಂಡಿಸಬಹುದಾದ ಪ್ರಸ್ತಾವಗಳ ಸಂಖ್ಯೆಯಲ್ಲಾಗಲಿ, ಅಥವಾ ಅವುಗಳ ಸ್ವರೂಪದಲ್ಲಾಗಲೀ, ಯಾವ ಮಿತಿಯೂ ಇರುತ್ತಿರಲಿಲ್ಲ. ಒಂದು ವಿಧೇಯಕವನ್ನು ಪರಿಚಯಿಸಿದ ಅನಂತರ ಕೇವಲ ಮೂರು ಪ್ರಸ್ತಾವಗಳಿಗೆ ಮಾತ್ರ, ಶಾಸನಾತ್ಮಕ ವಿಧಾನಸಭೆಯ ನಿಯಮಗಳಲ್ಲಿ ಅನುಮತಿಯಿರುತ್ತದೆ ಎಂಬುದನ್ನು ಗೌರವಾನ್ವಿತ ಸದಸ್ಯರುಗಳು ನೋಡಬಹುದು. ಪ್ರಸ್ತಾವವನ್ನು ಪರಿಚಯಿಸಲು ಒಂದು, ವಿಧೇಯಕವನ್ನು ಒಂದು ಆಯ್ಕೆ ಸಮಿತಿಯ ಗಮನಕ್ಕೆ ತರಲು ಒಂದು ಪ್ರಸ್ತಾವ ಅಥವಾ ವಿಧೇಯಕವನ್ನು ಅನುಮೋದಿಸಲು ಒಂದು ಪ್ರಸ್ತಾವ. ನಮ್ಮ ನಡವಳಿಗಳನ್ನು ನಿಯಂತ್ರಿಸುವುದಕ್ಕಾಗಿ ಕೇವಲ ೨೪ನೇ ನಿಯಮವು ಮಾತ್ರವೇ ಇದ್ದಿದ್ದರೆ ಯಾವ ಸದಸ್ಯರು ಬೇಕಾದರೂ ತಮಗೆ ಇಷ್ಟ ಬಂದಂತಹ ಪ್ರಸ್ತಾವವನ್ನು ಮಂಡಿಸುವುದಕ್ಕೆ ಮುಕ್ತ ಅವಕಾಶವಿರುತ್ತಿತ್ತು. ಈ ಮೂರರಲ್ಲಿ ಯಾವುದೇ ಪ್ರಸ್ತಾವವನ್ನು

ಮಂಡಿಸಲು ಸ್ವಾತಂತ್ರ್ಯ ಕೊಡದಿರುವುದೇ ಕೆಲವು ಸಂದರ್ಭಗಳಲ್ಲಿ ಅಗತ್ಯವಾಗುತ್ತದೆ. ನಮ್ಮ ಹೊಸ ಸಂವಿಧಾನವನ್ನು ಒಳಗೊಂಡಿರುವಂತಹ ವಿಧೇಯಕವನ್ನು ಅನುಮೋದಿಸುವ ಉದ್ದೇಶಕ್ಕಾಗಿ, ನಮ್ಮ ವಿಧಾನದಲ್ಲಿ ಸದಸ್ಯರು ಮಂಡಿಸಬಹುದಾದ ಪ್ರಸ್ತಾವಗಳ ಪಟ್ಟಿಯನ್ನು ನಾವು ಮೊಟಕು ಮಾಡಿದ್ದೇವೆ. ಪ್ರಸ್ತಾವಿಸಲಾಗಿರುವ ಹೊಸ ನಿಯಮಗಳಲ್ಲಿ ಸಂವಿಧಾನವನ್ನು ಪರಿಚಾಲಿಸುವ (ಸರ್ಕ್ಯುಲೇಷನ್‌ಗೆ) ಪ್ರಸ್ತಾವಕ್ಕೆ ನಾವು ಅನುಮತಿ ನೀಡಿಲ್ಲ. ಯಾಕೆಂದರೆ ಅದು ವಿಳಂಬವಾಗುತ್ತವೆ ಎಂದು ನಮ್ಮ ಅನ್ನಿಸಿಕೆಯಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಈ ನಿಯಮಗಳನ್ನು ಅಳವಡಿಸಿಕೊಳ್ಳುವ ಹೊರತು, ವಿಧೇಯಕದ ಮುಂದಿನ ಹಂತಗಳನ್ನು ನಿಯಂತ್ರಿಸುವುದು ಅಸಾಧ್ಯವಾಗಿಬಿಡುತ್ತಿತ್ತು ಎಂಬುದನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಳ್ಳಬೇಕು. ಆದ್ದರಿಂದ, ಶ್ರೀ ಸಂತಾನಮ್ ಅವರು ಎತ್ತಿರುವ ಅಂಶದಲ್ಲಿ ಯಾವುದೇ ಹುರುಳಿಲ್ಲ ಎಂಬುದು ನನ್ನ ಅಭಿಪ್ರಾಯ.

ಶ್ರೀ ಸಂತಾನಮ್ ಅವರು ಎತ್ತಿರುವ ಟೀಕೆಯ ಇನ್ನೊಂದು ಭಾಗವು, ಸಂವಿಧಾನ ರಚನಾಸಭೆ ಅಳವಡಿಸಿಕೊಂಡಿರುವ ವಿಧೇಯಕವನ್ನು ಅನುಮೋದಿಸುವುದಕ್ಕೆ ಗವರ್ನರ್ ಜನರಲ್ ಅವರ ಸಮ್ಮತಿ ಪಡೆಯುವುದು ಅಗತ್ಯವಾದ ಹೊಸ ನಿಯಮಗಳಲ್ಲೊಂದಕ್ಕೆ ಸಂಬಂಧಿಸಿದೆ. ಈ ಸದನದ ಸದಸ್ಯರ ನೆನಪಿನಲ್ಲಿರುವಂತೆ, ಸಂವಿಧಾನ ರಚನಾಸಭೆಯ ಕಾರ್ಯಗಳನ್ನು (೧) ಸಂವಿಧಾನಕ್ಕೆ ಸಂಬಂಧಿಸಿದ ಕಾನೂನುಗಳನ್ನು ಮಾಡುವುದಕ್ಕಾಗಿ ಇರುವ ಸಂವಿಧಾನ ರಚನಾಸಭೆ ಮತ್ತು (೨) ಸಾಮಾನ್ಯ ಕಾನೂನುಗಳನ್ನು ಮಾಡುವುದಕ್ಕಾಗಿ ಡೊಮಿನಿಯನ್ ಶಾಸಕಾಂಗ ಎಂಬುದಾಗಿ ಸಭೆಯ ಕೆಲಸ ಇಬ್ಭಾಗಿಸಿರುವ ಕುರಿತು ವರದಿ ನೀಡಿದ ಸಮಿತಿಯು ಸಂವಿಧಾನ ರಚನಾಸಭೆಯ ಕೆಲಸಗಳನ್ನು ಎರಡು ಭಾಗಗಳಾಗಿ ವಿಭಜಿಸಿತು. ಒಂದು ಭಾಗವು ಭವಿಷ್ಯದ ಸಂವಿಧಾನವನ್ನು ರೂಪಿಸುವ ಕೆಲಸಕ್ಕೆ ಸಂಬಂಧಿಸಿತ್ತು. ಇನ್ನೊಂದು ಭಾಗವು ಭಾರತ ಸರ್ಕಾರದ ಅಧಿನಿಯಮ ೧೯೩೫ ಮತ್ತು ಭಾರತದ ಸ್ವಾತಂತ್ರ್ಯ ಅಧಿನಿಯಮ ೧೯೪೭ರಲ್ಲಿರುವ ಈಗಿನ ಸಂವಿಧಾನವನ್ನು ತಿದ್ದುಪಡಿ ಮಾಡುವ ಕೆಲಸಕ್ಕೆ ಸಂಬಂಧಿಸಿತ್ತು. ಭವಿಷ್ಯದ ಸಂವಿಧಾನವನ್ನು ರೂಪಿಸುವ ಮತ್ತು ಅನುಮೋದಿಸುವ ಅವರ ಅಧಿಕಾರಕ್ಕೆ ಸಂಬಂಧಿಸಿದಂತೆ ಗವರ್ನರ್ ಜನರಲ್‌ಗೆ ಯಾವ ಅವಕಾಶವೂ ಇಲ್ಲ. ಅವರ ಸಮ್ಮತಿಯು ಅಗತ್ಯವಿಲ್ಲ. ಸಂವಿಧಾನ ರಚನಾಸಭೆಯು ಸರ್ವೋಚ್ಚವಾದದ್ದು. ಈಗ ಸಿದ್ಧಪಡಿಸಲಾಗಿರುವ ನಿಯಮಗಳಿಗೆ ಗವರ್ನರ್ ಜನರಲ್‌ರ ಸಮ್ಮತಿ ಮಾತ್ರವೇ ಅಲ್ಲ ಸಭಾಧ್ಯಕ್ಷರ ಸಮ್ಮತಿಯೂ ಕೂಡ ಅಗತ್ಯವಿಲ್ಲ. ಈ ವಿಧಾನಸಭೆಯು ಸಂವಿಧಾನವನ್ನು ಅನುಮೋದಿಸಿದ ಅನಂತರ ಸಭಾಧ್ಯಕ್ಷರಿಗೆ ಕೊಡಲಾಗಿರುವ ಏಕೈಕ ಅಧಿಕಾರವೆಂದರೆ ಇದು ಸಂವಿಧಾನದ ಅಂತಿಮ ಅಧಿನಿಯಮ ಎಂಬುದರ ಸಂಕೇತವಾಗಿ ಕೇವಲ ಅದಕ್ಕೆ ಸಹಿ ಹಾಕುವುದಷ್ಟೇ. ಈ ಪದದ ಅರ್ಥದಲ್ಲಿ ಇದು ಸಮ್ಮತಿಯಲ್ಲ, ಈಗಿರುವ ಸಂವಿಧಾನದ ತಿದ್ದುಪಡಿಗೆ ಸಂಬಂಧಿಸಿದಂತೆ ಗವರ್ನರ್ ಜನರಲ್‌ರ ಸಮ್ಮತಿಯನ್ನು ಉಳಿಸಿಕೊಳ್ಳಲಾಗಿದೆ. ಇಂತಹ ಅವಕಾಶವನ್ನು ಉಳಿಸಿಕೊಂಡಿದ್ದಕ್ಕಾಗಿ ಕೆಲವು ಸದಸ್ಯರಿಗೆ ನೋವೆನಿಸಿದೆ ಎಂಬುದು ನನಗೆ ಗೊತ್ತು. ಆದರೆ ಲಭ್ಯವಿರುವ ಅತ್ಯುತ್ತಮ ವಕೀಲರು ಈ ವಿಷಯವನ್ನು ಪರಿಶೀಲಿಸಿದ್ದಾರೆ ಮತ್ತು ಅವರೆಲ್ಲರೂ ಸಹ ಗವರ್ನರ್ ಜನರಲ್‌ರ ಸಮ್ಮತಿಯನ್ನು ಉಳಿಸಿಕೊಳ್ಳುವುದು ಅಪೇಕ್ಷಣೀಯವಷ್ಟೆ ಅಲ್ಲ, ಅತ್ಯವಶ್ಯ ಕೂಡ ಎಂಬ ತೀರ್ಮಾನಕ್ಕೆ ಬಂದಿದ್ದಾರೆ ಎಂಬುದನ್ನು ಸದನಕ್ಕೆ ಹೇಳುತ್ತಿದ್ದೇನೆ. ಇದಕ್ಕೆ ಕಾರಣಗಳನ್ನು ವಿವರಿಸಲು ಬಯಸುತ್ತೇನೆ. ಮೊದಲನೆಯದಾಗಿ, ಎಲ್ಲರಿಗೂ ತಿಳಿದಿರುವಂತೆ ಸಂವಿಧಾನವನ್ನು ಅಂಗೀಕರಿಸುವ ಅಧಿಕಾರವನ್ನು ಗವರ್ನರ್ ಜನರಲ್‌ರು ಹೊಂದಿದ್ದಾರೆ. ಅಂಗೀಕಾರ ಎಂಬುದು ಸಂವಿಧಾನವನ್ನು ತಿದ್ದುಪಡಿ ಮಾಡುವುದಕ್ಕೆ ಇರುವ ಮತ್ತೊಂದು ಹೆಸರಷ್ಟೇ. ಸಂವಿಧಾನವನ್ನು ಅಂಗೀಕರಿಸುವುದು ಮತ್ತು ಸಂವಿಧಾನವನ್ನು ತಿದ್ದುಪಡಿ ಮಾಡುವುದು ಎಂಬುದರ ನಡುವೆ ಹೆಚ್ಚಿನ ವ್ಯತ್ಯಾಸವಿಲ್ಲ. ಇವೆರಡೂ ಸಹ ಒಂದೇ ಆಗಿವೆ. ಇಲ್ಲಿ ಉದ್ಭವಿಸುವ ಪ್ರಶ್ನೆ ಏನೆಂದರೆ, ಸಂವಿಧಾನವನ್ನು ಅಂಗೀಕರಿಸುವ ರೂಪದಲ್ಲಿ, ಸಂವಿಧಾನಕ್ಕೆ ತಿದ್ದುಪಡಿ ತರುವ ಅಧಿಕಾರ ಗವರ್ನರ್ ಜನರಲ್‌ರಿಗೆ ಇರಬೇಕು ಎನ್ನುವುದಾದರೆ, ಅಂಗೀಕಾರಕ್ಕೆ

ಪ್ರತಿಯಾಗಿ ವಿಧೇಯಕಕ್ಕೆ ಸಂಬಂಧಿಸಿದಂತೆ ಅಧಿಕಾರವನ್ನು ಉಳಿಸಿಕೊಂಡಿದ್ದರೆ ಏನು ತೊಂದರೆಯಾಗುತ್ತಿತ್ತು ಎಂಬುದು, ಯಾಕೆಂದರೆ ಅಂಗೀಕಾರದ ಉದ್ದೇಶವೂ ಸಹ ಅದೇ ಅಂದರೆ ಸಂವಿಧಾನವನ್ನು ತಿದ್ದುಪಡಿ ಮಾಡುವುದು ಆಗಿದೆ.

**ಶ್ರೀ ಕೆ. ಸಂತಾನಮ್ :** ಹಾಗಿದ್ದರೆ, ವಿಧೇಯಕ ಯಾಕೆ ಬೇಕು ಎಂದು ಹೇಳುತ್ತೀರಾ?

**ಗೌರವಾನ್ವಿತ ಶ್ರೀ ಡಾ. ಬಿ.ಆರ್. ಅಂಬೇಡ್ಕರ್ :** ಉತ್ತರ ಸರಳವಾಗಿದೆ. ಎಷ್ಟೇ ಆಗಲಿ, ಅಂಗೀಕರಿಸುವ ಅಧಿಕಾರವು ಮಾರ್ಚ್ ೩೧ರ ವೇಳೆಗೆ ಮುಗಿದು ಹೋಗುತ್ತದೆ. ಇದಾದ ಅನಂತರ ಒಂದು ವೇಳೆ ಈಗಿರುವ ಸಂವಿಧಾನದ ತಿದ್ದುಪಡಿಯ ಆವಶ್ಯಕತೆ ಎದುರಾದರೆ ಏನಾಗಬಹುದು? ಅಂಗೀಕಾರದ ಅಧಿಕಾರವು ಏಪ್ರಿಲ್ ೧ಕ್ಕೆ ಕೊನೆಗೊಂಡರೆ ಮತ್ತು ನಮ್ಮ ಭವಿಷ್ಯದ ಸಂವಿಧಾನವೂ ಸಹ ಏಪ್ರಿಲ್ ೧ರಂದು ಕಾರ್ಯಾರಂಭ ಗೊಳ್ಳುವುದಾದರೆ, ಸಮಸ್ಯೆ ಉದ್ಭವಿಸುವುದೇ ಇಲ್ಲ. ಈಗಿರುವ ಸಂವಿಧಾನವು ಒಳಗೊಂಡಿರುವ ವ್ಯಾಪ್ತಿಯನ್ನು ಸಂಪೂರ್ಣ ಸ್ವಾಧೀನಪಡಿಸಿಕೊಳ್ಳಲು ಹೊಸ ಸಂವಿಧಾನ ಇರುತ್ತದೆ. ಆದರೆ ಹಾಗಾಗದಿರಬಹುದು ಎಂಬ ಬಗ್ಗೆ ನಮಗೆ ಸಂಪೂರ್ಣ ಖಚಿತವಿಲ್ಲ. ಹೊಸ ಸಂವಿಧಾನದ ಆರಂಭ ಹಾಗೂ ೧೯೪೮ರ ಏಪ್ರಿಲ್ ೧ರ ನಡುವೆ ಒಂದಿಷ್ಟು ಕಾಲದ ಅಂತರವಿರಬಹುದು. ಮಾರ್ಚ್ ೩೧ ಹಾಗೂ ಹೊಸ ಸಂವಿಧಾನ ಆರಂಭಗೊಳ್ಳುವುದರ ನಡುವೆ ಒಂದು ಅಥವಾ ಎರಡು ತಿಂಗಳ ಅಂತರವಾಗಬಹುದು. ಈ ಸದನವು ರೂಪಿಸಿ ಅನುಮೋದಿಸಿದಂತಹ ಇಡೀ ಸಂವಿಧಾನವು, ಅದಿರುವಂತೆಯೇ ಒಟ್ಟಿಗೇ ಕಾರ್ಯಾಚರಣೆಗೆ ಬರಬಹುದು. ನಾವು ಪ್ರಾಸಂಗಿಕ ವಿಷಯಗಳು ಎಂದು ಏನು ಹೇಳುತ್ತೇವೋ, ಅವುಗಳನ್ನು ಆಚರಣೆಗೆ ತರುವ ಉದ್ದೇಶಕ್ಕಾಗಿ ಚುನಾವಣಾ ಕ್ಷೇತ್ರಗಳನ್ನು ವ್ಯಾಖ್ಯಾನಿಸುವುದಕ್ಕಾಗಿ ಮಧ್ಯಕಾಲೀನ ಅವಕಾಶಗಳ ಪೂರಕ ಅವಕಾಶಗಳು ಇರಬಹುದು. ಇದೆಲ್ಲಕ್ಕೂ ನಿಸ್ಸಂದೇಹವಾಗಿ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಇದರ ಪರಿಣಾಮವಾಗಿ, ಮಾರ್ಚ್ ೩೧ಕ್ಕೆ ಕೊನೆಗೊಳ್ಳಲಿರುವ ಸಂವಿಧಾನದ ಅಂಗೀಕಾರದ ಪ್ರಕ್ರಿಯೆಯನ್ನು ಮುಂದುವರಿಸಬೇಕು ಮತ್ತು ಇದನ್ನು ಈ ಸದನವು ಅನುಮೋದಿಸುವ ವಿಧೇಯಕದ ಗೊತ್ತಾದ ಪ್ರಕ್ರಿಯೆಯಂತೆಯೇ ಮುಂದುವರಿಸಬಹುದು.

ಈ ಹಿನ್ನೆಲೆಯಲ್ಲಿ, ಈಗಿರುವ ಸಂವಿಧಾನವನ್ನು ಒಂದು ವಿಧೇಯಕದ ಮೂಲಕ ಬದಲಾಯಿಸುವ ಅವಕಾಶ ಇರಬೇಕು ಎಂಬುದು ಸ್ಪಷ್ಟ. ಯಾರು ಈ ಅಂಶವನ್ನು ಅರ್ಥಮಾಡಿಕೊಳ್ಳುತ್ತಾರೋ ಮತ್ತು ಅಂಗೀಕಾರದ ಉದ್ದೇಶವು ಸಂವಿಧಾನವನ್ನು ತಿದ್ದುಪಡಿ ಮಾಡುವ ವಿಧೇಯಕದಂತೆಯೇ ಇರುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳುತ್ತಾರೋ, ಅಂಥವರು ವಿಧೇಯಕಕ್ಕೆ ಗವರ್ನರ್ ಜನರಲ್‌ರ ಸಮ್ಮತಿಯ ಅಗತ್ಯತೆಗೆ ಅವಕಾಶ ಒದಗಿಸುವುದರ ಸಿಂಧುತ್ವವನ್ನು ಪ್ರಶ್ನಿಸಲಾರರು. ಇವೆರಡರ ಉದ್ದೇಶವೂ ಒಂದೇ ಆಗಿದ್ದರೆ ಮತ್ತು ಅಂಗೀಕಾರಕ್ಕೆ ಗವರ್ನರ್ ಜನರಲ್‌ರ ಸಮ್ಮತಿ ಅಗತ್ಯವೆನ್ನುವುದಾದರೆ, ತಿದ್ದುಪಡಿಯ ವಿಧೇಯಕಕ್ಕೆ ಗವರ್ನರ್ ಜನರಲ್‌ರ ಸಮ್ಮತಿ ಯಾಕೆ ಅಗತ್ಯವಾಗುವುದಿಲ್ಲ ಎಂಬ ಪ್ರಶ್ನೆ ಏಳುತ್ತದೆ. ಖಂಡಿತವಾಗಿಯೂ ಇಲ್ಲಿ ತಾರ್ಕಿಕವಾದ ಅಸಮಂಜಸತೆ ಏನೂ ಇಲ್ಲ. ಸಮಿತಿಯು ಬಹುತೇಕ ಮಟ್ಟಿಗೆ ಸ್ವಾತಂತ್ರ್ಯ ಅಧಿನಿಯಮದ ೬ನೇ ಪ್ರಕರಣದ ೩ನೇ ಉಪಖಂಡದಲ್ಲಿರುವ ಉಪಬಂಧಗಳಿಂದ ಮಾರ್ಗದರ್ಶನ ಪಡೆದಿದೆ ಎಂಬುದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಡೊಮಿನಿಯನ್ ಶಾಸಕಾಂಗವು ಅನುಮೋದಿಸಿದ ಎಲ್ಲ ಕಾನೂನುಗಳೂ ಗವರ್ನರ್ ಜನರಲ್ ಅವರಿಂದ ಸಮ್ಮತಿ ಪಡೆದಿರುತ್ತವೆ ಎಂದು ಈ ಉಪಖಂಡದಲ್ಲಿ ಹೇಳಲಾಗಿದೆ. ಈ ಖಂಡವು ಯಾವ ಅರ್ಥ ಕೊಡುತ್ತದೆ ಎಂಬುದು ಒಂದು ಅನಿಶ್ಚಿತತೆಯ ವಿಷಯವಾಗಿದೆ. ಸಮ್ಮತಿಸುವ ಅಧಿಕಾರ ಗವರ್ನರ್ ಜನರಲ್ ಅವರಿಗೆ ಇದೆ. ಇಲ್ಲಿರುವ ಪ್ರಶ್ನೆ ಏನೆಂದರೆ, ಸಮ್ಮತಿ ಕೊಡಲು ಸ್ವಾತಂತ್ರ್ಯ ಅಧಿನಿಯಮದ ಪ್ರಕಾರ ಅಧಿಕಾರ ಪಡೆದಿದ್ದಾರೆ ಎಂಬ ಕಾರಣಕ್ಕಾಗಿ ಈಗಿರುವ ಸಂವಿಧಾನವನ್ನು ತಿದ್ದುಪಡಿ ಮಾಡುವ ವಿಧೇಯಕವನ್ನು ವಿಧಾನಸಭೆಯು ಸಮ್ಮತಿಗಾಗಿ ಗವರ್ನರ್ ಜನರಲ್ ಅವರಿಗೆ ಸಲ್ಲಿಸಲು

ಬದ್ಧವಾಗಿದೆಯೇ ಎಂಬುದು ನಮಗೆ ಯಾವುದೇ ಸ್ಪಷ್ಟ ಅಭಿಪ್ರಾಯ ನೀಡಲು ಸಾಧ್ಯವಾಗಲಿಲ್ಲ. ೬ನೇ ಪ್ರಕರಣದ (೩)ನೇ ಉಪಖಂಡವು ಇದೆ ಎಂಬ ಮಾತ್ರಕ್ಕಾಗಿ ತಿದ್ದುಪಡಿಯಾಗಬೇಕಾದ ವಿಧೇಯಕವನ್ನು ಗವರ್ನರ್ ಜನರಲ್‌ರ ಸಮ್ಮತಿಗಾಗಿ ಸಲ್ಲಿಸಬೇಕು ಎಂಬ ಬಾಧ್ಯತೆಯೇನಿಲ್ಲ ಎಂಬ ವಾದದ ಸಾಧ್ಯತೆಯಿದ್ದರೂ ಸಹ, ಕಾನೂನು ನ್ಯಾಯಾಲಯವು ಬೇರೊಂದು ರೀತಿಯಲ್ಲಿ ಪ್ರತಿಪಾದಿಸಬಹುದು ಮತ್ತು ಗವರ್ನರ್ ಜನರಲ್‌ರ ಸಮ್ಮತಿಗಾಗಿ ಸಲ್ಲಿಸದೆ ಈ ವಿಧಾನಸಭೆ ಅನುಮೋದಿತವಾದ ಕಾಯಿದೆಯನ್ನು ಅಧಿಕಾರಾತೀತ ಎಂದು ಘೋಷಿಸಬಹುದು. ಆದ್ದರಿಂದ ಈ ವಿಧಾನಸಭೆಯಿಂದ ಅನುಮೋದಿತವಾದಂತಹ ಶಾಸನವನ್ನು ಈ ರೀತಿಯ ಗಂಡಾಂತರಕ್ಕಿಡುವುದು ನಮಗೆ ಬೇಕಾಗಿರಲಿಲ್ಲ. ಆದ್ದರಿಂದ ಬಹಳಷ್ಟು ಎಚ್ಚರಿಕೆಯಿಂದ ಮತ್ತು ಅದರಲ್ಲಿ ಅತಾರ್ಕಿಕವಾದದ್ದು ಏನೂ ಇಲ್ಲ ಎಂಬ ಭಾವನೆಯಿಂದ ನಾವು ಹೊಸ ನಿಯಮವನ್ನು ಅಳವಡಿಸಿದೆವು. ಈ ವಿಷಯವನ್ನು ಪ್ರಾರೂಪಣ ಸಮಿತಿಯ ಗಮನಕ್ಕೆ ತರಲಾಗಿದ್ದು ಈ ಬಗ್ಗೆ ಸಮಿತಿಯು ಏನೇನು ಮಾಡಿದೆಯೋ ಅದೆಲ್ಲವೂ ಕ್ರಮಬದ್ಧವಾಗಿದೆ ಎಂಬುದನ್ನು ಸದನವು ಅರ್ಥಮಾಡಿಕೊಳ್ಳುತ್ತದೆ ಎಂದು ಆಶಿಸುತ್ತೇನೆ ಮತ್ತು ಶ್ರೀ ಸಂತಾನಮ್ ಹಾಗೂ ಅವರನ್ನು ಅನುಸರಿಸಿದ ಅವರ ಸ್ನೇಹಿತರ ಮಾತಲ್ಲಿ ಯಾವುದೇ ಹುರುಳಿಲ್ಲ.

**ಶ್ರೀ ಎಚ್. ವಿ. ಕಾಮತ್ :** ಮಾನ್ಯರೆ, ನನ್ನ ಗೌರವಾನ್ವಿತ ಮಿತ್ರ ಡಾ. ಅಂಬೇಡ್ಕರ್ ಹಾಗೂ ಅವರು ತಮ್ಮ ಭಾಷಣದಲ್ಲಿ ತಿಳಿಸಿದ ಅತ್ಯುತ್ತಮವಾದ ಅನೇಕ ವಕೀಲರುಗಳ ಬಗ್ಗೆ ಸೂಕ್ತ ಗೌರವವನ್ನಿಟ್ಟುಕೊಂಡೇ ೩೮-ಎ ನಿಯಮ ಅಂದರೆ, ಈ ವಿಧಾನಸಭೆಯು ಅನುಮೋದಿಸಿದ ವಿಧೇಯಕವನ್ನು ಗವರ್ನರ್ ಜನರಲ್‌ರ ಸಮ್ಮತಿಗಾಗಿ ಸಲ್ಲಿಸುವುದು, ಇದರ ಅಗತ್ಯತೆ ಕುರಿತಂತೆ ನನಗೆ ಮನವರಿಕೆಯಾಗಿಲ್ಲ ಎಂದು ಹೇಳುತ್ತಿದ್ದೇನೆ.

ಏನು ಬೇಕಾದರೂ ಮಾಡಲು ವಿಧಾನಸಭೆಯು ಮುಕ್ತವಾಗಿದೆ ಎಂದು ಡಾ. ಅಂಬೇಡ್ಕರ್ ಹೇಳಿದರು. ಹಾಗಿದ್ದರೆ ಒಂದು ಶುಭೋದಯದಲ್ಲಿ ಯಾವುದೇ ಸದಸ್ಯರು ಸಂವಿಧಾನದ ಪರಿಗಣನೆಯನ್ನು ತಡೆಹಿಡಿಯಬೇಕು ಎಂದು ಮಂಡಿಸಬಹುದು. ಅದು ಸಂಪೂರ್ಣ ಸಿಂಧುವೇ ಆಗಿರುತ್ತದೆ. ಯಾಕೆಂದರೆ, ಈ ವಿಧಾನಸಭೆಯಿಂದ ಅಂತಹುದೊಂದು ಸೂಚನೆಯು ಅನುಮೋದಿತವಾದಾಗ ಯಾರೇ ಸದಸ್ಯರು, ಸಂವಿಧಾನದ ಪರಿಶೀಲನೆಯು ತಡೆಹಿಡಿಯಲ್ಪಡುವಂತೆ ನೋಡಿಕೊಳ್ಳಬಹುದು. ನಮ್ಮಲ್ಲಿರುವ ಒಂದು ನಿಯಮವು ಹೇಗಿದೆಯೆಂದರೆ, ವಿಧಾನಸಭೆಯನ್ನು ವಿಸರ್ಜಿಸಬೇಕು ಎಂಬ ಸೂಚನೆಯೊಂದಕ್ಕೆ ಮೂರನೇ ಎರಡರಷ್ಟು ಅಥವಾ ನಾಲ್ಕನೇ ಮೂರರಷ್ಟು ಬಹುಮತ ಸಿಕ್ಕಿದರೆ ವಿಧಾನಸಭೆಯು ತಾನಾಗಿಯೇ ವಿಸರ್ಜಿತಗೊಳ್ಳಬಹುದಾಗಿದೆ. ಒಂದೋ, ಈ ವಿಧಾನಸಭೆಯು ಸಾರ್ವಭೌಮವಾದುದು ಅಥವಾ ಅಲ್ಲ. ಈ ದಿನದಂದು ಯಾರೇ ವಕೀಲರಾಗಲೀ ಅಥವಾ ಸಂವಿಧಾನತಜ್ಞರಾಗಲೀ ಭಾರತದ ಈ ಸಂವಿಧಾನ ರಚನಾಸಭೆಯು ಒಂದು ಸಾರ್ವಭೌಮ ನಿಕಾಯವಲ್ಲ ಎಂದು ಪ್ರತಿಪಾದಿಸಲಾರರು. ಇದು ಒಂದು ಸಾರ್ವಭೌಮ ನಿಕಾಯವಾಗಿದ್ದರೆ ಸಹಜವಾಗಿಯೇ ಆ ಕಾರಣದಿಂದಾಗಿ ಯಾವುದೇ ಒಂದು ಹೊರಗಿನ ಪ್ರಾಧಿಕಾರ-ಅದು ಗವರ್ನರ್ ಜನರಲ್ ಆಗಿರಲಿ, ಬ್ರಿಟಿಷ್ ಸಂಸತ್ ಆಗಿರಲಿ ಅಥವಾ ಇತರ ಯಾರೇ ಆಗಿರಲಿ ಅವರನ್ನು ಈ ವಿಧಾನಸಭೆಯಿಂದ ಅನುಮೋದಿತವಾದ ವಿಧೇಯಕಕ್ಕೆ ಸಮ್ಮತಿ ನೀಡುವಂತೆ ಅಥವಾ ಅದನ್ನು ಸ್ಥಿರೀಕರಿಸುವಂತೆ ಕರೆಯಲಾಗದು. ಆದ್ದರಿಂದ ನಾವೆಲ್ಲರೂ-ಎಲ್ಲರೂ ಒಪ್ಪಿಕೊಳ್ಳುತ್ತೇವೆ ಎಂಬುದು ಖಂಡಿತ-ಈ ವಿಧಾನಸಭೆ ಒಂದು ಸಾರ್ವಭೌಮ ನಿಕಾಯ ಎಂದು ಒಪ್ಪಿಕೊಂಡರೆ, ಆಗ ೩೮-ಎ ನಿಯಮದ ಅಗತ್ಯತೆಯ ಪ್ರಶ್ನೆಯೇ ಏಳುವುದಿಲ್ಲ. ೩೮-ಎ ಯಲ್ಲಿ ಉಲ್ಲೇಖಿಸಲಾದ ವಿಧೇಯಕವನ್ನು, ವಿಧಾನಸಭೆಯಿಂದ ಅನುಮೋದಿತವಾದ ಅನಂತರ ಗವರ್ನರ್ ಜನರಲ್ ಅವರಿಗೆ ಅವರ ಸಮ್ಮತಿಗಾಗಿ ಸಲ್ಲಿಸತಕ್ಕದ್ದು ಎಂದು ಈ ನಿಯಮವು ಹೇಳುತ್ತದೆ.

ಯಾವುದೇ ವಿಧೇಯಕದ ಸ್ಥಿರೀಕರಣಕ್ಕಾಗಿ ಅಥವಾ ಸಮ್ಮತಿಗಾಗಿ ಗವರ್ನರ್ ಜನರಲ್ ಅವರನ್ನು ಕರೆತಂದರೆ, ಆಗ ಈ ವಿಧಾನಸಭೆಯು ಸಾರ್ವಭೌಮವಲ್ಲ ಎಂದು ಸ್ಪಷ್ಟವಾಗಿ ಅರ್ಥವಾಗುತ್ತದೆ. ಗವರ್ನರ್

ಜನರಲ್‌ರನ್ನು ಕರೆತರುವುದಾದರೆ, ಖಂಡಿತವಾಗಿಯೂ ಈ ವಿಧೇಯಕವನ್ನು ಇಲ್ಲಿ ಅನುಮೋದಿಸಲು ಸಾಧ್ಯವಾಗುವುದಿಲ್ಲ ಮತ್ತು ಈ ವಿಧೇಯಕಕ್ಕೆ ಅನುಮೋದನೆ ಸಿಗುವ ಏಕೈಕ ಸ್ಥಳವೆಂದರೆ ಇನ್ನೊಬ್ಬರು ವಿಧಾನಸಭೆ–ಅಂದರೆ ಶಾಸಕಾಂಗವಾಗಿ ಕಾರ್ಯನಿರ್ವಹಿಸುವ ಇದೇ ವಿಧಾನಸಭೆ ಪ್ರಸ್ತುತದಲ್ಲಿ ಗವರ್ನರ್ ಜನರಲ್ ಅವರು ಈ ನಿಕಾಯದ ಒಂದು ಭಾಗವಾಗಿರುತ್ತಾರೆ. ಆದ್ದರಿಂದ ನಮ್ಮ ಗೌರವಾನ್ವಿತ ಸ್ನೇಹಿತರಾದ ಶ್ರೀಮತಿ ದುರ್ಗಾಬಾಯಿಯವರು ಮಂಡಿಸಿದ ಪ್ರಸ್ತಾವದಲ್ಲಿ ಸೇರ್ಪಡೆಯಾಗಿರುವ ಈ ೩೮–ಏ ಪ್ರಕರಣವು ಸರಿಯಾಗಿ ಗ್ರಹಿಸಲ್ಪಟ್ಟಿಲ್ಲ ಮತ್ತು ಇದನ್ನೇನಾದರೂ ವಿಧಾನಸಭೆಯು ಅಳವಡಿಸಿಕೊಂಡರೆ ಅದರ ಸಾರ್ವಭೌಮತೆಯನ್ನು ಕುಂದಿಸಿದಂತಾಗುತ್ತದೆ. ಆದ್ದರಿಂದ ಸೂಚನೆಯಿಂದ ಈ ನಿರ್ದಿಷ್ಟ ಖಂಡವನ್ನು ತೆಗೆದುಹಾಕಬೇಕೆಂದು ಸದನಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

**ಮೌಲಾನಾ ಹಸ್ರತ್ ಮೋಹಾನಿ :** *[ಮಾನ್ಯರೆ, ನಾನೂ ಸಹ ಈ ವಿಧಾನಸಭೆಯ ಮುಂದೆ ತರಲಾದ ಯಾವುದೇ ಸೂಚನೆಗೆ ಗವರ್ನರ್ ಜನರಲ್‌ರ ಸಮ್ಮತಿ ಅವಶ್ಯವಿಲ್ಲ ಎಂಬ ಅಭಿಪ್ರಾಯವನ್ನು ಹೊಂದಿದ್ದೇನೆ. ಇದಕ್ಕೆ ಮೂಲ ಕಾರಣವೇನೆಂದರೆ, ನಮ್ಮದು ಡೊಮಿನಿಯನ್ ಸ್ಥಾನಮಾನ. ಗವರ್ನರ್ ಜನರಲ್‌ರು ಬ್ರಿಟನ್ನಿನ ಪ್ರತಿನಿಧಿಯೇ ಹೊರತು ಭಾರತದ ಪ್ರಜೆಗಳ ಪ್ರತಿನಿಧಿಯಲ್ಲ. ಆದ್ದರಿಂದ ಯಾವುದೇ ಕಾರಣಕ್ಕೂ ಅವರ ಸಮ್ಮತಿಯನ್ನು ತೆಗೆದುಕೊಳ್ಳಬಾರದು.]*

**ಮಾನ್ಯ ಸಭಾಧ್ಯಕ್ಷರು :** ಈ ಸೂಚನೆಯನ್ನು ಮತಕ್ಕಿಡುವ ಮೊದಲು ಇದನ್ನು ಮಂಡಿಸಿದವರು ಉತ್ತರ ರೂಪದಲ್ಲಿ ಏನಾದರೂ ಹೇಳುತ್ತಾರೆಯೇ ಎಂದು ಕೇಳಬಯಸುತ್ತೇನೆ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್ :** ಮಾನ್ಯರೆ, ಇದಕ್ಕಿಂತ ಮೊದಲು ಸ್ವಲ್ಪಕಾಲ ನನ್ನ ಮಧ್ಯಪ್ರವೇಶಕ್ಕೆ ಅನುಮತಿ ಕೋರುತ್ತೇನೆ. ಈ ಸೂಚನೆಯನ್ನು ಅಂಗೀಕರಿಸಿದ್ದೇ ಆದರೆ, ಅದರ ಅನಂತರ ಉಂಟಾಗುವ ಪರಿಣಾಮಗಳ ಬಗ್ಗೆ ಗೌರವಾನ್ವಿತ ಡಾ. ಅಂಬೇಡ್ಕರ್ ಅವರು ಪರಿಶೀಲಿಸಿದ್ದಾರೆಯೇ ಎಂಬುದನ್ನು ಖಚಿತ ಪಡಿಸಿಕೊಳ್ಳಲು ಬಯಸುತ್ತೇನೆ. ಯಾಕೆಂದರೆ ಒಂದು ವಿಧೇಯಕವನ್ನು ಗವರ್ನರ್ ಜನರಲ್ ಅವರಿಗೆ ಒಪ್ಪಿಸಿದಾಗ ನಾವು ಸ್ವೀಕರಿಸಿರುವಂತೆ, ಭಾರತ ಸರ್ಕಾರ ಅಧಿನಿಯಮದ ೩೨ನೇ ಪ್ರಕರಣದ ಅಡಿಯಲ್ಲಿ ಅದಕ್ಕೆ ಸಮ್ಮತಿಯನ್ನು ನೀಡುವ ಅಥವಾ ತಮ್ಮ ಸಮ್ಮತಿಯನ್ನು ತಡೆಹಿಡಿಯುವ ಅಧಿಕಾರವು ಗವರ್ನರ್ ಜನರಲ್ ಅವರಿಗಿರುತ್ತದೆ.

ಈಗಿರುವ ಸಂವಿಧಾನಕ್ಕೆ ತಿದ್ದುಪಡಿ ಮಾಡಲು ಯತ್ನಿಸುತ್ತಿರುವ ವಿಧೇಯಕಕ್ಕೆ ಸಂಬಂಧಿಸಿದಂತೆ ತಮ್ಮ ಸಮ್ಮತಿಯನ್ನು ನೀಡುವ ಅಥವಾ ತಡೆಹಿಡಿಯುವ ಅಧಿಕಾರ ಗವರ್ನರ್ ಜನರಲ್ ಅವರಿಗೆ ಇರಬೇಕು ಎಂದು ನಾವು ಆಲೋಚಿಸುತ್ತಿದ್ದೇವೆಯೆ?

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಅವರು ಸಂವಿಧಾನಾತ್ಮಕ ಗವರ್ನರ್, ಸಲಹೆಯ ಮೇರೆಗೆ ಕಾರ್ಯನಿರ್ವಹಿಸುತ್ತಾರೆ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್ :** ವಿಶದೀಕರಣ ಬೇಕಾಗಿರುವ ಇನ್ನೊಂದು ಅಂಶ ಹೀಗಿದೆ: ಡೊಮಿನಿಯನ್ ಶಾಸಕಾಂಗವು ಒಂದು ವಿಧೇಯಕವನ್ನು ಅನುಮೋದಿಸಿದಾಗ, ಆ ವಿಧೇಯಕಕ್ಕೆ ಗವರ್ನರ್ ಜನರಲ್‌ರ ಸಮ್ಮತಿ ಅಗತ್ಯವಾಗುತ್ತದೆ ಎಂದು ನಿರೂಪಿಸಲಾಗಿದೆ. ಆದರೆ ಈಗಿನ ಸಂವಿಧಾನದ ತಿದ್ದುಪಡಿಯ ವಿಷಯಕ್ಕೂ ಇದು ಅನ್ವಯವಾಗುವುದೆ? ಯಾಕೆಂದರೆ ಇಲ್ಲಿ ನಾವು ಡೊಮಿನಿಯನ್ ಶಾಸಕಾಂಗವಾಗಿ ಕುಳಿತಿಲ್ಲ. ಸಾರ್ವಭೌಮ ನಿಕಾಯವಾಗಿರುವ ಸಂವಿಧಾನ ರಚನಾಸಭೆಯಾಗಿ ಕುಳಿತಿದ್ದೇವೆ. ಆದ್ದರಿಂದ ಸಭಾಧ್ಯಕ್ಷರಾಗಿ ನಿಮಗೆ ಅಧಿಕಾರವಿದೆ ಎಂದು ನಾನು ಹೇಳುತ್ತಿದ್ದೇನೆ. ಇಲ್ಲಿ ನಾವು ಸ್ಪೀಕರ್ ಎಂಬುದಾಗಿಯೂ ಸಹ ಹೇಳುವುದಿಲ್ಲ. ಹೇಗೆ ಹೊಸ ಸಂವಿಧಾನವನ್ನು ಗವರ್ನರ್ ಜನರಲ್ ಅವರಿಗೆ ಉಲ್ಲೇಖಿಸಲಾಗುವುದಿಲ್ಲವೋ ಅದೇ ರೀತಿ ಈಗಿರುವ ಸಂವಿಧಾನದ ತಿದ್ದುಪಡಿಯನ್ನೂ ಸಹ ಅವರಿಗೆ ಉಲ್ಲೇಖಿಸಬೇಕಾದ್ದಿಲ್ಲ ಎಂಬುದನ್ನು ಡಾ. ಅಂಬೇಡ್ಕರ್ ಅವರು ಅರಿತುಕೊಳ್ಳುತ್ತಾರೆಯೆ?

**ಮಾನ್ಯ ಸಭಾಧ್ಯಕ್ಷರು :** ಈ ಅಂಶದ ಬಗ್ಗೆ ಡಾ. ಅಂಬೇಡ್ಕರ್ ಅವರು ತಮ್ಮದೇ ಆದ ರೀತಿಯಲ್ಲಿ ಉತ್ತರಿಸಿದ್ದಾರೆ. ಸದಸ್ಯರಿಗೆ ಅದರಿಂದ ತೃಪ್ತಿಯಾಗಿದೆಯೇ ಇಲ್ಲವೇ ಎಂಬುದು ಬೇರೆಯ ಪ್ರಶ್ನೆ. ಮಂಡಿಸಿದವರು ಈ ಬಗ್ಗೆ ಉತ್ತರವಾಗಿ ಏನಾದರೂ ಹೇಳುತ್ತಾರೆಯೇ ಎಂದು ತಿಳಿಯಲು ಅವರನ್ನು ಕೇಳುತ್ತಿದ್ದೇನೆ.

**ಶ್ರೀಮತಿ ಜಿ. ದುರ್ಗಾಬಾಯಿ :** ಮಾನ್ಯ ಅಧ್ಯಕ್ಷರೆ, ಉತ್ತರಿಸುವುದಕ್ಕೆ ಹೆಚ್ಚೇನೂ ಉಳಿದಿಲ್ಲ. ಡಾ. ಅಂಬೇಡ್ಕರ್ ಅವರು ಇಡೀ ವಸ್ತುಸ್ಥಿತಿಯನ್ನು ವಿವರಿಸುವ ಹಾಗೂ ಗೌರವಾನ್ವಿತ ಸ್ನೇಹಿತರು ಎತ್ತಿದ ಪ್ರಶ್ನೆಗಳಿಗೆ ಉತ್ತರಿಸುವ ಹೊಣೆಯನ್ನು ಅವರೇ ನಿರ್ವಹಿಸಿದ್ದಾರೆ. ಅವರು ಸಮರ್ಪಕವಾಗಿ ಉತ್ತರಿಸಿದ್ದಾರೆ ಮತ್ತು ಇಡೀ ವಿಷಯವನ್ನು ಸ್ಪಷ್ಟಪಡಿಸಿದ್ದಾರೆ. ಆದರೆ ೩೮-ಎ ಯಲ್ಲಿ ಉಲ್ಲೇಖಿಸಲಾಗಿರುವ ವಿಧೇಯಕಗಳಿಗೆ ಸಂಬಂಧಿಸಿದಂತೆ ಗವರ್ನರ್ ಜನರಲ್‌ರ ಸಮ್ಮತಿ ಪಡೆಯುವ ಕುರಿತು ಉಳಿಸಿಕೊಳ್ಳಲಾಗಿರುವ ಅವಕಾಶದ ಬಗ್ಗೆ ಕೆಲವು ಸದಸ್ಯರು ಬಹಳಷ್ಟು ಹೇಳಿರುವುದು ಶ್ಲಾಘನೀಯ. ಡಾ. ಅಂಬೇಡ್ಕರ್ ಅವರೂ ಸಹ ಈ ಅಂಶದ ಬಗ್ಗೆ ಹೇಳಿದ್ದಾರೆ. ಆದ್ದರಿಂದ ಆ ಬಗ್ಗೆ ನಾನು ಹೆಚ್ಚು ಹೇಳುವುದೇನೂ ಇಲ್ಲ. ಆದರೆ ಸ್ವೀಕರಿಸಲಾಗಿರುವಂತೆ ೧೯೩೫ ಅಧಿನಿಯಮದಿಂದಲೇ ನಾವು ಇಂದಿಗೂ ನಿಯಂತ್ರಿತರಾಗಿದ್ದೇವೆ. ಈ ಅಧಿನಿಯಮವು ಈ ಅವಕಾಶವನ್ನು ಇನ್ನೂ ಉಳಿಸಿಕೊಂಡಿದೆ ಎಂಬುದನ್ನು ಗೌರವಾನ್ವಿತ ಸದಸ್ಯರಿಗೆ ನೆನಪಿಸಲು ಇಚ್ಛಿಸುತ್ತೇನೆ....

**ಗೌರವಾನ್ವಿತ ಸದಸ್ಯರೊಬ್ಬರು :** ಆದರೆ ಈ ಸಂವಿಧಾನ ರಚನಾಸಭೆಗೆ ಸಂಬಂಧಿಸಿದಂತೆ ಅಲ್ಲ.

**ಶ್ರೀಮತಿ ಜಿ. ದುರ್ಗಾಬಾಯಿ :** ಮಾನ್ಯರೆ, ಈ ಸಂವಿಧಾನ ರಚನಾಸಭೆಯು ವಿಧೇಯಕವನ್ನು ಅನುಮೋದಿಸಿದೆ ಎಂದ ಮಾತ್ರಕ್ಕೆ ಇದಕ್ಕೆ ತದ್ವಿರುದ್ಧವಾಗಿ ಸಂವಿಧಾನ ರಚನಾಸಭೆಯು ಅವಕಾಶವನ್ನು ಕಲ್ಪಿಸುವ ಹೊರತು ಸಮ್ಮತಿಯನ್ನು ಪಡೆದುಕೊಳ್ಳುವ ವಿಷಯವನ್ನು ಕೈಬಿಡುವಂತಿಲ್ಲ. ಆದ್ದರಿಂದ ನೀವು ಈ ಅವಕಾಶವನ್ನು ತೆಗೆದುಹಾಕಲು ಬಯಸಿದರೆ, ಧಾರಾಳವಾಗಿ ಹಾಗೇ ಮಾಡಬಹುದು. ಆದರೆ ಅದಕ್ಕೆ ತದ್ವಿರುದ್ಧವಾದ ಅವಕಾಶವನ್ನು ಕಲ್ಪಿಸಬೇಕು. ಹಾಗಿಲ್ಲದಿದ್ದರೆ ನೀವು ಅದನ್ನು ಇದ್ದಕ್ಕಿದ್ದಂತೆ ಹಾಗೂ ಇಷ್ಟಾನುಸಾರವಾಗಿ ನಿವಾರಿಸುವಂತಿಲ್ಲ. ಗೌರವಾನ್ವಿತ ಸದಸ್ಯರಿಗೆ ನಾನು ಮೊದಲನೆಯದಾಗಿ ಮನವರಿಕೆ ಮಾಡಲು ಇಚ್ಛಿಸುವುದೇನೆಂದರೆ, ಈಗಿರುವ ಸಂವಿಧಾನದಲ್ಲಿ ಗವರ್ನರ್ ಜನರಲ್ ಅವರು ಹೊಂದಿರುವ ಸ್ಥಾನವು ಬದಲಾಗಿದೆ. ಹಾಗೆಯೇ ಮುಂದುವರಿಯಬೇಕೆಂದರೆ ಅವರೊಂದಿಗೆ ಸಮಾಲೋಚಿಸಬೇಕು ಮತ್ತು ಅವರ ಸಮ್ಮತಿ ಪಡೆಯುವುದನ್ನು ಕೈಬಿಡುವಂತಿಲ್ಲ. ಎರಡನೆಯದಾಗಿ, ಅವರು ನಮ್ಮದೇ ಸಚಿವರುಗಳ ಸಲಹೆಯ ಮೇರೆಗೆ ಕಾರ್ಯನಿರ್ವಹಿಸುವುದರಿಂದ ಇದನ್ನು ನಿವಾರಿಸುವ ಅಗತ್ಯವಿಲ್ಲ. ಈ ಎರಡೂ ಕಾರಣಗಳಿಂದಾಗಿ, ಅವರು ಸಮ್ಮತಿಯನ್ನು ಅನಗತ್ಯವಾಗಿ ತಡೆಹಿಡಿಯುತ್ತಾರೆ ಎಂಬುದಕ್ಕೆ ವಾಸ್ತವವಾಗಿ ಯಾವ ಭೀತಿಯೂ ಇಲ್ಲ. ಇಲ್ಲಿ ಪರಿಗಣಿಸಬಹುದಾದ ಇನ್ನೂ ಒಂದು ಅಂಶವೆಂದರೆ, ಯಾವುದೇ ದೋಷಗಳನ್ನು ಪರಿಷ್ಕರಿಸಲು ಅಥವಾ ಸರಿಪಡಿಸಲು ಇನ್ನೊಂದು ಸದನವು ಇಲ್ಲದಿರುವುದರಿಂದ ಅವಶ್ಯಬಿದ್ದರೆ ಮತ್ತು ಸಂದರ್ಭ ಒದಗಿದರೆ ಇಡೀ ವಿಷಯವನ್ನು ಮತ್ತೊಮ್ಮೆ ಪರಿಶೀಲಿಸುವುದಕ್ಕೆ ಇದು ಸಚಿವರಿಗೆ ಇನ್ನೊಂದು ಅವಕಾಶವನ್ನು ಒದಗಿಸುತ್ತದೆ. ಆದ್ದರಿಂದ ಈ ಎಲ್ಲ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು, ಗವರ್ನರ್ ಜನರಲ್ ಅವರ ಸಮ್ಮತಿ ಪಡೆಯುವುದಕ್ಕೆ ಸಂಬಂಧಿಸಿದ ಈ ಅವಕಾಶವನ್ನು ಉಳಿಸಿಕೊಳ್ಳುವ ಬಗ್ಗೆ ಯಾವ ಹೆದರಿಕೆಯೂ ಇಲ್ಲ ಎಂದು ತಿಳಿದು ಮಾನ್ಯ ಸದಸ್ಯರುಗಳು ನನ್ನ ಸೂಚನೆಯನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಸಂವಿಧಾನ ರಚನಾಸಭೆಯ ನಿಯಮಗಳಿಗೆ ತಿದ್ದುಪಡಿ ಮಾಡುವ ವಿಷಯವನ್ನು ಪರಿಗಣಿಸಬೇಕು ಎಂಬುದು ಸೂಚನೆ. ಖಂಡ ಖಂಡವಾಗಿ ಇದನ್ನು ಅನಂತರದಲ್ಲಿ ಇಡುತ್ತೇನೆ. ಈಗ ಸಾಮಾನ್ಯ ಸೂಚನೆಯು ಸದನದ ಮುಂದಿದೆ.

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ನಾನು ಒಂದೊಂದಾಗಿ ಖಂಡಗಳನ್ನು ಮಂಡಿಸುತ್ತೇನೆ. ಸದಸ್ಯರು ಈ ಪ್ರತಿಯೊಂದನ್ನು ಸಾಧ್ಯವಾದಷ್ಟು ತ್ವರಿತವಾಗಿ ಪರಿಶೀಲಿಸಬೇಕು, ಯಾಕೆಂದರೆ ಇನ್ನೂ ಮೂರು ನಿರ್ಣಯಗಳಿವೆ ಮತ್ತು ಸಮಯವೂ ಹೆಚ್ಚಾಗಿಲ್ಲ.

**ಶ್ರೀಮತಿ ಜಿ. ದುರ್ಗಾಬಾಯಿ** : ನಾನು ೩೮–ಎ(೧) ನಿಯಮವನ್ನು ಮಂಡಿಸುತ್ತೇನೆ.

"೩೮–ಎ: (೧) ಭಾರತ ಸ್ವಾತಂತ್ರ್ಯ ಅಧಿನಿಯಮ ೧೯೪೭ಕ್ಕೆ ಅಥವಾ ಸದರಿ ಅಧಿನಿಯಮದ ಮೇರೆಗೆ ಅಂಗೀಕರಿಸಿದ ಭಾರತ ಸರ್ಕಾರ ಅಧಿನಿಯಮ, ೧೯೩೫ರ ಅಡಿಯಲ್ಲಿ ರಚಿಸಿದ ಅಥವಾ ಅದಕ್ಕೆ ಅಳವಡಿಸಿದ ಯಾವುದೇ ಆದೇಶಕ್ಕೆ, ನಿಯಮಕ್ಕೆ, ವಿನಿಯಮಕ್ಕೆ, ಅಥವಾ ಇತರ ಲಿಖಿತಪತ್ರಕ್ಕೆ ಯಾವುದೇ ತಿದ್ದುಪಡಿ ಪ್ರಸ್ತಾವಿಸಲು ಇಚ್ಛಿಸುವ ಯಾರೇ ಸದಸ್ಯರು ಆ ಉದ್ದೇಶಕ್ಕಾಗಿ ವಿಧೇಯಕವನ್ನು ಮಂಡಿಸಲು ಅನುಮತಿಗಾಗಿ ಕೋರಿಕೆಯನ್ನು ತಿಳಿಸಿ ಹಾಗೂ ಆ ಬಗ್ಗೆ ತನ್ನ ಆಶಯದ ಸೂಚನೆಯ ಜೊತೆಗೆ, ವಿಧೇಯಕದ ಪ್ರತಿಯನ್ನು ಮತ್ತು ಉದ್ದೇಶಗಳ ಮತ್ತು ಕಾರಣಗಳ ಪೂರ್ಣ ಹೇಳಿಕೆಯನ್ನು ಸಲ್ಲಿಸತಕ್ಕದ್ದು."

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** : ನಾನೊಂದು ಸಲಹೆ ಮಾಡಲೆ? ಕೆಲವು ಸಣ್ಣ ಪುಟ್ಟ ತಪ್ಪುಗಳನ್ನು ಸರಿಪಡಿಸುವ ಕೆಲವೊಂದು ತಿದ್ದುಪಡಿಗಳನ್ನು ಹೊರತುಪಡಿಸಿದರೆ ಗಣನೀಯವಾದ ತಿದ್ದುಪಡಿ ಏನೂ ಇಲ್ಲ. ಶ್ರೀ ನಜಿರುದ್ದೀನ್ ಅಹ್ಮದ್ ಅವರು ತಿದ್ದುಪಡಿಯಂಥವು ಇವೆ. ಇವು ಅಲ್ಲೊಂದು ಇಲ್ಲೊಂದು ಪದವನ್ನು ಸೇರಿಸುತ್ತವೆ. ಇವುಗಳ ಬಗ್ಗೆ ಗಮನ ಹರಿಸುವ ಕೆಲಸವನ್ನು ಕಛೇರಿಯವರಿಗೆ ಬಿಟ್ಟುಬಿಡಬಹುದು ಈಗ ಖಂಡಗಳ ಬಗ್ಗೆ ಗಮನಹರಿಸಬಹುದು.

**ಮಾನ್ಯ ಸಭಾಧ್ಯಕ್ಷರು** : ಮಂಡಿಸಿದವರಿಗೆ ಅಂಗೀಕಾರಾರ್ಹವಾದಂತಹ ತಿದ್ದುಪಡಿಗಳನ್ನು ಈಗ ಅಂಗೀಕರಿಸಬಹುದು ಮತ್ತು ತಿದ್ದುಪಡಿಯಾದ ರೂಪದಲ್ಲಿ ಸೂಚನೆಯನ್ನು ಮಂಡಿಸಬಹುದು. ಇದರಿಂದ ಚರ್ಚೆಯು ಇಲ್ಲವಾಗುತ್ತದೆ ಮತ್ತು ಬದಲಾವಣೆಗಳನ್ನು ಮಾಡುವ ಕೆಲಸವನ್ನು ಕಛೇರಿಗೆ ಒಪ್ಪಿಸುವ ಬದಲು ಇಡೀ ವಿಷಯದ ಬಗ್ಗೆ ತ್ವರಿತವಾಗಿ ಗಮನಹರಿಸಬಹುದು ಎಂದು ಸೂಚಿಸಲು ಬಯಸುತ್ತೇನೆ. ಶ್ರೀ ನಜಿರುದ್ದೀನ್ ಅವರಿಂದ ತಿದ್ದುಪಡಿಯಾದಂತಹ ಮೊದಲನೇ ಖಂಡದ ಪಾಠ ಈ ರೀತಿ ಇದೆ:

"ಭಾರತ ಸ್ವಾತಂತ್ರ್ಯ ಅಧಿನಿಯಮಕ್ಕೆ ಅಥವಾ ಭಾರತ ತಾತ್ಕಾಲಿಕ ಸಂವಿಧಾನದ ಮೂಲಕ ಅಳವಡಿಸಲಾದಂತೆ ಭಾರತ ಸರ್ಕಾರ ಅಧಿನಿಯಮದ ಅಡಿಯಲ್ಲಿ ರಚಿಸಿದ ಅಥವಾ ಅದಕ್ಕೆ ಅಳವಡಿಸಿದ ಯಾವುದೇ ಆದೇಶಕ್ಕೆ, ನಿಯಮಕ್ಕೆ, ವಿನಿಯಮಕ್ಕೆ ಯಾವುದೇ ತಿದ್ದುಪಡಿ ಪ್ರಸ್ತಾವಿಸಲು ಇಚ್ಛಿಸುವ ಯಾರೇ ಸದಸ್ಯನು, ತನ್ನ ಉದ್ದೇಶವನ್ನು ತಿಳಿಸುವ ಸೂಚನೆಯನ್ನು ಕೊಡತಕ್ಕದ್ದು ಮತ್ತು ಸೂಚನೆಯ ಜೊತೆಗೆ ಉದ್ದೇಶಕ್ಕಾಗಿ ವಿಧೇಯಕದ ಪ್ರತಿಯನ್ನು ಸಲ್ಲಿಸತಕ್ಕದ್ದು ಮತ್ತು ವಿಧೇಯಕವನ್ನು ಮಂಡಿಸಲು ಅನುಮತಿಗಾಗಿ ಕೋರತಕ್ಕದ್ದು."

ನೀವು ಈ ತಿದ್ದುಪಡಿಗಳನ್ನು ಅಂಗೀಕರಿಸಿದರೆ ಅದರ ವಾಚನವು ಆ ರೀತಿ ಇರುತ್ತದೆ:

**ಶ್ರೀಮತಿ ಜಿ. ದುರ್ಗಾಬಾಯಿ** : ನಾನು ತಿದ್ದುಪಡಿಗಳನ್ನು ಅಂಗೀಕರಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಹಾಗಿದ್ದರೆ, ಶ್ರೀ ನಜೀರುದ್ದೀನ್ ಅಹ್ಮದ್ ಅವರು ಒಂದೊಂದಾಗಿ ತಮ್ಮ ತಿದ್ದುಪಡಿಗಳನ್ನು ಓದಲಿ.

**ಶ್ರೀ ನಜಿರುದ್ದೀನ್ ಅಹ್ಮದ್** : ಮಾನ್ಯರೆ, ಈ ತಿದ್ದಪಡಿಗಳನ್ನು ಮಂಡಿಸಲು ಅಪ್ಪಣೆ ಕೇಳುತ್ತೇನೆ.

"ಪ್ರಸ್ತಾವಿತ ೩೮–ಎ ನಿಯಮದ (೧)ನೇ ಉಪ–ನಿಯಮದಲ್ಲಿ, 'ಪ್ರಸ್ತಾವಿಸಲು ಇಚ್ಛಿಸುವ' ಎಂಬ ಪದಗಳಿಗೆ ಬದಲಾಗಿ, 'ಮಂಡಿಸಲು ಇಚ್ಛಿಸುವ' ಎಂಬ ಪದಗಳನ್ನು; 'ನಿಯಮಗಳು, ವಿನಿಯಮಗಳು ಮತ್ತು ಲಿಖಿತಪತ್ರಗಳು' ಎಂಬ ಪದಗಳಿಗೆ 'ನಿಯಮ ಅಥವಾ ವಿನಿಯಮ' ಎಂಬ ಪದಗಳನ್ನು ಮತ್ತು 'ಸದರಿ ಅಧಿನಿಯಮದ ಅಡಿಯಲ್ಲಿ ಅಂಗೀಕರಿಸಿದ' ಎಂಬ ಪದಗಳಿಗೆ ಬದಲಾಗಿ 'ಭಾರತ ತಾತ್ಕಾಲಿಕ ಸಂವಿಧಾನ ಆದೇಶ ೧೯೪೭ರ ಮೂಲಕ ಅಂಗೀಕರಿಸಿದ' ಎಂಬ ಪದಗಳನ್ನು ಸೇರಿಸತಕ್ಕದ್ದು."

ನಾನು ನಿವೇದಿಸಿಕೊಳ್ಳಲಿರುವ ಇನ್ನೊಂದು ತಿದ್ದುಪಡಿಯನ್ನು ಪ್ರಸ್ತಾವಿಸಲು ಅಪ್ಪಣೆ ಕೋರುತ್ತೇನೆ.

"ಪ್ರಸ್ತಾವಿತ ೩೮-ಎ ನಿಯಮದಲ್ಲಿ 'ಉದ್ದೇಶಕ್ಕಾಗಿ ವಿಧೇಯಕವನ್ನು ಮಂಡಿಸುವುದಕ್ಕಾಗಿ ಕೋರಬಹುದು' ಎಂಬ ಪದಗಳನ್ನು ಬಿಟ್ಟು ಬಿಡತಕ್ಕದ್ದು. 'ವಿಧೇಯಕದ ಪ್ರತಿಯನ್ನು ಸಲ್ಲಿಸಬಹುದು' ಎಂಬ ಪದಗಳ ತರುವಾಯ 'ಉದ್ದೇಶಕ್ಕಾಗಿ' ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು 'ಮತ್ತು ವಿಧೇಯಕವನ್ನು ಮಂಡಿಸುವುದಕ್ಕಾಗಿ ಅನುಮತಿ ಕೋರಬಹುದು' ಎಂಬ ಪದಗಳನ್ನು ಕೊನೆಯಲ್ಲಿ ಸೇರಿಸಬಹುದು."

ಈ ತಿದ್ದುಪಡಿಗಳ ಉದ್ದೇಶ ಸಂಪೂರ್ಣ ಸ್ಪಷ್ಟವಾಗಿದೆ. ಸರಣಿಯನ್ನು ಕಾಯ್ದುಕೊಳ್ಳುವುದಕ್ಕಾಗಿ ಸೂಚನೆಯ ಅನಂತರ ಸೂಚನೆಯ ಸ್ಥಿತಿಯನ್ನು ಕೇವಲ ಸ್ಥಳಾಂತರಿಸಿದ್ದೇನೆ. ಇತರೆಯವು ಕೇವಲ ಶಾಬ್ದಿಕ ತಿದ್ದುಪಡಿಗಳಾಗಿವೆ.

**ಶ್ರೀಮತಿ ಜಿ. ದುರ್ಗಾಬಾಯಿ :** ಮಾನ್ಯರೆ, ನಾನು ತಿದ್ದುಪಡಿಯನ್ನು ಅಂಗೀಕರಿಸುವುದಿಲ್ಲ. ೩೮-ಎ(೧)ರಲ್ಲಿ ಪ್ರಸ್ತಾಪಿಸಿರುವ ಭಾಷೆಯು, ಸಾಕಷ್ಟು ಸರಿಯಾಗಿದೆ. ಅದಕ್ಕೆ ಏನಾದರೂ ತಿದ್ದುಪಡಿಯ ಅಗತ್ಯವಿದೆಯೆಂದು ಅನ್ನಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು :** ಸೂಚನೆಯನ್ನು ಮಂಡಿಸಿದವರು ಯಾವುದೇ ತಿದ್ದುಪಡಿಗಳನ್ನು ಅಂಗೀಕರಿಸಲು ಸಿದ್ಧವಿಲ್ಲ. ತಿದ್ದುಪಡಿಗಳನ್ನು ನಾನು ಮತಕ್ಕಿಡುತ್ತೇನೆ.

ಈ ತಿದ್ದುಪಡಿಗಳನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಈಗ ೩೮-ಎ(೨)ಕ್ಕೆ ಕುರಿತು ಪರಿಶೀಲಿಸೋಣ.

**ಶ್ರೀಮತಿ ಜಿ. ದುರ್ಗಾಬಾಯಿ :** ಮಾನ್ಯರೆ, ನಾನು ಮಂಡಿಸುತ್ತೇನೆ.

"(೨) ಈ ನಿಯಮದ ಅಡಿಯಲ್ಲಿ ವಿಧೇಯಕವನ್ನು ಮಂಡಿಸುವ ಅನುಮತಿಗಾಗಿ ಪ್ರಸ್ತಾವದ ಸೂಚನೆಯ ಅವಧಿಯು, ಕಡಿಮೆ ಅವಧಿಯ ಸೂಚನೆ ನೀಡಬೇಕೆಂದು ತಿಳಿಸಿ ಸಭಾಧ್ಯಕ್ಷರು ಅನುಮತಿಸಿದ್ದ ಹೊರತು, ಹದಿನೈದು ದಿನಗಳಾಗಿರತಕ್ಕದ್ದು."

**ಶ್ರೀ ನಜಿರುದ್ದೀನ್ ಅಹ್ಮದ್ :** ಮಾನ್ಯರೆ, ಮಂಡಿಸಲು ಅಪ್ಪಣೆ ಕೇಳುತ್ತೇನೆ.

"೩೮-ಎ ನಿಯಮಕ್ಕೆ ಪ್ರಸ್ತಾವಿಸಿರುವ (೨)ನೇ ಉಪನಿಯಮದಲ್ಲಿ 'ಸಭಾಧ್ಯಕ್ಷರು ಅನುಮತಿಸಿದ', ಎಂಬ ಪದಗಳಿಗೆ ಬದಲಾಗಿ' 'ಸಭಾಧ್ಯಕ್ಷರು, ತಮ್ಮ ವಿವೇಚನೆಯಂತೆ ಅನುಮತಿಸಿದ' ಎಂಬ ಪದಗಳನ್ನು ಸೇರಿಸತಕ್ಕದ್ದು."

ಅಧ್ಯಕ್ಷರು ತಮ್ಮ ವಿವೇಚನಾನುಸಾರ ಅನುಮತಿಸಿದ ಈ ಷರತ್ತು, ತಿದ್ದುಪಡಿಗಳ ಪಟ್ಟಿಯ ೪ ಮತ್ತು ೭ನೇ ಪುಟಗಳಲ್ಲಿ ಇತರ ಖಂಡಗಳಲ್ಲಿ ಕಂಡುಬರುತ್ತದೆ.

ಎರಡು ಸ್ಥಳಗಳಲ್ಲಿ ಇದೇ ನುಡಿಗಟ್ಟು ಕಂಡುಬರುತ್ತದೆ. ಎಲ್ಲವನ್ನೂ ಒಂದು ಏಕರೂಪತೆಗೆ ತರುವ ಸಲುವಾಗಿ ನನ್ನ ತಿದ್ದುಪಡಿಯನ್ನು ಅಂಗೀಕರಿಸಬಹುದೆಂದು ನಿವೇದಿಸಿಕೊಳ್ಳುತ್ತೇನೆ.

**ಶ್ರೀಮತಿ ಜಿ. ದುರ್ಗಾಬಾಯಿ :** ಈ ತಿದ್ದುಪಡಿಯನ್ನು ಅಂಗೀಕರಿಸುವ ಅಗತ್ಯವಿಲ್ಲವೆಂದು ನನಗೆ ಅನ್ನಿಸುತ್ತದೆ.

**ಮಾನ್ಯ ಸಭಾಧ್ಯಕ್ಷರು :** ಮಂಡನೆ ಮಾಡಿದವರು ಈ ತಿದ್ದುಪಡಿಯನ್ನು ಅಂಗೀಕರಿಸಲು ಸಿದ್ಧರಿಲ್ಲ. ತಿದ್ದುಪಡಿಯು, 'ಅಧ್ಯಕ್ಷರು' ಎಂಬ ಪದದ ಅನಂತರ 'ತಮ್ಮ ವಿವೇಚನಾನುಸಾರ' ಎಂಬ ಪದಗಳನ್ನು ಸೇರಿಸಬೇಕೆಂದು ಯತ್ನಿಸುತ್ತದೆ. ಇದನ್ನು ಸದನದ ಮುಂದೆ ಇಡುತ್ತೇನೆ.

ಮುಂದಿಟ್ಟಿರುವ ವಿಷಯ :

ಪ್ರಸ್ತಾವಿಕ ೩೮-ಎ ನಿಯಮದ (೨)ನೇ ಉಪನಿಯಮದಲ್ಲಿ 'ಸಭಾಧ್ಯಕ್ಷರು ಅನುಮತಿಸಿದ' ಎಂಬ ಪದಗಳಿಗೆ 'ಸಭಾಧ್ಯಕ್ಷರು ತಮ್ಮ ವಿವೇಚನಾನುಸಾರ' ಅನುಮತಿಸಿದ."

ಈ ಪ್ರಸ್ತಾವವನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಹಾಗಿದ್ದರೆ ನಾನು ೩೮-ಎ(೧) ಮತ್ತು ೩೮-ಎ(೨) ಇಡೀ ಖಂಡವನ್ನು ಸಭೆಯ ಮುಂದೆ ಇಡುತ್ತೇನೆ.

"೩೮-ಎ(೧) : ಭಾರತ ಸ್ವಾತ್ರಂತ್ರ್ಯ ಅಧಿನಿಯಮ ೧೯೪೭ಕ್ಕೆ ಅಥವಾ ಸದರಿ ಅಧಿನಿಯಮದ ಅಡಿಯಲ್ಲಿ

ಅಂಗೀಕರಿಸಿದಂತೆ, ಭಾರತ ಸರ್ಕಾರ ಅಧಿನಿಯಮ ೧೯೩೫ರ ಅಡಿಯಲ್ಲಿ ರಚಿಸಿದ ಯಾವುದೇ ಆದೇಶಕ್ಕೆ ನಿಯಮಕ್ಕೆ, ವಿನಿಯಮಕ್ಕೆ ಅಥವಾ ಇತರ ಲಿಖಿತಕ್ಕೆ ಅಥವಾ ಅದಕ್ಕೆ ಯಾವುದೇ ತಿದ್ದುಪಡಿಯನ್ನು ಪ್ರಸ್ತಾವಿಸಲು ಇಚ್ಛಿಸುವ ಯಾರೇ ಸದಸ್ಯರು, ವಿಧೇಯಕವನ್ನು ಮಂಡಿಸಲು ಅನುಮತಿ ಕೋರಬಹುದು. ತನ್ನ ಆಶಯದ ಸೂಚನೆಯನ್ನು ಕೊಡತಕ್ಕದ್ದು; ಮತ್ತು ಸೂಚನೆಯ ಸಹಿತ ವಿಧೇಯಕದ ಪ್ರತಿಯನ್ನು ಮತ್ತು ಉದ್ದೇಶಗಳ ಮತ್ತು ಕಾರಣಗಳ ಪೂರ್ಣ ಹೇಳಿಕೆಯನ್ನು ಸಲ್ಲಿಸತಕ್ಕದ್ದು."

(೨) ಈ ನಿಯಮದ ಅಡಿಯಲ್ಲಿ ವಿಧೇಯಕವನ್ನು ಮಂಡಿಸುವುದಕ್ಕಾಗಿನ ಅನುಮತಿಗಾಗಿ ಕೊಡಬೇಕಾದ ಸೂಚನೆಯ ಅವಧಿಯು, ಕಡಿಮೆ ಅವಧಿಯ ಸೂಚನೆ ಕೊಡುವುದಕ್ಕೆ ಅಧ್ಯಕ್ಷರು ಅನುಮತಿಸಿದ್ದ ಹೊರತು, ಹದಿನೈದು ದಿನಗಳಾಗಿರತಕ್ಕದ್ದು.

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಈಗ ನಾವು ೩೮–ಬಿ ಗೆ ಹೋಗೋಣ.

**ಶ್ರೀಮತಿ ಜಿ. ದುರ್ಗಾಬಾಯಿ :** ಮಾನ್ಯರೆ, ನಾನು ಈ ಮುಂದಿನಂತೆ ಮಂಡಿಸುತ್ತೇನೆ.

"೩೮–ಬಿ, ವಿಧೇಯಕವನ್ನು ಮಂಡಿಸುವುದಕ್ಕಾಗಿನ ಪ್ರಸ್ತಾವವನ್ನು ವಿರೋಧಿಸಿದರೆ, ಮಾನ್ಯ ಸಭಾಧ್ಯಕ್ಷರು, ಆ ತರುವಾಯ......"

**ಹಾಜಿ ಅಬ್ದುಲ್ ಸತ್ತಾರ್ ಹಾಜಿ ಇಷಾಖ್ ಸೇಠ್** (ಮದ್ರಾಸ್ : ಮುಸ್ಲಿಮ್) : ಮಾನ್ಯರೆ, ಇಡೀ ಖಂಡವನ್ನು ಓದಬೇಕಾಗಿಲ್ಲ ಎಂದು ನಾನು ಸೂಚಿಸಬಹುದೆ. ಇದನ್ನು ಈಗಾಗಲೇ ಪರಿಚಾಲನೆ ಮಾಡಲಾಗಿದೆ. ಮಂಡಿಸುವುದಷ್ಟೇ ಮಾಡಬೇಕಿದೆ.

**ಶ್ರೀಮತಿ ಜಿ. ದುರ್ಗಾಬಾಯಿ :** ಮಾನ್ಯರೆ, ನಾನು ಖಂಡ ೩೮–ಬಿ ಯನ್ನು ಮಂಡಿಸುತ್ತೇನೆ.

೩೮–ಬಿ : ಒಂದು ವಿಧೇಯಕವನ್ನು ಮಂಡಿಸಲು ಅನುಮತಿಗಾಗಿ ಪ್ರಸ್ತಾವವನ್ನು ವಿರೋಧಿಸಿದರೆ, ಅಧ್ಯಕ್ಷರು, ಸೂಕ್ತವೆಂದು ಭಾವಿಸಿದರೆ. ಅನುಮತಿ ನೀಡಿದ ತರುವಾಯ, ಅದನ್ನು ಮಂಡಿಸಲಿರುವ ಸದಸ್ಯರಿಂದ ಮತ್ತು ಪ್ರಸ್ತಾವವನ್ನು ವಿರೋಧಿಸುವ ಸದಸ್ಯರಿಂದ ಸಂಕ್ಷಿಪ್ತ ವಿವರಗಳ ಹೇಳಿಕೆಯನ್ನು ಪಡೆದು ಮತ್ತಷ್ಟು ಚರ್ಚೆ ನಡೆಸದೆ ಪ್ರಶ್ನೆಯನ್ನು ಕೇಳಬಹುದು.

**ಮಾನ್ಯ ಸಭಾಧ್ಯಕ್ಷರು :** ಶ್ರೀ ನಜಿರುದ್ದೀನ್ ಅಹ್ಮದ್ ಅವರು ತಮ್ಮ ತಿದ್ದುಪಡಿಯನ್ನು ಮಂಡಿಸಬಹುದು.

**ಶ್ರೀ ನಜಿರುದ್ದೀನ್ ಅಹ್ಮದ್ :** ಮಾನ್ಯರೆ, ಪ್ರತಿಯೊಂದು ಖಂಡಕ್ಕೂ ನನ್ನ ತಿದ್ದುಪಡಿಗಳನ್ನು ನಾನು ಮಂಡಿಸುವ ಬದಲು ಇವೆಲ್ಲವನ್ನೂ ಸರ್ಕಾರದ ಪ್ರಾರೂಪಕರು ಮಾಡಿದರೆ ಹೆಚ್ಚು ಉತ್ತಮ ಹಾಗೂ ತೃಪ್ತಿಕರವಾಗಿರುತ್ತದೆ ಎಂದು ಸೂಚಿಸಬಯಸುತ್ತೇನೆ. ಇಲ್ಲವಾದಲ್ಲಿ ಅವುಗಳನ್ನು ನಾನು ಮಂಡಿಸುವುದರಲ್ಲಿ ಪ್ರಯೋಜನವಿಲ್ಲ ಅನ್ನಿಸುತ್ತದೆ. ಯಾಕೆಂದರೆ ಪ್ರಸ್ತಾವವನ್ನು ಪುರಸ್ಕರಿಸಿದವರಿಗೆ ಅವುಗಳನ್ನು ಕೇಳುವ ಅಥವಾ ಪರಿಶೀಲಿಸುವ ಮನಸ್ಸಿದ್ದಂತಿಲ್ಲ. ಆದರೆ ಅವು ಅವಶ್ಯವೆಂದು ನನ್ನ ಭಾವನೆ. ಅದಕ್ಕಾಗಿಯೇ ಅವುಗಳನ್ನು ಮುಂದುವರಿಸಿದ್ದೇನೆ. ಇವು ಲಘು ಅಥವಾ ವಿಳಂಬಕರ ಸ್ವರೂಪದವಲ್ಲ. ಈ ಹಿನ್ನೆಲೆಯಲ್ಲಿ ನಾನೇನು ಮಾಡಬೇಕು ಎಂಬ ಬಗ್ಗೆ ನಿಮ್ಮ ಸಲಹೆಯನ್ನು ಕೋರುತ್ತಿದ್ದೇನೆ. ನನ್ನ ತಿದ್ದುಪಡಿಯನ್ನು ಮಂಡಿಸಲು ನಾನು ನಿರಾಕರಿಸಿದರೆ ಅದು ಸದನದ ಗೌರವಕ್ಕೆ ಚ್ಯುತಿ ತಂದಂತೆ.

ಮಂಡಿಸಲು ಅಪ್ಪಣೆ ಕೋರುತ್ತೇನೆ.

"ಪ್ರಸ್ತಾವಿತ ೩೮–ಬಿ ನಿಯಮದಲ್ಲಿ 'ಒಂದು ವಿಧೇಯಕವನ್ನು ಮಂಡಿಸಲು' ಎಂಬ ಪದಗಳಿಗೆ ಬದಲಾಗಿ. 'ಅಂಥ ವಿಧೇಯಕವನ್ನು ಮಂಡಿಸಲು' ಎಂಬ ಪದಗಳನ್ನು ಸೇರಿಸತಕ್ಕದ್ದು.

ಮಾನ್ಯರೆ, ಈ ತಿದ್ದುಪಡಿ ಅಗತ್ಯವಾಗಿದೆ. ಯಾಕೆಂದರೆ ಖಂಡದ ಮೊದಲ ಭಾಗದಲ್ಲಿ ವಿಧೇಯಕವು ಪರಿಮಿತಗೊಂಡಿದೆ. (such) 'ಅಂಥ' ಎಂಬ ಪದವು ಅದನ್ನು ಹೆಚ್ಚು ಸ್ಪಷ್ಟಪಡಿಸುತ್ತದೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯರೆ, ಈ ಅಂಶವನ್ನು ಕುರಿತು ನಾನು ಉತ್ತರಿಸುವುದಾದರೆ,

ಗೌರವಾನ್ವಿತ ಮಂಡನೆಕಾರರು ಅಧ್ಯಾಯದ ಶೀರ್ಷಿಕೆಯನ್ನು ಪರಿಶೀಲಿಸಿದ್ದೇ ಆದರೆ, ಅಧ್ಯಾಯದ ಶೀರ್ಷಿಕೆಯು "ಭಾರತದ ಸಂವಿಧಾನಕ್ಕೆ ಅವಕಾಶ ಕಲ್ಪಿಸುವ ಶಾಸನ" ("ಲೆಜಿಸ್ಲೇಷನ್ ಫಾರ್ ಮೇಕಿಂಗ್ ಪ್ರಾವಿಷನ್ ಆ್ಯಸ್ ಟು ದ ಕಾನ್‌ಸ್ಟಿಟ್ಯೂಷನ್ ಆಫ್ ಇಂಡಿಯಾ") ಎಂದಿರುವುದನ್ನು ಕಾಣಬಹುದು. ಈ ನಿಯಮಗಳು ಸಂವಿಧಾನವನ್ನು ತಿದ್ದುಪಡಿ ಮಾಡುವ ವಿಧೇಯಕವನ್ನು ಬಿಟ್ಟು ಇನ್ನಾವುದೇ ವಿಧೇಯಕಕ್ಕೆ ಸಂಬಂಧಿಸಿಲ್ಲ. ಆದ್ದರಿಂದ 'ಅಂಥ' ***(such)*** ಎಂಬ ಪದ ತೀರಾ ಅನಗತ್ಯ.

**ಶ್ರೀ ನಜಿರುದ್ದೀನ್ ಅಹ್ಮದ್** : ಮಾನ್ಯರೆ, ಈ ಸ್ಪಷ್ಟೀಕರಣದ ಅನಂತರ, ನನ್ನ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲು ಅನುಮತಿ ಬೇಡುತ್ತೇನೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** : ಮಾನ್ಯರೆ, ಸಮಯವನ್ನು ಉಳಿತಾಯಮಾಡುವ ದೃಷ್ಟಿಯಿಂದ ನಾನು ಒಂದು ಸಲಹೆ ನೀಡಬಯಸುತ್ತೇನೆ. ಇವೆಲ್ಲವೂ ಪ್ರಾರೂಪಣ ತಿದ್ದುಪಡಿಗಳು. ಅಧಿಕೃತ ಪ್ರಾರೂಪಕರು ಈ ಎಲ್ಲ ತಿದ್ದುಪಡಿಗಳನ್ನು ಪರಿಗಣನೆಗೆ ತೆಗೆದುಕೊಂಡು ಎಲ್ಲೆಲ್ಲಿ ಅಗತ್ಯವೆಂದು ಅವರಿಗೆ ಅನ್ನಿಸುತ್ತದೋ ಅಲ್ಲಿ ಅಳವಡಿಸಿಕೊಳ್ಳುವಂತೆ ಈ ಸದನವು ಒಂದು ನಿರ್ಣಯವನ್ನು ಅನುಮೋದಿಸಿದರೆ ಉತ್ತಮವೆಂದು ತೋರುತ್ತದೆ. ನಾವು ತಿದ್ದುಪಡಿಗಳನ್ನು ಒಂದೊಂದಾಗಿ ಕೈಗೆತ್ತಿಕೊಂಡರೆ ಅದಕ್ಕೆ ಇಡೀ ಒಂದು ದಿನಕ್ಕಿಂತ ಹೆಚ್ಚು ಬೇಕಾಗುತ್ತದೆ. ಎಷ್ಟೇ ಆಗಲಿ, ಬೇರೆ ಬೇರೆ ಜನರು ಒಂದೇ ವಿಷಯವನ್ನು ವ್ಯಕ್ತಪಡಿಸಲು ಬೇರೆ ಬೇರೆ ರೀತಿಯ ಭಾಷೆ ಬಳಸುತ್ತಾರೆ. ಈ ವಿಷಯದಲ್ಲಿ ತಮ್ಮ ಸಮಯವನ್ನು ವ್ಯಯಿಸಲು ಪ್ರಯತ್ನಿಸುವ ಸಾಮಾನ್ಯರಿಗಿಂತ, ಇದರಲ್ಲಿ ನಿರ್ದಿಷ್ಟವಾಗಿ ಅರ್ಹತೆ ಪಡೆದ ಪ್ರಾರೂಪಕರಿಗೆ ಈ ವಿಷಯವನ್ನು ಬಿಟ್ಟುಬಿಡುವುದು ಲೇಸು.

**ಮಾನ್ಯ ಸಭಾಧ್ಯಕ್ಷರು** : ಈ ವಿಷಯಕ್ಕೆ ಬರುವ ಮೊದಲು, ನಿಯಮ ೩೮-ಬಿ ಯನ್ನು ಸದನದ ಮುಂದಿಡುತ್ತೇನೆ.

ನಿಯಮ ೩೮-ಬಿ ಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಗೌರವಾನ್ವಿತ ಡಾ. ಬಿ. ಆರ್. ಅಂಬೇಡ್ಕರ್ ಅವರು ಮಾಡಿದ ಸಲಹೆ ಕುರಿತಂತೆ ಶ್ರೀ ನಜಿರುದ್ದೀನ್ ಅಹ್ಮದ್ ಮತ್ತು ಶ್ರೀಮತಿ ಜಿ. ದುರ್ಗಾಬಾಯಿ ಹಾಗೂ ಆಸಕ್ತಿಯುಳ್ಳ ಇತರ ಯಾವುದಾದರೂ ಸದಸ್ಯರು ಪ್ರತ್ಯೇಕವಾಗಿ ಒಟ್ಟಿಗೆ ಕುಳಿತು ಈ ತಿದ್ದುಪಡಿಗಳ ಬಗ್ಗೆ ನಿರ್ಧಾರಮಾಡಿದರೆ, ನಾವು ಅದೇ ಸಮಯದಲ್ಲಿ ಇತರ ನಿರ್ಣಯಗಳ ಬಗ್ಗೆ ಪರಿಶೀಲಿಸಬಹುದು. ನಾವು ಮುಕ್ಕಾಲು ಗಂಟೆಯ ಅನಂತರ ಈ ಖಂಡಗಳನ್ನು ಪರಿಶೀಲಿಸಬಹುದು.

**ಶ್ರೀ ನಜಿರುದ್ದೀನ್ ಅಹ್ಮದ್** : ಆದರೆ, ಇತರ ನಿರ್ಣಯಗಳ ಬಗ್ಗೆ ನನ್ನ ಇತರ ತಿದ್ದುಪಡಿಗಳು ಇವೆ. ಮಾನ್ಯರೆ, ಈ ಖಂಡಗಳು ಹಾಗೂ ತಿದ್ದುಪಡಿಗಳ ಬಗ್ಗೆ ಪರಿಶೀಲಿಸಲು ಯಾವ ಸದಸ್ಯರಿಗೂ ಸಮಯವಿರಲಿಲ್ಲ. ಆದ್ದರಿಂದಲೇ ನಮಗೆ ಕಷ್ಟವಾಗುತ್ತಿದೆ. ಅದರಲ್ಲಿಯೂ ಭೋಜನದ ಅನಂತರ ಎಲ್ಲರೂ ಆಹ್ಲಾದಕರ ಮನಸ್ಸಿನಲ್ಲಿರುತ್ತಾರೆ. ತಾಂತ್ರಿಕತೆಯ ವಿಷಯಗಳ ಬಗ್ಗೆ ಮನಸ್ಸು ತೊಡಗಿಸಲು ಅವರಿಗೆ ಸಾಧ್ಯವಾಗುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಈ ಸೂಚನೆಯನ್ನು ಮಂಡಿಸಿದ ಶ್ರೀಮತಿ ದುರ್ಗಾಬಾಯಿಯವರು ಈ ತಿದ್ದುಪಡಿಗಳನ್ನು ಪರಿಶೀಲಿಸಿ ಯಾವುದನ್ನು ಅಂಗೀಕರಿಸಬಹುದು ಎಂಬ ಬಗ್ಗೆ ನೋಡಬಹುದು. ನಾವು ಅನಂತರ ಈ ವಿಷಯವನ್ನು ಕೈಗೆತ್ತಿಕೊಳ್ಳಬಹುದು. ಅದೇ ಸಮಯದಲ್ಲಿ ನಾವು ಇತರ ಅಂಶಗಳ ಬಗ್ಗೆ ಗಮನ ಹರಿಸಬಹುದು.

ದಿವಾನ್ ಚಮನ್ ಲಾಲ್ ಅವರು ಈಗ ತಮ್ಮ ನಿರ್ಣಯವನ್ನು ಮಂಡಿಸಬಹುದು.

**೫೯-ಎ ನಿಯಮದ ಸೇರ್ಪಡೆ**

**ದಿವಾನ್ ಚಮನ್ ಲಾಲ್** : ಮಾನ್ಯರೆ, ನಾನು ಮಂಡಿಸಲು ಅನುಮತಿ ಬಯಸುತ್ತಿರುವ ನಿರ್ಣಯ ಕೆಳಕಂಡಂತಿದೆ.

ಸಂವಿಧಾನದ ರಚನಾಸಭೆಯ ನಿಯಮಗಳಿಗೆ ಕೆಳಕಂಡ ತಿದ್ದುಪಡಿಯನ್ನು ಪರಿಶೀಲನೆಗಾಗಿ ಕೈಗೆತ್ತಿಕೊಳ್ಳಬೇಕು:

ಹೊಸ ನಿಯಮ ೫೯–ಎ. ೫೯ನೇ ನಿಯಮದ ಅನಂತರ ಕೆಳಕಂಡ ಹೊಸ ನಿಯಮವನ್ನು ಸೇರಿಸಬೇಕು:

"೫೯–ಎ (೧) ಪರಿಚಯಪತ್ರ ಸಮಿತಿಯು ಅಥವಾ ಚುನಾವಣಾ–ನ್ಯಾಯಮಂಡಲಿಯು, ಚುನಾವಣಾ ತಕರಾರು ಅರ್ಜಿಯ ವಿಚಾರಣೆಯ ಉದ್ದೇಶಕ್ಕಾಗಿ, ಸಿವಿಲ್ ಪ್ರಕ್ರಿಯಾ ಸಂಹಿತೆ, ೧೯೦೮ರ ಅಡಿಯಲ್ಲಿ ಸಿವಿಲ್ ನ್ಯಾಯಾಲಯದ ಸಂದರ್ಭದಲ್ಲಿ ಉಪಬಂಧಿಸಿರುವಂತೆ ಅದೇ ರೀತಿಯಾಗಿ ಮತ್ತು ಸಾಧ್ಯವಾದಷ್ಟು ಮಟ್ಟಿಗೆ ಅದೇ ರೀತಿಯಾಗಿ, ಸಮನ್ ಮಾಡಲು ಮತ್ತು ಸಾಕ್ಷಿದಾರರು ಉಪಸ್ಥಿತರಿರುವಂತೆ ಒತ್ತಾಯ ಪಡಿಸಲು ಮತ್ತು ದಸ್ತಾವೇಜುಗಳನ್ನು ಹಾಜುಪಡಿಸಲು ಒತ್ತಾಯಿಸುವ ಅಧಿಕಾರ ಹೊಂದಿರತಕ್ಕದ್ದು.

(೨) ಭಾರತ ಸಾಕ್ಷ್ಯ ಅಧಿನಿಯಮ, ೧೮೭೨ರ ಉಪಬಂಧಗಳು, ಈ ನಿಯಮಗಳ ಉಪಬಂಧಗಳಿಗೊಳಪಟ್ಟು ಮತ್ತು ಅಧ್ಯಕ್ಷರು ಮಾಡಿದ ಸ್ಥಾಯಿ ಆದೇಶಗಳಿಗೆ ಒಳಪಟ್ಟು, ಅಂಥ ಪ್ರತಿಯೊಂದು ವಿಚಾರಗಳಿಗೆ ಅನ್ವಯವಾಗತಕ್ಕದ್ದೆಂದು ಭಾವಿಸತಕ್ಕದ್ದು."

ಮಾನ್ಯರೆ, ಈ ವಿಧಾನಸಭೆ ಅಳವಡಿಸಿಕೊಂಡಿರುವ ಕಾರ್ಯವಿಧಾನದ ನಿಯಮಗಳ ೧೦ನೇ ಅಧ್ಯಾಯದಲ್ಲಿ ಚುನಾವಣಾ ತಕರಾರು ಅರ್ಜಿಗಳ (ಪಿಟಿಶನ್) ವಿಷಯವು ಕಂಡುಬರುತ್ತದೆ. ಇದರ ಸಾಮಾನ್ಯ ನೆಲೆ ಈ ರೀತಿ ಇದೆ. ಒಂದು ಚುನಾವಣಾ ಅರ್ಜಿಯ ಮುಖಾಂತರ ಮಾತ್ರವೇ ಚುನಾವಣೆಯೊಂದರ ಪ್ರಶ್ನೆಯನ್ನು ಕೈಗೆತ್ತಿಕೊಳ್ಳಬಹುದು. ಯಾವುದೇ ಅಭ್ಯರ್ಥಿ ಅಥವಾ ಮತದಾರರು ಈ ಚುನಾವಣಾ ತಕರಾರು ಅರ್ಜಿಯನ್ನು ಹಾಕಬಹುದು: ಅರ್ಜಿಯು ಕ್ರಮಬದ್ಧವಾಗಿದ್ದರೆ, ಆಗ ಸಭಾಧ್ಯಕ್ಷರು ಇದರಲ್ಲಿ ಸಾಕಷ್ಟು ಆಧಾರವಿದೆ ಎಂದು ಮನವರಿಕೆಯಾದರೆ, ಆ ಅರ್ಜಿಯನ್ನು ಪರಿಚಯಪತ್ರಗಳ ಸಮಿತಿಗೆ ಉಲ್ಲೇಖಿಸಬಹುದು. ಆ ತರುವಾಯ ಪರಿಚಯಪತ್ರಗಳ ಸಮಿತಿಯು, ಚುನಾವಣೆ ತಕರಾರು ಅರ್ಜಿಯ ವಿಚಾರಣೆ ಮಾಡತಕ್ಕದ್ದು ಮತ್ತು ಅದರಲ್ಲಿ ಒಳಗೊಂಡ ಆರೋಪಗಳ ಬಗ್ಗೆ ವಿಚಾರ ಮಾಡತಕ್ಕದ್ದು ಮತ್ತು ಸಾಧ್ಯವಾದಷ್ಟು ಬೇಗನೆ ವರದಿಯನ್ನು ಸಲ್ಲಿಸತಕ್ಕದ್ದು. ಪರಿಚಯಪತ್ರಗಳ ಸಮಿತಿಗೆ ಅದು ಸೂಕ್ತವಾಗಿದೆ ಅನ್ನಿಸಿದರೆ ಚುನಾವಣಾ ಅರ್ಜಿಯ ಬಗ್ಗೆ ವಿಚಾರಣೆ ನಡೆಸುವುದಕ್ಕಾಗಿ ಚುನಾವಣಾ ನ್ಯಾಯಾಧಿಕರಣವನ್ನು ನೇಮಿಸಬೇಕು ಎಂದು ಸಭಾಧ್ಯಕ್ಷರಿಗೆ ಶಿಫಾರಸು ಮಾಡಬಹುದು. ಹೀಗಾಗಿ ನಮ್ಮಲ್ಲಿ ದ್ವಿಮುಖ ಕಾರ್ಯವಿಧಾನವಿದೆ. ಪರಿಚಯಪತ್ರಗಳ ಸಮಿತಿಯು ಚುನಾವಣಾ ನ್ಯಾಯಾಧಿಕರಣವನ್ನು ನೇಮಿಸುವಂತೆ ಸಭಾಧ್ಯಕ್ಷರಿಗೆ ಶಿಫಾರಸು ಮಾಡಬಹುದು ಅಥವಾ ಸಭಾಧ್ಯಕ್ಷರಿಗೆ ವರದಿ ನೀಡಬಹುದು. ನ್ಯಾಯಾಧಿಕರಣವನ್ನು ನೇಮಿಸುವ ವಿಷಯಕ್ಕೆ ಬಂದರೆ, ಸಭಾಧ್ಯಕ್ಷರು ಅರ್ಜಿಯ ಗುಣಾವಗುಣಗಳನ್ನು ಪರಿಶೀಲಿಸುವುದಕ್ಕಾಗಿ ಒಬ್ಬರು ಅಥವಾ ಅದಕ್ಕಿಂತ ಹೆಚ್ಚಿನ ಸದಸ್ಯರನ್ನುಳ್ಳ ಒಂದು ಚುನಾವಣಾ ನ್ಯಾಯಾಧಿಕರಣವನ್ನು ನೇಮಿಸಬಹುದು. ಈಗ ಒಂದು ಲೋಪವಿದೆ, ಚುನಾವಣಾ ನ್ಯಾಯಾಧಿಕರಣಕ್ಕೆ ಚುನಾವಣಾ ಅರ್ಜಿಯನ್ನು ಹಸ್ತಾಂತರಿಸಿದ ಅನಂತರದ ಕಾರ್ಯವಿಧಾನ ಕುರಿತಂತೆ ಸ್ವಲ್ಪ ಸಂದೇಹವಿದೆ.

ನಿಯಮ ೪೩ (೫)ರ ಪ್ರಕಾರ, ಸಭಾಧ್ಯಕ್ಷರು ಪರಿಚಯಪತ್ರಗಳ ಸಮಿತಿಯ ಕಲಾಪ ನಿರ್ವಹಣೆಗಾಗಿ ಸ್ಥಾಯಿ ಆದೇಶಗಳನ್ನು ಮಾಡಬಹುದು. ಚುನಾವಣಾ ನ್ಯಾಯಾಧಿಕರಣದ ಮುಂದೆ ಹಾಜರಾಗುವುದಕ್ಕಾಗಿ ಸಾಕ್ಷಿಗಳನ್ನು ಒತ್ತಾಯಿಸುವ ಅಥವಾ ಅವರ ಹಾಜರಾತಿಯನ್ನು ಒತ್ತಾಯಿಸುವ, ಅವರನ್ನು ಕರೆಸುವ, ಹಾಜರಾತಿಗೆ ಬಲವಂತ ಪಡಿಸುವ ಅಥವಾ ದಸ್ತಾವೇಜುಗಳಿಗಾಗಿ ಒತ್ತಾಯಿಸುವ ಉದ್ದೇಶಕ್ಕಾಗಿ ಅವರು ನಿಯಮಗಳನ್ನು ಮಾಡಬಹುದಾಗಿದೆಯೇ ಎಂಬುದು ಸಂದೇಹಾಸ್ಪದ. ಆದ್ದರಿಂದ ಸಾಕ್ಷಿಗಳ ಹಾಜರಾತಿ ಮತ್ತು ದಸ್ತಾವೇಜುಗಳ ಒದಗಿಸುವಿಕೆಯನ್ನು ಕೇಳುವ ಅಧಿಕಾರವನ್ನು ಕೊಡುವಂತೆ ಈ ನಿರ್ದಿಷ್ಟ ೫೯–ಎ

ನಿಯಮವನ್ನು ಅಳವಡಿಸುವ ಆವಶ್ಯಕತೆ ಉದ್ಭವಿಸಿದೆ.

ಈ ಅಧಿಕಾರಕ್ಕೆ ಸಂಬಂಧಿಸಿದಂತೆ ಎರಡು ಮುಖಗಳಿವೆ. ಕಾರ್ಯವಿಧಾನವು ಮಾತ್ರ ಸಾಧ್ಯವಾದಷ್ಟು ಮಟ್ಟಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆಯ ಅಡಿಯ ಸಿವಿಲ್ ದಾವೆಗಳಲ್ಲಿ ಅಳವಡಿಸಿಕೊಳ್ಳಲಾಗಿರುವ ಕಾರ್ಯವಿಧಾನದಂತೆಯೇ ಇರುತ್ತದೆ. ಎರಡನೆಯದಾಗಿ, ಸ್ಥಾಯಿ ಆದೇಶಗಳು ಮತ್ತು ವಿಧಾನಸಭೆ ನಿಯಮಗಳಿಗೆ ಒಳಪಟ್ಟು ಚುನಾವಣಾ ನ್ಯಾಯಾಧಿಕರಣದ ಮುಂದೆ ಹಾಜರುಪಡಿಸುವ ಸಾಕ್ಷ್ಯಕ್ಕೆ, ಸಾಕ್ಷ್ಯ ಅಧಿನಿಯಮವನ್ನು ಅನ್ವಯಿಸತಕ್ಕದು.

ಈ ತಿದ್ದುಪಡಿಯ ಅಗತ್ಯತೆಯನ್ನು ಗೌರವಾನ್ವಿತ ಸದಸ್ಯರಿಗೆ ಮನವರಿಕೆ ಮಾಡಿಕೊಡಲು ದೀರ್ಘವಾದ ಭಾಷಣಗಳ ಅಗತ್ಯವಿಲ್ಲವೆಂದು ತೋರುತ್ತದೆ. ಇದುವರೆಗೆ ಐದು ಅಥವಾ ಆರು ಚುನಾವಣಾ ಅರ್ಜಿಗಳು ಇನ್ನೂ ಇತ್ಯರ್ಥವಾಗದೆ ಉಳಿದಿವೆ ಮತ್ತು ಈ ಅರ್ಜಿಗಳ ಸೂಕ್ತ ವಿಲೇವಾರಿಗಾಗಿ ಈ ಸಂದೇಹವನ್ನು ನಿವಾರಿಸಬೇಕಾಗಿರುತ್ತದೆ ಹಾಗೂ ಈ ನಿಯಮವನ್ನು ಅಂಗೀಕರಿಸಬೇಕು ಎಂದು ತಿಳಿಸುತ್ತಿದ್ದೇನೆ.

**ಮಾನ್ಯ ಸಭಾಧ್ಯಕ್ಷರು :** ಶ್ರೀ ನಜಿರುದ್ದೀನ್ ಅಹ್ಮದ್ ಅವರು ತಾವು ಸೂಚನೆ ಕೊಟ್ಟಿರುವ ತಿದ್ದುಪಡಿಯನ್ನು ಮಂಡಿಸಬಹುದು.

**ಶ್ರೀ ಕೆ. ಸಂತಾನಮ್ :** ಕ್ರಿಯಾ ಲೋಪಕ್ಕೆ ಸಂಬಂಧಿಸಿದಂತೆ, ಮಾನ್ಯರೆ, ಈ ವಿಧಾನಸಭೆ ಯಾವುದೇ ನಿಯಮಕ್ಕೆ ಕಾನೂನು ಬಲವಿದೆಯೆಂದು ನನಗೆ ಅನ್ನಿಸುತ್ತಿಲ್ಲ. ಈ ಕಡ್ಡಾಯವು ಬೇಕೆಂದಾದರೆ, ಶಾಸಕಾಂಗದಲ್ಲಿ ಸೂಕ್ತವಾಗಿ ಪರಿಚಯಿಸಿ ಅನುಮೋದಿಸಲಾದ ವಿಧೇಯಕದ ಮೂಲಕ ಇದನ್ನು ಮಾಡಬೇಕು. ಆಗ ಮಾತ್ರವೇ ಸಿವಿಲ್ ಪ್ರಾಧಿಕಾರಗಳು ಇವುಗಳನ್ನು ಮಾನ್ಯಮಾಡುತ್ತವೆ. ಸಿವಿಲ್ ನ್ಯಾಯಾಲಯಗಳು ಈ ವಿಧಾನಸಭೆಯ ನಿಯಮಗಳಿಗೆ ಕಾನೂನು ಸಂಜ್ಞೇಯತೆಯನ್ನು ಕೊಡುವುದಿಲ್ಲ. ಆದ್ದರಿಂದ ಇದು ಅಧಿಕಾರಾತೀತವೆಂದು ನನಗೆ ಅನ್ನಿಸುತ್ತದೆ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್ :** ಭಾರತದ ಸ್ವಾತಂತ್ರ್ಯ ಕಾಯಿದೆಯ ಅಡಿಯಲ್ಲಿ ಈ ವಿಧಾನಸಭೆಯನ್ನು ಎಲ್ಲ ಅಧಿಕಾರಗಳೂ ಇರುವ ಡೊಮಿನಿಯನ್ ಶಾಸಕಾಂಗ ಎಂದು ಮಾನ್ಯ ಮಾಡಲಾಗಿದೆ. ಆದ್ದರಿಂದ ಇದನ್ನು ನೀವು ನಿಯಮವೆನ್ನಿ ಅಥವಾ ಕಾನೂನು ಎನ್ನಿ, ಹೇಗೆ ಕರೆದರೂ ಇದಕ್ಕೆ ಕಾನೂನು ಬಲವಿದೆ.

**ಮಾನ್ಯ ಸಭಾಧ್ಯಕ್ಷರು :** ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್ ಅವರು ಮುಂದಿಟ್ಟಂತಹ ಅಭಿಪ್ರಾಯವನ್ನು ನಾನು ಸ್ವೀಕರಿಸುತ್ತೇನೆ.

**ಶ್ರೀ ನಜಿರುದ್ದೀನ್ ಅಹ್ಮದ್ :** ಮಾನ್ಯರೆ, ಕೆಳಕಂಡಂತೆ ಮಂಡಿಸಲು ಅಪ್ಪಣೆ ಕೋರುತ್ತೇನೆ.

"(೧) ಪ್ರಸ್ತಾವಿತ ೫೯-ಎ ನಿಯಮದ (೧)ನೇ ಉಪನಿಯಮದಲ್ಲಿ ೧೯೦೮ ಎಂಬ ಅಂಕೆಗಳ ತರುವಾಯ, ಈ ಮುಂದಿನದನ್ನು, (೧೯೦೯ರ ೫) ಎಂಬುದನ್ನು ಸೇರಿಸತಕ್ಕದ್ದು.

(೨) ಪ್ರಸ್ತಾವಿತ ೫೯-ಎ ನಿಯಮದ (೨)ನೇ ಉಪನಿಯಮದಲ್ಲಿ 'ಸ್ಥಾಯಿ ಆದೇಶಗಳು' ಎಂಬ ಪದಗಳಿಗೆ ಬದಲಾಗಿ **'ಸ್ಥಾಯಿ ಆದೇಶಗಳು'** ಎಂಬ ಪದಗಳನ್ನು ಸೇರಿಸತಕ್ಕದ್ದು.

ಎರಡೂ ಸಹ ಸ್ವಯಂ ವಿವರಣಾತ್ಮಕವಾಗಿವೆ. ಮೊದಲನೆಯದು ಕೇವಲ ಶಾಸನ ಸಂಖ್ಯೆಯನ್ನು ಕೊಡುತ್ತದೆ. ಎರಡನೆಯದು ಸ್ಥಾಯಿ ಆದೇಶಗಳು (ಸ್ಟ್ಯಾಂಡಿಂಗ್ ಆರ್ಡರ್ಸ್) ಎಂಬ ಪದಗಳ ಮೊದಲ ಅಕ್ಷರಗಳನ್ನು ದೊಡ್ಡ ಅಕ್ಷರಗಳಲ್ಲಿ ಬರೆದಿದೆ. ಈ ತಿದ್ದುಪಡಿಗಳು ಬಹಳ ಔಪಚಾರಿಕ ರೀತಿಯವು. ಇವುಗಳನ್ನು ಅಂಗೀಕರಿಸಬಹುದು.

**ದಿವಾನ್ ಚಮನಲಾಲ್ :** ನಾನು ತಿದ್ದುಪಡಿಗಳನ್ನು ಅಂಗೀಕರಿಸುತ್ತೇನೆ.

ಈ ತಿದ್ದುಪಡಿಗಳನ್ನು ಅಂಗೀಕರಿಸಲಾಯಿತು.

ಈ ಪ್ರಸ್ತಾವವನ್ನು ತಿದ್ದುಪಡಿಯಾದಂತೆ ಅಂಗೀಕರಿಸಲಾಯಿತು.

## ನಿಯಮಗಳಾದ ೫೧, ೫೩, ೬೦, ೬೧ ಹಾಗೂ ಹೊಸ ನಿಯಮ ೬೭ರ ತಿದ್ದುಪಡಿ

**ಶ್ರೀ ಪಿ. ಗೋವಿಂದ ಮೆನನ್ :** ಮಾನ್ಯ ಸಭಾಧ್ಯಕ್ಷರೆ, ನಾನು ಪ್ರಸ್ತಾವಿಸಲಿರುವ ಪ್ರಸ್ತಾವವು ಬಹಳ ಔಪಚಾರಿಕವಾಗಿರುವಂಥದ್ದು. ಈ ವಿಧಾನಸಭೆಯು ಅಳವಡಿಸಿಕೊಂಡಿರುವ ನಿಯಮಗಳ ೧೦ನೇ ಅಧ್ಯಾಯವು ಈ ವಿಧಾನಸಭೆಯ ಸದಸ್ಯರ ಚುನಾವಣೆಗೆ ಸಂಬಂಧಿಸಿದ ಸಂದೇಹಗಳು ಹಾಗೂ ವಿವಾದಗಳ ಬಗ್ಗೆ ನಿರ್ಣಯಿಸಲು ಅಗತ್ಯವಾದ ಕಾರ್ಯವಿಧಾನವನ್ನು ನಿರೂಪಿಸುತ್ತದೆ. ಆದರೆ ಈ ಅಧ್ಯಾಯದ ೫೧ನೇ ನಿಯಮದಲ್ಲಿರುವ 'ಅಭ್ಯರ್ಥಿ' ಮತ್ತು 'ಚುನಾಯಿತ ಅಭ್ಯರ್ಥಿ' ಎಂಬ ಪದಗಳ ವ್ಯಾಖ್ಯೆಯನ್ನು ಅವಗಾಹನೆ ಮಾಡಿದಾಗ ಭಾರತೀಯ ರಾಜ್ಯಗಳಿಂದ ಚುನಾಯಿತರಾದ ಸದಸ್ಯರಿಗೆ ಈ ನಿಯಮಗಳು ಅನ್ವಯಿಸುವುದಿಲ್ಲವೆಂದು ಕಂಡುಬರುತ್ತದೆ. ಭಾರತೀಯ ರಾಜ್ಯಗಳಿಂದ ಚುನಾಯಿತರಾದ ಸದಸ್ಯರಿಗೆ ಸಂಬಂಧಿಸಿದಂತೆ ಗೌರವಾನ್ವಿತ ಅಧ್ಯಕ್ಷರಿಂದ ಸ್ಥಾಯಿ ಆದೇಶಗಳು ರೂಪಿಸಲ್ಪಟ್ಟಿವೆ ಮತ್ತು ಪ್ರಸ್ತುತದಲ್ಲಿ ಈ ವಿಷಯವನ್ನು ಈ ಸ್ಥಾಯಿ ಆದೇಶಗಳ ಅಡಿಯಲ್ಲಿ ಪರಿಶೀಲಿಸಲಾಗುತ್ತಿದೆ. ಈ ಪ್ರಸ್ತಾವದಲ್ಲಿರುವ ಪ್ರಯತ್ನವೇನೆಂದರೆ ಈ ಸ್ಥಾಯಿ ಆದೇಶಗಳನ್ನು ನಿಯಮಗಳಲ್ಲಿಯೇ ಅಳವಡಿಸುವುದು. ಮಾನ್ಯರೆ, ನಿಯಮ ೫೧ರಲ್ಲಿ, ಕೆಳಕಂಡಂತೆ ತಿದ್ದುಪಡಿ ಮಾಡಬೇಕು ಎಂದು ಮಂಡಿಸುತ್ತಿದ್ದೇನೆ:

(೧) ಖಂಡ (ಎ) ಅನಂತರ, ಕೆಳಗಿನ ಹೊಸ ಖಂಡಗಳನ್ನು ಸೇರಿಸಿ:

"(ಎಎ) ಭಾರತೀಯ ರಾಜ್ಯದ ಅಥವಾ ರಾಜ್ಯಗಳ ಪ್ರತಿನಿಧಿಗಳು, ಎಂದರೆ, ಈ ನಿಯಮಗಳ ಅನುಸೂಚಿಯಲ್ಲಿ ಒಳಗೊಂಡ ಉಪಬಂಧಗಳಿಗೆ ಅನುಸಾರವಾಗಿ ವಿಧಾನಸಭೆಯಲ್ಲಿ ಅಂಥ ರಾಜ್ಯದ ಅಥವಾ ರಾಜ್ಯಗಳ ಪ್ರತಿನಿಧಿಗಳಾಗಿ ಆಯ್ಕೆಯಾಗಿರುವ ವ್ಯಕ್ತಿ."

(೨) ಖಂಡ (ಬಿ)ಯ ಅಂತ್ಯದಲ್ಲಿ ಕೆಳಕಂಡ ಅಂಶವನ್ನು ಸೇರಿಸಬೇಕು:

"ಮತ್ತು ಭಾರತೀಯ ರಾಜ್ಯದ ಅಥವಾ ರಾಜ್ಯಗಳ ರಾಜನು ಅಥವಾ ರಾಜರು ಅಥವಾ ಅವರ ಪರವಾಗಿ ಅಂಥ ರಾಜ್ಯದ ಅಥವಾ ರಾಜ್ಯಗಳ ಪ್ರತಿನಿಧಿ ಎಂದು ವಿಧ್ಯುಕ್ತವಾಗಿ ಆಯ್ಕೆ ಮಾಡಿರುವುದಾಗಿ, ಈ ನಿಯಮಗಳ ಅನುಸೂಚಿಯಲ್ಲಿ ಉಪಬಂಧಿಸಲಾಗಿರುವ ರೀತಿಯಲ್ಲಿ ಸಭಾಧ್ಯಕ್ಷರಿಗೆ ಯಾರ ಹೆಸರನ್ನು ವರದಿ ಮಾಡಲಾಗಿದೆಯೋ ಆ ಅಭ್ಯರ್ಥಿಯು ಒಳಗೊಳ್ಳುತ್ತಾನೆ."

**ಮಾನ್ಯ ಸಭಾಧ್ಯಕ್ಷರು :** ಈ ಪ್ರಸ್ತಾವಕ್ಕೆ ಯಾವುದೇ ತಿದ್ದುಪಡಿಯಿಲ್ಲ.

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಶ್ರೀ ಪಿ. ಗೋವಿಂದ ಮೆನನ್ :** ಮಾನ್ಯರೆ, ಕೆಳಕಂಡಂತೆ ಮಂಡಿಸುತ್ತೇನೆ.

"೫೩ಅನ್ನು ನಿಯಮದ (೧)ನೇ ಉಪನಿಯಮದ (೧)ನೇ ಖಂಡದಲ್ಲಿ 'ವಿಧಾನಸಭೆಗೆ ಪ್ರಥಮ ಚುನಾವಣೆಯ ಸಂದರ್ಭದಲ್ಲಿ' ಎಂಬ ಪದಗಳಿಗೆ ಬದಲಾಗಿ, 'ಈ ನಿಯಮಗಳ ಪ್ರಕಟಣೆಗೆ ಮೊದಲು ವಿಧಾನಸಭೆಗೆ ನಡೆದ ಚುನಾವಣೆಯ ಸಂದರ್ಭದಲ್ಲಿ' ಎಂಬ ಪದಗಳನ್ನು ಸೇರಿಸತಕ್ಕದ್ದು.

"೫೩ನೇ ನಿಯಮದ (೧)ನೇ ಉಪನಿಯಮದ (೨)ನೇ ಖಂಡದಲ್ಲಿ 'ಸಮುಚಿತ ರಾಜ್ಯಪತ್ರದಲ್ಲಿ' ಎಂಬ ಪದಗಳಿಗೆ ಬದಲಾಗಿ 'ಭಾರತ ರಾಜ್ಯ ಪತ್ರದಲ್ಲಿ ಅಥವಾ ಸಂಬಂಧಪಟ್ಟ ಪ್ರಾಂತ್ಯದ ಸರ್ಕಾರಿ ರಾಜ್ಯಪತ್ರದಲ್ಲಿ.'"

**ಮಾನ್ಯ ಸಭಾಧ್ಯಕ್ಷರು :** ಈ ಪ್ರಸ್ತಾವಕ್ಕೆ ಯಾವುದೇ ತಿದ್ದುಪಡಿಯಿಲ್ಲ.

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಶ್ರೀ ಪಿ. ಗೋವಿಂದ ಮೆನನ್ :** ಮಾನ್ಯರೆ, ಕೆಳಕಂಡಂತೆ ಮಂಡಿಸುತ್ತೇನೆ.

"೬೦ನೇ ನಿಯಮದ (೧)ನೇ ಉಪನಿಯಮದಲ್ಲಿ 'ಭಾರತ ವಿಧಾನಸಭಾ ಚುನಾವಣಾ ನಿಯಮಗಳು' ಎಂಬ ಪದಗಳಿಗೆ '೧೯೪೭ರ ಆಗಸ್ಟ್ ೧ನೇ ದಿನಾಂಕದಂದು ಜಾರಿಯಲ್ಲಿರುವಂತೆ' ಎಂಬ ಪದಗಳನ್ನು ಸೇರಿಸತಕ್ಕದ್ದು."

**ಮಾನ್ಯ ಸಭಾಧ್ಯಕ್ಷರು :** ಈ ಪ್ರಸ್ತಾವಕ್ಕೆ ಯಾವುದೇ ತಿದ್ದುಪಡಿಯಿಲ್ಲ.

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಶ್ರೀ ಪಿ. ಗೋವಿಂದ ಮೆನನ್** : ಮಾನ್ಯರೆ, ಕೆಳಕಂಡಂತೆ ಮಂಡಿಸುತ್ತೇನೆ.

"೬೧ನೇ ನಿಯಮದ ಕೊನೆಯಲ್ಲಿ ಮುಂದಿನದನ್ನು ಸೇರಿಸತಕ್ಕದ್ದು:

'ಮತ್ತು ಹಾಗೆ ಹೊರಡಿಸಿದ ಆದೇಶಗಳು ಅಂತಿಮವಾಗಿರತಕ್ಕದ್ದು ಮತ್ತು ಯಾವುದೇ ನ್ಯಾಯಾಲಯದಲ್ಲಿ ಅವುಗಳನ್ನು ಪ್ರಶ್ನಿಸತಕ್ಕದ್ದಲ್ಲ.'"

**ಮಾನ್ಯ ಅಧ್ಯಕ್ಷರು** : ಈ ಪ್ರಸ್ತಾವಕ್ಕೆ ಯಾವುದೇ ತಿದ್ದುಪಡಿಯಿಲ್ಲ.

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಶ್ರೀ ಪಿ. ಗೋವಿಂದ ಮೆನನ್** : ಮಾನ್ಯರೆ, ನಾನು ಮಂಡಿಸುತ್ತೇನೆ.

೬೬ನೇ ನಿಯಮದ ಅನಂತರ ಕೆಳಕಂಡ ಹೊಸ ನಿಯಮವನ್ನು ಸೇರಿಸಿ.

"೬೭. ಅದರ ಅಡಿಯಲ್ಲಿ ಚುನಾವಣೆಗೆ ಸಂಬಂಧಿಸಿದಂತೆ ಹೊರತಾಗಿ, ಈ ನಿಯಮಗಳ ಅರ್ಥವಿವರಣೆಗೆ ಸಂಬಂಧಿಸಿದಂತೆ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಪ್ರಶ್ನೆಯನ್ನು ಸಭಾಧ್ಯಕ್ಷರ ತಿರ್ಮಾನಕ್ಕೆ ಒಪ್ಪಿಸತಕ್ಕದ್ದು ಮತ್ತು ಅವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

**ಮಾನ್ಯ ಅಧ್ಯಕ್ಷರು** : ಇದಕ್ಕೆ ಯಾವುದೇ ತಿದ್ದುಪಡಿಯಿಲ್ಲ.

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಶ್ರೀ ಪಿ. ಗೋವಿಂದ ಮೆನನ್** : ನಾನು ಮಂಡಿಸಲು ಅಪ್ಪಣೆ ಕೇಳುತ್ತೇನೆ.

ಅನುಸೂಚಿ : ಈ ನಿಯಮಗಳ ಕೊನೆಯಲ್ಲಿ ಈ ಮುಂದಿನ ಅನುಸೂಚಿಯನ್ನು ಸೇರಿಸಬೇಕು.

**ಅನುಸೂಚಿ**

(ನೋಡಿ, ನಿಯಮ ೫೧)

(೧) ವಿವರಣಪತ್ರದಲ್ಲಿ, ಭಾರತದ ರಾಜ್ಯಗಳಿಗೆ ಹಂಚಿಕೆ ಮಾಡಲಾಗಿರುವ ಸ್ಥಾನಗಳನ್ನು ಅನುಬಂಧ–ಎ ಯಲ್ಲಿರುವಂತೆ ವಿವಿಧ ರಾಜ್ಯಗಳಿಗೆ ಹಾಗೂ ರಾಜ್ಯಗಳ ಗುಂಪುಗಳಿಗೆ ಹಂಚಿಕೆ ಮಾಡಲಾಗುವುದು. ಸಾಮಾನ್ಯವಾಗಿ ಅದು ಹೀಗಿದೆ: ೧ ಮಿಲಿಯನ್ ಜನಸಂಖ್ಯೆಗೆ ಒಂದು ಸ್ಥಾನ, ಪ್ರತ್ಯೇಕ ರಾಜ್ಯಗಳ ವಿಷಯದಲ್ಲಿ ನಾಲ್ಕನೇ ಮೂರು ಅಥವಾ ಅದಕ್ಕಿಂತ ಹೆಚ್ಚಿನ ಭಾಗವನ್ನು ಒಂದು ಮಿಲಿಯನ್ ಎಂದು ಎಣಿಸಲಾಗುವುದು. ಅದಕ್ಕಿಂತ ಕಡಿಮೆ ಭಾಗವನ್ನು ಬಿಟ್ಟುಬಿಡಲಾಗುವುದು. ಗುಂಪುಗೂಡಿದ ರಾಜ್ಯಗಳ ವಿಷಯದಲ್ಲಿ ಅರ್ಧಕ್ಕಿಂತ ಹೆಚ್ಚಿನ ಭಾಗವನ್ನು ಒಂದು ಎಂದು ಎಣಿಸಲಾಗುವುದು ಮತ್ತು ಕಡಿಮೆ ಭಾಗವನ್ನು ಬಿಟ್ಟುಬಿಡಲಾಗುವುದು.

*(೨) ಸಂಬಂಧಪಟ್ಟ ಯಾವುದೇ ರಾಜ್ಯ ಅಥವಾ ರಾಜ್ಯಗಳು ಅರ್ಜಿ ಸಲ್ಲಿಸಿದಾಗ, ಸಭಾಧ್ಯಕ್ಷರು, ಈ ಕೆಳಗಿನ ಉದ್ದೇಶಕ್ಕಾಗಿ ಈ ಅನುಸೂಚಿಯ ಅನುಬಂಧ–ಎ ಯನ್ನು ಆದೇಶದ ಮೂಲಕ ತಿದ್ದುಪಡಿ ಮಾಡಬಹುದು.

ಎ) ಪ್ರತ್ಯೇಕವಾದ ಅಥವಾ ಗುಂಪುಗೂಡಿದ ರಾಜ್ಯಗಳಿಗೆ ಹಂಚಿಕೆ ಮಾಡಲಾದ ಪ್ರಾತಿನಿಧ್ಯವನ್ನು ಬದಲಿಸಬಹುದು.

ಬಿ) ಒಂದು ಗುಂಪನ್ನು ಒಂದಕ್ಕಿಂತ ಹೆಚ್ಚಿನ ಗುಂಪುಗಳಾಗಿ ವಿಭಜಿಸುವ ಮೂಲಕ ಅಥವಾ ಒಂದು ಗುಂಪಿನಿಂದ ಇನ್ನೊಂದು ಗುಂಪಿಗೆ ಯಾವುದೇ ರಾಜ್ಯವನ್ನು ಅಥವಾ ರಾಜ್ಯಗಳನ್ನು ವರ್ಗಾವಣೆ ಮಾಡುವ ಅಥವಾ ಮಾಡದಿರುವ ಮೂಲಕ ರಾಜ್ಯಗಳ ಗುಂಪುಗೂಡಿಕೆಯನ್ನು ಬದಲಾಯಿಸಬಹುದು.

(೧) ಅಂತಹ ಯಾವುದೇ ಬದಲಾವಣೆಯು ಎಲ್ಲ ರಾಜ್ಯಗಳ ಅಥವಾ ಗುಂಪಿನ ಅಥವಾ ಗುಂಪುಗೂಡಿದ ಸಂಬಂಧಪಟ್ಟ ರಾಜ್ಯಗಳ ಒಟ್ಟು ಪ್ರಾತಿನಿಧ್ಯಕ್ಕೆ ಧಕ್ಕೆ ತರುವಂತಿಲ್ಲ.

(೨) ಇಂತಹ ಬದಲಾವಣೆಯನ್ನು ಮಾಡುವಾಗ, ಜನಸಂಖ್ಯಾ ಆಧಾರವನ್ನು ಹಾಗೇ ಉಳಿಸಿಕೊಳ್ಳಬೇಕು ಮತ್ತು ಭೌಗೋಳಿಕ ಸಾಮೀಪ್ಯ, ಆರ್ಥಿಕ ಪರಿಗಣನೆಗಳು, ಹಾಗೂ ಜನಾಂಗಿಕ ಸಾಂಸ್ಕೃತಿಕ ಮತ್ತು ಭಾಷಿಕ ಸಂಬಂಧಗಳನ್ನು ಸೂಕ್ತ ಗಮನದಲ್ಲಿಟ್ಟುಕೊಂಡಿರಬೇಕು.

೨–ಎ. ಎರಡನೇ ಕಂಡಿಕೆ ಕೆಳಗೆ ಮಾಡಿದ ಆದೇಶದ ಮೂಲಕ, ರಾಜ್ಯಗಳಿಗೆ ಪ್ರತ್ಯೇಕ ಅಥವಾ ಗುಂಪುಗೂಡಿದ ಅಥವಾ ರಾಜ್ಯಗಳ ಗುಂಪುಗೂಡಿಕೆಗೆ ಹಂಚಿಕೆ ಮಾಡಲಾದ ಪ್ರಾತಿನಿಧ್ಯವನ್ನು ಬದಲಾಯಿಸಿದಾಗ, ಇಂತಹ ಆದೇಶದಿಂದ ಬಾಧಿತವಾದ ರಾಜ್ಯಗಳು ಈ ಸಂಬಂಧವಾಗಿ ಅರ್ಜಿ ಸಲ್ಲಿಸಿದಾಗ, ಹೀಗೆ ಬಾಧಿತವಾದ ರಾಜ್ಯಗಳನ್ನು ಪ್ರತಿನಿಧಿಸುವ ವಿಧಾನಸಭೆಯ ಸದಸ್ಯರ ಸ್ಥಾನಗಳನ್ನು ಖಾಲಿ ಇವೆ ಎಂಬುದಾಗಿ ಸಭಾಧ್ಯಕ್ಷರು ಘೋಷಿಸಬಹುದು.

೩) ವಿಧಾನಸಭೆಯಲ್ಲಿರುವ ರಾಜ್ಯಗಳ ಒಟ್ಟು ಪ್ರತಿನಿಧಿಗಳ ಪೈಕಿ ಶೇ. ೫೦ಕ್ಕೆ ಕಡಿಮೆ ಇಲ್ಲದಷ್ಟು ವ್ಯಕ್ತಿಗಳು, ರಾಜ್ಯ ಶಾಸಕಾಂಗಗಳ ಚುನಾಯಿತ ಸದಸ್ಯರಿಂದ ಚುನಾಯಿತರಾಗಬೇಕು. ಅಂತಹ ಶಾಸಕಾಂಗಗಳು ಇಲ್ಲದಿರುವಂತಹ ಕಡೆ, ಸಂಬಂಧಪಟ್ಟ ರಾಜ್ಯಗಳ ರಾಜರುಗಳು ಈ ಸಂಬಂಧವಾಗಿ ಮಾಡಿರುವಂತಹ ಅವಕಾಶಗಳಿಗೆ ಅನುಗುಣವಾಗಿ ರೂಪಿಸಲಾದ ಚುನಾಯಕ ಗಣಗಳ ಸದಸ್ಯರಿಂದ ಚುನಾಯಿತರಾಗತಕ್ಕದ್ದು. ಚುನಾಯಿತ ಪ್ರತಿನಿಧಿಗಳ ಕೋಟಾವನ್ನು ಸಾಧ್ಯವಾದಷ್ಟು ಒಟ್ಟು ಸಂಖ್ಯೆಯ ಶೇ. ೫೦ಕ್ಕಿಂತ ಬಹಳಷ್ಟು ಮೇಲಕ್ಕೆ ಏರಿಸಲು ರಾಜ್ಯಗಳು ಪ್ರಯತ್ನಿಸಬೇಕು. ಈ ರೀತಿಯಾಗಿ ಯಾವುದೇ ರಾಜ್ಯ ಅಥವಾ ರಾಜ್ಯಗಳ ಗುಂಪಿಗೆ ಹಂಚಿಕೆಯಾದ ಸಂಖ್ಯೆಯ ಅರ್ಧದಷ್ಟು ಸ್ಥಾನಗಳನ್ನು ಸಂಬಂಧಪಟ್ಟ ರಾಜ್ಯ ಅಥವಾ ರಾಜ್ಯಗಳ ರಾಜರು ಮಾಡಿರುವ ಅವಕಾಶಗಳಿಗೆ ಅನುಗುಣವಾಗಿ ಚುನಾವಣೆಯ ಮೂಲಕ ಭರ್ತಿ ಮಾಡಬೇಕು.

* ಈ ಉಪಬಂಧಗಳು (೨ ಮತ್ತು ೨–ಎ) ಹೊಸವು. ಮೂಲ ೨ನೇ ಕಂಡಿಕೆಗಳಿಗೆ ಇವು ಬದಲಿಯಾಗಿ ಬಂದಂಥವು.

೪) ಅನುಬಂಧ–ಎ ಯ ೧ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ವಿವಿಧ ರಾಜ್ಯಗಳ ಗುಂಪುಗಳಿಗೆ ಸಂಬಂಧಿಸಿದಂತೆ ಅನುಬಂಧದ ೪ನೇ ಅಂಕಣದಲ್ಲಿ ಸಂವಾದಿಯಾದ ನಮೂದುಗಳಲ್ಲಿ ತಿಳಿಸಲಾಗಿರುವಂತಹ ರಾಜರುಗಳು ಸಂಚಾಲಕರಾಗಿರತಕ್ಕದ್ದು. ಕಾರ್ಯದರ್ಶಿಯವರು ಗುಂಪಿನ ರಾಜ್ಯಗಳೊಂದಿಗೆ ಸಮಾಲೋಚನೆ ಮಾಡಿ ತಮಗೆ ಆವಶ್ಯಕವೆನಿಸಿದ ಅಥವಾ ಅಪೇಕ್ಷಣೀಯವೆನಿಸಿದಂತಹ ಯಾವುದೇ ಬದಲಾವಣೆಗಳನ್ನು ಅಂಕಣ ೪ರಲ್ಲಿ ಮಾಡಬಹುದು.

೫) ಆಯಾ ಸಂದರ್ಭಕ್ಕೆ ತಕ್ಕಂತೆ ಚುನಾವಣೆ ಅಥವಾ ನಾಮನಿರ್ದೇಶನ ಮುಗಿದ ಅನಂತರ, ಸಂಬಂಧಪಟ್ಟ ರಾಜ್ಯದ ರಾಜರು ಕೆಳಕಂಡ ನಮೂನೆಯಲ್ಲಿ *ಒಂದು ಅಧಿಸೂಚನೆ ಮಾಡತಕ್ಕದ್ದು. ಜೊತೆಗೆ, ಸಂವಿಧಾನ ರಚನಾಸಭೆಗೆ ಪ್ರತಿನಿಧಿ ಅಥವಾ ಪ್ರತಿನಿಧಿಗಳಾಗಿ ಚುನಾಯಿತರಾದ ಅಥವಾ ನಾಮನಿರ್ದೇಶಿತರಾದ ವ್ಯಕ್ತಿ ಅಥವಾ ವ್ಯಕ್ತಿಗಳ ಹೆಸರನ್ನು ತಿಳಿಸಬೇಕು ಮತ್ತು ಅದನ್ನು ಸಂವಿಧಾನ ರಚನಾಸಭೆಯ ಸಭಾಧ್ಯಕ್ಷರಿಗೆ ತಿಳಿಸುವ ವ್ಯವಸ್ಥೆ ಮಾಡಬೇಕು. ರಾಜ್ಯಗಳ ಗುಂಪಿನಿಂದ ಆಯ್ಕೆಮಾಡಿದ ಸಂದರ್ಭದಲ್ಲಿ ಆ ಗುಂಪಿನ ಸಂಚಾಲಕರು ಈ ಅಧಿಸೂಚನೆಯನ್ನು ಮಾಡಬೇಕು.

**+ನಮೂನೆ**

ಇಲ್ಲಿ, ........................................................ ಎಂದು ಕರೆಯಲಾಗುವ [ಪ್ರತಿನಿಧಿಯ(ಗಳ) ಹೆಸರನ್ನು (ಗಳನ್ನು) ಇಲ್ಲಿ ನಮೂದಿಸತಕ್ಕದು] ಭಾರತ ಸಂವಿಧಾನ ರಚನಾಸಭೆಯಲ್ಲಿ ................ ರಾಜ್ಯದ (ಗಳ) [ಇಲ್ಲಿ ರಾಜ್ಯಗಳ ಹೆಸರನ್ನು (ಗಳನ್ನು) ನಮೂದಿಸಿ] ಪ್ರತಿನಿಧಿಯಾಗಿ (ಗಳಾಗಿ) ವಿಧ್ಯುಕ್ತವಾಗಿ ಆಯ್ಕೆಯಾಗಿದ್ದಾನೆ/ದ್ದಾರೆ. ಅದಕ್ಕೆ ಸಾಕ್ಷ್ಯವಾಗಿ ನಾನು ಸಹಿಮಾಡಿ ನನ್ನ ರಾಜ್ಯದ ಮೊಹರು ಹಾಕಿದ ಈ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ರಾಜ್ಯಗಳು : ............

ದಿನಾಂಕ : .............

ರಾಜ್ಯದ ರಾಜ.

## ಅನುಬಂಧ ಎ

## ಪ್ರತ್ಯೇಕ ರಾಜ್ಯ

| 1935ರ ಭಾರತ ಸರ್ಕಾರ ಅಧಿನಿಯಮದ ಮೊದಲ ಅನುಸೂಚಿಯ 2ನೇ ಭಾಗಕ್ಕೆ ಅನುಬಂಧಿಸಲಾದ ಸ್ಥಾನಗಳ ಕೋಷ್ಟಕದಲ್ಲಿ ತೋರಿಸಿರುವಂತೆ ವಿಭಾಗ | ರಾಜ್ಯದ ಹೆಸರು | ಸಂವಿಧಾನ ರಚನಾ ಸಭೆಯಲ್ಲಿ ಸ್ಥಾನಗಳ ಸಂಖ್ಯೆ | ಸಂಚಾಲಕರು |
|---|---|---|---|
| 1 | 2 | 3 | 4 |
| 1 | ಹೈದರಾಬಾದ್ | 16 | ,, |
| 2 | ಮೈಸೂರು | 7 | ,, |
| 3 | ಕಾಶ್ಮೀರ | 4 | ,, |
| 4 | ಗ್ವಾಲಿಯರ್ | 4 | ,, |
| 5 | ಬರೋಡ | 3 | ,, |
| 9 | ಟ್ರಾವಂಕೂರ್ | 6 | ,, |
| 9 | ಕೊಚಿನ್ | 1 | ,, |
| 10 | ಉದಯಪುರ | 2 | ,, |
| 10 | ಜೈಪುರ | 3 | ,, |
| 10 | ಜೋಧಪುರ | 2 | ,, |
| 10 | ಬಿಕಾನೇರ್ | 1 | ,, |
| 10 | ಆಲ್ವಾರ್ | 1 | ,, |
| 10 | ಕೋಟಾ | 1 | ,, |
| 11 | ಇಂದೋರ್ | 1 | ,, |
| 11 | ಭೂಪಾಲ್ | 1 | ,, |
| 11 | ರೇವಾ | 2 | ,, |
| 12 | ಕೊಲ್ಲಾಪುರ | 1 | ,, |
| 14 | ಪಾಟಿಯಾಲ | 2 | ,, |
| 14 | ಬಹಾವಲ್‌ಪುರ | 1 | ,, |
| 16 | ಮಯೂರ್‌ಭಂಜ್ | 1 | ,, |
|  | 20 | 60 |  |

**ಗಡಿನಾಡು ಗುಂಪುಗಳು**

| | | | |
|---|---|---|---|
| ೭.<br>೧೫. | ಸಿಕ್ಕಿಂ<br>ಕೂಚ್ ಬೆಹಾರ್ | ೧ | ಕೂಚ್ ಬೆಹಾರ್ ರಾಜ್ಯದ ರಾಜರು |
| ೧೫.<br>೧೫.<br>೧೭. | ತ್ರಿಪುರ<br>ಮಣಿಪುರ<br>ಖಾಸಿ ರಾಜ್ಯಗಳು | <br>೧<br> | ...<br>ತ್ರಿಪುರ ರಾಜ್ಯಗಳು<br>... |

**ಒಳನಾಡು ಗುಂಪುಗಳು**

| | | | |
|---|---|---|---|
| ೮. | ರಾಮ್‌ಪುರ | ೧ | ರಾಮ್‌ಪುರ ರಾಜ್ಯ |
| | ಬನಾರಸ್ | .. | ... |
| ೯. | ಭರತಪುರ | | ... |
| | ಟೋಂಕ್ | | |
| | ಧೋಲ್‌ಪುರ | .. | .. |
| | ಕರೌಲಿ | .. | ... |
| | ಬುಂದಿ | .. | ... |
| | ಸಿರೋಹಿ | .. | ... |
| (೧೩ ರಾಜ್ಯಗಳು) | ಡುಂಗಾರ್‌ಪುರ | ೩ | ಬುಂದಿ ರಾಜ್ಯ |
| | ಬನ್ಸ್‌ವಾರಾ | .. | ... |
| | ಪರ್ತಾಬ್‌ಗರ್ | .. | ... |
| | ಜಾಲಾವಾರ್ | .. | ... |
| | ಜೈಸಲ್ಮೇರ್ | .. | ... |
| | ಕಿಶನ್‌ಗರ್ | .. | ... |
| ೧೧. | ಶಹಾಪುರ | .. | ... |

| ೧೯೩೫ರ ಭಾರತ ಸರ್ಕಾರದ ಅಧಿನಿಯಮಕ್ಕೆ ಮೊದಲ ಅನುಸೂಚಿಯ ೨ನೇ ಭಾಗದಲ್ಲಿ ಅನುಬಂಧಿಸಲಾದ ಸ್ಥಾನಗಳ ಕೋಷ್ಟಕದಲ್ಲಿ ತೋರಿಸಿರುವಂತೆ ವಿಭಾಗ | ರಾಜ್ಯದ ಹೆಸರು | ಸಂವಿಧಾನ ರಚನಾಸಭೆಯಲ್ಲಿರುವ ಸ್ಥಾನಗಳ ಸಂಖ್ಯೆ | ಸಂಚಾಲಕರು |
|---|---|---|---|
| ೧ | ೨ | ೩ | ೪ |
| | ಡಾಟಿಯಾ | | |
| | ಅರ್ಚಾ | | |
| | ದಾರ್ | | |
| | ದೇವಾಸ್ (ಹಿರಿಯ) | .. | |
| | ದೇವಾಸ್ (ಕಿರಿಯ) | .. | |
| | ಜವೋರಾ | | |
| | ರಾಟ್ಲಂ | | |
| | ಪನ್ನಾ | | |
| | ಸಾಮ್‌ಥರ್ | | |
| | ಅಜಯ್‌ಘರ್ | | |
| | ಬಿಜಾವರ್ | | |
| | ಚರ್ಖಾರಿ | | |
| (೨೬ ರಾಜ್ಯಗಳು) | ಛತ್ತರ್‌ಪುರ್ | ೩ | ಪನ್ನಾ ರಾಜ್ಯ |
| | ಬವೋನಿ | | |
| | ನಾಗೋಡ್ | | |
| | ಮೈಹಾರ್ | | |
| | ಬರೂಂಧಾ | | |
| | ಬರ್ವಾನಿ | | |
| | ಅಲಿ ರಾಜ್‌ಪುರ್ | | |
| | ಝುಬುವಾ | | |
| | ಸೈಲಾನ | | |
| | ಸಿಟ್‌ಮೂವು | | |
| | ರಾಯ್‌ಘರ್ | | |
| | ನರಸಿಂಘರ್ | | |
| | ಖಿಲ್‌ಚಿಪುರ್ | | |

| | | | |
|---|---|---|---|
| ೧೨ | ಕುರ್ವಾಯಿ | | |
| | ಕಚ್ | | |
| | ಇಡಾರ್ | | |
| | ನವನಗರ್ | | |
| | ಭಾವನಗರ್ | | |
| | ಜುನಾಘಡ್ | | |
| | ದ್ರಾಂಗಾಧ್ರ | | |
| | ಗೋಂಡಲ್ | | |
| | ಪೋರ್‌ಬಂದರ್ | | ನವನಗರ್ ರಾಜ್ಯ |
| | ಮೋರ್ವಿ | | |
| (೧೭ ರಾಜ್ಯಗಳು) | ರಾಧನ್‌ಪುರ್ | | |
| | ವಾಂಕನೇರ್ | | |
| | ಪಾಲಿಟಾನ | | |
| | ಧ್ರೋಲ್ | | |
| | ಲಿಂಬ್ಡಿ | | |
| | ವಧ್ವಾನ್ | | |
| | ರಾಜ್‌ಕೋಟ್ | | |
| | ಜಫ್ರಾಬಾದ್ | | |
| ೧೧–ಎ | ರಾಜ್‌ಪಿಪ್ಲಾ | | |
| | ಪಾಲಾನ್‌ಪುರ್ | | |
| | ಕ್ಯಾಂಬೆ | | |
| | ಧರಮ್‌ಪುರ್ | | |
| | ಬಲಾಸಿನೋರ್ | | |
| | ಬಾರಿಯಾ | | |
| ೧೪ ರಾಜ್ಯಗಳು | ಭೋಟಾ ಉದೆಪುರ್ | ೨ | ರಾಜ್‌ಪಿಪ್ಲ ರಾಜ್ಯ |
| | ಸಂತ್ | | |
| | ಲುನಾವಾಡ | | |
| | ಬನ್ಸ್ಡ | | |
| | ಸಚಿನ್ | | |
| | ಜವ್ಹರ್ | | |
| | ಡಾಂಕೂ | | |
| ೧೩ | ಜಂಜಿಂರಾ | | |

| ೧೯೩೫ರ ಭಾರತ ಸರ್ಕಾರದ ಅಧಿನಿಯಮಕ್ಕೆ ಮೊದಲ ಅನುಸೂಚಿಯ ೨ನೇ ಭಾಗದಲ್ಲಿ ಅನುಬಂಧಿಸಲಾದ ಸ್ಥಾನಗಳ ಕೋಷ್ಟಕದಲ್ಲಿ ತೋರಿಸಿರುವಂತೆ ವಿಭಾಗ | ರಾಜ್ಯದ ಹೆಸರು | ಸಂವಿಧಾನ ರಚನಾಸಭೆಯಲ್ಲಿರುವ ಸ್ಥಾನಗಳ ಸಂಖ್ಯೆ | ಸಂಚಾಲಕರು |
|---|---|---|---|
| ೧ | ೨ | ೩ | ೪ |
| ೧೩ | ಸಂಘ್ | | |
| | ಸಾವಂತ್ ವಾಡಿ | | |
| | ಮುಧೋಳ್ | ೨ | ಮೀರಜ್ (ಕಿರಿಯ)ರಾಜ್ಯ |
| | ಭೋರ್ | | |
| | ಜಮಖಂಡಿ | | |
| | ಮೀರಜ್ | (ದೊಡ್ಡ) | |
| | ಮೀರಜ್(ಸಣ್ಣ) | | |
| | ಕುರುಂದ್‌ವಾಡ್(ದೊಡ್ಡ) | | |
| | ಕುರುಂದ್‌ವಾಡ್(ಚಿಕ್ಕ) | | |
| (೧೭ ರಾಜ್ಯಗಳು) | ಅಕ್ಕಲ್‌ಕೋಟ್ | | |
| | ಪಾಲ್ಟಾನ್ | | |
| | ಜತ್ | | |
| | ಅವಂಧ | | |
| ೯ | ರಾಮದುರ್ಗ | | |
| | ಪುದುಕ್ಕೋಟ್ಟೈ | | |
| | ಬಾಂಗನಪಲ್ಲಿ | | |
| | ಸಂಡೂರ್ | | |
| ೧೪ | ಕಪುರ್‌ತಾಲ | | |
| | ಜಿಂದ್ | | |
| | ನಭಾ | | |
| | ಮಂಡಿ | | |
| | ಬಿಲಾಸ್‌ಪುರ್ | | |
| (೧೪ ರಾಜ್ಯಗಳು) | ಸುಕೆಟ್ | | |
| | ತೆಹ್ರಿ–ಘರ್‌ವಾಲ್ | ೩ | ಬಿಸ್ಲಾಪುರ್ ರಾಜ್ಯ |

| | | | |
|---|---|---|---|
| | ಸಿಮುರ್ | | |
| | ಚಂಬ | | |
| | ಫರೀದ್‌ಕೋಟ್ | | |
| | ಮಲೇರ್ ಕೋಟ್ಲ | | |
| $ | ಲೋಹಾರು | | |
| | ಕಲ್‌ಸಿಯಾ | | |
| ೧೭ | ಬಶಾಹರ್ | | |
| ೧೫ | ಸೋನೇಪುರ್ | | |
| | ಪಾಟ್ನಾ | | |
| | ಕಲ್ಹಂದಿ | | |
| | ಕೆಯೋಂಜಾಹರ್ | | |
| | ಧೇಂಕನಾಳ್ | | |
| | ನಯಾಘರ್ | ೪ | ಬುಂದಿ ರಾಜ್ಯ |
| | ತಲ್ಚಾರ್ | | |
| | ನೀಲ್‌ಗಿರಿ | | |
| | ಗಂಗ್‌ಪುರ್ | | |
| | ಬಮ್ರಾ | | |
| ೨೫ ರಾಜ್ಯಗಳು | ಸೇರ್‌ಕೇಲಾ | | |
| | ಬಾದು | | |
| ೧೭ | ಬೋನ್ಯ | | |
| | ಆಥಘರ್ | | |
| | ಪಾಲ ಲಾಹರ | | |
| | ಆತ್ಮಲಿಕ್ | | |
| | ಹಿಂದೋಲ್ | | |
| | ನರಸಿಂಗ್‌ಪುರ್ | | |
| | ಬರಂಬ | | |
| | ಟಿಗಿರಿಯ | | |
| | ಖಂಡ್‌ಪಾರ | | |
| | ರಂನ್‌ಪುರ್ | | |
| | ದಾಸ್‌ಪಲಾ | | |
| | ರಾಯ್‌ರಾಕ್ಹೋಲ್ | | |
| | ಖರ್ಸಾವನ್ | | |

| | | | |
|---|---|---|---|
| ೧೬–ಎ | ಬಸ್ತಾರ್<br>ಸುರ್‌ಗುಜಾ<br>ರಾಯ್‌ಘರ<br>ನಂದಗಾಂವ್<br>ಖೈರಾಘರ್<br>ಜೈಪುರ್ | | |
| ೧೪ ರಾಜ್ಯಗಳು | ಕಂಕೇರ್<br>ಕೋರೆಆ | ೩ | ಬವುದ್ ರಾಜ್ಯ |
| ೧೭ | ಸರಂಘರ್<br>ಚಂಗಭಾಕರ್<br>ಚುಯ್‌ಕದಾನ್<br>ಕವರ್‌ಧಾ<br>ಸಕ್ತಿ<br>ಉದಯಪುರ್ | | |
| ೧೭ | ಮಿಕ್ಕ ಎಲ್ಲ ರಾಜ್ಯಗಳು | ೪ | ಬಗತಾ ರಾಜ್ಯ |

ವಿಶೇಷ ವ್ಯವಸ್ಥೆಯೊಂದಿಗೆ ಲೋಹಾರುವನ್ನು ಬಿಕಾನೇರ್ ರಾಜ್ಯದ ಪ್ರತಿನಿಧಿಯು ಪ್ರತಿನಿಧಿಸುತ್ತಿದ್ದಾರೆ.

**ಮಾನ್ಯ ಸಭಾಧ್ಯಕ್ಷರು** : ಈ ಪ್ರಸ್ತಾವಕ್ಕೆ ಯಾವುದೇ ತಿದ್ದುಪಡಿಯಿಲ್ಲ.

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ನಾವು ಕಾರ್ಯಸೂಚಿಯ ಕೊನೆಯ ಹಂತಕ್ಕೆ ಬಂದಿದ್ದೇವೆ. ಈಗ ಉಳಿದಿರುವ ಅಂದರೆ, ಶ್ರೀಮತಿ ಜಿ. ದುರ್ಗಾಬಾಯಿಯವರು ಮಂಡಿಸಬೇಕಾದ ನಿರ್ಣಯದತ್ತ ಹಿಂದಿರುಗೋಣ.

**೩೮–ಸಿ ಯಿಂದ ೩೮–ವಿ ವರೆಗಿನ ನಿಯಮಗಳ ಸೇರ್ಪಡೆ**

**ಶ್ರೀಮತಿ ಜಿ. ದುರ್ಗಾಬಾಯಿ** : ನಾನು ೩೮–ಸಿ ನಿಯಮವನ್ನು ಮಂಡಿಸಲು ಅಪ್ಪಣೆ ಕೋರುತ್ತೇನೆ.

"೩೮. ಸಿ. ಒಂದು ವಿಧೇಯಕವನ್ನು ಮಂಡಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ. ವಿಧೇಯಕವನ್ನು, ಸಭಾಧ್ಯಕ್ಷರು ಅನ್ಯಥಾ ನಿರ್ದೇಶಿಸಿದ ಹೊರತು, ಭಾರತ ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು."

**ಮಾನ್ಯ ಸಭಾಧ್ಯಕ್ಷರು** : ಶ್ರೀ ನಜಿರುದ್ದೀನ್ ಅಹ್ಮದ್ ಅವರು ಎರಡು ಶಾಬ್ದಿಕ ತಿದ್ದುಪಡಿಗಳ ಬಗ್ಗೆ ಸೂಚನೆ ನೀಡಿದ್ದಾರೆ. ಪ್ರಸ್ತಾವಿತವಾದ ನಿಯಮ ೩೮–ಸಿ ಯಲ್ಲಿ 'ಒಂದು ವಿಧೇಯಕದ ಅನಂತರ' ಎಂಬುದಕ್ಕೆ ಬದಲಾಗಿ 'ವಿಧೇಯಕದ ಅನಂತರ' ಮತ್ತು 'ವಿಧೇಯಕವನ್ನು ಮಂಡಿಸಲಾಗಿದೆ' ಎಂಬುದಕ್ಕೆ ಬದಲಾಗಿ 'ಅದನ್ನು ಮಂಡಿಸಲಾಗಿದೆ' ಎಂಬುದನ್ನು ಸೇರಿಸಬೇಕೆಂದು ತಿಳಿಸಿದ್ದಾರೆ.

**ಶ್ರೀಮತಿ ಜಿ. ದುರ್ಗಾಬಾಯಿ** : ಆ ತಿದ್ದುಪಡಿಯನ್ನು ನಾನು ಅಂಗೀಕರಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಶ್ರೀ ನಜಿರುದ್ದೀನ್ ಅಹ್ಮದ್ ಅವರೇ, ಆಕೆ ನಿಮ್ಮ ತಿದ್ದುಪಡಿಯನ್ನು ಅಂಗೀಕರಿಸಿದ್ದಾರೆ.

**ಶ್ರೀ ನಜಿರುದ್ದೀನ್ ಅಹ್ಮದ್ :** ಮಾನ್ಯರೆ, ಕೆಳಕಂಡಂತೆ ಮಂಡಿಸುತ್ತೇನೆ.

೩೮ಸಿ ನಿಯಮದಲ್ಲಿ, 'ಒಂದು ವಿಧೇಯಕದ ಅನಂತರ' ಎಂಬುದಕ್ಕೆ ಬದಲಾಗಿ 'ವಿಧೇಯಕದ ಅನಂತರ' ಮತ್ತು 'ವಿಧೇಯಕವನ್ನು ಮಂಡಿಸಿದ.....' ಎಂಬ ಪದಗಳಿಗೆ ಬದಲಾಗಿ 'ಅದನ್ನು ಮಂಡಿಸಿದ.....' ಎಂಬ ಪದಗಳನ್ನು ಸೇರಿಸತಕ್ಕದ್ದು.

**ಶ್ರೀಮತಿ ಜಿ. ದುರ್ಗಾಬಾಯಿ :** ನಾನು ತಿದ್ದುಪಡಿಗಳನ್ನು ಅಂಗೀಕರಿಸಿದ್ದೇನೆ.

ಈ ತಿದ್ದುಪಡಿಗಳನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ತಿದ್ದುಪಡಿಯಾದಂತೆ, ನಿಯಮ ೩೮–ಸಿ ಯನ್ನು ಮತಕ್ಕಿಡುತ್ತೇನೆ.

ತಿದ್ದುಪಡಿಯಾದಂತೆ, ನಿಯಮ ೩೮–ಸಿ ಯನ್ನು ಅಂಗೀಕರಿಸಲಾಯಿತು.

**ಶ್ರೀಮತಿ ಜಿ. ದುರ್ಗಾಬಾಯಿ :** ನಿಯಮ ೩೮–ಡಿ ಯನ್ನು ಮಂಡಿಸಲು ಅಪ್ಪಣೆ ಕೋರುತ್ತೇನೆ:

"೩೮–ಡಿ ವಿಧೇಯಕವೊಂದನ್ನು ಮಂಡಿಸಿದಾಗ, ಅಥವಾ ತರುವಾಯದ ಯಾವುದಾದರೂ ಸಂದರ್ಭದಲ್ಲಿ ವಿಧೇಯಕವನ್ನು ಪರಿಚಯಿಸಿದ ಸದಸ್ಯರು, ವಿಧೇಯಕಕ್ಕೆ ಸಂಬಂಧಿಸಿದಂತೆ ಕೆಳಕಂಡ ಯಾವುದಾದರೊಂದು ಪ್ರಸ್ತಾವವನ್ನು ಮಾಡಬಹುದು, ಯಾವುದೆಂದರೆ:

"ಎ) ಅದನ್ನು ವಿಧಾನಸಭೆಯು ಕೂಡಲೇ ಅಥವಾ ಮುಂದೆ ನಿಗದಿಪಡಿಸುವ ಯಾವುದೇ ದಿನಂದಂದು ಪರಿಗಣನೆಗೆ ತೆಗೆದುಕೊಳ್ಳಲಾಗುವುದು; ಅಥವಾ

ಬಿ) ಅದನ್ನು ಪರಿಶೀಲನಾ ಸಮಿತಿಗೆ ಒಪ್ಪಿಸತಕ್ಕದ್ದು;

"ಪರಂತು, ಯಾವುದೇ ಅಂಥ ಪ್ರಸ್ತಾವವನ್ನು, ವಿಧೇಯಕದ ಪ್ರತಿಗಳು ಸದಸ್ಯರಿಗೆ ಲಭ್ಯವಾಗುವಂತೆ ಮಾಡಿದ ತರುವಾಯ ಮತ್ತು ಮಾಡಿರುವ ಅಂಥ ಪ್ರಸ್ತಾವಕ್ಕೆ ಯಾರೇ ಸದಸ್ಯರು ಆಕ್ಷೇಪಿಸುವುದಾದರೆ ಅದಕ್ಕಾಗಿ, ಹಾಗೆ ಸಲ್ಲಿಸಲಾಗಿರುವ ವಿಧೇಯಕದ ಪ್ರತಿಗಳನ್ನು, ಪ್ರಸ್ತಾವನ್ನು ಯಾವ ದಿನಾಂಕದಂದು ಮಾಡಲಾಗುವುದೋ ಆ ದಿನಾಂಕಕ್ಕೆ ಮೂರು ದಿನಗಳಿಗೆ ಮೊದಲು ಲಭ್ಯವಾಗುವಂತೆ ಮಾಡಿದ ಹೊರತು, ಮಾಡತಕ್ಕದ್ದಲ್ಲ ಮತ್ತು ಪ್ರಸ್ತಾವವನ್ನು ಮಾಡುವುದಕ್ಕೆ ಸಭಾಧ್ಯಕ್ಷರು ತಮ್ಮ ವಿವೇಚನಾನುಸಾರ ಅನುಮತಿಸಿದ ಹೊರತು, ಅಂಥ ಆಕ್ಷೇಪಣೆಯು ಇರತಕ್ಕದ್ದು.

ಪ್ರಸ್ತಾವಿಸಲಾಗಿರುವ ನಿಯಮ ೩೮–ಡಿ ಯಲ್ಲಿ 'ಯಾವಾಗ ಒಂದು ವಿಧೇಯಕವನ್ನು..' ಎಂಬ ಪದಗಳಿಗೆ ಬದಲಾಗಿ 'ವಿಧೇಯಕವನ್ನು ಮಂಡಿಸಿದ ಕಾಲದಲ್ಲಿ' ಎಂಬ ಪದಗಳನ್ನು ಸೇರಿಸಬೇಕು ಎಂಬ ತಿದ್ದುಪಡಿಯನ್ನು ನಾನು ಅಂಗೀಕರಿಸುತ್ತೇನೆ.

**ಶ್ರೀ ನಜಿರುದ್ದೀನ್ ಅಹ್ಮದ್ :** ಮಾನ್ಯರೆ, ನಾನು ಕೆಳಕಂಡಂತೆ ಮಂಡಿಸಲು ಅಪ್ಪಣೆ ಕೋರುತ್ತೇನೆ.

ಪ್ರಸ್ತಾವಿತ ೩೮–ಡಿ ನಿಯಮದಲ್ಲಿ '.... ವಿಧೇಯಕವನ್ನು ಮಂಡಿಸಿದಾಗ' ಎಂಬ ಪದಗಳಿಗೆ ಬದಲಾಗಿ, 'ವಿಧೇಯಕವನ್ನು ಮಂಡಿಸಿದ ಕಾಲದಲ್ಲಿ' ಎಂಬ ಪದಗಳನ್ನು ಸೇರಿಸತಕ್ಕದ್ದು."

**ಮಾನ್ಯ ಸಭಾಧ್ಯಕ್ಷರು :** ಆಕೆ, ತಿದ್ದುಪಡಿಯನ್ನು ಅಂಗೀಕರಿಸಿದ್ದಾರೆ. ತಿದ್ದುಪಡಿಯಾದಂತೆ ನಿಯಮವನ್ನು ಮತಕ್ಕಿಡುತ್ತೇನೆ.

ತಿದ್ದುಪಡಿಯಾದಂತೆ ನಿಯಮ ೩೮–ಡಿ ಯನ್ನು ಅಂಗೀಕರಿಸಲಾಯಿತು.

**ಶ್ರೀಮತಿ ಜಿ. ದುರ್ಗಾಬಾಯಿ :** ನಿಯಮ ೩೮–ಇ(೧) ಯನ್ನು ಮಂಡಿಸಲು ಅಪ್ಪಣೆ ಕೋರುತ್ತೇನೆ.

"೩೮ ಇ (೧) ಯಾವುದೇ ಅಂಥ ಪ್ರಸ್ತಾವವನ್ನು ಯಾವ ದಿನಾಂಕದಂದು ಮಂಡಿಸಲಾಗಿದೆಯೋ ಆ ದಿನಾಂಕದಂದು ಅಥವಾ ಅದರ ಮೇಲಿನ ಚರ್ಚೆಯನ್ನು ಯಾವ ದಿನಾಂಕಕ್ಕೆ ಮುಂದೂಡಲಾಗಿದೆಯೋ ಆ ತರುವಾಯದ ದಿನಾಂಕದಂದು, ವಿಧೇಯಕದ ತತ್ತ್ವಗಳನ್ನು ಮತ್ತು ಅದರ ಸಾಮಾನ್ಯ ಉಪಬಂಧಗಳನ್ನು ಚರ್ಚಿಸಬಹುದು, ಆದರೆ, ವಿಧೇಯಕದ ತತ್ತ್ವಗಳನ್ನು ವಿವರಿಸುವುದಕ್ಕೆ ಅಗತ್ಯವಾದುದಕ್ಕಿಂತ ಹೆಚ್ಚಿಗೆ, ವಿಧೇಯಕದ ಮೇಲೆ ಚರ್ಚೆ ನಡೆಸಕೂಡದು."

**ಶ್ರೀ ನಜಿರುದ್ದೀನ್ ಅಹ್ಮದ್ :** ತಿದ್ದುಪಡಿ ಸಂ. ೯ನ್ನು ಮಂಡಿಸಲು ಅಪ್ಪಣೆ ಕೋರುತ್ತೇನೆ.

"ಪ್ರಸ್ತಾವಿತ ೩೮–ಇ ನಿಯಮದ (೧)ನೇ ಉಪನಿಯಮದಲ್ಲಿ, 'ಮುಂದೂಡಲಾಗಿದೆಯೋ..... ತತ್ತ್ವಗಳನ್ನು' ಎಂಬ ಪದಗಳಿಗೆ ಬದಲಾಗಿ, 'ನಿಲುವಳಿ ಮಾಡಲಾಗಿದೆಯೋ..... ತತ್ತ್ವಗಳನ್ನು ಮಾತ್ರ' ಎಂಬ ಪದಗಳನ್ನು ಸೇರಿಸತಕ್ಕದ್ದು."

ಇದಕ್ಕೆ ಸಂಬಂಧಿಸಿದಂತೆ ಇಲ್ಲಿ ಬಳಸಲಾಗಿರುವ ತಾಂತ್ರಿಕ ಭಾಷೆ ಮುಂದೂಡಲಾಗಿದೆ ಎಂದಲ್ಲ. ಮುಂದೂಡಲಾಗಿದೆ ಎಂದರೆ ಎಂದೆಂದಿಗೂ ಮುಂದೂಡಲಾಗಿದೆ ಎಂದರ್ಥ. ನಿಲುವಳಿ ಎಂದರೆ ಇನ್ನಷ್ಟು ಪರಿಶೀಲನೆಗಾಗಿ ನಿಲುವಳಿ ಮಾಡಲಾಗಿದೆ ಎಂದರ್ಥ. ಇಲ್ಲಿ ನಿಲುವಳಿ ಮಾಡಲಾಗಿದೆ, ಎಂಬ ಪದ ಹೆಚ್ಚು ಸೂಕ್ತ.

ಸಂಖ್ಯೆ ೧೦ ತಿದ್ದುಪಡಿಯನ್ನು ನಾನು ಮಂಡಿಸುತ್ತಿದ್ದೇನೆ.

"ಪ್ರಸ್ತಾವಿತ ೩೮–ಇ ನಿಯಮದ (೧)ನೇ ಉಪನಿಯಮದಲ್ಲಿ 'ವಿಧೇಯಕದ ಮೇಲೆ ಚರ್ಚೆ ನಡೆಸಕೂಡದು' ಎಂಬ ಪದಗಳಿಗೆ ಬದಲಾಗಿ ಮುಂದಿನ ಪದಗಳನ್ನು ಸೇರಿಸತಕ್ಕದ್ದು; ಎಂದರೆ.

'ವಿಧೇಯಕದ ಮೇಲೆ ಚರ್ಚೆ ನಡೆಸತಕ್ಕದ್ದಲ್ಲ.'"

**ಶ್ರೀಮತಿ ಜಿ. ದುರ್ಗಾಬಾಯಿ** : ಮಾನ್ಯರೆ, ನಾನು ತಿದ್ದುಪಡಿ ಸಂಖ್ಯೆ ೯ನ್ನು ಅಂಗೀಕರಿಸುವುದಿಲ್ಲ. ತಿದ್ದುಪಡಿ ಸಂಖ್ಯೆ ೧೦ನ್ನು ಅಂಗೀಕರಿಸುತ್ತೇನೆ.

**ಶ್ರೀ ನಜಿರುದ್ದೀನ್ ಅಹ್ಮದ್** : ಮಾನ್ಯರೆ, ತಿದ್ದುಪಡಿ ಸಂಖ್ಯೆ ೯ನ್ನು ಹಿಂತೆಗೆದುಕೊಳ್ಳಲು ನಾನು ಸದನದ ಅನುಮತಿಯನ್ನು ಕೋರುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ತಿದ್ದುಪಡಿ ಸಂಖ್ಯೆ ೯ನ್ನು ಹಿಂತೆಗೆದುಕೊಳ್ಳುವುದಕ್ಕೆ ಸದನವು ಅನುಮತಿ ನೀಡಿದೆ ಎಂದು ಭಾವಿಸಬಹುದೆ?

ಸಭೆಯ ಅನುಮತಿಯೊಂದಿಗೆ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲಾಯಿತು.

**ಮಾನ್ಯ ಸಭಾಧ್ಯಕ್ಷರು** : ತಿದ್ದುಪಡಿ ಸಂಖ್ಯೆ ೧೦ನ್ನು ಮಂಡಿಸಿದವರು ಅದನ್ನು ಅಂಗೀಕರಿಸಿದ್ದಾರೆ. ತಿದ್ದುಪಡಿಯಾದಂತೆ ನಿಯಮ ೩೮–ಇ(೧)ನ್ನು ನಾನು ಮತಕ್ಕಿಡುತ್ತೇನೆ.

ತಿದ್ದುಪಡಿಯಾದಂತೆ ನಿಯಮ ೩೮–ಇ ಯನ್ನು ಅಂಗೀಕರಿಸಲಾಯಿತು.

**ಶ್ರೀಮತಿ ಜಿ. ದುರ್ಗಾಬಾಯಿ** : ನಿಯಮ ೩೮–ಇ(೨)ಅನ್ನು ಮಂಡಿಸಲು ಅಪ್ಪಣೆ ಕೋರುತ್ತೇನೆ.

"೩೮–ಇ (೨) ಈ ಹಂತದಲ್ಲಿ ವಿಧೇಯಕಕ್ಕೆ ಯಾವುದೇ ತಿದ್ದುಪಡಿಯನ್ನು ಮಂಡಿಸತಕ್ಕದ್ದು. ಆದರೆ ವಿಧೇಯಕವನ್ನು ಮಂಡಿಸಿರುವ ಸದಸ್ಯನು ತಾನು ಮಂಡಿಸಿರುವ ವಿಧೇಯಕವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಮಂಡಿಸಿದರೆ, ಯಾರೇ ಸದಸ್ಯರು ಒಂದು ತಿದ್ದುಪಡಿ ರೂಪದಲ್ಲಿ, ವಿಧೇಯಕವನ್ನು ಪರಿಶೀಲನಾ ಸಮಿತಿಗೆ ಒಪ್ಪಿಸಬಹುದೆಂದು ಪ್ರಸ್ತಾವ ಸಲ್ಲಿಸಬಹುದು."

**ಶ್ರೀ ನಜಿರುದ್ದೀನ್ ಅಹ್ಮದ್** : ಮಾನ್ಯರೆ, ಕೆಳಕಂಡಂತೆ ಮಂಡಿಸಲು ಅಪ್ಪಣೆ ಕೋರುತ್ತೇನೆ.

"೩೮–ಇ ನಿಯಮದ(೨)ನೇ ಉಪನಿಯಮದಲ್ಲಿ 'ಯಾರೇ ಸದಸ್ಯರು' ಎಂಬ ಪದಗಳಿಗೆ ಬದಲಾಗಿ 'ಯಾರೇ ಇತರ ಸದಸ್ಯರು' ಎಂಬ ಪದಗಳನ್ನು ಸೇರಿಸತಕ್ಕದ್ದು."

ಯಾರು ಪ್ರಸ್ತಾವವನ್ನು ಮಂಡಿಸುತ್ತಾರೋ ಅವರು ತಿದ್ದುಪಡಿಯನ್ನು ಮಂಡಿಸುವಂತಿಲ್ಲ ಎಂಬುದನ್ನು ಗಮನಿಸಬೇಕು. ಆದ್ದರಿಂದ ಮಂಡಿಸಿದವರನ್ನು ಬಿಟ್ಟು ಇತರ ಯಾರಾದರೂ ಸದಸ್ಯರು ತಿದ್ದುಪಡಿಯನ್ನು ಮಂಡಿಸುವುದಕ್ಕೆ ಅವಕಾಶವಿರಬೇಕು. ಆದ್ದರಿಂದ ಈ ತಿದ್ದುಪಡಿ ಅವಶ್ಯವೆಂದು ನಾನು ಭಾವಿಸುತ್ತೇನೆ.

ಈ ಕೆಳಗಿನದನ್ನೂ ನಾನು ಮಂಡಿಸುತ್ತೇನೆ.

"ಪ್ರಸ್ತಾವಿತ ೩೮–ಇ ನಿಯಮದ (೨)ನೇ ಉಪನಿಯಮದಲ್ಲಿ 'ಅಥವಾ ಅದರ ಮೇಲೆ ಸಾರ್ವಜನಿಕ ಅಭಿಪ್ರಾಯವನ್ನು ಪಡೆಯುವುದಕ್ಕಾಗಿ ಪರಿಚಾಲಿಸಬೇಕಾದ (ಸರ್ಕ್ಯುಲೇಟ್ ಮಾಡಬೇಕಾದ)' ಎಂಬ ಪದಗಳನ್ನು ಕೊನೆಯಲ್ಲಿ ಸೇರಿಸತಕ್ಕದ್ದು."

**ಶ್ರೀಮತಿ ಜಿ. ದುರ್ಗಾಬಾಯಿ :** ನಾನು ತಿದ್ದುಪಡಿ ೧೧ನ್ನು ಅಂಗೀಕರಿಸುವುದಿಲ್ಲ. ತಿದ್ದುಪಡಿ ೧೨ನ್ನು ವಿರೋಧಿಸುತ್ತೇನೆ.

**ಶ್ರೀ ನಜಿರುದ್ದೀನ್ ಅಹ್ಮದ್ :** ಮಾನ್ಯರೆ, ಈ ಎರಡೂ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಲು ನಾನು ಸದನದ ಅನುಮತಿ ಕೋರುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಹಿಂತೆಗೆದುಕೊಳ್ಳುವುದಕ್ಕೆ ಸದನವು ಅನುಮತಿ ನೀಡುತ್ತದೆಂದು ನಾನು ಭಾವಿಸುತ್ತೇನೆ.

ಸಭೆಯ ಅನುಮತಿಯೊಂದಿಗೆ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಈಗ, ತಿದ್ದುಪಡಿಯಾದಂತೆ ೩೮–ಇ ಯನ್ನು ಮತಕ್ಕಿಡುತ್ತೇನೆ.

ತಿದ್ದುಪಡಿಯಾದಂತೆ, ನಿಯಮ ೩೮–ಇ ಯನ್ನು ಅಂಗೀಕರಿಸಲಾಯಿತು.

**ಶ್ರೀಮತಿ ಜಿ. ದುಗಾಬಾಯಿ :** ನಿಯಮ ೩೮–ಎಫ್‌ನ್ನು ಮಂಡಿಸಲು ಅನುಮತಿ ಕೋರುತ್ತೇನೆ.

"೩೮–ಎಫ್ : (೧) ವಿಧೇಯಕವನ್ನು ಮಂಡಿಸಿರುವ ಸದಸ್ಯನು, ಪ್ರತಿಯೊಂದು ಪರಿಶೀಲನಾ ಸಮಿತಿಯ ಸದಸ್ಯನಾಗಿರತಕ್ಕದ್ದು ಮತ್ತು ಅಂಥ ಸಮಿತಿಯ ನೇಮಕಕ್ಕಾಗಿನ ಯಾವುದೇ ಪ್ರಸ್ತಾವದಲ್ಲಿ ಅವನ ಹೆಸರನ್ನು ಸೇರಿಸುವುದು ಆವಶ್ಯಕವಾಗಿರತಕ್ಕದ್ದು.

"(೨) ಸಮಿತಿಯ ಇತರ ಸದಸ್ಯರನ್ನು, ವಿಧೇಯಕವನ್ನು ಪರಿಶೀಲನಾ ಸಮಿತಿಗೆ ಒಪ್ಪಿಸುವ ಪ್ರಸ್ತಾವ ಮಾಡಿದಾಗ, ವಿಧಾನಸಭೆಯು ನೇಮಕ ಮಾಡತಕ್ಕದ್ದು.

'(೩) ಸಮಿತಿಯು, ಸಮಿತಿಯ ಒಬ್ಬರು ಸದಸ್ಯರನ್ನು ಅದರ ಅಧ್ಯಕ್ಷರನ್ನಾಗಿ ಮತ್ತು ಅವರ ಅನುಪಸ್ಥಿತಿಯಲ್ಲಿ ಸಮಿತಿಯ ಇನ್ನೊಬ್ಬ ಸದಸ್ಯರನ್ನು, ಅಧ್ಯಕ್ಷತೆ ವಹಿಸುವುದಕ್ಕಾಗಿ ಮತ್ತು ಅಧ್ಯಕ್ಷರ ಅಧಿಕಾರಗಳನ್ನು ಚಲಾಯಿಸುವುದಕ್ಕಾಗಿ ಆಯ್ಕೆ ಮಾಡತಕ್ಕದ್ದು.

"(೪) ಅಧ್ಯಕ್ಷರು ಮೊದಲ ಸಲ ಮತ ಚಲಾಯಿಸತಕ್ಕದ್ದಲ್ಲ. ಆದರೆ ಮತಗಳು ಸರಿಸಮನಾಗಿ ಬಂದಲ್ಲಿ, ಅವರು ನಿರ್ಣಾಯಕ ಮತ ಚಲಾಯಿಸತಕ್ಕದ್ದು."

'(೫) ಪರಿಶೀಲನಾ ಸಮಿತಿಯು ತಜ್ಞರನ್ನು ಮತ್ತು ಅವರು ಕೈಗೊಂಡ ಕ್ರಮದಿಂದ ಬಾಧಿತರ ವಿಶೇಷ ಹಿತಾಸಕ್ತಿಯ ಪ್ರತಿನಿಧಿಗಳನ್ನು ಹೊಂದಿರತಕ್ಕದ್ದು."

**ಶ್ರೀ ನಜಿರುದ್ದೀನ್ ಅಹ್ಮದ್ :** ಮಾನ್ಯರೆ, ಕೆಳಕಂಡಂತೆ ಮಂಡಿಸಲು ಅಪ್ಪಣೆ ಕೋರುತ್ತೇನೆ.

"ಪ್ರಸ್ತಾವಿತ ೩೮–ಎಫ್, ನಿಯಮದಲ್ಲಿ, 'ಪ್ರತಿಯೊಂದು ಪರಿಶೀಲನಾ ಸಮಿತಿಯು' ಎಂಬ ಪದಗಳಿಗೆ ಮೊದಲು, 'ಯಾವ ಪರಿಶೀಲನಾ ಸಮಿತಿಗೆ ವಿಧೇಯಕವನ್ನು ಒಪ್ಪಿಸಬಹುದೋ ಆ' ಎಂಬ ಪದಗಳನ್ನು ಸೇರಿಸತಕ್ಕದ್ದು."

ಅರ್ಥವನ್ನು ಪೂರ್ಣಗೊಳಿಸಲು ಈ ಪದಗಳು ಅಗತ್ಯ.

**ಶ್ರೀಮತಿ ಜಿ. ದುರ್ಗಾಬಾಯಿ :** ಅವರು, ದಯವಿಟ್ಟು ನಿಯಮ ೩೮–ಎಫ್ ನ ಎಲ್ಲ ತಿದ್ದುಪಡಿಗಳನ್ನು ಮಂಡಿಸಲಿ.

**ಶ್ರೀ ನಜಿರುದ್ದೀನ್ ಅಹ್ಮದ್ :** ಮಾನ್ಯರೆ, ಕೆಳಕಂಡಂತೆ ಮಂಡಿಸಲು ಅಪ್ಪಣೆ ಕೋರುತ್ತೇನೆ.

"ಪ್ರಸ್ತಾವಿತ ೩೮–ಎಫ್ ನಿಯಮದ (೨)ನೇ ನಿಯಮದಲ್ಲಿ 'ನೇಮಕ ಮಾಡತಕ್ಕದ್ದು' ಎಂಬ ಪದಗಳಿಗೆ ಬದಲಾಗಿ, 'ಚುನಾಯಿಸತಕ್ಕದ್ದು' ಎಂಬ ಪದಗಳನ್ನು ಸೇರಿಸತಕ್ಕದ್ದು."

ಶಾಸನಸಭೆಯಿಂದ ಆಯ್ಕೆ ಎಂಬ ಸಂದರ್ಭಕ್ಕೆ 'ಚುನಾವಣೆ' ಎಂಬ ಪದ ಹೆಚ್ಚು ಸೂಕ್ತ.

ಈ ಕೆಳಗಿನದನ್ನು ಮಂಡಿಸಲು ಅಪ್ಪಣೆ ಕೇಳುತ್ತೇನೆ.

"ಪ್ರಸ್ತಾವಿತ ೩೮–ಎಫ್ ನಿಯಮದ (೩)ನೇ ಉಪನಿಯಮದಲ್ಲಿ 'ಸಮಿತಿಯು, ಸಮಿತಿಯ ಒಬ್ಬ ಸದಸ್ಯನನ್ನು ಆಯ್ಕೆ ಮಾಡತಕ್ಕದ್ದು' ಎಂಬ ಪದಗಳಿಗೆ ಬದಲಾಗಿ, 'ಸಮಿತಿಯ ಸದಸ್ಯರು, ತಮ್ಮ ಪೈಕಿ ಒಬ್ಬರನ್ನು ಆಯ್ಕೆ ಮಾಡತಕ್ಕದ್ದು' ಎಂಬ ಪದಗಳನ್ನು ಸೇರಿಸತಕ್ಕದ್ದು."

ಮಾನ್ಯರೆ, ಇದು ಕೇವಲ ಶಾಬ್ದಿಕ ತಿದ್ದುಪಡಿ 'ಸಮಿತಿಯ ಸದಸ್ಯರು' 'ಸಮಿತಿಯ ಸದ್ಯಸ್ಯರೊಬ್ಬರನ್ನು' ಅಧ್ಯಕ್ಷರನ್ನಾಗಿ ಆರಿಸಬೇಕು ಎಂದು ಪ್ರಸ್ತಾವಿತ ನಿಯಮವು ಹೇಳುತ್ತದೆ. ಅದೇ ಪದಗಳನ್ನು ಪುನಾರಾವರ್ತಿಸುವ ಬದಲು 'ಅವರಲ್ಲಿ ಒಬ್ಬರನ್ನು ಆರಿಸಿ' ಎಂದು ನಾನು ಹೇಳಿದ್ದೇನೆ.

ನನ್ನ ಮುಂದಿನ ತಿದ್ದುಪಡಿ ಏನೆಂದರೆ:

"ಪ್ರಸ್ತಾವಿತ ೩೮-ಎಫ್ ನಿಯಮದ (೩)ನೇ ಉಪನಿಯಮದಲ್ಲಿ 'ಇನ್ನೊಬ್ಬ ಸದಸ್ಯರನ್ನು ಆಯ್ಕೆ ಮಾಡಬಹುದು', ಎಂಬ ಪದಗಳ ತರುವಾಯ ಬರುವ 'ಸಮಿತಿಯ...' ಪದವನ್ನು ಬಿಟ್ಟುಬಿಡತಕ್ಕದ್ದು."

ಅನಂತರದ ತಿದ್ದುಪಡಿ ಹೀಗಿದೆ:

"ಪ್ರಸ್ತಾವಿತ ೩೮-ಎಫ್ ನಿಯಮದ (೩)ನೇ ಉಪನಿಯಮದಲ್ಲಿ 'ಅಧ್ಯಕ್ಷರ ಅಧಿಕಾರಗಳು' ಎಂಬ ಪದಗಳಿಗೆ ಬದಲಾಗಿ, 'ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಅವರ ಅಧಿಕಾರಗಳನ್ನು' ಎಂಬ ಪದಗಳನ್ನು ಸೇರಿಸತಕ್ಕದ್ದು."

ಈ ತಿದ್ದುಪಡಿಯ ಉದ್ದೇಶ ಹೀಗಿದೆ : ಅಧ್ಯಕ್ಷರ ಗೈರುಹಾಜರಿಯಲ್ಲಿ ಅಧ್ಯಕ್ಷತೆ ವಹಿಸಲು ಒಬ್ಬ ವ್ಯಕ್ತಿಗೆ ಕೊಟ್ಟ ಅಧಿಕಾರವನ್ನು ಅಧ್ಯಕ್ಷರ ಗೈರುಹಾಜರಿಯಲ್ಲಿ ಮಾತ್ರವೇ ಚಲಾಯಿಸಬೇಕು. ಆದರೆ ನಿಯಮವು ಈಗ ಇರುವಂತೆ, ಅಧ್ಯಕ್ಷತೆ ವಹಿಸಲು ಆರಿಸಲ್ಪಟ್ಟ ವ್ಯಕ್ತಿಯು, ಅಧ್ಯಕ್ಷರು ಹಿಂತಿರುಗಿ ಬಂದು ಸಭೆಗೆ ಸೇರಿಕೊಂಡ ಅನಂತರವೂ ಅಧ್ಯಕ್ಷತೆಯನ್ನು ಮುಂದುವರಿಸಬಹುದು ಎಂದು ಅರ್ಥ ಕೊಡುತ್ತದೆ.

**ಶ್ರೀಮತಿ ಜಿ. ದುರ್ಗಾಬಾಯಿ** : ಮಾನ್ಯರೆ, ನಾನು ಈ ಎಲ್ಲ ತಿದ್ದುಪಡಿಗಳನ್ನು ವಿರೋಧಿಸುತ್ತೇನೆ. ಆಯ್ಕೆ ಸಮಿತಿಯಲ್ಲಿ ಎಲ್ಲ ಸದಸ್ಯರೂ 'ಆಯ್ಕೆಯಾದವರೇ' ಹೊರತು 'ಚುನಾಯಿತರಾದವರಲ್ಲ'. ಅಲ್ಲಿ ಬಳಸಿರುವ ಭಾಷೆ ಅದೇ ಮತ್ತು ಇಲ್ಲಿಯೂ ಅದನ್ನು ಸರಿಯಾಗಿಯೇ ಅಳವಡಿಸಿಕೊಳ್ಳಲಾಗಿದೆ.

ಮಾನ್ಯರೆ, ಸ್ವತಃ ನಾನು ಒಂದು ಚಿಕ್ಕ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ. ಅದೇನೆಂದರೆ:

ಖಂಡ ೩೮-ಎಫ್, ಉಪಖಂಡ(೧)ರಲ್ಲಿ 'ಪರಿಶೀಲನಾ ಸಮಿತಿ' ಎಂಬ ಪದಗಳಿಗೆ ಮೊದಲು ಬರುವ 'ಪ್ರತಿಯೊಂದು ಪದಕ್ಕೆ' ಬದಲಾಗಿ, 'ಒಂದು' ಎಂಬ ಪದವನ್ನು ಸೇರಿಸತಕ್ಕದ್ದು.

**ಶ್ರೀ ನಜಿರುದ್ದೀನ್ ಅಹ್ಮದ್** : ಮಾನ್ಯರೆ, ೧೩೮ರಿಂದ ೧೭೮ರವರೆಗಿನ ನನ್ನ ಎಲ್ಲ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಲು ಅನುಮತಿ ಕೋರುತ್ತೇನೆ.

ಸಂ. ೧೩೮ರಿಂದ ೧೭೮ರವರೆಗಿನ ತಿದ್ದುಪಡಿಗಳನ್ನು ಸಭೆಯ ಅನುಮತಿಯೊಂದಿಗೆ ಹಿಂತೆಗೆದುಕೊಳ್ಳಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಮಂಡಿಸಿದವರಿಂದ ತಿದ್ದುಪಡಿಯಾದಂತೆ ನಿಯಮ ೩೮-ಎಫ್ ಅನ್ನು ಮತಕ್ಕಿಡುತ್ತೇನೆ.

ತಿದ್ದುಪಡಿಯಾದಂತೆ, ನಿಯಮ ೩೮-ಎಫ್ ಅನ್ನು ಅಂಗೀಕರಿಸಲಾಯಿತು.

**ಶ್ರೀಮತಿ ಜಿ. ದುರ್ಗಾಬಾಯಿ** : ಮಾನ್ಯರೆ, ನಿಯಮ ೩೮-ಜಿ ಯನ್ನು ಮಂಡಿಸಲು ಅಪ್ಪಣೆ ಕೋರುತ್ತೇನೆ.

"೩೮-ಜಿ (೧) ವಿಧಾನಸಭೆಯು, ಪರಿಶೀಲನಾ ಸಮಿತಿಯ ಸದಸ್ಯರ ನೇಮಕದ ಕಾಲದಲ್ಲಿ, ಸಭೆಗಾಗಿ ಅಗತ್ಯವಾಗಿ ಉಪಸ್ಥಿತರಾಗಿರಬೇಕಾದ ಸದಸ್ಯರ ಸಂಖ್ಯೆಯನ್ನು ವಿಧಾನಸಭೆಯು ನಿಗದಿಪಡಿಸತಕ್ಕದ್ದು.

"(೨) ಪರಿಶೀಲನಾ ಸಮಿತಿಯ ಯಾವುದೇ ಸಭೆಗಾಗಿ ಯಾವುದೇ ಸಮಯವನ್ನು ನಿಗದಿಪಡಿಸಿದ್ದರೆ, ಅಥವಾ ಯಾವುದೇ ಅಂಥ ಸಭೆಯು ನಡೆಯುತ್ತಿರುವಾಗ, ವಿಧಾನಸಭೆಯು ನಿಗದಿಪಡಿಸಿದ ಸದಸ್ಯರ ಕೋರಂ, ಇಲ್ಲದಿದ್ದರೆ ಸಮಿತಿಯ ಅಧ್ಯಕ್ಷರು, ಕೋರಂ ಸಂಖ್ಯೆ ಆಗುವವರೆಗೆ ಸಭೆಯನ್ನು ಅಮಾನತುಗೊಳಿಸಬಹುದು ಅಥವಾ ಮುಂದಿನ ಮತ್ತೊಂದು ದಿನಕ್ಕೆ ಮುಂದೂಡಬಹುದು.

"(೩) ಸಭೆಗಾಗಿ ನಿಗದಿಪಡಿಸಿದ ಎರಡು ನಿರಂತರ ದಿನಗಳಂದು (೨)ನೇ ಉಪನಿಯಮಕ್ಕೆ ಅನುಸಾರ ಪರಿಶೀಲನಾ ಸಮಿತಿಯ ಸಭೆಯನ್ನು ಮುಂದೂಡಿದ್ದರೆ, ಅಧ್ಯಕ್ಷರು ವಿಷಯವನ್ನು ಅಸೆಂಬ್ಲಿಗೆ ವರದಿ ಮಾಡತಕ್ಕದ್ದು."

**ಶ್ರೀಮತಿ ಜಿ. ದುರ್ಗಾಬಾಯಿ :** ನಾನು ತಿದ್ದುಪಡಿ ೧೧ನ್ನು ಅಂಗೀಕರಿಸುವುದಿಲ್ಲ. ತಿದ್ದುಪಡಿ ೧೨ನ್ನು ವಿರೋಧಿಸುತ್ತೇನೆ.

**ಶ್ರೀ ನಜಿರುದ್ದೀನ್ ಅಹ್ಮದ್ :** ಮಾನ್ಯರೆ, ಈ ಎರಡೂ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಲು ನಾನು ಸದನದ ಅನುಮತಿ ಕೋರುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಹಿಂತೆಗೆದುಕೊಳ್ಳುವುದಕ್ಕೆ ಸದನವು ಅನುಮತಿ ನೀಡುತ್ತದೆಂದು ನಾನು ಭಾವಿಸುತ್ತೇನೆ.

ಸಭೆಯ ಅನುಮತಿಯೊಂದಿಗೆ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಈಗ, ತಿದ್ದುಪಡಿಯಾದಂತೆ ೩೮–ಇ ಯನ್ನು ಮತಕ್ಕಿಡುತ್ತೇನೆ.

ತಿದ್ದುಪಡಿಯಾದಂತೆ, ನಿಯಮ ೩೮–ಇ ಯನ್ನು ಅಂಗೀಕರಿಸಲಾಯಿತು.

**ಶ್ರೀಮತಿ ಜಿ. ದುಗಾಬಾಯಿ :** ನಿಯಮ ೩೮–ಎಫ್‌ನ್ನು ಮಂಡಿಸಲು ಅನುಮತಿ ಕೋರುತ್ತೇನೆ.

"೩೮–ಎಫ್ : (೧) ವಿಧೇಯಕವನ್ನು ಮಂಡಿಸಿರುವ ಸದಸ್ಯನು, ಪ್ರತಿಯೊಂದು ಪರಿಶೀಲನಾ ಸಮಿತಿಯ ಸದಸ್ಯನಾಗಿರತಕ್ಕದ್ದು ಮತ್ತು ಅಂಥ ಸಮಿತಿಯ ನೇಮಕಕ್ಕಾಗಿನ ಯಾವುದೇ ಪ್ರಸ್ತಾವದಲ್ಲಿ ಅವನ ಹೆಸರನ್ನು ಸೇರಿಸುವುದು ಆವಶ್ಯಕವಾಗಿರತಕ್ಕದ್ದು.

"(೨) ಸಮಿತಿಯ ಇತರ ಸದಸ್ಯರನ್ನು, ವಿಧೇಯಕವನ್ನು ಪರಿಶೀಲನಾ ಸಮಿತಿಗೆ ಒಪ್ಪಿಸುವ ಪ್ರಸ್ತಾವ ಮಾಡಿದಾಗ, ವಿಧಾನಸಭೆಯು ನೇಮಕ ಮಾಡತಕ್ಕದ್ದು.

'(೩) ಸಮಿತಿಯು, ಸಮಿತಿಯ ಒಬ್ಬರು ಸದಸ್ಯರನ್ನು ಅದರ ಅಧ್ಯಕ್ಷರನ್ನಾಗಿ ಮತ್ತು ಅವರ ಅನುಪಸ್ಥಿತಿಯಲ್ಲಿ ಸಮಿತಿಯ ಇನ್ನೊಬ್ಬ ಸದಸ್ಯರನ್ನು, ಅಧ್ಯಕ್ಷತೆ ವಹಿಸುವುದಕ್ಕಾಗಿ ಮತ್ತು ಅಧ್ಯಕ್ಷರ ಅಧಿಕಾರಗಳನ್ನು ಚಲಾಯಿಸುವುದಕ್ಕಾಗಿ ಆಯ್ಕೆ ಮಾಡತಕ್ಕದ್ದು.

"(೪) ಅಧ್ಯಕ್ಷರು ಮೊದಲ ಸಲ ಮತ ಚಲಾಯಿಸತಕ್ಕದ್ದಲ್ಲ. ಆದರೆ ಮತಗಳು ಸರಿಸಮನಾಗಿ ಬಂದಲ್ಲಿ, ಅವರು ನಿರ್ಣಾಯಕ ಮತ ಚಲಾಯಿಸತಕ್ಕದ್ದು."

'(೫) ಪರಿಶೀಲನಾ ಸಮಿತಿಯು ತಜ್ಞರನ್ನು ಮತ್ತು ಅವರು ಕೈಗೊಂಡ ಕ್ರಮದಿಂದ ಬಾಧಿತರ ವಿಶೇಷ ಹಿತಾಸಕ್ತಿಯ ಪ್ರತಿನಿಧಿಗಳನ್ನು ಹೊಂದಿರತಕ್ಕದ್ದು."

**ಶ್ರೀ ನಜಿರುದ್ದೀನ್ ಅಹ್ಮದ್ :** ಮಾನ್ಯರೆ, ಕೆಳಕಂಡಂತೆ ಮಂಡಿಸಲು ಅಪ್ಪಣೆ ಕೋರುತ್ತೇನೆ.

"ಪ್ರಸ್ತಾವಿತ ೩೮–ಎಫ್, ನಿಯಮದಲ್ಲಿ, 'ಪ್ರತಿಯೊಂದು ಪರಿಶೀಲನಾ ಸಮಿತಿಯು' ಎಂಬ ಪದಗಳಿಗೆ ಮೊದಲು, 'ಯಾವ ಪರಿಶೀಲನಾ ಸಮಿತಿಗೆ ವಿಧೇಯಕವನ್ನು ಒಪ್ಪಿಸಬಹುದೋ ಆ' ಎಂಬ ಪದಗಳನ್ನು ಸೇರಿಸತಕ್ಕದ್ದು."

ಅರ್ಥವನ್ನು ಪೂರ್ಣಗೊಳಿಸಲು ಈ ಪದಗಳು ಅಗತ್ಯ.

**ಶ್ರೀಮತಿ ಜಿ. ದುರ್ಗಾಬಾಯಿ :** ಅವರು, ದಯವಿಟ್ಟು ನಿಯಮ ೩೮–ಎಫ್ ನ ಎಲ್ಲ ತಿದ್ದುಪಡಿಗಳನ್ನು ಮಂಡಿಸಲಿ.

**ಶ್ರೀ ನಜಿರುದ್ದೀನ್ ಅಹ್ಮದ್ :** ಮಾನ್ಯರೆ, ಕೆಳಕಂಡಂತೆ ಮಂಡಿಸಲು ಅಪ್ಪಣೆ ಕೋರುತ್ತೇನೆ.

"ಪ್ರಸ್ತಾವಿತ ೩೮–ಎಫ್ ನಿಯಮದ (೨)ನೇ ನಿಯಮದಲ್ಲಿ 'ನೇಮಕ ಮಾಡತಕ್ಕದ್ದು' ಎಂಬ ಪದಗಳಿಗೆ ಬದಲಾಗಿ, 'ಚುನಾಯಿಸತಕ್ಕದ್ದು' ಎಂಬ ಪದಗಳನ್ನು ಸೇರಿಸತಕ್ಕದ್ದು."

ಶಾಸನಸಭೆಯಿಂದ ಆಯ್ಕೆ ಎಂಬ ಸಂದರ್ಭಕ್ಕೆ 'ಚುನಾವಣೆ' ಎಂಬ ಪದ ಹೆಚ್ಚು ಸೂಕ್ತ.

ಈ ಕೆಳಗಿನದನ್ನು ಮಂಡಿಸಲು ಅಪ್ಪಣೆ ಕೇಳುತ್ತೇನೆ.

"ಪ್ರಸ್ತಾವಿತ ೩೮–ಎಫ್ ನಿಯಮದ (೩)ನೇ ಉಪನಿಯಮದಲ್ಲಿ 'ಸಮಿತಿಯು, ಸಮಿತಿಯ ಒಬ್ಬ ಸದಸ್ಯನನ್ನು ಆಯ್ಕೆ ಮಾಡತಕ್ಕದ್ದು' ಎಂಬ ಪದಗಳಿಗೆ ಬದಲಾಗಿ, 'ಸಮಿತಿಯ ಸದಸ್ಯರು, ತಮ್ಮ ಪೈಕಿ ಒಬ್ಬರನ್ನು ಆಯ್ಕೆ ಮಾಡತಕ್ಕದ್ದು' ಎಂಬ ಪದಗಳನ್ನು ಸೇರಿಸತಕ್ಕದ್ದು."

ಮಾನ್ಯರೆ, ಇದು ಕೇವಲ ಶಾಬ್ದಿಕ ತಿದ್ದುಪಡಿ 'ಸಮಿತಿಯ ಸದಸ್ಯರು' 'ಸಮಿತಿಯ ಸದ್ಯಸ್ಯರೊಬ್ಬರನ್ನು' ಅಧ್ಯಕ್ಷರನ್ನಾಗಿ ಆರಿಸಬೇಕು ಎಂದು ಪ್ರಸ್ತಾವಿತ ನಿಯಮವು ಹೇಳುತ್ತದೆ. ಅದೇ ಪದಗಳನ್ನು ಪುನಾರಾವರ್ತಿಸುವ ಬದಲು 'ಅವರಲ್ಲಿ ಒಬ್ಬರನ್ನು ಆರಿಸಿ' ಎಂದು ನಾನು ಹೇಳಿದ್ದೇನೆ.

ನನ್ನ ಮುಂದಿನ ತಿದ್ದುಪಡಿ ಏನೆಂದರೆ:

"ಪ್ರಸ್ತಾವಿತ ೩೮-ಎಫ್ ನಿಯಮದ (೩)ನೇ ಉಪನಿಯಮದಲ್ಲಿ 'ಇನ್ನೊಬ್ಬ ಸದಸ್ಯರನ್ನು ಆಯ್ಕೆ ಮಾಡಬಹುದು', ಎಂಬ ಪದಗಳ ತರುವಾಯ ಬರುವ 'ಸಮಿತಿಯ...' ಪದವನ್ನು ಬಿಟ್ಟುಬಿಡತಕ್ಕದ್ದು."

ಅನಂತರದ ತಿದ್ದುಪಡಿ ಹೀಗಿದೆ:

"ಪ್ರಸ್ತಾವಿತ ೩೮-ಎಫ್ ನಿಯಮದ (೩)ನೇ ಉಪನಿಯಮದಲ್ಲಿ 'ಅಧ್ಯಕ್ಷರ ಅಧಿಕಾರಗಳು' ಎಂಬ ಪದಗಳಿಗೆ ಬದಲಾಗಿ, 'ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಅವರ ಅಧಿಕಾರಗಳನ್ನು' ಎಂಬ ಪದಗಳನ್ನು ಸೇರಿಸತಕ್ಕದ್ದು."

ಈ ತಿದ್ದುಪಡಿಯ ಉದ್ದೇಶ ಹೀಗಿದೆ : ಅಧ್ಯಕ್ಷರ ಗೈರುಹಾಜರಿಯಲ್ಲಿ ಅಧ್ಯಕ್ಷತೆ ವಹಿಸಲು ಒಬ್ಬ ವ್ಯಕ್ತಿಗೆ ಕೊಟ್ಟ ಅಧಿಕಾರವನ್ನು ಅಧ್ಯಕ್ಷರ ಗೈರುಹಾಜರಿಯಲ್ಲಿ ಮಾತ್ರವೇ ಚಲಾಯಿಸಬೇಕು. ಆದರೆ ನಿಯಮವು ಈಗ ಇರುವಂತೆ, ಅಧ್ಯಕ್ಷತೆ ವಹಿಸಲು ಆರಿಸಲ್ಪಟ್ಟ ವ್ಯಕ್ತಿಯು, ಅಧ್ಯಕ್ಷರು ಹಿಂತಿರುಗಿ ಬಂದು ಸಭೆಗೆ ಸೇರಿಕೊಂಡ ಅನಂತರವೂ ಅಧ್ಯಕ್ಷತೆಯನ್ನು ಮುಂದುವರಿಸಬಹುದು ಎಂದು ಅರ್ಥ ಕೊಡುತ್ತದೆ.

**ಶ್ರೀಮತಿ ಜಿ. ದುರ್ಗಾಬಾಯಿ** : ಮಾನ್ಯರೆ, ನಾನು ಈ ಎಲ್ಲ ತಿದ್ದುಪಡಿಗಳನ್ನು ವಿರೋಧಿಸುತ್ತೇನೆ. ಆಯ್ಕೆ ಸಮಿತಿಯಲ್ಲಿ ಎಲ್ಲ ಸದಸ್ಯರೂ 'ಆಯ್ಕೆಯಾದವರೇ' ಹೊರತು 'ಚುನಾಯಿತರಾದವರಲ್ಲ'. ಅಲ್ಲಿ ಬಳಸಿರುವ ಭಾಷೆ ಅದೇ ಮತ್ತು ಇಲ್ಲಿಯೂ ಅದನ್ನು ಸರಿಯಾಗಿಯೇ ಅಳವಡಿಸಿಕೊಳ್ಳಲಾಗಿದೆ.

ಮಾನ್ಯರೆ, ಸ್ವತಃ ನಾನು ಒಂದು ಚಿಕ್ಕ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ. ಅದೇನೆಂದರೆ:

ಖಂಡ ೩೮-ಎಫ್, ಉಪಖಂಡ(೧)ರಲ್ಲಿ 'ಪರಿಶೀಲನಾ ಸಮಿತಿ' ಎಂಬ ಪದಗಳಿಗೆ ಮೊದಲು ಬರುವ 'ಪ್ರತಿಯೊಂದು ಪದಕ್ಕೆ' ಬದಲಾಗಿ, 'ಒಂದು' ಎಂಬ ಪದವನ್ನು ಸೇರಿಸತಕ್ಕದ್ದು.

**ಶ್ರೀ ನಜಿರುದ್ದೀನ್ ಅಹ್ಮದ್** : ಮಾನ್ಯರೆ, ೧೩ರಿಂದ ೧೭ರವರೆಗಿನ ನನ್ನ ಎಲ್ಲ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಲು ಅನುಮತಿ ಕೋರುತ್ತೇನೆ.

ಸಂ. ೧೩ರಿಂದ ೧೭ರವರೆಗಿನ ತಿದ್ದುಪಡಿಗಳನ್ನು ಸಭೆಯ ಅನುಮತಿಯೊಂದಿಗೆ ಹಿಂತೆಗೆದುಕೊಳ್ಳಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಮಂಡಿಸಿದವರಿಂದ ತಿದ್ದುಪಡಿಯಾದಂತೆ ನಿಯಮ ೩೮-ಎಫ್ ಅನ್ನು ಮತಕ್ಕಿಡುತ್ತೇನೆ.

ತಿದ್ದುಪಡಿಯಾದಂತೆ, ನಿಯಮ ೩೮-ಎಫ್ ಅನ್ನು ಅಂಗೀಕರಿಸಲಾಯಿತು.

**ಶ್ರೀಮತಿ ಜಿ. ದುರ್ಗಾಬಾಯಿ : ಮಾನ್ಯರೆ, ನಿಯಮ ೩೮-ಜಿ ಯನ್ನು ಮಂಡಿಸಲು ಅಪ್ಪಣೆ ಕೋರುತ್ತೇನೆ.**

"೩೮-ಜಿ (೧) ವಿಧಾನಸಭೆಯು, ಪರಿಶೀಲನಾ ಸಮಿತಿಯ ಸದಸ್ಯರ ನೇಮಕದ ಕಾಲದಲ್ಲಿ, ಸಭೆಗಾಗಿ ಅಗತ್ಯವಾಗಿ ಉಪಸ್ಥಿತರಾಗಿರಬೇಕಾದ ಸದಸ್ಯರ ಸಂಖ್ಯೆಯನ್ನು ವಿಧಾನಸಭೆಯು ನಿಗದಿಪಡಿಸತಕ್ಕದ್ದು.

"(೨) ಪರಿಶೀಲನಾ ಸಮಿತಿಯ ಯಾವುದೇ ಸಭೆಗಾಗಿ ಯಾವುದೇ ಸಮಯವನ್ನು ನಿಗದಿಪಡಿಸಿದ್ದರೆ, ಅಥವಾ ಯಾವುದೇ ಅಂಥ ಸಭೆಯು ನಡೆಯುತ್ತಿರುವಾಗ, ವಿಧಾನಸಭೆಯು ನಿಗದಿಪಡಿಸಿದ ಸದಸ್ಯರ ಕೋರಂ, ಇಲ್ಲದಿದ್ದರೆ ಸಮಿತಿಯ ಅಧ್ಯಕ್ಷರು, ಕೋರಂ ಸಂಖ್ಯೆ ಆಗುವವರೆಗೆ ಸಭೆಯನ್ನು ಅಮಾನತುಗೊಳಿಸಬಹುದು ಅಥವಾ ಮುಂದಿನ ಮತ್ತೊಂದು ದಿನಕ್ಕೆ ಮುಂದೂಡಬಹುದು.

"(೩) ಸಭೆಗಾಗಿ ನಿಗದಿಪಡಿಸಿದ ಎರಡು ನಿರಂತರ ದಿನಗಳಂದು (೨)ನೇ ಉಪನಿಯಮಕ್ಕೆ ಅನುಸಾರ ಪರಿಶೀಲನಾ ಸಮಿತಿಯ ಸಭೆಯನ್ನು ಮುಂದೂಡಿದ್ದರೆ, ಅಧ್ಯಕ್ಷರು ವಿಷಯವನ್ನು ಅಸೆಂಬ್ಲಿಗೆ ವರದಿ ಮಾಡತಕ್ಕದ್ದು."

ಮಾನ್ಯರೆ, ಇದು ಕೇವಲ ಶಾಬ್ದಿಕ ತಿದ್ದುಪಡಿ 'ಸಮಿತಿಯ ಸದಸ್ಯರು' 'ಸಮಿತಿಯ ಸದ್ಯಸ್ಯರೊಬ್ಬರನ್ನು' ಅಧ್ಯಕ್ಷರನ್ನಾಗಿ ಆರಿಸಬೇಕು ಎಂದು ಪ್ರಸ್ತಾವಿತ ನಿಯಮವು ಹೇಳುತ್ತದೆ. ಅದೇ ಪದಗಳನ್ನು ಪುನಾರಾವರ್ತಿಸುವ ಬದಲು 'ಅವರಲ್ಲಿ ಒಬ್ಬರನ್ನು ಆರಿಸಿ' ಎಂದು ನಾನು ಹೇಳಿದ್ದೇನೆ.

ನನ್ನ ಮುಂದಿನ ತಿದ್ದುಪಡಿ ಏನೆಂದರೆ:

"ಪ್ರಸ್ತಾವಿತ ೩೮-ಎಫ್ ನಿಯಮದ (೩)ನೇ ಉಪನಿಯಮದಲ್ಲಿ 'ಇನ್ನೊಬ್ಬ ಸದಸ್ಯರನ್ನು ಆಯ್ಕೆ ಮಾಡಬಹುದು', ಎಂಬ ಪದಗಳ ತರುವಾಯ ಬರುವ 'ಸಮಿತಿಯ...' ಪದವನ್ನು ಬಿಟ್ಟುಬಿಡತಕ್ಕದ್ದು."

ಅನಂತರದ ತಿದ್ದುಪಡಿ ಹೀಗಿದೆ:

"ಪ್ರಸ್ತಾವಿತ ೩೮-ಎಫ್ ನಿಯಮದ (೩)ನೇ ಉಪನಿಯಮದಲ್ಲಿ 'ಅಧ್ಯಕ್ಷರ ಅಧಿಕಾರಗಳು' ಎಂಬ ಪದಗಳಿಗೆ ಬದಲಾಗಿ, 'ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಅವರ ಅಧಿಕಾರಗಳನ್ನು' ಎಂಬ ಪದಗಳನ್ನು ಸೇರಿಸತಕ್ಕದ್ದು."

ಈ ತಿದ್ದುಪಡಿಯ ಉದ್ದೇಶ ಹೀಗಿದೆ : ಅಧ್ಯಕ್ಷರ ಗೈರುಹಾಜರಿಯಲ್ಲಿ ಅಧ್ಯಕ್ಷತೆ ವಹಿಸಲು ಒಬ್ಬ ವ್ಯಕ್ತಿಗೆ ಕೊಟ್ಟ ಅಧಿಕಾರವನ್ನು ಅಧ್ಯಕ್ಷರ ಗೈರುಹಾಜರಿಯಲ್ಲಿ ಮಾತ್ರವೇ ಚಲಾಯಿಸಬೇಕು. ಆದರೆ ನಿಯಮವು ಈಗ ಇರುವಂತೆ, ಅಧ್ಯಕ್ಷತೆ ವಹಿಸಲು ಆರಿಸಲ್ಪಟ್ಟ ವ್ಯಕ್ತಿಯು, ಅಧ್ಯಕ್ಷರು ಹಿಂತಿರುಗಿ ಬಂದು ಸಭೆಗೆ ಸೇರಿಕೊಂಡ ಅನಂತರವೂ ಅಧ್ಯಕ್ಷತೆಯನ್ನು ಮುಂದುವರಿಸಬಹುದು ಎಂದು ಅರ್ಥ ಕೊಡುತ್ತದೆ.

**ಶ್ರೀಮತಿ ಜಿ. ದುರ್ಗಾಬಾಯಿ :** ಮಾನ್ಯರೆ, ನಾನು ಈ ಎಲ್ಲ ತಿದ್ದುಪಡಿಗಳನ್ನು ವಿರೋಧಿಸುತ್ತೇನೆ. ಆಯ್ಕೆ ಸಮಿತಿಯಲ್ಲಿ ಎಲ್ಲ ಸದಸ್ಯರೂ 'ಆಯ್ಕೆಯಾದವರೇ' ಹೊರತು 'ಚುನಾಯಿತರಾದವರಲ್ಲ'. ಅಲ್ಲಿ ಬಳಸಿರುವ ಭಾಷೆ ಅದೇ ಮತ್ತು ಇಲ್ಲಿಯೂ ಅದನ್ನು ಸರಿಯಾಗಿಯೇ ಅಳವಡಿಸಿಕೊಳ್ಳಲಾಗಿದೆ.

ಮಾನ್ಯರೆ, ಸ್ವತಃ ನಾನು ಒಂದು ಚಿಕ್ಕ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ. ಅದೇನೆಂದರೆ:

ಖಂಡ ೩೮-ಎಫ್, ಉಪಖಂಡ(೧)ರಲ್ಲಿ 'ಪರಿಶೀಲನಾ ಸಮಿತಿ' ಎಂಬ ಪದಗಳಿಗೆ ಮೊದಲು ಬರುವ 'ಪ್ರತಿಯೊಂದು ಪದಕ್ಕೆ' ಬದಲಾಗಿ, 'ಒಂದು' ಎಂಬ ಪದವನ್ನು ಸೇರಿಸತಕ್ಕದ್ದು.

**ಶ್ರೀ ನಜಿರುದ್ದೀನ್ ಅಹ್ಮದ್ :** ಮಾನ್ಯರೆ, ೧೩ರಿಂದ ೧೭ರವರೆಗಿನ ನನ್ನ ಎಲ್ಲ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಲು ಅನುಮತಿ ಕೋರುತ್ತೇನೆ.

ಸಂ. ೧೩ರಿಂದ ೧೭ರವರೆಗಿನ ತಿದ್ದುಪಡಿಗಳನ್ನು ಸಭೆಯ ಅನುಮತಿಯೊಂದಿಗೆ ಹಿಂತೆಗೆದುಕೊಳ್ಳಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಮಂಡಿಸಿದವರಿಂದ ತಿದ್ದುಪಡಿಯಾದಂತೆ ನಿಯಮ ೩೮-ಎಫ್ ಅನ್ನು ಮತಕ್ಕಿಡುತ್ತೇನೆ.

ತಿದ್ದುಪಡಿಯಾದಂತೆ, ನಿಯಮ ೩೮-ಎಫ್ ಅನ್ನು ಅಂಗೀಕರಿಸಲಾಯಿತು.

**ಶ್ರೀಮತಿ ಜಿ. ದುರ್ಗಾಬಾಯಿ :** ಮಾನ್ಯರೆ, ನಿಯಮ ೩೮-ಜಿ ಯನ್ನು ಮಂಡಿಸಲು ಅಪ್ಪಣೆ ಕೋರುತ್ತೇನೆ.

"೩೮-ಜಿ (೧) ವಿಧಾನಸಭೆಯು, ಪರಿಶೀಲನಾ ಸಮಿತಿಯ ಸದಸ್ಯರ ನೇಮಕದ ಕಾಲದಲ್ಲಿ, ಸಭೆಗಾಗಿ ಅಗತ್ಯವಾಗಿ ಉಪಸ್ಥಿತರಾಗಿರಬೇಕಾದ ಸದಸ್ಯರ ಸಂಖ್ಯೆಯನ್ನು ವಿಧಾನಸಭೆಯು ನಿಗದಿಪಡಿಸತಕ್ಕದ್ದು.

"(೨) ಪರಿಶೀಲನಾ ಸಮಿತಿಯ ಯಾವುದೇ ಸಭೆಗಾಗಿ ಯಾವುದೇ ಸಮಯವನ್ನು ನಿಗದಿಪಡಿಸಿದ್ದರೆ, ಅಥವಾ ಯಾವುದೇ ಅಂಥ ಸಭೆಯು ನಡೆಯುತ್ತಿರುವಾಗ, ವಿಧಾನಸಭೆಯು ನಿಗದಿಪಡಿಸಿದ ಸದಸ್ಯರ ಕೋರಂ, ಇಲ್ಲದಿದ್ದರೆ ಸಮಿತಿಯ ಅಧ್ಯಕ್ಷರು, ಕೋರಂ ಸಂಖ್ಯೆ ಆಗುವವರೆಗೆ ಸಭೆಯನ್ನು ಅಮಾನತುಗೊಳಿಸಬಹುದು ಅಥವಾ ಮುಂದಿನ ಮತ್ತೊಂದು ದಿನಕ್ಕೆ ಮುಂದೂಡಬಹುದು.

"(೩) ಸಭೆಗಾಗಿ ನಿಗದಿಪಡಿಸಿದ ಎರಡು ನಿರಂತರ ದಿನಗಳಂದು (೨)ನೇ ಉಪನಿಯಮಕ್ಕೆ ಅನುಸಾರ ಪರಿಶೀಲನಾ ಸಮಿತಿಯ ಸಭೆಯನ್ನು ಮುಂದೂಡಿದ್ದರೆ, ಅಧ್ಯಕ್ಷರು ವಿಷಯವನ್ನು ಅಸೆಂಬ್ಲಿಗೆ ವರದಿ ಮಾಡತಕ್ಕದ್ದು."

**ಶ್ರೀ ನಜಿರುದ್ದೀನ್ ಅಹ್ಮದ್** : ನಿಯಮ ೧೮ಕ್ಕೆ ನನ್ನ ಹೆಸರಿನಲ್ಲಿರುವ ತಿದ್ದುಪಡಿಯನ್ನು ನಾನು ಮಂಡಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಹಾಗಿದ್ದರೆ, ಈ ನಿಯಮಕ್ಕೆ ಯಾವ ತಿದ್ದುಪಡಿಗಳು ಇಲ್ಲ. ಇದನ್ನು ಮತಕ್ಕಿಡುತ್ತೇನೆ.

ನಿಯಮ ೩೮–ಜಿ ಯನ್ನು ಅಂಗೀಕರಿಸಲಾಯಿತು.

**ಶ್ರೀಮತಿ ಜಿ. ದುರ್ಗಾಬಾಯಿ** : ಮಾನ್ಯರೆ, ನಾನು ನಿಯಮ ೩೮–ಎಚ್ ಅನ್ನು ಮಂಡಿಸಲು ಅಪ್ಪಣೆ ಕೋರುತ್ತೇನೆ.

"೩೮–ಎಚ್ (೧) ವಿಧೇಯಕವನ್ನು ಸಲಹಾ ಸಮಿತಿಗೆ ಒಪ್ಪಿಸಿದಾಗ, ಸಮಿತಿಯು, ಅದರ ಮೇಲೆ ವರದಿಯನ್ನು ಸಿದ್ಧಪಡಿಸತಕ್ಕದ್ದು.

"(೨) ವರದಿಗಳು ಪ್ರಾರಂಭಿಕವಾಗಿರಬಹುದು ಅಥವಾ ಅಂತಿಮವಾಗಿರಬಹುದು.

"(೩) ಪರಿಶೀಲನಾ ಸಮಿತಿಯ ಯಾರೇ ಸದಸ್ಯರು, ಯಾವುದೇ ಅಂಶದ ಮೇಲೆ ವಿರುದ್ಧ ಅಭಿಪ್ರಾಯವನ್ನು ದಾಖಲಿಸಲು ಇಚ್ಛಿಸಿದರೆ, ಅವರು ತಮ್ಮ ಭಿನ್ನಾಭಿಪ್ರಾಯ ಟಿಪ್ಪಣಿಗೊಳಪಟ್ಟು ವರದಿಗೆ ಸಹಿ ಮಾಡಿ ವರದಿಯಲ್ಲಿ ಅದನ್ನು ತಿಳಿಸತಕ್ಕದ್ದು."

**ಮಾನ್ಯ ಸಭಾಧ್ಯಕ್ಷರು** : ಈ ನಿಯಮಕ್ಕೆ ಯಾವ ತಿದ್ದುಪಡಿಗಳೂ ಇಲ್ಲ. ಆದ್ದರಿಂದ ಇದನ್ನು ಮತಕ್ಕಿಡುತ್ತೇನೆ.

ನಿಯಮ ೩೮–ಎಚ್ ಅನ್ನು ಅಂಗೀಕರಿಸಲಾಯಿತು.

**ಶ್ರೀಮತಿ ಜಿ. ದುರ್ಗಾಬಾಯಿ** : ಮಾನ್ಯರೆ, ನಿಯಮ ೩೮–ಐ ಅನ್ನು ಮಂಡಿಸಲು ಅಪ್ಪಣೆ ಕೋರುತ್ತೇನೆ.

"೩೮–ಐ (೧) ವಿಧೇಯಕದ ಮೇಲಿನ ಪರಿಶೀಲನಾ ಸಮಿತಿಯ ವರದಿಯನ್ನು ಸಮಿತಿಯ ಅಧ್ಯಕ್ಷರು ವಿಧಾನಸಭೆಗೆ ಸಲ್ಲಿಸತಕ್ಕದ್ದು.

"(೨) ವರದಿಯನ್ನು ಸಲ್ಲಿಸುವಾಗ, ಅಧ್ಯಕ್ಷರು, ಯಾವುದೇ ಷರಾ ಬರೆದರೆ ಸ್ವತಃ ಅವರೇ ಅದಕ್ಕೆ ವಾಸ್ತವಾಂಶ ಸಹಿತ ಸಂಕ್ಷಿಪ್ತ ವಿವರಣೆ ನೀಡತಕ್ಕದು, ಆದರೆ ಈ ಹಂತದಲ್ಲಿ ಆ ಬಗ್ಗೆ ಯಾವುದೇ ಚರ್ಚೆ ಇರುವುದಿಲ್ಲ."

**ಮಾನ್ಯ ಸಭಾಧ್ಯಕ್ಷರು** : ಈ ನಿಯಮಕ್ಕೂ ಸಹ ಯಾವ ತಿದ್ದುಪಡಿಗಳೂ ಇಲ್ಲ. ಆದ್ದರಿಂದ ಇದನ್ನು ಮತಕ್ಕಿಡುತ್ತೇವೆ.

ನಿಯಮ ೩೮–ಐ ಅನ್ನು ಅಂಗೀಕರಿಸಲಾಯಿತು.

**ಶ್ರೀಮತಿ ಜಿ. ದುರ್ಗಾಬಾಯಿ** : ಮಾನ್ಯರೆ, ನಿಯಮ ೩೮–ಜೆ ಅನ್ನು ಮಂಡಿಸಲು ಅಪ್ಪಣೆ ಕೋರುತ್ತೇನೆ.

"೩೮–ಜೆ: ಕಾರ್ಯದರ್ಶಿಯು, ಪರಿಶೀಲನಾ ಸಮಿತಿಯ ಪ್ರತಿಯೊಂದು ವರದಿಯನ್ನು ಮುದ್ರಣ ಮಾಡಿಸತಕ್ಕದು ಮತ್ತು ಅದರ ಪ್ರತಿಯು ವಿಧಾನಸಭೆಯ ಪ್ರತಿಯೊಬ್ಬ ಸದಸ್ಯನ ಉಪಯೋಗಕ್ಕೆ ಲಭ್ಯವಾಗುವಂತೆ ಮಾಡತಕ್ಕದು. ತಿದ್ದುಪಡಿಯಾದ ವಿಧೇಯಕ ಸಹಿತ ವರದಿಯನ್ನು, ಅಧ್ಯಕ್ಷರ ಅನ್ಯಥಾ ನಿರ್ದೇಶಿಸಿದ್ದ ಹೊರತು ಭಾರತದ ರಾಜ ಪತ್ರದಲ್ಲಿ ಪ್ರಕಟಿಸತಕ್ಕದ್ದು."

**ಶ್ರೀ ನಜಿರುದ್ದೀನ್ ಅಹ್ಮದ್** : ಮಾನ್ಯರೆ, ಕೆಳಕಂಡಂತೆ ಮಂಡಿಸಲು ಅಪ್ಪಣೆ ಕೋರುತ್ತೇನೆ.

"ಪ್ರಸ್ತಾವಿತ ೩೮–ಜೆ ಪ್ರಕರಣದಲ್ಲಿ, 'ತಿದ್ದುಪಡಿಯಾದ ವಿಧೇಯಕ ಸಹಿತ' ಎಂಬ ಪದಗಳಿಗೆ ಬದಲಾಗಿ 'ತಿದ್ದುಪಡಿಯಾದ ಆ ವಿಧೇಯಕ ಸಹಿತ' ಎಂಬ ಪದಗಳನ್ನು ಸೇರಿಸತಕ್ಕದ್ದು."

ಮಾನ್ಯರೆ, ಕಾರಣಗಳು ಸ್ಪಷ್ಟವಾಗಿರುವುದರಿಂದ ಈ ತಿದ್ದುಪಡಿಯನ್ನು ಅಂಗೀಕರಿಸಬೇಕು ಎಂದು ನಾನು ಭಾವಿಸುತ್ತೇನೆ.

**ಶ್ರೀಮತಿ ಜಿ. ದುರ್ಗಾಬಾಯಿ** : ಮಾನ್ಯರೆ, ನಾನು ಈ ತಿದ್ದುಪಡಿಯನ್ನು ಅಂಗೀಕರಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಈ ತಿದ್ದುಪಡಿಯನ್ನು ಅಂಗೀಕರಿಸಲು ಸದನವು ಅನುಮತಿ ನೀಡುತ್ತದೆ ಎಂದು ನಾನು ಆಶಿಸುತ್ತೇನೆ.

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ತಿದ್ದುಪಡಿಯಾದಂತೆ ಈಗ ನಾನು ನಿಯಮವನ್ನು ಮುಂದಿಡುತ್ತೇನೆ.

ತಿದ್ದುಪಡಿಯಾದಂತೆ ನಿಯಮ ೩೮-ಜೆ ಅನ್ನು ಅಂಗೀಕರಿಸಲಾಯಿತು.

**ಶ್ರೀಮತಿ ಜಿ. ದುರ್ಗಾಬಾಯಿ** : ನಾನು, ನಿಯಮ ೩೮-ಕೆ ಯನ್ನು ಮಂಡಿಸುತ್ತೇನೆ.

"೩೮-ಕೆ : (೧) ವಿಧೇಯಕದ ಮೇಲೆ ಪರಿಶೀಲನಾ ಸಮಿತಿಯ ಅಂತಿಮ ವರದಿಯನ್ನು ಸಲ್ಲಿಸಿ ತರುವಾಯ, ವಿಧೇಯಕವನ್ನು ಮಂಡಿಸಿದ ಸದಸ್ಯರು, ಈ ಮುಂದಿನಂತೆ ಮಂಡಿಸಬಹುದು:

(ಎ) ಪರಿಶೀಲನಾ ಸಮಿತಿಯು ವರದಿ ಮಾಡಿದಂತೆ ವಿಧೇಯಕವನ್ನು

ಮೂರು ದಿನಗಳ ಮೊದಲು ಅದರ ಪ್ರತಿಯನ್ನು ಸದಸ್ಯರುಗಳಿಗೆ ನೀಡದೆ ಇದ್ದರೆ, ಸದನದ ಯಾವ ಸದಸ್ಯರು ಬೇಕಾದರೂ ಆಕ್ಷೇಪಣೆಯನ್ನು ಮಾಡಬಹುದು ಮತ್ತು ಹೀಗೆ ಮಾಡಿದ ಆಕ್ಷೇಪಣೆಯು, ಸಭಾಧ್ಯಕ್ಷರು ತಮ್ಮ ವಿವೇಚನೆಯಲ್ಲಿ ಸದರಿ ವರದಿಯನ್ನು ಪರಿಶೀಲನೆಗೆ ತೆಗೆದುಕೊಳ್ಳುವುದಕ್ಕೆ ಅನುಮತಿಯನ್ನು ನೀಡದೆ ಇದ್ದರೆ, ಸದನದ ಪರಿಗಣನೆಗೆ ಅರ್ಹವಾಗಿರುತ್ತದೆ.

(ಬಿ) ಆಯ್ಕೆ ಸಮಿತಿಯು ವರದಿಮಾಡಿರುವ ಆ ಮಸೂದೆಯನ್ನು ಮತ್ತೆ ಪುನಃಪರಿಶೀಲನೆಗಾಗಿ ಹಿಂದಕ್ಕೆ ಕಳುಹಿಸತಕ್ಕದ್ದು.

(೧) ಮಿತಿ ಇಲ್ಲದೇ ಅಥವಾ

(೨) ಒಂದು ನಿರ್ದಿಷ್ಟ ಖಂಡಕ್ಕೆ ಅಥವಾ ತಿದ್ದುಪಡಿಗೆ ಸಂಬಂಧಿಸಿದಂತೆ ಅಥವಾ

(೩) ವಿಧೇಯಕದಲ್ಲಿ, ನಿರ್ದಿಷ್ಟ ಅಥವಾ ಹೆಚ್ಚಿನ ಉಪಬಂಧಗಳನ್ನು ಮಾಡುವಂತೆ ಪರಿಶೀಲನಾ ಸಮಿತಿಗೆ ಸೂಚನೆಗಳೊಂದಿಗೆ ಕಳುಹಿಸಿಕೊಡಬಹುದು.

(೨) ವಿಧೇಯಕವನ್ನು ಮಂಡಿಸಿದ ಸದಸ್ಯನು, ವಿಧೇಯಕವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಮಂಡಿಸಬಹುದು. ಯಾರೇ ಸದಸ್ಯನು ವಿಧೇಯಕವನ್ನು ವಾಪಸು ಕಳುಹಿಸಬಹುದೆಂಬ ತಿದ್ದುಪಡಿ ಮಂಡಿಸಬಹುದು."

**ಮಾನ್ಯ ಸಭಾಧ್ಯಕ್ಷರು** : ನಿಯಮ ೩೮-ಕೆ ಗೆ ಯಾವ ತಿದ್ದುಪಡಿಗಳೂ ಇಲ್ಲ. ಆದ್ದರಿಂದ ಅದನ್ನು ಮತಕ್ಕಿಡುತ್ತೇನೆ.

ನಿಯಮ ೩೮-ಕೆ ಅನ್ನು ಅಂಗೀಕರಿಸಲಾಯಿತು.

**ಶ್ರೀಮತಿ ಜಿ. ದುರ್ಗಾಬಾಯಿ** : ಮಾನ್ಯರೆ, ನಿಯಮ ೩೮-ಎಲ್ ಅನ್ನು ಮಂಡಿಸಲು ಅಪ್ಪಣೆ ಕೋರುತ್ತೇನೆ.

"೩೮-ಎಲ್ (೧) ; ೩೮ಎ ದಿಂದ ೩೮ಕೆ ವರೆಗಿನ ನಿಯಮಗಳ ಉಪಬಂಧಗಳು, ೨೯ನೇ ಆಗಸ್ಟ್ ೧೯೪೭ನೇ ದಿನಾಂಕದ ವಿಧಾನಸಭೆಯ ಠರಾವಿಗೆ ಅನುಸಾರವಾಗಿ ನೇಮಕಗೊಂಡ ಡ್ರಾಫ್ಟಿಂಗ್ (ಪ್ರಾರೂಪಣ) ಸಮಿತಿಯು ಸಿದ್ಧಪಡಿಸಿದ ಕರಡು ಸಂವಿಧಾನಕ್ಕೆ (ಇದರಲ್ಲಿ ಇನ್ನು ಮುಂದೆ 'ಸಂವಿಧಾನ' ಎಂದು ಉಲ್ಲೇಖಿಸಲಾಗಿದೆ.) ಅನ್ವಯವಾಗತಕ್ಕದಲ್ಲ ಮತ್ತು ಯಾರೇ ಸದಸ್ಯನು ತನ್ನ ಆಶಯವನ್ನು ತಿಳಿಸುವ ಸೂಚನೆ ನೀಡಿ ಸಂವಿಧಾನವನ್ನು ಮಂಡಿಸಬಹುದು ಮತ್ತು ಸಂವಿಧಾನವನ್ನು ಮಂಡಿಸುವುದಕ್ಕಾಗಿ ಅನುಮತಿ ಕೋರುವ ಅಗತ್ಯವಿರತಕ್ಕದ್ದಲ್ಲ.

(೨) ಈ ನಿಯಮದ ಅಡಿಯಲ್ಲಿ ಸಂವಿಧಾನ ಮಂಡಿಸುವುದಕ್ಕಾಗಿ ಸೂಚನೆಯ ಅವಧಿಯು, ಸಂವಿಧಾನವನ್ನು ಮಂಡಿಸುವುದಕ್ಕಾಗಿ ಇನ್ನೂ ಕಡಿಮೆ ಅವಧಿಯನ್ನು ಅಧ್ಯಕ್ಷರು ಅನುಮತಿಸಿದ್ದ ಹೊರತು, ಐದು ದಿನಗಳಾಗಿರತಕ್ಕದ್ದು."

**ಶ್ರೀ ನಜಿರುದ್ದೀನ್ ಅಹ್ಮದ್** : ಮಾನ್ಯರೆ, ಈ ನಿಯಮಕ್ಕೆ ನನ್ನಲ್ಲಿ ಅನೇಕ ತಿದ್ದುಪಡಿಗಳಿವೆ. ಮೊದಲು ಈ ಕೆಳಗಿನಂತೆ ಮಂಡಿಸುತ್ತೇನೆ.

"ಪ್ರಸ್ತಾವಿತ ೩೮-ಎಲ್. ನಿಯಮದ (೧)ನೇ ಉಪನಿಯಮದಲ್ಲಿ, 'ಕರಡು ಸಂವಿಧಾನ'ವನ್ನು ಎಂಬ ಪದಗಳಿಗೆ ಬದಲಾಗಿ 'ಕರಡು ಸಂವಿಧಾನದ ಪರಿಗಣನೆಗಾಗಿ' ಎಂದು ಸೇರಿಸತಕ್ಕದು."

ಎರಡನೆಯದಾಗಿ ಈ ಕೆಳಗಿನಂತೆ ಮಂಡಿಸುತ್ತೇನೆ.

"ಪ್ರಸ್ತಾವಿತ ೩೮-ಎಲ್. ನಿಯಮದ (೧)ನೇ ಉಪನಿಯಮದಲ್ಲಿ, '(ಇದರಲ್ಲಿ ಇನ್ನು ಮುಂದೆ 'ಸಂವಿಧಾನ'

ಎಂದು ಉಲ್ಲೇಖಿಸಲಾಗಿದೆ)' ಎಂಬ ಪದಗಳನ್ನು ಮತ್ತು ಆವರಣ ಚಿಹ್ನೆಗಳನ್ನು ಬಿಟ್ಟುಬಿಡತಕ್ಕದ್ದು ಮತ್ತು 'ಉಲ್ಲೇಖಿಸಿದ' ಪದಕ್ಕೆ ಬದಲಾಗಿ 'ಸಂಬಂಧಿಸಿದಂತೆ ಉಲ್ಲೇಖಿಸಿದ' ಎಂಬ ಪದಗಳನ್ನು ಸೇರಿಸತಕ್ಕದ್ದು."

ಈ ತಿದ್ದುಪಡಿ ಕುರಿತಂತೆ, ಮಾನ್ಯರೆ, ನಾನು ಹೇಳಬೇಕಾಗಿರುವುದು ಹೀಗಿದೆ:

'ಸಂವಿಧಾನ'ಕ್ಕೂ ಹಾಗೂ 'ಕರಡು ಸಂವಿಧಾನಕ್ಕೂ ವ್ಯತ್ಯಾಸವಿದೆ. ಇಲ್ಲಿ ಕರಡು ಸಂವಿಧಾನ ಎನ್ನುವುದಕ್ಕೆ ತರುವಾಯದಲ್ಲಿ 'ಸಂವಿಧಾನ' ಎಂಬ ಪದದ ಬಳಕೆಯಾಗಿದೆ. 'ಕರಡು ಸಂವಿಧಾನ' ಎಂಬ ಅರ್ಥ ಕೊಡುವುದಕ್ಕೆ 'ಸಂವಿಧಾನ' ಎಂಬ ಪದವನ್ನು ಬಳಸಲಾಗಿದೆ. ಆದರೆ ಈ ಪದಗಳನ್ನು ಪರಸ್ಪರ ಬದಲಿಯಾಗಿ ಬಳಸಬಾರದು. ಇದು ಸಂಕ್ಷಿಪ್ತಗೊಳಿಸಿದ ಪದವಾಗಿರಬಹುದು. ಆದರೆ ಅದು ಭಿನ್ನ ಅರ್ಥ ಕೊಡುತ್ತದೆ. ಆದ್ದರಿಂದಲೇ ನಾನು ಈ ತಿದ್ದುಪಡಿಯನ್ನು ಮಂಡಿಸಿದ್ದೇನೆ. ತಿದ್ದುಪಡಿಯ ಅನಂತರದ ಭಾಗವು ಲಿಖಿತ ತಪ್ಪನ್ನು ನಿವಾರಿಸುತ್ತದೆ.

ಮಾನ್ಯರೆ, ಅನಂತರ, ಈ ಕೆಳಗಿನವನ್ನು ಮಂಡಿಸಲು ಅಪ್ಪಣೆ ಕೋರುತ್ತೇನೆ.

"ಪ್ರಸ್ತಾವಿತ ೩೮–ಎಲ್. ನಿಯಮದ (೧)ನೇ ಉಪನಿಯಮದಿಂದ ಈ ಮುಂದಿನದನ್ನು ಬಿಟ್ಟುಬಿಡತಕ್ಕದ್ದು, "ಮತ್ತು ಯಾರೇ ಸದಸ್ಯನು ತನ್ನ ಆಶಯವನ್ನು ತಿಳಿಸುವ ಸೂಚನೆ ನೀಡಿ ಸಂವಿಧಾನವನ್ನು ಮಂಡಿಸಬಹುದು ಮತ್ತು ಸಂವಿಧಾನವನ್ನು ಮಂಡಿಸುವುದಕ್ಕಾಗಿ ಅನುಮತಿ ಕೋರುವ ಅಗತ್ಯವಿರತಕ್ಕದ್ದಲ್ಲ."

ಅನಂತರ, ಈ ಕೆಳಗಿನದನ್ನು ಮಂಡಿಸಲು ಅಪ್ಪಣೆ ಕೋರುತ್ತೇನೆ.

"ಪ್ರಸ್ತಾವಿತ ೩೮–ಎಲ್ ನಿಯಮದ (೧)ನೇ ಉಪನಿಯಮದ ತರುವಾಯ ಈ ಮುಂದಿನ ಹೊಸ ಖಂಡವನ್ನು ಸೇರಿಸತಕ್ಕದ್ದು."

"(೧ಎ) ಕರಡು ಸಂವಿಧಾನವನ್ನು ಸಾಧ್ಯವಾದಷ್ಟು ಬೇಗನೇ, ಭಾರತ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು.

(೧ಬಿ) ಯಾವುದೇ ಸದಸ್ಯರು ಬೇಕಾದರೂ ಕರಡು ಸಂವಿಧಾನವನ್ನು ಮಂಡಿಸುವ ತಮ್ಮ ಇಚ್ಛೆಯನ್ನು ಮೊದಲೇ ಸೂಚಿಸಿ ಅನಂತರ ಅದನ್ನು ಸದನದಲ್ಲಿ ಮಂಡಿಸಬಹುದು; ಆದರೆ, ಅದನ್ನು ಮಂಡಿಸಲು ಅನುಮತಿಗಾಗಿ ಪ್ರಾರ್ಥಿಸಬೇಕಾಗಿರುವುದಿಲ್ಲ."

ಮಾನ್ಯರೆ, ಭಾರತದ ರಾಜಪತ್ರದಲ್ಲಿ ಭಾರತದ ಸಂವಿಧಾನವನ್ನು ಪ್ರಕಟಿಸುವುದಕ್ಕಾಗಿ ಉಪನಿಯಮ (೧–ಎ)ಯನ್ನು ಪ್ರಕ್ಷೇಪಗೊಳಿಸುವ ಪ್ರಯತ್ನಮಾಡಿದ್ದೇನೆ. ಏನು ನಡೆಯುತ್ತಿದೆ ಎಂಬುದು ಜನತೆಯ ಗಮನಕ್ಕೆ ಬರಬೇಕು ಎಂಬುದನ್ನು ಖಚಿತಪಡಿಸಿಕೊಳ್ಳಲು ಇದು ಅಗತ್ಯ.

ಇದು ಅತ್ಯಂತ ಸ್ಪಷ್ಟವಾದ ಆವಶ್ಯಕತೆ ಎಂದು ನನ್ನ ಭಾವನೆ. ಪ್ರಚಾರವು, ಪ್ರಜಾಪ್ರಭುತ್ವದ ಅತ್ಯವಶ್ಯ ಅಂಶ ಮತ್ತು ಸಂವಿಧಾನವನ್ನು ಪ್ರಕಟಿಸಬೇಕು. ೧(ಬಿ)ಗೆ ಸಂಬಂಧಿಸಿದಂತೆ ಹೇಳುವುದಾದರೆ, ರಾಜಪತ್ರದಲ್ಲಿ ಪ್ರಕಟಣಾ ಖಂಡವನ್ನು ಪ್ರಕ್ಷೇಪಿಸುವುದಕ್ಕಾಗಿ ಉಪನಿಯಮ (೧)ರ ಕೊನೆಯ ಭಾಗವನ್ನೇ ಒಂದು ಸ್ವತಂತ್ರ ಉಪಖಂಡವಾಗಿ ರೂಪಿಸಲಾಗಿದೆ.

ಇದಲ್ಲದೆ, ಈ ಕೆಳಕಂಡಂತೆ ಮಂಡಿಸಲು ಅಪ್ಪಣೆ ಕೋರುತ್ತೇನೆ.

"ಪ್ರಸ್ತಾವಿತ ೩೮–ಎಲ್. ನಿಯಮದ (೨)ನೇ ಉಪನಿಯಮದಲ್ಲಿ ಮತ್ತು ಪ್ರಸ್ತಾವಿತ ೩೮–ಎನ್. ೩೮–ಓ, ೩೮–ಪಿ, ೩೮–ಕ್ಯೂ, ೩೮–ಆರ್, ೩೮–ಎಸ್ ಮತ್ತು ೩೮–ಟಿ. ನಿಯಮಗಳಲ್ಲಿ 'ಸಂವಿಧಾನ' ಎಂಬ ಪದವು ಎಲ್ಲಿ ಬರುತ್ತದೆಯೋ ಅದಕ್ಕೆ ಬದಲಾಗಿ 'ಕರಡು ಸಂವಿಧಾನ' ಎಂಬ ಪದಗಳನ್ನು ಸೇರಿಸತಕ್ಕದ್ದು.

ಈ ತಿದ್ದುಪಡಿಯು ನಾನು ಏನು ನಿವೇದಿಸಿದ್ದೇನೋ ಅದಕ್ಕೆ ಕೇವಲ ಆನುಷಂಗಿಕವಾದದ್ದಾಗಿದೆ.

**ಶ್ರೀಮತಿ ಜಿ. ದುರ್ಗಾಬಾಯಿ :** ಮಾನ್ಯರೆ, ನಿಯಮ ೩೮–ಎಲ್ ಗೆ ಸಂಬಂಧಿಸಿದ ಎಲ್ಲ ತಿದ್ದುಪಡಿಗಳನ್ನು ನಾನು ವಿರೋಧಿಸುತ್ತೇನೆ. ಆದರೆ ತಿದ್ದುಪಡಿ ಸಂ. ೨೧ರ ಉತ್ತರ ಭಾಗವನ್ನು ಮಾತ್ರ ಒಪ್ಪುತ್ತೇನೆ. ಆ ಭಾಗವೇನೆಂದರೆ 'referred as' ಎಂಬ ಪದಗಳಿಗೆ ಬದಲಾಗಿ 'referred to as' ಎಂಬ ಪದವನ್ನು

ಹಾಕುವುದು. ಪ್ರಕಟಿಸುವುದನ್ನು ಉದ್ದೇಶಪೂರ್ವಕವಾಗಿಯೇ ಕೈಬಿಡಲಾಗಿದೆ. ಯಾಕೆಂದರೆ, ಸಂವಿಧಾನವನ್ನು ರೂಪಿಸಿದ ಅನಂತರ, ಅದನ್ನು ಪ್ರಕಟಿಸುವುದಕ್ಕೆ ಅಗತ್ಯವಾದ ಕ್ರಮಗಳನ್ನು ಸಭಾಧ್ಯಕ್ಷರು ಕೈಗೊಳ್ಳುತ್ತಾರೆ.

**ಶ್ರೀ ನಜಿರುದ್ದೀನ್ ಅಹ್ಮದ್ :** ಹೀಗಿದ್ದರೆ, ಇತರ ಎಲ್ಲ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳುವುದಕ್ಕೆ ನಾನು ಅನುಮತಿ ಕೋರುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಸೂಚನೆ ಮಂಡಿಸಿದವರು ಒಂದು ತಿದ್ದುಪಡಿಯನ್ನು ಮಾತ್ರ ಅಂಗೀಕರಿಸಿದ್ದಾರೆ. ಅದೇನೆಂದರೆ, ***'referred as'*** ಎಂಬ ಪದಗಳಿಗೆ ಬದಲಾಗಿ ***'referred to as'*** ಎಂಬ ಪದಗಳನ್ನು ಹಾಕುವುದು. ಅದನ್ನು ಸದನವು ಅಂಗೀಕರಿಸಿದೆ. ಇತರ ಎಲ್ಲ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಲಾಗಿದೆ.

ತಿದ್ದುಪಡಿಯಾದಂತೆ ನಿಯಮ ೩೮-ಎಲ್ ಅನ್ನು ಅಂಗೀಕರಿಸಲಾಯಿತು.

**ಶ್ರೀಮತಿ ಜಿ. ದುರ್ಗಾಬಾಯಿ :** ಮಾನ್ಯರೆ, ನಾನು ನಿಯಮ ೩೮-ಎಮ್ ಅನ್ನು ಮಂಡಿಸಲು ಅಪ್ಪಣೆ ಕೋರುತ್ತೇನೆ.

"೩೮-ಎಮ್. ಸಂವಿಧಾನವನ್ನು ಮಂಡಿಸಿದಾಗ, ಸಂವಿಧಾನವನ್ನು ಮಂಡಿಸುವ ಸದಸ್ಯನು, ಇದನ್ನು ವಿಧಾನಸಭೆಯು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಕೋರಬಹುದು.

ಪರಂತು, ಸಂವಿಧಾನದ ಪ್ರತಿಗಳನ್ನು ಸದಸ್ಯರ ಉಪಯೋಗಕ್ಕಾಗಿ ಲಭ್ಯವಾಗುವಂತೆ ಮಾಡುವವರಿಗೆ ಅಂಥ ಯಾವುದೇ ಪ್ರಸ್ತಾವವನ್ನು ಮಾಡತಕ್ಕದ್ದಲ್ಲ ಮತ್ತು ಪ್ರಸ್ತಾವವನ್ನೂ ಯಾವ ದಿನಾಂಕದಂದು ಸಲ್ಲಿಸಬೇಕಾಗಿದೆಯೋ ಆ ದಿನಾಂಕಕ್ಕೆ ಮೂರು ದಿನಗಳಿಗೆ ಮೊದಲು, ಸಂವಿಧಾನದ ಪ್ರತಿಗಳು ಲಭ್ಯವಾಗುವಂತೆ ಮಾಡಿದ ಹೊರತು, ಯಾರೇ ಸದಸ್ಯನು, ಅಂಥ ಯಾವುದೇ ಪ್ರಸ್ತಾವದ ಬಗ್ಗೆ ಆಕ್ಷೇಪಣೆ ಸಲ್ಲಿಸಬಹುದು ಮತ್ತು ಸಭಾಧ್ಯಕ್ಷರು ತಮ್ಮ ವಿವೇಚನೆಯಂತೆ ಪ್ರಸ್ತಾವ ಸಲ್ಲಿಸಲು ಅನುಮತಿಸಿದ್ದ ಹೊರತು ಅಂಥ ಅಕ್ಷೇಪಣೆಯು ಇರತಕ್ಕದ್ದಲ್ಲ.

**ಮಾನ್ಯ ಸಭಾಧ್ಯಕ್ಷರು :** ೩೮-ಎಮ್ ಗೆ ಯಾವ ತಿದ್ದುಪಡಿಯೂ ಇಲ್ಲ.

ನಿಯಮ ೩೮-ಎಮ್ ಅನ್ನು ಅಂಗೀಕರಿಸಲಾಯಿತು.

**ಶ್ರೀ ನಜಿರುದ್ದೀನ್ ಅಹ್ಮದ್ :** ಮಾನ್ಯರೆ, ನಾನು ಕೆಳಕಂಡಂತೆ ಮಂಡಿಸಲು ಅಪ್ಪಣೆ ಕೋರುತ್ತೇನೆ.

"೩೮-ಎಮ್. ನಿಯಮದ ತರುವಾಯ ಈ ಮುಂದಿನ ನಿಯಮವನ್ನು ಸೇರಿಸತಕ್ಕದ್ದು, ಎಂದರೆ :

"೩೮-ಎಮ್.ಎಮ್ : ಕರಡು ಸಂವಿಧಾನವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಪ್ರಸ್ತಾವ ಸಲ್ಲಿಸಿರುವಾಗ ಯಾರೇ ಸದಸ್ಯನು ಎರಡು ದಿನಗಳ ಸೂಚನೆ ನೀಡಿ, ಆ ಬಗ್ಗೆ ಸಾರ್ವಜನಿಕ ಅಭಿಪ್ರಾಯ ಪಡೆಯುವುದಕ್ಕಾಗಿ ಅದನ್ನು ಪರಿಚಾಲನೆ ಮಾಡಬೇಕೆಂದು ಕೋರಬಹುದು ಅಥವಾ ಅಧ್ಯಕ್ಷರು ರಚಿಸುವ ಪರಿಶೀಲನಾ ಸಮಿತಿಗೆ ಒಪ್ಪಿಸಬಹುದೆಂದು ಕೋರಬಹುದು."

ಇನ್ನೊಂದು ಸೂಚನೆಯಂತೆ ಈ ವಿಷಯದಲ್ಲಿಯೂ ಸಂವಿಧಾನಕ್ಕೆ ಸಂಬಂಧಿಸಿದಂತೆ ಏನು ಮಾಡಲಾಗುತ್ತಿದೆಯೋ ಅದಕ್ಕೆ ಅತಿ ಹೆಚ್ಚಿನ ಪ್ರಚಾರವನ್ನು ಕೊಡಬೇಕು. ಆದರೆ, ಈ ದಿಸೆಯಲ್ಲಿ ನಿಮಗೆ ಯಾವುದು ಉಚಿತವೆಂದು ಅನ್ನಿಸುತ್ತದೆಯೋ ಅಂತಹ ಕ್ರಮವನ್ನು ಕೈಗೊಳ್ಳುವುದು ನಿಮ್ಮ ಅಪೇಕ್ಷೆಯಾಗಿದ್ದರೆ, ಆಗ ನಾನು ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲು ಸಿದ್ಧವಿದ್ದೇನೆ. ನಾನು ಹೇಳಿದಂತೆ, ಪ್ರಚಾರವು, ಪ್ರಜಾಪ್ರಭುತ್ವದ ಬಹಳ ಮುಖ್ಯವಾದ ಅಂಶವಾಗಿದೆ.

**ಮಾನ್ಯ ಸಭಾಧ್ಯಕ್ಷರು :** ಪ್ರಾರೂಪಣ ಸಮಿತಿಯು ನನಗೆ ಅಂತಿಮ ಕರಡನ್ನು ಕೊಟ್ಟ ಕೂಡಲೇ ಅದನ್ನು ಗೆಜೆಟ್ (ರಾಜಪತ್ರ)ನಲ್ಲಿ ಪ್ರಕಟಿಸುವುದು ನನ್ನ ವಿಚಾರವಾಗಿದೆ ಮತ್ತು ನಾನು ಅದನ್ನು ಖಂಡಿತ ಮಾಡುತ್ತೇನೆ. ಅಲ್ಲದೆ ಆಸಕ್ತರಾದವರು ಅದರ ಪ್ರತಿಗಳನ್ನು ಪಡೆದು ಅಧ್ಯಯನ ಮಾಡಿ ತಮಗೆ ಅನ್ನಿಸಿದ ಸಲಹೆಗಳನ್ನು ಕೊಡಲು ಸಾಧ್ಯವಾಗಲು ಇದರ ಅಗ್ಗದ ಪ್ರತಿಗಳನ್ನು ಮಾಡಿಸಿ ಅವು ಅವರಿಗೆ ದೊರೆಯುವಂತೆ ಮಾಡುತ್ತೇನೆ. ಇದಲ್ಲದೆ ಸಭೆಯಲ್ಲಿ ಪರಿಶೀಲನೆಗೆ ಕೈಗೆತ್ತಿಕೊಳ್ಳುವ ಸಾಕಷ್ಟು ಮುಂಚಿತವಾಗಿಯೇ ಇದರ ಮುದ್ರಿತ ಪ್ರತಿಗಳು ಸಂವಿಧಾನ ರಚನಾಸಭೆಯ ಸದಸ್ಯರಿಗೆ ದೊರೆಯುವಂತೆ ನೋಡಿಕೊಳ್ಳುತ್ತೇನೆ.

**ಶ್ರೀ ನಜಿರುದ್ದೀನ್ ಅಹ್ಮದ್ :** ಇದು, ಈ ತಿದ್ದುಪಡಿಗಳ ಉದ್ದೇಶವನ್ನು ಚೆನ್ನಾಗಿ ಪೂರೈಸುತ್ತಿದೆ ಎಂದು ನಿವೇದಿಸಿಕೊಳ್ಳುತ್ತೇನೆ ಮತ್ತು ನನ್ನ ಸೂಚನೆಯನ್ನು ಹಿಂತೆಗೆದುಕೊಳ್ಳಲು, ಸದನದ ಅನುಮತಿಯನ್ನು ಕೋರುತ್ತೇನೆ.

ಸಭೆಯ ಅನುಮತಿಯೊಂದಿಗೆ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲಾಯಿತು.

**ಶ್ರೀಮತಿ ಜಿ. ದುರ್ಗಾಬಾಯಿ :** ಮಾನ್ಯರೆ, ಖಂಡ ೩೮–ಎನ್ ಅನ್ನು ಮಂಡಿಸುತ್ತೇನೆ.

"೩೮–ಎನ್. ಸಂವಿಧಾನವನ್ನು ಅಥವಾ ವಿಧೇಯಕವನ್ನು ಪರಿಗಣನೆಗಾಗಿ ತೆಗೆದುಕೊಂಡಿದ್ದು, ಅದು ಮುಂದುವರಿದಿರುವಾಗ ಯಾರೇ ಸದಸ್ಯನು ಸಂವಿಧಾನದ ಅಥವಾ ವಿಧೇಯಕದ ತಿದ್ದುಪಡಿಗೆ ಪ್ರಸ್ತಾವ ಸಲ್ಲಿಸಬಹುದು."

**ಶ್ರೀ ನಜಿರುದ್ದೀನ್ ಅಹ್ಮದ್ :** ಮಾನ್ಯರೆ, ಕೆಳಕಂಡಂತೆ ಮಂಡಿಸುತ್ತೇನೆ.

"ಪ್ರಸ್ತಾವಿತ ೩೮–ಎನ್. ನಿಯಮದಲ್ಲಿ 'ಅದು ಮುಂದುವರಿದಿರುವಾಗ' ಎಂಬ ಪದಗಳಿಗೆ ಬದಲಾಗಿ 'ಅದನ್ನು ಒಪ್ಪಿಕೊಂಡಿರುವಾಗ' ಎಂಬ ಪದಗಳನ್ನು ಮತ್ತು 'ಯಾರೇ ಸದಸ್ಯನು' ಎಂಬ ಪದಗಳಿಗೆ 'ಯಾರೇ ಇತರ ಸದಸ್ಯನು' ಎಂಬ ಪದಗಳನ್ನು ಮತ್ತು 'ಈ ತಿದ್ದುಪಡಿ' ಎಂಬ ಪದಗಳಿಗೆ ಬದಲಾಗಿ 'ತಿದ್ದುಪಡಿಗಳು' ಎಂಬ ಪದಗಳನ್ನು ಸೇರಿಸತಕ್ಕದ್ದು."

ತಿದ್ದುಪಡಿಯ ಮೊದಲ ಭಾಗಕ್ಕೆ ಸಂಬಂಧಿಸಿದಂತೆ, ಶಾಸಕಾಂಗದಲ್ಲಿ "ಮುಂದುವರಿದಿರುವಾಗ" ಎನ್ನುವ ಪದಕ್ಕೆ ಬದಲಾಗಿ "ಒಪ್ಪಿಕೊಂಡಿರುವಾಗ" ಎಂಬುದು ಮಾನ್ಯತೆ ಪಡೆದ ಪದವಾಗಿದೆ. ತಿದ್ದುಪಡಿಯ ಎರಡನೇ ಭಾಗಕ್ಕೆ ಸಂಬಂಧಿಸಿದಂತೆ ಯಾರೋ ಸದಸ್ಯನು ಎಂಬುದಕ್ಕೆ ಬದಲಾಗಿ "ಯಾರೋ ಇತರ ಸದಸ್ಯನು" ಎಂಬ ಪದವನ್ನು ಸಲಹೆ ಮಾಡಲಾಗಿದೆ. ಸೂಚನೆಯನ್ನು ಮಂಡಿಸಿದವರು ಮತ್ತು ಉಳಿದವರ ನಡುವೆ ವ್ಯತ್ಯಾಸವನ್ನು ಗುರುತಿಸುವುದು ಇದರ ಉದ್ದೇಶ. ಕೊನೆಯ ಭಾಗವು ಪ್ರಾರೂಪಣ ತಿದ್ದುಪಡಿಯಷ್ಟೇ.

**ಶ್ರೀಮತಿ ಜಿ. ದುರ್ಗಾಬಾಯಿ :** ಈ ತಿದ್ದುಪಡಿಯನ್ನು ನಾನು ವಿರೋಧಿಸುತ್ತೇನೆ. ಯಾಕೆಂದರೆ ವಿಧಾನಸಭೆಯ ನಿಯಮಗಳಲ್ಲಿ "ಮುಂದುವರಿದಿರುವಾಗ" ಎಂಬುದು ಮಾನ್ಯತೆ ಪಡೆದ ಪದ. ಯಾರೋ ಸದಸ್ಯರು ಎಂದರೆ ಯಾರೇ ಇತರ ಸದಸ್ಯರು ಎಂದು ಅರ್ಥ. ಆದ್ದರಿಂದ ಅವರ ತಿದ್ದುಪಡಿಯನ್ನು ನಾನು ಅಂಗೀಕರಿಸುವುದಿಲ್ಲ.

**ಶ್ರೀ ನಜಿರುದ್ದೀನ್ ಅಹ್ಮದ್ :** ನನ್ನ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಲು ಅನುಮತಿ ಕೋರುತ್ತೇನೆ.

ಸಭೆಯ ಅನುಮತಿ ಪಡೆದು ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಲಾಯಿತು.

ನಿಯಮ ೩೮–ಎನ್ ಅನ್ನು ಅಂಗೀಕರಿಸಲಾಯಿತು.

**ಶ್ರೀಮತಿ ಜಿ. ದುರ್ಗಾಬಾಯಿ :** ಖಂಡ ೩೮–ಓ ಅನ್ನು ಮಂಡಿಸಲು ಅಪ್ಪಣೆ ಕೋರುತ್ತೇನೆ.

"೩೮–ಓ (೧) ಯಾವ ದಿನಾಂಕದಂದು ಸಂದರ್ಭಾನುಸಾರ ಸಂವಿಧಾನವನ್ನು ಅಥವಾ ವಿಧೇಯಕವನ್ನು ಪರಿಗಣಿಸ ಬೇಕಾಗಿದೆಯೋ ಆ ದಿನಾಂಕಕ್ಕೆ ಎರಡು ಸ್ಪಷ್ಟ ದಿನಗಳಿಗಿಂತ ಹೆಚ್ಚಿಗೆಯಾಗಿ ಪ್ರಸ್ತಾವಿತ ತಿದ್ದುಪಡಿಗೆ ಸೂಚನೆ ಕೊಡದಿದ್ದರೆ, ತಿದ್ದುಪಡಿ ಮಂಡಿಸುವುದಕ್ಕೆ ಯಾರೇ ಸದಸ್ಯನು ಆಕ್ಷೇಪಿಸಬಹುದು ಮತ್ತು ತಿದ್ದುಪಡಿ ಮಂಡಿಸುವುದಕ್ಕೆ ಅಧ್ಯಕ್ಷರು ತಮ್ಮ ವಿವೇಚನಾನುಸಾರ ಅನುಮತಿ ನೀಡಿದ್ದ ಹೊರತು, ಅಂಥಾ ಆಕ್ಷೇಪಣೆಯು ಇರತಕ್ಕದ್ದು.

(೨) ಕಾರ್ಯದರ್ಶಿಯು, ಕಾಲಾವಕಾಶವಿದ್ದರೆ, ಪ್ರಸ್ತಾವಿತ ತಿದ್ದುಪಡಿಯ ಸೂಚನೆಯನ್ನು ಮುದ್ರಿಸುವಂತೆ ಮಾಡತಕ್ಕದ್ದು ಮತ್ತು ಅದರ ಪ್ರತಿಯು, ಪ್ರತಿಯೊಬ್ಬ ಸದಸ್ಯರ ಉಪಯೋಗಕ್ಕಾಗಿ ಲಭ್ಯವಾಗುವಂತೆ ಮಾಡತಕ್ಕದ್ದು."

**ಶ್ರೀ ಎಚ್.ವಿ. ಕಾಮತ್ :** ಮಾನ್ಯ ಸಭಾಧ್ಯಕ್ಷರೆ, ನನ್ನ ಇಂಗ್ಲಿಷ್ ಭಾಷಾಜ್ಞಾನ ತೀರಾ ಅಲ್ಪ. ಆದ್ದರಿಂದ ಈ ಆತಂಕದೊಂದಿಗೇ ನಾನು ನಿವೇದಿಸಿಕೊಳ್ಳುವುದೇನೆಂದರೆ ***'shall'*** ಎಂಬುದರಲ್ಲಿನ ಆದೇಶ ಧ್ವನಿ ಮತ್ತು ***'if'*** ಎಂಬುದರಲ್ಲಿನ ನಿಯಮಾಧೀನತೆ ಒಂದಕ್ಕೊಂದು ಸರಿಹೊಂದುವುದಿಲ್ಲ ಮತ್ತು ಇದರಲ್ಲಿ ಒಂದು,

ಮುಖ್ಯ ಖಂಡದಲ್ಲಿದೆ, ಇನ್ನೊಂದು ಅಧೀನ ಖಂಡದಲ್ಲಿದ್ದು ಇವು ವಾಕ್ಯದ ರಚನೆಯ ನಿಯಮಕ್ಕೆ ಭಂಗ ತರುತ್ತವೆ. ಅದರೆ ನಮ್ಮ ಪ್ರಾಜ್ಞ ಭಾಷಾಪರಿಣತರು ಬೇರೆ ರೀತಿ ಹೇಳುವುದಾದರೆ ನಾನು ಈ ತಿದ್ದುಪಡಿಯ ಬಗ್ಗೆ ಒತ್ತಾಯಿಸುವುದಿಲ್ಲ, ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ:

ಪ್ರಸ್ತಾವಿತ : ೩೮–ಓ. ನಿಯಮದ (೨)ನೇ ಉಪನಿಯಮದಲ್ಲಿ. 'ಕಾರ್ಯದರ್ಶಿಯು, ಕಾಲಾವಕಾಶವಿದ್ದರೆ.... ತಕ್ಕದ್ದು' ಎಂಬ ಪದಗಳಿಗೆ ಮುಂದಿನದನ್ನು ಸೇರಿಸತಕ್ಕದ್ದು 'ಕಾರ್ಯದರ್ಶಿಯು, ಕಾಲಾವಕಾಶವಿದ್ದರೆ....ಬಹುದು.'

ಅಥವಾ, ಇದಕ್ಕೆ ಬದಲಾಗಿ

'ಕಾರ್ಯದರ್ಶಿಯು..... ಮಾಡತಕ್ಕದ್ದು'

**ಶ್ರೀಮತಿ ಜಿ. ದುರ್ಗಾಬಾಯಿ :** ಈ ತಿದ್ದುಪಡಿಯನ್ನು ನಾನು ವಿರೋಧಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಹಾಗಿದ್ದರೆ, ನಾನು ಶ್ರೀ ಕಾಮತ್‌ರ ತಿದ್ದುಪಡಿಯನ್ನು ಸದನದ ಮುಂದಿಡುತ್ತೇನೆ.

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಹಾಗಿದ್ದರೆ ನಾನು ನಿಯಮ ೩೮–ಓ ಅನ್ನು ಇಡುತ್ತೇನೆ.

ನಿಯಮ ೩೮–ಓ ಅಂಗೀಕಾರವಾಯಿತು

**ಶ್ರೀಮತಿ ಜಿ. ದುರ್ಗಾಬಾಯಿ :** ಮಾನ್ಯರೆ, ನಿಯಮ ೩೮–ಪಿ ಯನ್ನು ಮಂಡಿಸಲು ಅಪ್ಪಣೆ ಕೋರುತ್ತೇನೆ.

"೩೮–ಪಿ. ಸಂವಿಧಾನದ ಅಥವಾ ವಿಧೇಯಕದ ಖಂಡಗಳು ಯಾವುದಕ್ಕೆ ಸಂಬಂಧಪಡುತ್ತವೆಯೋ ಅವುಗಳ ಕ್ರಮದಲ್ಲಿ, ತಿದ್ದುಪಡಿಗಳನ್ನು ಸಾಮಾನ್ಯವಾಗಿ ಪರಿಗಣಿಸಲಾಗುತ್ತಿದೆ; ಮತ್ತು ಅಂಥ ಖಂಡದ ಸಂಬಂಧದಲ್ಲಿ ಪ್ರಸ್ತಾವವನ್ನು ಸಲ್ಲಿಸಲಾಗಿದೆ ಎಂದು ಭಾವಿಸತಕ್ಕದ್ದು, ಎಂದರೆ, 'ಈ ಖಂಡವು ಸಂವಿಧಾನದ ಭಾಗವಾಗಿರುತ್ತದೆ' ಅಥವಾ 'ಸಂದರ್ಭಾನುಸಾರ' ಈ ಖಂಡವು ವಿಧೇಯಕದ ಭಾಗವಾಗಿರುತ್ತದೆ."

**ಮಾನ್ಯ ಸಭಾಧ್ಯಕ್ಷರು :** ಈ ನಿಯಮಕ್ಕೆ ಯಾವ ತಿದ್ದುಪಡಿಯೂ ಇಲ್ಲ. ಆದ್ದರಿಂದ ಇದನ್ನು ಸದನದ ಮುಂದಿಡುತ್ತೇನೆ.

ನಿಯಮ ೩೮–ಪಿ ಅಂಗೀಕಾರವಾಯಿತು

**ಶ್ರೀಮತಿ ಜಿ. ದುರ್ಗಾಬಾಯಿ :** ಮಾನ್ಯರೆ, ನಿಯಮ ೩೮–ಕ್ಯೂ ಅನ್ನು ಮಂಡಿಸಲು ಅಪ್ಪಣೆ ಕೋರುತ್ತೇನೆ.

"೩೮–ಕ್ಯೂ ; ಈ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಸಂವಿಧಾನವನ್ನು ಅಥವಾ ವಿಧೇಯಕವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಪ್ರಸ್ತಾವವನ್ನು ಮಂಡಿಸಿರುವಾಗ, ಸಂವಿಧಾನವನ್ನು ಅಥವಾ ಸಂವಿಧಾನದ ಯಾವುದೇ ಭಾಗವನ್ನು, ಅಥವಾ ಸಂದರ್ಭಾನುಸಾರ ವಿಧೇಯಕವನ್ನು ಅಥವಾ ವಿಧೇಯಕದ ಭಾಗವನ್ನು, ಖಂಡ ಖಂಡವಾಗಿ ವಿಧಾನಸಭೆಗೆ ಒಪ್ಪಿಸುವುದಕ್ಕಾಗಿ ಪರಿಗಣನೆಯನ್ನು ಮುಂದುವರಿಸುವುದು ಸಭಾಧ್ಯಕ್ಷರ ವಿವೇಚನೆಯಲ್ಲಿರತಕ್ಕದ್ದು. ಈ ಕಾರ್ಯವಿಧಾನವನ್ನು ಅನುಸರಿಸುತ್ತಿರುವಾಗ, ಸಭಾಧ್ಯಕ್ಷರು, ಪ್ರತಿಯೊಂದು ಖಂಡವನ್ನು ಪ್ರತ್ಯೇಕವಾಗಿ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು ಮತ್ತು ತಿದ್ದುಪಡಿಗಳು ಅದಕ್ಕೆ ಸಂಬಂಧಿಸಿದ್ದರೆ ಅವುಗಳನ್ನು ಪರಿಗಣಿಸಲು ಪ್ರಶ್ನೆ ಕೇಳತಕ್ಕದ್ದು. 'ಈ ಖಂಡವು ಅಥವಾ ತಿದ್ದುಪಡಿಯಾದ ಈ ಖಂಡವು ಸಂವಿಧಾನದ ಭಾಗವಾಗಿರತಕ್ಕದ್ದು ಅಥವಾ ಸಂದರ್ಭಾನುಸಾರ ವಿಧೇಯಕದ ಭಾಗವಾಗಿರತಕ್ಕದಲ್ಲ.'"

**ಶ್ರೀ ನಜಿರುದ್ದೀನ್ ಅಹ್ಮದ್ :** ಮಾನ್ಯರೆ, ಪ್ರಸ್ತಾವಿಸಲಾಗಿರುವ ನಿಯಮ ೩೮ರಲ್ಲಿ, ***'has been carried'*** ಎಂಬ ಪದಗಳಿಗೆ ಬದಲಾಗಿ ***'has agreed to'*** ಎಂಬ ಪದಗಳನ್ನು, ಮತ್ತು ***'or, as the case my be, the Bill or any part of the Bill'*** ಎಂಬ ಪದಗಳಿಗೆ ಬದಲಾಗಿ ಈ ಮುಂದಿನಂತೆ ಪದಗಳು ಹಾಗೂ ಆವರಣ ಚಿಹ್ನೆಗಳನ್ನು ಹಾಕಬೇಕು. ***('or as the case may be the bill or any part of the bill')***

ಮಾನ್ಯರೆ, ಮೊದಲ ಭಾಗಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಇದು ಈಗಾಗಲೇ ಇತ್ಯರ್ಥವಾಗಿದೆ.

ಆದ್ದರಿಂದ ***'has been agreed'*** ಎಂಬ ಪದಗಳಿಗೆ ಬದಲಾಗಿ ***'has been agreed to'*** ಎಂಬ ಪದಗಳನ್ನು ಹಾಕಬೇಕು ಎಂದು ನಾನು ಒತ್ತಾಯಿಸುವುದಿಲ್ಲ. ಆದರೆ ತಿದ್ದುಪಡಿಯ ಎರಡನೇ ಭಾಗಕ್ಕೆ ಸಂಬಂಧಿಸಿದಂತೆ, ***'as the case may be'*** ಎಂಬ ಪದಗಳು ೫ನೇ ಸಾಲಿನಲ್ಲಿಯೂ ಇವೆ ಮತ್ತು ಕೊನೆಯಲ್ಲಿಯೂ ಇವೆ. ಆದರೆ ಕೊನೆಯಲ್ಲಿ ಅವು ಆವರಣ ಚಿಹ್ನೆಯಲ್ಲಿವೆಯೇ ಹೊರತು ತಿದ್ದುಪಡಿಯ ವಿಷಯದ ಸ್ಥಾನದಲ್ಲಿಲ್ಲ. ಆದ್ದರಿಂದ ಏಕರೂಪತೆಯನ್ನು ಕಾಪಾಡಿಕೊಳ್ಳುವುದಕ್ಕಾಗಿ ನಾನು ಈ ತಿದ್ದುಪಡಿಯನ್ನು ಮಂಡಿಸಿದ್ದೇನೆ.

**ಶ್ರೀಮತಿ ಜಿ. ದುರ್ಗಾಬಾಯಿ** : ತಿದ್ದುಪಡಿಯ ಮೊದಲ ಭಾಗ ಅನಗತ್ಯವೆಂದು ನನಗನ್ನಿಸುತ್ತದೆ. ಪದಗಳನ್ನು ಆವರಣ ಚಿಹ್ನೆಯೊಳಗಿಡುವ ಎರಡನೇ ಭಾಗವನ್ನು ನಾನು ಅಂಗೀಕರಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಮಂಡಿಸಿದವರು ಎರಡನೇ ಭಾಗವನ್ನು ಅಂಗೀಕರಿಸಿದ್ದಾರೆ. ಈಗ, ತಿದ್ದುಪಡಿಯಾದಂತೆ ನಿಯಮವನ್ನು ನಾನು ಸದನದ ಮುಂದೆ ಇಡುತ್ತೇನೆ.

ತಿದ್ದುಪಡಿಯಾದಂತೆ ನಿಯಮ ೩೮–ಕ್ಯೂ ಅನ್ನು ಅಂಗೀಕರಿಸಲಾಯಿತು.

**ಶ್ರೀಮತಿ ಜಿ. ದುರ್ಗಾಬಾಯಿ** : ಮಾನ್ಯರೆ, ನಿಮಯ ೩೮–ಆರ್ ಅನ್ನು ಮಂಡಿಸಲು ಅಪ್ಪಣೆ ಕೋರುತ್ತೇನೆ.

"೩೮–ಆರ್. (೧) ಸಂವಿಧಾನವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂಬ ಪ್ರಸ್ತಾವವನ್ನು ಮಂಡಿಸಿದಾಗ, ಅದರ ಪರಿಗಣನೆ ನಡೆಯುತ್ತಿರುವಾಗ ಮಂಡಿಸಲಾಗಿರುವ ಎಲ್ಲ ತಿದ್ದುಪಡಿಗಳನ್ನು ಪರಿಗಣಿಸಿದ ಮೇಲೆ, ಯಾರೇ ಸದಸ್ಯರು ಸಂವಿಧಾನವನ್ನು ಅಂಗೀಕರಿಸಬೇಕೆಂದು ಕೋರಬಹುದು;

ಪರಂತು, ಸಭಾಧ್ಯಕ್ಷರು, ಪ್ರಸ್ತಾವಕ್ಕೆ ಅನುಮತಿ ನೀಡುವ ಮೊದಲು, ೩೮–ಎಲ್ ನಿಯಮದ (೧)ನೇ ಉಪ ನಿಯಮ ಉಲ್ಲೇಖಿಸಿದ 'ಪ್ರಾರೂಪಣ ಸಮಿತಿಗೆ', ಖಂಡಗಳಿಗೆ ಪುನರ್ ಸಂಖ್ಯೆ ಕೊಡುವುದಕ್ಕಾಗಿ ಮತ್ತು ಆವಶ್ಯಕವಾಗಬಹುದಾದಂತೆ, ಅದರ ಅಂಚಿನಲ್ಲಿ ಕೊಟ್ಟಿರುವ ಟಿಪ್ಪಣಿಗಳ ಪ್ರಕಾರ ಅಂಥ ಪರಿಷ್ಕರಣೆ ಮಾಡುವುದಕ್ಕಾಗಿ ಮತ್ತು ಪೂರ್ಣಗೊಳಿಸುವುದಕ್ಕಾಗಿ ನೀಡಿದ ಸೂಚನೆಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಮತ್ತು ಅಗತ್ಯವಾಗಬಹುದಾದಂಥ ಔಪಚಾರಿಕ ಮತ್ತು ಪ್ರಾಸಂಗಿಕ ತಿದ್ದುಪಡಿಗಳನ್ನು ಶಿಫಾರಸು ಮಾಡುವುದಕ್ಕಾಗಿ, ತಿದ್ದುಪಡಿ ಮಾಡಲಾಗಿರುವ ಸಂವಿಧಾನವನ್ನು ಒಪ್ಪಿಸತಕ್ಕದ್ದು."

"(೨) ಸಂವಿಧಾನವನ್ನು ಹಾಗೆ ಪ್ರಾರೂಪಣ ಸಮಿತಿಗೆ ಒಪ್ಪಿಸಿದಾಗ ಸಮಿತಿಯು ಆ ಬಗ್ಗೆ ವರದಿಯನ್ನು ಸಲ್ಲಿಸಿದ ಮೇಲೆ, ಸಮಿತಿಯು ಪರಿಷ್ಕರಿಸಿದ ಸಂವಿಧಾನವನ್ನು ಅಂಗೀಕರಿಸುವುದಕ್ಕಾಗಿ ಯಾರೇ ಸದಸ್ಯರು ಪ್ರಸ್ತಾವ ಸಲ್ಲಿಸಬಹುದು.

"(೩) ಉಪನಿಯಮ(೧) ಅಥವಾ (೨)ರ ಅಡಿಯಲ್ಲಿ ಮಾಡಿದ ಪ್ರಸ್ತಾವಕ್ಕೆ ಸಂವಿಧಾನವನ್ನು ಪರಿಗಣನೆಗೆ ತೆಗೆದುಕೊಂಡ ತರುವಾಯ ಯಾವುದೇ ತಿದ್ದುಪಡಿಯ ಮೇಲೆ, ಔಪಚಾರಿಕ ಅಥವಾ ಪ್ರಾಸಂಗಿಕವಾಗಿ ಯಾವುದೇ ತಿದ್ದುಪಡಿ ಬಗ್ಗೆ ಪ್ರಸ್ತಾವವನ್ನು ಮಂಡಿಸತಕ್ಕದ್ದಲ್ಲ.

**ಶ್ರೀ ನಜಿರುದ್ದೀನ್ ಅಹ್ಮದ್** : ಮಾನ್ಯರೆ, ಮುಂದುವರಿಯುತ್ತಿರುವಾಗ ಎಂಬ ಪದಗಳಿಗೆ ಬದಲಾಗಿ 'ಒಪ್ಪಿಗೆ' ಎಂಬ ಪದಗಳನ್ನು ಹಾಕುವ ನನ್ನ ತಿದ್ದುಪಡಿಯ ಮೊದಲ ಭಾಗವನ್ನು ನಾನು ಮಂಡಿಸುವುದಿಲ್ಲ. ಆದರೆ, ಈ ಕೆಳಗಿನದನ್ನು ಮಂಡಿಸುತ್ತೇನೆ:

"ಪ್ರಸ್ತಾವಿತ ೩೮–ಆರ್. ನಿಯಮದ (೧)ನೇ ನಿಯಮದ ಪರಂತುಕದಲ್ಲಿ 'ಪ್ರಾರೂಪಣ ಸಮಿತಿಗೆ' ಎಂಬ ಪದಗಳ ತರುವಾಯ ಮತ್ತು '೩೮–ಎಲ್ ನಿಯಮದ (೧)ನೇ ಉಪನಿಯಮದಲ್ಲಿ' ಎಂಬ ಪದಗಳ ತರುವಾಯ, ಅಲ್ಪವಿರಾಮ ಚಿಹ್ನೆಗಳನ್ನು ಹಾಕತಕ್ಕದ್ದು."

ಮತ್ತು ಈ ಮುಂದಿನ ತಿದ್ದುಪಡಿಯನ್ನು ಮಂಡಿಸುತ್ತೇನೆ :

"ಪ್ರಸ್ತಾವಿತ ೩೮–ಆರ್ ನಿಯಮದ (೧)ನೇ ಉಪನಿಯಮದ ಪರಂತುಕದಲ್ಲಿ 'ಖಂಡಗಳಿಗೆ ಪುನರ್ ಸಂಖ್ಯೆ ಕೊಡುವುದಕ್ಕಾಗಿ' ಎಂಬ ಪದಗಳ ತರುವಾಯ 'ಮತ್ತು ಅಂಥ ವಿರಾಮಚಿಹ್ನೆಗಳು' ಎಂಬ ಪದಗಳನ್ನು ಸೇರಿಸತಕ್ಕದ್ದು.

ಈ ತಿದ್ದುಪಡಿಗಳಿಗೆ ಸಂಬಂಧಿಸಿದಂತೆ, ನಿಯಮದಲ್ಲಿ ಪ್ರಸ್ತಾವಿಸಲಾಗಿರುವುದೇನೆಂದರೆ, ಸಂವಿಧಾನವನ್ನು

ಈ ಸದನವು ಅಳವಡಿಸಿಕೊಂಡ ಅನಂತರ, ಕೆಲವು ಸರಿಪಡಿಕೆಗಳಿಗಾಗಿ ಹಾಗೂ ಬದಲಾವಣೆಗಳಿಗಾಗಿ ಈ ಕರಡು ಸಂವಿಧಾನವನ್ನು ಪ್ರಾರೂಪಣ ಸಮಿತಿಗೆ ಒಪ್ಪಿಸಬೇಕು ಎಂಬುದು. ಆದರೆ ಇಲ್ಲಿ ವಿರಾಮ ಚಿಹ್ನೆಗಳ ಪರಿಷ್ಕರಣೆಗೆ ಅವಕಾಶ ಕೊಟ್ಟಿಲ್ಲ. ಆದರೆ ಶಾಸಕಾಂಗದ ವ್ಯವಹಾರಗಳ ನಿಯಮಗಳಲ್ಲಿ ಈ ಅಧಿಕಾರವನ್ನು ಕಾರ್ಯದರ್ಶಿಯವರಿಗೆ ಕೊಡಲಾಗಿದೆ. ಆದರೆ ಸಂವಿಧಾನಕ್ಕೆ ಸಂಬಂಧಿಸಿದಂತೆ ಆ ನಿಯಮವನ್ನು ಅನುಸರಿಸಲಾಗುತ್ತಿಲ್ಲ. ಆದ್ದರಿಂದ ವಿರಾಮ ಚಿಹ್ನೆಗಳನ್ನು ಪರಿಷ್ಕರಿಸುವ ವಿಷಯವನ್ನು ಸಮಿತಿಗೆ ಕೊಡಬೇಕು.

ನಾನು ನನ್ನ ತಿದ್ದುಪಡಿ ಸಂಖ್ಯೆ ೩೨ನ್ನು ಸಹ ಮಂಡಿಸುತ್ತೇನೆ.

"ಪ್ರಸ್ತಾವಿತ ೩೮-ಆರ್. ನಿಯಮದ (೨)ನೇ ಉಪನಿಯಮದಲ್ಲಿ, 'ಪ್ರಾರೂಪಣ ಸಮಿತಿಗೆ' ಎಂಬ ಪದಗಳಿಗೆ ಮೊದಲು '(೧)ನೇ ಉಪನಿಯಮದ ಪರಂತುಕದ ಅಡಿಯಲ್ಲಿ' ಎಂಬ ಪದಗಳನ್ನು ಸೇರಿಸತಕ್ಕದ್ದು."

**ಶ್ರೀಮತಿ ಜಿ. ದುರ್ಗಾಬಾಯಿ :** ತಿದ್ದುಪಡಿ ಸಂ. ೩೦ ಹಾಗೂ ೩೧ನ್ನು ನಾನು ಅಂಗೀಕರಿಸುತ್ತೇನೆ. ಆದರೆ ತಿದ್ದುಪಡಿ ಸಂ. ೩೨ನ್ನು ವಿರೋಧಿಸುತ್ತೇನೆ.

**ಶ್ರೀ ನಜಿರುದ್ದೀನ್ ಅಹ್ಮದ್ :** ಮಾನ್ಯರೆ, ಹಾಗಿದ್ದರೆ ನನ್ನ ತಿದ್ದುಪಡಿ ಸಂ. ೩೨ನ್ನು ಹಿಂತೆಗೆದುಕೊಳ್ಳಲು ಅಪ್ಪಣೆ ಕೋರುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಅವರು ತಮ್ಮ ತಿದ್ದುಪಡಿ ಸಂ. ೩೨ನ್ನು ಹಿಂತೆಗೆದುಕೊಳ್ಳಲು ಸದನವು ಅನುಮತಿ ನೀಡಿದೆ ಎಂದು ಭಾವಿಸುತ್ತೇನೆ.

ಸಭೆಯ ಅನುಮತಿಯೊಂದಿಗೆ ತಿದ್ದುಪಡಿ ಸಂ. ೩೨ನ್ನು ಹಿಂತೆಗೆದುಕೊಳ್ಳಲಾಯಿತು.

ತಿದ್ದುಪಡಿ ಸಂ. ೩೦ ಮತ್ತು ೩೧ನ್ನು ಅಂಗೀಕರಿಸಲಾಯಿತು.

**ಶ್ರೀಮತಿ ಜಿ. ದುರ್ಗಾಬಾಯಿ :** ಮಾನ್ಯರೆ, ನಾನು ಎರಡು ಶಾಬ್ದಿಕ ತಿದ್ದುಪಡಿಗಳನ್ನು ಪ್ರಸ್ತಾವಿಸುತ್ತೇನೆ. ಮೊದಲನೆಯದೇನೆಂದರೆ, ಎರಡನೇ ಸಾಲಿನಲ್ಲಿರುವ ***'and all amendments'*** ಎಂಬುದರಲ್ಲಿ ***'all'*** ಎಂಬ ಪದವನ್ನು ***'the'*** ಎಂದು ಬದಲಿಸಬೇಕು. ಎರಡನೆಯದು, ಮೂರನೇ ಸಾಲಿನಲ್ಲಿ ***'Constitution'*** ಮತ್ತು ***'moved'*** ಎಂಬ ಪದಗಳ ನಡುವೆ ***'if any'*** ಎಂಬ ಪದವನ್ನು ಸೇರಿಸಬೇಕು.

**ಮಾನ್ಯ ಸಭಾಧ್ಯಕ್ಷರು :** ಹಾಗಿದ್ದರೆ, ನಾನು ತಿದ್ದುಪಡಿಯಾದಂತೆ ನಿಯಮ ೩೮-ಆರ್ (೧), (೨), ಹಾಗೂ (೩)ನ್ನು ಸದನದ ಮುಂದಿಡುತ್ತೇನೆ.

ತಿದ್ದುಪಡಿಯಾದಂತೆ ನಿಯಮ ೩೮-ಆರ್ ಅನ್ನು ಅಂಗೀಕರಿಸಲಾಯಿತು.

**ಶ್ರೀಮತಿ ಜಿ. ದುರ್ಗಾಬಾಯಿ :** ಮಾನ್ಯರೆ, ನಾನು ನಿಯಮ ೩೮-ಎಸ್ ಅನ್ನು ಮಂಡಿಸುತ್ತೇನೆ.

"೩೮-ಎಸ್. (೧). ವಿಧೇಯಕವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಪ್ರಸ್ತಾವವನ್ನು ಮಂಡಿಸಿದ ಮೇಲೆ ಚರ್ಚೆ ಮುಂದುವರಿದಾಗ ಹಾಗೂ ಯಾವುದೇ ತಿದ್ದುಪಡಿಯನ್ನು ಮಂಡಿಸಿರದಿದ್ದಲ್ಲಿ, ವಿಧೇಯಕವನ್ನು ಮಂಡಿಸಿರುವ ಸದಸ್ಯನು, ವಿಧೇಯಕವನ್ನು ಅಂಗೀಕರಿಸಬೇಕೆಂದು ಕೂಡಲೇ ಮಂಡಿಸಬಹುದು.

"(೨) ವಿಧೇಯಕಕ್ಕೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ ಮಾಡಿದರೆ, ವಿಧೇಯಕವನ್ನು ಅದೇ ದಿನದಂದು ಅಂಗೀಕರಿಸಬೇಕೆಂದು ಮಂಡಿಸಿದ ಯಾವುದೇ ಪ್ರಸ್ತಾವಕ್ಕೆ ಯಾರೇ ಸದಸ್ಯನು ಆಕ್ಷೇಪಣೆ ಸಲ್ಲಿಸಬಹುದು.

ಪರಂತು, ಸಭಾಧ್ಯಕ್ಷರು ಪ್ರಸ್ತಾವ ಸಲ್ಲಿಸುವುದಕ್ಕೆ ಅನುಮತಿ ನೀಡುವ ಮೊದಲು ೩೮-ಎಲ್ ನಿಯಮದ (೧)ನೇ ಉಪನಿಯಮದಲ್ಲಿ ಉಲ್ಲೇಖಿಸಿದ ಪ್ರಾರೂಪಣ ಸಮಿತಿಗಾಗಲಿ ಅಥವಾ ಆತನು ನೇಮಕಮಾಡಿದ ವಿಧಾನಸಭೆಯ ಸದಸ್ಯರನ್ನೊಳಗೊಂಡ ಇನ್ನೊಂದು ಅಡ್‌ಹ್ಯಾಕ್ ಸಮಿತಿಗೆ ಖಂಡಗಳಿಗೆ ಪುನರ್‌ಸಂಖ್ಯೆ ಕೊಡುವುದಕ್ಕೆ ಮತ್ತು ಅದರ ಅಂಚಿನಲ್ಲಿ ಕೊಟ್ಟಿರುವ ಟಿಪ್ಪಣಿಗಳ ಪ್ರಕಾರ ಅಂಥ ಪರಿಷ್ಕರಣೆ ಮಾಡುವುದಕ್ಕಾಗಿ ಮತ್ತು ಪೂರ್ಣಗೊಳಿಸುವುದಕ್ಕಾಗಿ ನೀಡಿದ ಸೂಚನೆಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಮತ್ತು ಅಗತ್ಯವಾಗಬಹುದಾದಂಥ ಔಪಚಾರಿಕ ಮತ್ತು ಪ್ರಾಸಂಗಿಕ ತಿದ್ದುಪಡಿಗಳನ್ನು ಮಾಡುವುದಕ್ಕಾಗಿ ತಿದ್ದುಪಡಿ ಮಾಡಲಾಗಿರುವ ವಿಧೇಯಕವನ್ನು ಒಪ್ಪಿಸತಕ್ಕದ್ದು.

"(೩) ಆಕ್ಷೇಪಣೆಯನ್ನು ಎತ್ತಿಹಿಡಿದಾಗ, 'ವಿಧೇಯಕವನ್ನು ಅಂಗೀಕರಿಸಬೇಕೆಂಬ' ಪ್ರಸ್ತಾವವನ್ನು, ಮುಂಬರುವ ಮತ್ತೊಂದು ದಿನಕ್ಕೆ ಮಂಡಿಸಬಹುದು.

"(೪) ವಿಧೇಯಕವನ್ನು, ಪ್ರಾರೂಪಣ ಸಮಿತಿಗೆ ಅಥವಾ (೨)ನೇ ಉಪನಿಯಮದ ಪರಂತುಕದ ಅಡಿಯಲ್ಲಿ ನೇಮಕಗೊಂಡ ಸಮಿತಿಗೆ ಹಾಗೆ ಒಪ್ಪಿಸಿದ ಮೇಲೆ ಸಮಿತಿಯು ವರದಿಯನ್ನು ಸಲ್ಲಿಸಬೇಕು; ಸಮಿತಿಯು ಅಂಗೀಕರಿಸಿದ ಸಂವಿಧಾನವನ್ನು ಅಂಗೀಕರಿಸಬಹುದೆಂದು ಯಾರೇ ಸದಸ್ಯನು ಮಂಡಿಸಬಹುದು.

"(೫) (೨)ನೇ ಉಪನಿಯಮದ, (೩)ನೇ ಉಪನಿಯಮದ ಅಥವಾ (೪)ನೇ ಉಪನಿಯಮದ ಅಡಿಯಲ್ಲಿ ಮಂಡಿಸಿದ ಪ್ರಸ್ತಾವಕ್ಕೆ, ವಿಧೇಯಕವನ್ನು ಪರಿಗಣನೆಗೆ ತೆಗೆದುಕೊಂಡ ತರುವಾಯ ಮಾಡಿದ ತಿದ್ದುಪಡಿಯ ಮೇಲೆ, ಔಪಚಾರಿಕವಾದ ಅಥವಾ ಪ್ರಾಸಂಗಿಕವಾದ ಯಾವುದೇ ತಿದ್ದುಪಡಿಯನ್ನು ಮಂಡಿಸತಕ್ಕದ್ದಲ್ಲ.

**ಶ್ರೀ ನಜಿರುದ್ದೀನ್ ಅಹ್ಮದ್** : ನನ್ನ ತಿದ್ದುಪಡಿ ೩೩ "ಮುಂದುವರಿಸುತ್ತಿರುವಾಗ" ಎಂಬ ಪದಗಳ ಬದಲಿಗೆ "ಒಪ್ಪಿಕೊಂಡಿರುವಾಗ" ಎಂಬ ಪದಗಳನ್ನು ಹಾಕಲು ಸೂಚಿಸುತ್ತದೆ. ಆದರೆ ಅದನ್ನು ಈಗಾಗಲೇ ಇತ್ಯರ್ಥಗೊಳಿಸಿರುವುದರಿಂದ ನಾನು ಅದನ್ನು ಮಂಡಿಸುವುದಿಲ್ಲ. ತಿದ್ದುಪಡಿ ಸಂ. ೩೪ ಮತ್ತು ೩೫ನ್ನು ನಾನು ಮಂಡಿಸುತ್ತೇನೆ.

"ಪ್ರಸ್ತಾವಿತ ನಿಯಮ ೩೮–ಆರ್, ೩೮–ಎಸ್ ನಿಯಮದ (೨)ನೇ ಉಪನಿಯಮದ ಪರಂತುಕದಲ್ಲಿ 'ಖಂಡಗಳಿಗೆ ಪುನರ್‌ಸಂಖ್ಯೆ ಕೊಡುವುದಕ್ಕೆ' ಎಂಬ ಪದಗಳ ತರುವಾಯ 'ಮತ್ತು ವಿರಾಮ ಚಿಹ್ನೆಗಳ ಅಂಥ ಪರಿಷ್ಕರಣೆ' ಎಂಬ ಪದಗಳನ್ನು ಸೇರಿಸತಕ್ಕದ್ದು.

"ಪ್ರಸ್ತಾವಿತ ೩೮–ಎಸ್ ನಿಯಮದ (೪)ನೇ ಉಪಪ್ರಕರಣದಲ್ಲಿ, 'ಸಂವಿಧಾನವನ್ನು' ಎಂಬ ಪದಗಳಿಗೆ ಬದಲಾಗಿ 'ವಿಧೇಯಕವನ್ನು' ಎಂಬ ಪದಗಳನ್ನು ಸೇರಿಸತಕ್ಕದ್ದು."

ಮಾನ್ಯರೆ, ನಿಯಮ ೩೮–ಎಸ್ ಗೆ ಸಂಬಂಧಿಸಿದಂತೆ, ಇದು "ಸಂವಿಧಾನ"ದ ಬಗ್ಗೆ ತಿಳಿಸುತ್ತಿಲ್ಲ, ಆದರೆ ವಿಧೇಯಕದ ಬಗ್ಗೆ ಮಾತ್ರ ವ್ಯವಹರಿಸುತ್ತದೆ. ಕೆಲವೊಂದು ನಿಯಮಗಳಲ್ಲಿ 'ಸಂವಿಧಾನ' ಮತ್ತು 'ವಿಧೇಯಕ' ಎಂಬ ಪದಗಳನ್ನು ಬಳಸಲಾಗಿದೆ. ಆದರೆ ಈ ನಿರ್ದಿಷ್ಟ ನಿಯಮಕ್ಕೆ ಸಂಬಂಧಿಸಿದಂತೆ ನಾನು ಸೂಕ್ಷ್ಮವಾಗಿ ಗಮನಿಸಿದಾಗ ಇದು ವಿಧೇಯಕದ ಬಗ್ಗೆ ಮಾತ್ರ ವ್ಯವಹರಿಸುತ್ತಿದೆ ಎಂದು ಕಂಡುಕೊಂಡೆ. ಆದ್ದರಿಂದ 'ಸಂವಿಧಾನ' ಎಂಬ ಪದ ಲಿಪಿಕ ತಪ್ಪಿನಿಂದಾಗಿದೆ ಎಂದು ಭಾವಿಸುತ್ತ ವಿಧೇಯಕ ಎಂಬ ಪದವನ್ನೇ ಬಳಸತಕ್ಕದ್ದು ಎಂದು ಹೇಳುತ್ತಿದ್ದೇನೆ.

**ಶ್ರೀಮತಿ ಜಿ. ದುರ್ಗಾಬಾಯಿ** : ಮಾನ್ಯರೆ, ನಾನು ಸಂ. ೩೪ನ್ನು ಅಂಗೀಕರಿಸುತ್ತೇನೆ. ಆದರೆ ಸಂ. ೩೫ ಅಗತ್ಯವಿಲ್ಲ ಏಕೆಂದರೆ ಲಿಪಿಕ ತಪ್ಪನ್ನು ಆಗಲೇ ಸರಿಪಡಿಸಲಾಗಿದೆ.

**ಶ್ರೀ ನಜಿರುದ್ದೀನ್ ಅಹ್ಮದ್** : ಆದರೆ, ಮೂಲ ಸೂಚನೆಯನ್ನು ಅದು ಇದ್ದ ಹಾಗೆಯೇ ಆಗ ಮುದ್ರಿಸಲಾಗಿದೆ. ತಿದ್ದುಪಡಿಯನ್ನು ಮಾಡಿಲ್ಲ. ಆದ್ದರಿಂದ ತಿದ್ದುಪಡಿಯೊಂದಿಗೆ ಅದನ್ನು ಪುನಃ ಮಂಡಿಸಬೇಕಾಗಿದೆ.

**ಶ್ರೀಮತಿ ಜಿ. ದುರ್ಗಾಬಾಯಿ** : ಮಾನ್ಯರೆ, 'ಸಂವಿಧಾನ' ಎಂಬ ಪದದ ಬದಲಿಗೆ 'ವಿಧೇಯಕ' ಎಂಬ ಪದವನ್ನು ಹಾಕಬಹುದು ಎಂದು ಮಂಡಿಸುತ್ತೇನೆ.

**ಶ್ರೀ ನಜಿರುದ್ದೀನ್ ಅಹ್ಮದ್** : ಇದು ನಿಖರವಾಗಿ ನನ್ನ ತಿದ್ದುಪಡಿ.

**ಮಾನ್ಯ ಸಭಾಧ್ಯಕ್ಷರು** : ಅಂದರೆ, ಮಂಡಿಸಿದವರು ಎರಡೂ ತಿದ್ದುಪಡಿಗಳನ್ನು ಅಂಗೀಕರಿಸಿದ್ದಾರೆ ಎಂದು ಅರ್ಥ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** : ಮಾನ್ಯರೆ, ಉಪನಿಯಮ (೧)ರಲ್ಲಿ ವಿಧೇಯಕವನ್ನು... ಇತ್ಯಾದಿ ಎಂಬ ಕೊನೆಯ ಸಾಲಿನಲ್ಲಿ 'ಸಂವಿಧಾನ' ಎಂಬ ಪದವನ್ನು ಬಳಸಲಾಗಿದೆ. ನಾವು ಈ ಪದವನ್ನು ವಿಧೇಯಕ ಎಂದು ಬದಲಿಸಬೇಕಾಗಿದೆಯೆ'?

**ಮಾನ್ಯ ಸಭಾಧ್ಯಕ್ಷರು** : ಎಲ್ಲ ಕಡೆಯೂ 'ಸಂವಿಧಾನ' ಎಂಬ ಪದದ ಬದಲಿಗೆ 'ವಿಧೇಯಕ' ಎಂಬ ಪದವನ್ನು ಬಳಸಬೇಕು.

ತಿದ್ದುಪಡಿಯಾದಂತೆ ನಿಯಮ ೩೮-ಎಸ್ ಅನ್ನು ಅಂಗೀಕರಿಸಲಾಯಿತು.

**ಶ್ರೀಮತಿ ಜಿ. ದುರ್ಗಾಬಾಯಿ** : ನಿಯಮ ೩೮-ಟಿ ಯನ್ನು ಮಂಡಿಸಲು ಅಪ್ಪಣೆ ಕೋರುತ್ತೇನೆ.

"ವಿಧೇಯಕವನ್ನು ಮಂಡಿಸಿರುವ ಸದಸ್ಯನು, ವಿಧೇಯಕದ ಯಾವುದೇ ಹಂತದಲ್ಲಿ 'ವಿಧೇಯಕವನ್ನು' ಹಿಂತೆಗೆದುಕೊಳ್ಳುವುದಕ್ಕೆ ಅನುಮತಿಗಾಗಿ ಮಂಡಿಸಬಹುದು ಮತ್ತು ಅಂಥ ಅನುಮತಿಯನ್ನು ನೀಡಿದ ಮೇಲೆ ವಿಧೇಯಕಕ್ಕೆ ಸಂಬಂಧಿಸಿದಂತೆ ಮತ್ತೆ ಯಾವುದೇ ಪ್ರಸ್ತಾವವನ್ನು ಮಂಡಿಸುವಂತಿಲ್ಲ."

**ಶ್ರೀ ನಜಿರುದ್ದೀನ್ ಅಹ್ಮದ್** : ನಾನು ಕೆಳಕಂಡಂತೆ ಮಂಡಿಸುತ್ತೇನೆ.

"ಪ್ರಸ್ತಾವಿತ ನಿಯಮ ೩೮-ಟಿಯಲ್ಲಿ ***'and after such'*** ಎಂಬ ಪದಗಳ ಬದಲಿಗೆ ***'and if such'*** ಎಂಬ ಪದಗಳನ್ನು ಹಾಕಬೇಕು."

ಇದು ಕೇವಲ ಶಾಬ್ದಿಕ ತಿದ್ದುಪಡಿ ಮಾತ್ರ.

**ಶ್ರೀಮತಿ ಜಿ. ದುರ್ಗಾಬಾಯಿ** : ನಾನು ತಿದ್ದುಪಡಿಯನ್ನು ಅಂಗೀಕರಿಸುತ್ತೇನೆ.

ತಿದ್ದುಪಡಿಯಾದಂತೆ ನಿಯಮ ೩೮-ಟಿ ಯನ್ನು ಅಂಗೀಕರಿಸಲಾಯಿತು.

**ಶ್ರೀಮತಿ ಜಿ. ದುರ್ಗಾಬಾಯಿ** : ನಾನು, ನಿಯಮ ೩೮-ಯು ಅನ್ನು ಮಂಡಿಸಲು ಅಪ್ಪಣೆ ಕೋರುತ್ತೇನೆ.

"ವಿಧಾನಸಭೆಯು ಸಂವಿಧಾನವನ್ನು ಅಂಗೀಕರಿಸಿದಾಗ, ಸಭಾಧ್ಯಕ್ಷರಿಗೆ ಸಲ್ಲಿಸತಕ್ಕದ್ದು. ಅದಕ್ಕೆ ಅವರು ಸಹಿ ಮಾಡಿ ಪ್ರಮಾಣೀಕರಿಸತಕ್ಕದ್ದು."

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** : ಇಲ್ಲಿ ಒಂದು ಚಿಕ್ಕ ತಪ್ಪು ನುಸುಳಿದೆ. ಖಂಡವು ಹೀಗೆ ಹೇಳುತ್ತದೆ: ***'When the constitution is passed by he Assembly, it shall be submitted to the President.....'*** ಇಲ್ಲಿ ಯಾರು ಸಲ್ಲಿಸಬೇಕು ಎಂಬುದು ತಿಳಿಯುವುದಿಲ್ಲ. ಆದ್ದರಿಂದ ಇದಕ್ಕೆ ಬದಲಾಗಿ, ಈ ಖಂಡವನ್ನು ಕೆಳಕಂಡಂತೆ ಬದಲಿಸಬಹುದು.

"ವಿಧಾನಸಭೆಯು ಸಂವಿಧಾನವನ್ನು ಅಂಗೀಕರಿಸಿದಾಗ, ಸಭಾಧ್ಯಕ್ಷರು ಅದಕ್ಕೆ ಸಹಿ ಮಾಡಿ ಅಧಿಪ್ರಮಾಣೀಕರಿಸತಕ್ಕದ್ದು.

**ಶ್ರೀಮತಿ ಜಿ. ದುರ್ಗಾಬಾಯಿ** : ಮಾನ್ಯರೆ, ನಾನು ತಿದ್ದುಪಡಿಯನ್ನು ಅಂಗೀಕರಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಮುಂದಿಟ್ಟಿರುವ ವಿಷಯ :

"ವಿಧಾನಸಭೆಯು ಸಂವಿಧಾನವನ್ನು ಅಂಗೀಕರಿಸಿದಾಗ, ಸಭಾಧ್ಯಕ್ಷರು ಅದಕ್ಕೆ ಸಹಿಮಾಡಿ ಅಧಿಪ್ರಮಾಣೀಕರಿಸತಕ್ಕದ್ದು."

ತಿದ್ದುಪಡಿಯಾದಂತೆ ೩೮-ಯು ಅನ್ನು ಅಂಗೀಕರಿಸಲಾಯಿತು.

**ಶ್ರೀ ನಜಿರುದ್ದೀನ್ ಅಹ್ಮದ್** : ನಾನು ಸೂಚನೆ ನೀಡಿರುವ ಹೊಸ ನಿಯಮ ೩೮-ಯುಯು ಅನ್ನು ಮಂಡಿಸುತ್ತೇನೆ. ಅದು ಹೀಗಿದೆ:

"ಪ್ರಸ್ತಾವಿತ ೩೮ಯು ನಿಯಮದ ತರುವಾಯ, ಈ ಮುಂದಿನ ಹೊಸ ನಿಯಮವನ್ನು ಸೇರಿಸತಕ್ಕದ್ದು:

'೩೮-ಯುಯು. ಸಭಾಧ್ಯಕ್ಷರು ಹಾಗೆ ಪ್ರಮಾಣೀಕರಿಸಿದ ಕರಡು ಸಂವಿಧಾನವನ್ನು ಭಾರತ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ಆ ತರುವಾಯ ಅದು ಸ್ವತಂತ್ರ ಭಾರತದ ಸಂವಿಧಾನವಾಗತಕ್ಕದ್ದು.'"

**ಶ್ರೀಮತಿ ಜಿ. ದುರ್ಗಾಬಾಯಿ** : ಈ ಹೊಸ ನಿಯಮವನ್ನು ನಾನು ಅಂಗೀಕರಿಸುವುದಿಲ್ಲ. ಈ ವಿಷಯದ ಬಗ್ಗೆ ಈಗಾಗಲೇ ವ್ಯವಹರಿಸಲಾಗಿದೆ.

**ಶ್ರೀ ನಜಿರುದ್ದೀನ್ ಅಹ್ಮದ್** : ಇದು ಕೇವಲ ಮಾಮೂಲಿ ವಿಷಯ ಎಂಬ ದೃಷ್ಟಿಯಿಂದ, ನಾನು ಇದನ್ನು ಹಿಂತೆಗೆದುಕೊಳ್ಳಲು ಅನುಮತಿ ಕೋರುತ್ತೇನೆ.

ಸಭೆಯ ಅನುಮತಿಯೊಂದಿಗೆ ಸೂಚನೆಯನ್ನು ಹಿಂತೆಗೆದುಕೊಳ್ಳಲಾಯಿತು.

**ಶ್ರೀ ನಜಿರುದ್ದೀನ್ ಅಹ್ಮದ್:** ನಾನು ಪದೇ ಪದೇ ಮಾತಾಡುತ್ತಿರುವುದರ ಬಗ್ಗೆ ಸಭೆಯ ಕ್ಷಮೆಯನ್ನು ಕೋರುತ್ತೇನೆ. ಆದರೆ ನಾನು ನನ್ನದೇ ವಿನಮ್ರ ರೀತಿಯಲ್ಲಿ ನಿಯಮಗಳನ್ನು ಸುಧಾರಿಸುವ ಅಪೇಕ್ಷೆಯಿಂದ ಹೀಗೆ ಮಾಡಬೇಕಾಗಿದೆ. ನಾನು ಸದನದ ತಾಳ್ಮೆಯನ್ನು ಕಳೆಯುತ್ತಿದ್ದೇನೆ ಅನ್ನಿಸುತ್ತಿದೆ. ಅದಕ್ಕಾಗಿ ಕ್ಷಮೆ ಕೇಳುತ್ತೇನೆ. ಆದರೆ ಈ ದೋಷಗಳು ನನ್ನ ಗಮನಕ್ಕೆ ಬಂದಿದ್ದರಿಂದ, ಅವುಗಳನ್ನು ಸದನದ ಗಮನಕ್ಕೆ ತರುವುದು ನನ್ನ ಕರ್ತವ್ಯವೆಂದು ಭಾವಿಸಿದೆ.

**ಮಾನ್ಯ ಸಭಾಧ್ಯಕ್ಷರು :** ಮಾನ್ಯ ಸದಸ್ಯರು, ಇದಕ್ಕಾಗಿ ಸದನದ ಕ್ಷಮೆ ಕೇಳುವ ಅಗತ್ಯವಿಲ್ಲ. ನಾವು ಖಂಡಿತವಾಗಿಯೂ ಅವರಿಗೆ ಆಭಾರಿಯಾಗಿದ್ದೇವೆ.

**ಶ್ರೀಮತಿ ಜಿ. ದುರ್ಗಾಬಾಯಿ :** ನಾನು ಖಂಡ ೩೮–ಎ ಯನ್ನು ಮಂಡಿಸುತ್ತೇನೆ.

"೩೮–ಎ ನಿಯಮದಲ್ಲಿ ಉಲ್ಲೇಖಿಸಿದ ವಿಧೇಯಕವನ್ನು, ವಿಧಾನಸಭೆಯು ಅಂಗೀಕರಿಸಿದಾಗ, ಅದರ ಒಂದು ಪ್ರತಿಗೆ ಸಭಾಧ್ಯಕ್ಷರು ಸಹಿ ಮಾಡಿ ಗವರ್ನರ್ ಜನರಲ್ ಅವರ ಅಂಗೀಕಾರಕ್ಕಾಗಿ ಸಲ್ಲಿಸತಕ್ಕದ್ದು. ಗವರ್ನರ್ ಜನರಲ್ ಅವರು ಅದಕ್ಕೆ ಅಂಗೀಕಾರ ನೀಡಿದ ಮೇಲೆ, ಅದು ಅಧಿನಿಯಮವಾಗತಕ್ಕದ್ದು ಮತ್ತು ಅದನ್ನು ಭಾರತ ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು."

**ಶ್ರೀ ಎಚ್.ವಿ. ಕಾಮತ್ :** ಮಾನ್ಯರೆ, ಈ ಸಂಬಂಧವಾಗಿ ನಾನು ಹೇಳುವುದೇನೆಂದರೆ, ನಿಯಮ ೩೮–ಎ ಸಾಕಷ್ಟು ಪ್ರತಿಕೂಲ ಟೀಕೆಗಳಿಗೆ ಒಳಗಾಗಿರುವುದರಿಂದ, ಇಲ್ಲಿ ಎತ್ತಲಾದ ಆಕ್ಷೇಪಣೆಗಳ ಹಿನ್ನೆಲೆಯಲ್ಲಿ ಇದನ್ನು ಮರುಪರಿಶೀಲನೆಗಾಗಿ ಪುನಃ ಒಂದು ಪರಿಣತ ಸಮಿತಿಗೆ ಒಪ್ಪಿಸಬಹುದು.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್ :** ಈ ನಿಯಮಕ್ಕೆ ಸಂಬಂಧಿಸಿದಂತೆ, ಇದನ್ನು ಪರಿಶೀಲಿಸುವ ಹಂತದಲ್ಲಿ, ಡಾ. ಅಂಬೇಡ್ಕರ್ ಅವರಿಂದ ಸ್ಪಷ್ಟೀಕರಣಕ್ಕಾಗಿ ಸ್ವತಃ ನಾನೇ ಎರಡು ಅಂಶಗಳನ್ನು ಪ್ರಸ್ತಾವಿಸಿದ್ದೆ. ಗವರ್ನರ್ ಜನರಲ್ ಅವರಿಗೆ ಒಪ್ಪಿಸುವುದು ಮತ್ತು ಅವರ ಸಮ್ಮತಿ ಅಗತ್ಯವಿಲ್ಲ ಎಂದು ಈಗಲೂ ನಾನು ಭಾವಿಸುತ್ತೇನೆ. ನಿಯಮವನ್ನು ಸಮಿತಿಯ ಗಮನಕ್ಕೆ ತರುವುದರ ಬಗ್ಗೆ ನಾನು ಒಪ್ಪುವುದಿಲ್ಲವಾದರೂ ಇದನ್ನು ಪ್ರಸ್ತಾವಿಸಿದವರು, ಡಾ. ಅಂಬೇಡ್ಕರ್ ಅವರ ಸಲಹೆ ಪಡೆದು ತಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಂಡರೆ ಇಲ್ಲಿ ಈಗಲೂ ಅದನ್ನು ಬದಲಿಸುವುದು ಸಾಧ್ಯವಿದೆ. ಆಕೆ, ಹಾಗೆ ಮಾಡಿದರೆ ನಿಜಕ್ಕೂ ನನಗೆ ಸಂತೋಷ, ಭಾರತಕ್ಕೆ ಹೊಸ ಸಂವಿಧಾನವನ್ನು ಕೊಡಲು ಈ ನಿಯಮಗಳು ಅವಕಾಶ ಮಾಡಿಕೊಡುತ್ತವೆ ಮತ್ತು ಇದೇ ನಿಯಮಗಳು, ಒಂದನ್ನು ಮಾತ್ರ ಬಿಟ್ಟು, ಈಗಿರುವ ಸಂವಿಧಾನವನ್ನು ಮಾರ್ಪಡಿಸುವುದಕ್ಕೆ ಅನ್ವಯಿಸುತ್ತವೆ ಎಂದು ನನ್ನ ಭಾವನೆ. ಸಂವಿಧಾನ ರಚನಾಸಭೆಯಲ್ಲಿ (ವಿಧಾಯಿ ವಿಭಾಗ) ಭಾರತದ ಒಕ್ಕೂಟಕ್ಕೆ ನಿಯಮಗಳು ಹಾಗೂ ನಿಬಂಧನೆಗಳನ್ನು ರೂಪಿಸುವುದಕ್ಕಾಗಿ ಕಾರ್ಯಾಂಗಕ್ಕೆ ಶಕ್ತಿ ನೀಡಲು ಇತರ ಅಧಿನಿಯಮಗಳನ್ನು ಮುಂದಕ್ಕೆ ತರಲಾಗುವುದು. ಆದ್ದರಿಂದ, ಈ ಇತರ ವಿಧೇಯಕಗಳಿಗೆ ಸಂಬಂಧಿಸಿದಂತೆ ಅಳವಡಿಸಿಕೊಂಡ ರೀತಿಯಲ್ಲಿ ಅವುಗಳು ಭಾರತ ಸರ್ಕಾರದ ಅಧಿನಿಯಮದಿಂದ ನಿಯಂತ್ರಿತವಾಗಿವೆ. ಈ ನಿಯಮಗಳು ಗವರ್ನರ್ ಜನರಲ್ ಅವರ ಸಮ್ಮತಿಯನ್ನು ಪಡೆದುಕೊಳ್ಳಬೇಕು ಮತ್ತು ಇವುಗಳಿಗೆ ಸಮ್ಮತಿ ನೀಡುವುದನ್ನು ತಡೆಹಿಡಿದು ಅವರು, ಇಡಿಯಾಗಿ ಅಥವಾ ನಿರ್ದಿಷ್ಟ ಪ್ರಕರಣಗಳಿಗೆ ಸಂಬಂಧಿಸಿದಂತೆ ಮರುಪರಿಶೀಲನೆಗಾಗಿ ಸಲ್ಲಿಸುವುದು ಇತ್ಯಾದಿ ಅವರಿಗೇ ಸೇರಿದ ವಿಷಯವಾಗಿರುತ್ತದೆ ಎಂದು ಖಂಡ ೩೨ ನಿರೂಪಿಸುತ್ತದೆ. ಆದರೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಗವರ್ನರ್ ಜನರಲ್‌ರು ತಮ್ಮ ಅಧಿಕಾರವನ್ನು ಚಲಾಯಿಸಬೇಕೆಂಬುದು ನಮ್ಮ ಅಪೇಕ್ಷೆಯೇ? ಯಾವುದೋ ಕೆಲವು ತಪ್ಪುಗಳು ನುಸುಳಿರುವ ಕಾರಣದಿಂದಾಗಿ ನಾವು ಅವರಿಗೆ ಈ ಅಧಿಕಾರವನ್ನು ಕೊಡುತ್ತಿದ್ದೇವೆ ಅನ್ನಿಸುತ್ತದೆ! ಆದ್ದರಿಂದ ಗವರ್ನರ್ ಜನರಲ್ ಅವರಿಗೆ ಈ ಅಧಿಕಾರವನ್ನು ಮುಚ್ಚಿಡುವುದಕ್ಕಾಗಿ ತಪ್ಪುಗಳನ್ನು ಹಿಡಿದು ವಾದಿಸಬಾರದು.

ಇನ್ನೊಂದು ಅಂಶವನ್ನು ಪ್ರಸ್ತಾವಿಸಲಾಗಿದೆ. ಈಗಿರುವ ಕಾನೂನಿನ ಪ್ರಕಾರ, ಬ್ರಿಟನ್ ಸಂಸತ್ತು

ಜಾರಿಗೊಳಿಸಿದ ಸ್ವಾತಂತ್ರ್ಯ ಅಧಿನಿಯಮದ ಅಡಿಯಲ್ಲಿ ಬದಲಾದ ಪರಿಸ್ಥಿತಿಗಳಿಗೆ ಅನುಗುಣವಾಗಿ ೧೯೩೫ರ ಅಧಿನಿಯಮವನ್ನು ಅಳವಡಿಸಿಕೊಳ್ಳುವ ಅಧಿಕಾರವನ್ನು ಗವರ್ನರ್ ಜನರಲ್ ಅವರಿಗೆ ನೀಡಲಾಗಿದೆ. ಆದರೆ ಈ ಅಧಿಕಾರವು ೧೯೪೮ರ ಮಾರ್ಚ್ ೩೧ರವರೆಗೆ ಮಾತ್ರ ಮುಂದುವರಿಯುತ್ತದೆ. ಅವರಿಗೆ ಅಧಿಕಾರವನ್ನು ಕೊಡಲಾಗಿದೆ ಎಂಬ ಕಾರಣಕ್ಕೆ ಅವರು ಅಧಿನಿಯಮವನ್ನು ಮಾರ್ಪಡಿಸಿದರೆ ಅಧಿನಿಯಮಕ್ಕೆ ಸಂಬಂಧಿಸಿದಷ್ಟರ ಮಟ್ಟಿಗೆ ಅವರು ಶಾಸಕಾಂಗಾತೀತರಾಗುತ್ತಾರೆ. ಇನ್ನು ಯಾವುದಾದರೂ ಬದಲಾವಣೆಗೆ ಅವರ ಸಮ್ಮತಿ ಅಗತ್ಯವಾಗಿದ್ದರೆ ಆ ಅಧಿಕಾರವು ೧೯೪೮ರ ಮಾರ್ಚ್ ೩೧ ಅನಂತರ ಕೊನೆಗೊಳ್ಳುತ್ತದೆ. ಇನ್ನು ಮುಂದೆ ಭಾರತ ಸರ್ಕಾರದ ಅಧಿನಿಯಮವು ಬದಲಾಗುವ ಸಾಧ್ಯತೆ ಇಲ್ಲ. ಆದ್ದರಿಂದ ಇಲ್ಲಿಂದ ಮುಂದೆ, ಅಳವಡಿಸಿಕೊಂಡಿರುವಂತೆ ಭಾರತ ಸರ್ಕಾರದ ಅಧಿನಿಯಮವು ಅಸ್ತಿತ್ವದಲ್ಲಿ ಇಲ್ಲವಾದಾಗ ನಾವೇಕೆ ಗವರ್ನರ್ ಜನರಲ್ ಅವರಿಗೆ ಮತ್ತೊಮ್ಮೆ ಈ ಅಧಿಕಾರ ಕೊಡಬೇಕು? ಅಲ್ಲದೆ, ನಾವು ಸಂವಿಧಾನದ ಅಧಿನಿಯಮ ಮಾರ್ಪಾಟು ಮಾಡಲು ಯತ್ನಿಸುತ್ತಿದ್ದೇವೆ ಎಂಬುದು ಡೊಮಿನಿಯನ್ ಶಾಸಕಾಂಗದ ಶಾಸನಾತ್ಮಕ ಭಾಗದಲ್ಲಿಲ್ಲ. ಭಾರತದ ಹೊಸ ಸಂವಿಧಾನದೊಂದಿಗೆ ವ್ಯವಹರಿಸುವ ಈ ಭಾಗದಲ್ಲಿ ಮಾತ್ರ, ಈಗಿರುವ ಅಧಿನಿಯಮಗಳನ್ನು ಮಾರ್ಪಡಿಸಲು ನಾವು ಅಧಿಕಾರವನ್ನು ಪಡೆದುಕೊಂಡಿದ್ದೇವೆ. ಆದ್ದರಿಂದ ಇವೆರಡೂ ಅಂದರೆ ಈಗಿರುವ ಅಧಿನಿಯಮದ ಮಾರ್ಪಾಡುಗಳು, ಹಾಗೂ ಹೊಸ ಸಂವಿಧಾನವನ್ನು ರೂಪಿಸುವುದು ಮೂಲತಃ ಭಿನ್ನವಾಗಿವೆ ಮತ್ತು ಎರಡನೆಯದಕ್ಕೆ ಗವರ್ನರ್ ಜನರಲ್‌ರ ಸಮ್ಮತಿಯನ್ನು ಪಡೆಯುವ ಅಗತ್ಯವಿಲ್ಲ. ನಾವು ಕಾನೂನನ್ನು ರೂಪಿಸುವಾಗ, ಆ ತಪ್ಪಿಗೆ ಬೀಳುವುದು ಬೇಡ. ಡಾ. ಅಂಬೇಡ್ಕರ್ ಅವರು ನೀಡಿದ ಯಾವುದೋ ಒಂದು ಸಲಹೆಯಲ್ಲಿ ಗವರ್ನರ್ ಜನರಲ್ ಅವರಿಗೆ ಒಪ್ಪಿಸುವ ಅವಕಾಶವನ್ನು ಮಾರ್ಪಡಿಸುವ ಅವಕಾಶ ಈ ಸಭೆಗೆ ಇದೆ ಎಂದು ಹೇಳಿದ್ದಾರೆ. ಆದ್ದರಿಂದ ಅವರು ಆ ಅಭಿಪ್ರಾಯಕ್ಕೆ ಕಟ್ಟುಬಿದ್ದಿಲ್ಲ. ತಮ್ಮ ಅಭಿಪ್ರಾಯವನ್ನು ಬದಲಾಯಿಸುವುದು ಡಾ. ಅಂಬೇಡ್ಕರ್ ಅವರಿಗೆ ಸೇರಿದೆ. ಈ ವಿಷಯವನ್ನು ಮರುಪರಿಶೀಲಿಸಬೇಕೆಂದು ನಾನು ಅವರಿಗೆ ಮನವಿ ಮಾಡಿಕೊಳ್ಳುತ್ತೇನೆ. ನಾವು ಕಳೆದ ೧೫೦ ವರ್ಷಗಳಿಂದ ಯಾವ ಶಾಪದ ಅಡಿಯಲ್ಲಿ ಬದುಕಿದ್ದೇವೋ ಅದರಿಂದ ಮೇಲೆ ಬರಲು ಪ್ರಯತ್ನಿಸುತ್ತಿದ್ದೇವೆ. ನಾವು ಅದರ ವಿರುದ್ಧ ದೀರ್ಘಕಾಲ ಹೋರಾಟ ಮಾಡಿದ್ದೇವೆ. ಗವರ್ನರ್ ಜನರಲ್‌ರು ನಮ್ಮ ನಾಮನಿರ್ದೇಶಿತರೇ ಆಗಿರಲಿ ಅಥವಾ ಇನ್ನೇನೆ ಆಗಿರಲಿ ನಾವೇಕೆ ಪುನಃ ಅವರಿಗೆ ಕೊರಳೊಡ್ಡಬೇಕು! ಆದ್ದರಿಂದ ಪುನಃ ಸಮಿತಿಗೆ ಇದನ್ನು ಒಪ್ಪಿಸುವ ಬದಲು ನಾವು ನೇರವಾಗಿ ಮಾರ್ಪಾಡುಗಳನ್ನು ಮಾಡಬಹುದು.

**ಶ್ರೀ ಎಚ್.ವಿ. ಕಾಮತ್** : ಮಾನ್ಯರೆ, ಈ ಸಭೆಯ ವಿಷಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ನೀವೇ ಪರಮೋಚ್ಚ ಅಧಿಕಾರಿ. ಆದ್ದರಿಂದ ಈ ಸಭೆಯು ಅಂಗೀಕರಿಸಿದ ಯಾವುದೇ ವಿಧೇಯಕ ಅಥವಾ ನಿರ್ಣಯವನ್ನು ಸ್ಥಿರೀಕರಣಕ್ಕಾಗಿ ಅಥವಾ ಸಮ್ಮತಿಗಾಗಿ ಯಾವುದೇ ಹೊರಗಿನ ಪ್ರಾಧಿಕಾರಿಗೆ ಸಲ್ಲಿಸಕೂಡದು. ಆದ್ದರಿಂದ ಈ ಖಂಡವು ಅಗತ್ಯವಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಈ ಖಂಡದ ಬಗ್ಗೆ ಬೇರೆ ಯಾವುದಾದರೂ ಸದಸ್ಯರು ಮಾತಾಡಲು ಬಯಸುವರೆ, ಇದನ್ನು ಸಮಿತಿಗೆ ಮತ್ತೆ ಒಪ್ಪಿಸುವ ಬಗ್ಗೆ ಶ್ರೀ ಕಾಮತ್ ಅವರು ನೀಡಿದ ಸಲಹೆಯನ್ನೇ ತಿದ್ದುಪಡಿ ಎಂದು ತೆಗೆದುಕೊಳ್ಳುವುದಾದರೆ ಬೇರೆ ಇನ್ನು ಯಾವ ತಿದ್ದುಪಡಿಯೂ ಇಲ್ಲ.

**ಶ್ರೀ ಎಚ್. ವಿ. ಕಾಮತ್** : ಇದನ್ನು ತಿದ್ದುಪಡಿ ಎಂದು ಪರಿಗಣಿಸಬೇಕು ಎಂದು ನಿಮ್ಮನ್ನು ಕೋರುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಮುಂದಿಟ್ಟಿರುವ ವಿಷಯ :

"ಪ್ರಸ್ತಾವಿತ ೩೬–ವಿ ನಿಯಮವನ್ನು ಪ್ರಾರೂಪಣ ಸಮಿತಿಗೆ ಒಪ್ಪಿಸಬೇಕು."

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

## ಮುಂದಿನ ಅಧಿವೇಶನಕ್ಕಾಗಿ ಸಭಾಧ್ಯಕ್ಷರಿಂದ ಪ್ರಕಟಣೆ

**ಮಾನ್ಯ ಸಭಾಧ್ಯಕ್ಷರು** : ನಾವು ಕಾರ್ಯಸೂಚಿಯ ಅಂತ್ಯಕ್ಕೆ ಬಂದಿದ್ದೇವೆ. ಮುಂದೂಡುವ ಮೊದಲು ಮಾಡಬೇಕಾದ ಒಂದು ಕೆಲಸವಿದೆ. ಅದೇನೆಂದರೆ, ಸೂಕ್ತ ಸಮಯದಲ್ಲಿ ಸಭೆಯ ಮುಂದಿನ ಅಧಿವೇಶನವನ್ನು ಕರೆಯಲು ನನಗೆ ಅಧಿಕಾರ ಕೊಡುವುದು. ನಿಯಮಗಳ ಪ್ರಕಾರ, ಒಂದು ಕಾಲಮಿತಿಯ ಅನಂತರ ನಾನು ಸಭೆಯನ್ನು ಕರೆಯುವಂತಿಲ್ಲ. ಆದರೆ ಈ ಸಂದರ್ಭದಲ್ಲಿ, ಕರಡು ಸಂವಿಧಾನವನ್ನು ಪರಿಶೀಲಿಸುವುದಕ್ಕಾಗಿ ಮುಂದಿನ ಅಧಿವೇಶನವನ್ನು ಕರೆಯುವುದಕ್ಕೆ ಬಹಳ ದೀರ್ಘಕಾಲ ಹಿಡಿಯುತ್ತದೆ ಎಂದು ನನ್ನ ಊಹೆ. ಆದ್ದರಿಂದ ಸೂಕ್ತ ಸಮಯದಲ್ಲಿ ಸಭೆಯನ್ನು ಕರೆಯುವುದಕ್ಕಾಗಿ ನೀವು ನನಗೆ ಅಧಿಕಾರ ನೀಡುತ್ತೀರೆಂದು ಹಾರೈಸುತ್ತೇನೆ.

**ಸೇಠ್ ಗೋವಿಂದ ದಾಸ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : *[ಮಾನ್ಯ ಸಭಾಧ್ಯಕ್ಷರೆ, ಸಭೆಯ ಮುಂದಿನ ಅಧಿವೇಶನವನ್ನು ಕರೆಯುವುದಕ್ಕಾಗಿ ಸಭಾಧ್ಯಕ್ಷರಿಗೆ ಅಧಿಕಾರ ನೀಡಬೇಕೆಂದು ನಾನು ಪ್ರಸ್ತಾವಿಸುತ್ತೇನೆ.]*

**ಮಾನ್ಯ ಸಭಾಧ್ಯಕ್ಷರು** : ಇದಕ್ಕೆ ಏನಾದರೂ ತಿದ್ದುಪಡಿ ಇದೆಯೆ?

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ನಾನು ನನ್ನ ಮನಸ್ಸಿನಲ್ಲಿರುವ ವೇಳಾಪಟ್ಟಿಯ ವಿಚಾರವನ್ನು ಸದನಕ್ಕೆ ಕೊಡುತ್ತೇನೆ. ಪ್ರಾರೂಪಣ ಸಮಿತಿಗಳು ಅಂತಿಮ ಕರಡನ್ನು ಫೆಬ್ರವರಿ ಮಧ್ಯಭಾಗದ ಹೊತ್ತಿಗೆ ಕೊಡುತ್ತವೆ ಎಂದು ನಿರೀಕ್ಷಿಸುತ್ತೇನೆ. ಅಂತಿಮ ಕರಡು ಬಂದ ಕೂಡಲೇ ಅದನ್ನು ಮುದ್ರಿಸಲಾಗುವುದು ಮತ್ತು ಅದನ್ನು ಪತ್ರಿಕೆಗಳಿಗೆ (press) ಕಳಿಸಲಾಗುವುದು ಮತ್ತು ಅದನ್ನು ರಾಜಪತ್ರದಲ್ಲೂ ಪ್ರಕಟಿಸಲಾಗುವುದು ಹಾಗೂ ಇತರ ರೀತಿಯಲ್ಲಿ ಪ್ರಚುರ ಪಡಿಸಲಾಗುವುದು. ಶಾಸನಾತ್ಮಕ ಅಧಿವೇಶನ ಮುಗಿದ ಅನಂತರ, ಅದು ಮುಗಿಯುತ್ತದೆ ಕೂಡ. ನಾನು ಏಪ್ರಿಲ್‌ನಲ್ಲಿ ಕರಡು ಸಂವಿಧಾನವನ್ನು ಪರಿಶೀಲಿಸುವುದಕ್ಕಾಗಿ ಸಂವಿಧಾನ ರಚನಾಸಭೆಯ ಮುಂದಿನ ಅಧಿವೇಶನವನ್ನು ನಡೆಸಲು ಮಾರ್ಚ್ ಕೊನೆಯ ಅಥವಾ ಏಪ್ರಿಲ್ ಮೊದಲ ಭಾಗದ ಹೊತ್ತಿಗೆ ಸೂಕ್ತ ದಿನಾಂಕವನ್ನು ನಿಗದಿಪಡಿಸುತ್ತೇನೆ ಮತ್ತು ಸಂವಿಧಾನವನ್ನು ಅಂತಿಮವಾಗಿ ಅಳವಡಿಸಿಕೊಳ್ಳಲು ಪರಿಶೀಲನೆಯನ್ನು ಪೂರ್ಣಗೊಳಿಸಲು ಎಷ್ಟು ಸಾಧ್ಯವೋ ಅಷ್ಟು ದೀರ್ಘಕಾಲ ಕುಳಿತುಕೊಳ್ಳೋಣ.

**ಒಬ್ಬ ಗೌರವಾನ್ವಿತ ಸದಸ್ಯರು** : ಲೋಕಸಭೆಯ ಅಧಿವೇಶನ ಮತ್ತು ಸಂವಿಧಾನ ರಚನಾಸಭೆಯ ನಡುವೆ ಏನಾದರೂ ಬಿಡುವು ಇರುತ್ತದೆಯೆ!

**ಮಾನ್ಯ ಸಭಾಧ್ಯಕ್ಷರು** : ನಾನು ಕೆಲವು ದಿನಗಳ ಬಿಡುವು ನೀಡಲು ಯೋಚಿಸಿದ್ದೇನೆ. ಆದರೆ ದೀರ್ಘಕಾಲದ ಬಿಡುವಲ್ಲ.

**ಶ್ರೀ ಆರ್.ಕೆ. ಸಿಧ್ವಾ** : ಕೊನೆ ಪಕ್ಷ, ಹದಿನೈದು ದಿನಗಳ ಬಿಡುವಾದರೂ ಬೇಕು.

**ಮಾನ್ಯ ಸಭಾಧ್ಯಕ್ಷರು** : ನಾನು ಅಲ್ಪಕಾಲದ ಬಿಡುವು ನೀಡುತ್ತೇನೆ. ಆದರೆ ಅದು ಎಷ್ಟು ಕಾಲದ್ದು ಎಂಬುದು ನನಗೆ ಗೊತ್ತಿಲ್ಲ.

**ಒಬ್ಬ ಗೌರವಾನ್ವಿತ ಸದಸ್ಯರು** : ಎರಡು ವಾರಗಳಿಗಿಂತ ಕಡಿಮೆ ಇರಬಾರದು.

**ಮಾನ್ಯ ಸಭಾಧ್ಯಕ್ಷರು** : ಆ ಬಗ್ಗೆ ಪರಿಶೀಲಿಸುತ್ತೇನೆ. ಲೋಕಸಭೆ ಅಧಿವೇಶನ ಯಾವಾಗ ಕೊನೆಗೊಳ್ಳುತ್ತದೆ ಎಂಬುದನ್ನು ಇದು ಅವಲಂಬಿಸಿದೆ.

**ಒಬ್ಬ ಗೌರವಾನ್ವಿತ ಸದಸ್ಯರು** : ಅದು ಏಪ್ರಿಲ್ ೪ಕ್ಕೆ ಕೊನೆಗೊಳ್ಳಬೇಕಾಗಿದೆ.

**ಮಾನ್ಯ ಸಭಾಧ್ಯಕ್ಷರು** : ಪ್ರತಿ ವರ್ಷವೂ ಅಧಿವೇಶನ ಇಂತಿಂಥ ದಿನಕ್ಕೆ ಕೊನೆಗೊಳ್ಳುತ್ತದೆ ಎಂದು ಹೇಳಲಾಗುತ್ತದೆ. ಆದರೆ ಹೇಳಿದ ದಿನಾಂಕಕ್ಕಿಂತ ಆಚೆಗೆ ಅದು ವಿಸ್ತರಿಸಲ್ಪಡುತ್ತದೆ. ಈ ದಿನ, ದಿನಾಂಕವನ್ನು ನಿಗದಿಪಡಿಸಲು ಸಾಧ್ಯವಿಲ್ಲ. ಆದರೆ ಅದರ ಅನಂತರ ನಾನು ಸ್ವಲ್ಪ ಕಾಲವನ್ನು ನೀಡುತ್ತೇನೆ.

ಅನಂತರದಲ್ಲಿ ಸಭಾಧ್ಯಕ್ಷರು ನಿಗದಿಪಡಿಸಲಿರುವ ದಿನಾಂಕಕ್ಕೆ ಸಭೆಯನ್ನು ಮುಂದೂಡಲಾಯಿತು.

*[ಹಿಂದೂಸ್ತಾನಿ ಭಾಷಣದ ಇಂಗ್ಲಿಷ್ ಅನುವಾದ.]*